The contact angle measurements were used to study the surface energy properties such as adhesion and wettability. This procedure can determine the interfacial free energy, surface free energy, and also polar and dispersion energy contributions. The topic of wetting has attracted remarkable attention from both applied and fundamental points of view. It plays a significant role in different industrial processes, such as coating, lubrication, oil recovery, and printing. In this study, the sessile drop method was used. The contact angle was measured by the tangent angle made between supporting surface and liquid drop. The measurements were completed for all samples with water at room temperature (Fig. 3). Based on the measurements in Table 1. NCs hydrophilicity was decreased for various quantities of the modified NPs embedded into the PVC matrix. The pure PVC polymer has high hydrophilic properties, which come from the existence of hydroxyl groups in the PVA chains. In another hand, PVC has various OH and C-O groups in their structure, respectively. It caused their good hydrophilicity as well as solubility in water. By addition of NCs into the polymer matrix, hydrogen bonding between OH and $NH_2$ groups of the modified NPs and the polymers caused a decrease in free OH groups available for water molecules to interact with them. As a result, the polymer hydrophilicity was decreased by increasing the NPs content.




**Fig.3:** Contact angle measurements of $ZnO/VB_1$ NCs

**Table 1: Water contact angle with respect to ZnO/$VB_1$ composition**

| ZnO/$VB_1$ wt% | Water contact angle ( $^0$C) |
|---|---|
| 2 | 90 |
| 4 | 83 |
| 6 | 64 |
| 10 | 40 |

### 3.4 FTIR studies.

FTIR spectrum of Zno/$VB_1$ PVC NCs is shown in fig 4. The story brand band observed in the region at 3400cm$^{-1}$ is due to -OH vibrational stretching in PVC .This brand band oriented due to hydrogen related defects states in the Zno. The band at 2977cm$^{-1}$ is attiunated to -$CH_2$ aliphatic stretching and C-H stretching rapidly . The bands at 1739cm$^{-1}$ corsponding to C=0 vibration stretching the bands at 649cm$^{-1}$ was due to vibrational stretching of Zn-O band.




**Fig.4:** FTIR spectrum of ZnO/$VB_1$ /PVC NCs

### 3.5 TGA studies.

Fig 5 Shows the TGA Thermogram of ZnO/$VB_1$ NCs. As can we see from the fig that deviation of NCs indicates from 200-300 c ,Where this region represents the major decompression of PNCs owing to observation of humidity onset temperature increased with increase in ZnO content in PVCs which declare that the increment in thermal stability.




**Fig.5:** TGA Thermogram of Zno/$VB_1$/PVC NCs

**Conclusions**

The ZnO/VB$_1$/PVC NCs were prepared by user friendly solution casting route and characterized by various spectroscopic techniques. The hydrophilicity decrease with increase of ZnO/VB$_1$ content is PVC matrix . TGA results showed increase the thermal stability upon ZnO/VB$_1$ content. Overall results clearly showed that optimized ZnO/VB$_1$ NCs were quite useful in hydrophilic coatings.

**References.**


[1] S.Mallakpour E.Shafieea, A simple method for the sonochemical synthesis of PVA/ZrO2-vitamin B$_1$ nanocomposites: Morphology, mechanical, thermal and wettability investigations,Uitrason.Sonochem. 40(2018)881-889.

[2] V.Siracusa, P.Rocculi, S.Romani, M. D.Rosa, Biodegradable polymers for food packaging: a review,Trends in Food Science & Technology, 19( 2008) 634-643.

[3] El-Re.Kenawy, A. Elbadawy, Kamoun, S.Mohamed, M. Eldin, A.Mahmoud. El-Meligy, Physically crosslinked poly(vinyl alcohol)-hydroxyethyl starch blend hydrogel membranes: Synthesis and characterization for biomedical applications, Arabian J.Chem.7(2014) 372-380.

[4] G. Granata, S.Stracquadanio, M.Leonardi, E. Napoli, G. Maria, L.Consoli, V.Cafiso, S. Stefani, C.Geraci: Essential oils encapsulated in polymer-based nanocapsules as potential candidates for application in food preservation,Food Chem, 269(2018)286-292.

[5] O.M. Vinod Kumar,T. Ntwaeaborwa, S. Viresh Dutta, H. C. Swart, Rare Earth Doped Zinc Oxide Nanophosphor Powder: A Future Material for Solid State Lighting and Solar Cells, *ACS Photonics, 4(2017) 2613-2637.*

[6] N. Bano , S. Zaman, A. Zainelabdin, S. Hussain, I. Hussain, O. Nur, and M. Willander: ZnO-organic hybrid white light emitting diodes grown on flexible plastic using low temperature aqueous chemical method, J.Appl.Phys,108(2010)043103.

[7] S. Cao, J. Zheng, J. Zhao, Z. Yang, C. Li, X. Guan, W. Yang, M. Shang, T. Wu: Enhancing the Performance of Quantum Dot Light-Emitting Diodes Using Room-Temperature-Processed Ga-Doped ZnO Nanoparticles as the Electron Transport Layer,*ACS Appl. Mater. Interfaces,9(2017)1*5605–15614.

# Part B

## Other Indian Languages

Tumbe Group of International Journal
A Multidisciplinary Journal
ISSN: 2581-8511
Volume- 2
Issue-2
May-August: 2019

# ಅಮ್ಮನಘಟ್ಟ ಸಾಂಸ್ಕೃತಿಕ ಅಧ್ಯಯನ

**ಶ್ರೀನಿವಾಸ ಎ.ಜಿ**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583 276

## ಪ್ರಸ್ತಾವನೆ

ಪ್ರತಿಯೊಂದು ಪ್ರದೇಶವು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುತ್ತದೆ. ಒಂದು ಪ್ರದೇಶದ ವಿಶಿಷ್ಟವಾದ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯುವಲ್ಲಿ ಸ್ಥಳೀಯ ಅಂಶಗಳು ಒಂದು ನಿರ್ಧಿಷ್ಟ ಚೌಕಟ್ಟನ್ನು ಸೃಷ್ಠಿಸಿಕೊಡುತ್ತದೆ. ಯಾವುದೇ ಒಂದು ಪ್ರದೇಶವನ್ನು ಸಂಸ್ಕೃತಿಯ ದೃಷ್ಠಿಯಿಂದ ನೋಡುವುದು ಅತ್ಯಂತ ಉಪಯುಕ್ತವಾದುದು. ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸದ ರಚನೆ ಸ್ಥಳೀಯ ಪ್ರದೇಶಗಳಿಂದ ಆರಂಭವಾಗಬೇಕು. ಗ್ರಾಮ ನಿಷ್ಪತ್ತಿ, ಆ ಪ್ರದೇಶದ ಭೌಗೋಳಿಕ ಪರಿಸರ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ವ್ಯವಸ್ಥೆ, ಆಚರಣೆಗಳು, ದೇವಾಲಯ, ಮೂರ್ತಿಶಿಲ್ಪ, ಶಾಸನಗಳು, ವೀರಗಲ್ಲುಗಳು ಮಾಸ್ತಿಗಲ್ಲುಗಳು, ಉಡುಗೆ, ತೊಡುಗೆ, ಆಹಾರಪದ್ಧತಿ, ಇವೆಲ್ಲವುಗಳಿಗಿಂತ ಮುಖ್ಯವಾಗಿ ಆ ಪ್ರದೇಶದಲ್ಲಿ ಮೈಗೂಡಿಕೊಂಡಿರುವ ಜಾನಪದ ಕಲೆಗಳು ಮಾನವನ ಸಾಂಸ್ಕೃತಿಕ ಬದುಕಿನಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ.

ವಿಭಿನ್ನ ಸಂಸ್ಕೃತಿಗೆ ಹೆಸರಾಗಿರುವ ಭಾರತದೇಶದಲ್ಲಿ ಸಂಸ್ಕೃತಿಯನ್ನು ವಸ್ತುನಿಷ್ಟವಾಗಿ ಪುನರಚಿಸಿ ಸ್ಥಳೀಯ ಮಟ್ಟದಲ್ಲಿ ಸಂಸ್ಕೃತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆ, ಗುಬ್ಬಿ ತಾಲೂಕಿನ ಕಸಬಾ ಹೋಬಳಿಯಲ್ಲಿ ಅಮ್ಮನಘಟ್ಟ ಗ್ರಾಮವು ವಿವಿಧ ಸಂಸ್ಕೃತಿಯುಳ್ಳ ಸಾಂಸ್ಕೃತಿಕ ಪ್ರದೇಶವಾಗಿದೆ. ಆಧುನೀಕರಣ, ಜಾಗತೀಕರಣ, ಖಾಸಗೀಕರಣದ ಹಿನ್ನೆಲೆಯಲ್ಲೂ ಸಮಕಾಲೀನ ಕಾಲಘಟ್ಟದಲ್ಲಿ ಸಂಸ್ಕೃತಿಯ ಪಳೆಯುಳಿಕೆಯುಳ್ಳ ಜೀವಂತಿಕೆಯನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಇಲ್ಲಿ ಕಂಡುಬರುವ ಕಲೆಗಳು, ಆಚರಣೆಗಳು, ನಂಬಿಕೆಗಳು, ಹಬ್ಬಗಳು, ದೇವಾಲಯಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಕರವುಗಲ್ಲುಗಳು ಸಂಸ್ಕೃತಿಯ ಪ್ರತಿಬಿಂಬಕ್ಕೆ ಆಕಾರಗಳಾಗಿವೆ.

ಆಧುನಿಕತೆ ಹೆಚ್ಚಾದಂತೆ ಒಂದು ಪ್ರದೇಶದ ಜನಜೀವನವನ್ನು ಚಿತ್ರಿಸುವ ಸಾಂಸ್ಕೃತಿಕ ಅಂಶಗಳು ಮಹತ್ವವನ್ನು ಕಳೆದುಕೊಳ್ಳುತ್ತಿರುವಾಗ ಆ ಪ್ರದೇಶದ ಸಂಸ್ಕೃತಿಯ ಹಿರಿಮೆಯನ್ನು ಗಣನೆಗೆ ತೆಗೆದುಕೊಂಡು ಪುನರಚನೆ ಮಾಡುವುದರಿಂದ ಭವಿಷ್ಯದ ಜನರ ಜೀವನ ಕ್ರಮದಲ್ಲಿ ಸಂಸ್ಕೃತಿಯನ್ನು ರೂಪಿಸಬಹುದು ಎಂಬ ಉದ್ದೇಶದಿಂದ ಪ್ರಸ್ತುತ ಅಮ್ಮನಘಟ್ಟ ಗ್ರಾಮದಲ್ಲಿ ಸಂಸ್ಕೃತಿ ಹೇಗೆ ಮೈಗೂಡಿಕೊಂಡಿದೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಪ್ರದೇಶದ ಸಂಸ್ಕೃತಿಯನ್ನು ಅರಿಯಲು ಕ್ಷೇತ್ರ ಕಾರ್ಯಕೈಗೊಳ್ಳುವುದರ ಮೂಲಕ ಮತ್ತು ಹಿರಿಯ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯ ಸಂಗ್ರಹಿಸಿ ಸಾಂಸ್ಕೃತಿಕ

ಆಕರಗಳನ್ನು ಸಂಗ್ರಹಿಸಿ ವಿಷಯಾನುಸಾರ ವಿಶ್ಲೇಷಿಸಿ ಸಂಯೋಜಿಸುವ ಮೂಲಕ ಈ ಗ್ರಾಮದ ಸಂಸ್ಕೃತಿಯನ್ನು ಕಟ್ಟಿಕೊಡಲಾಗಿದೆ.

**ಗ್ರಾಮಪರಿಚಯ**

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 206ರಲ್ಲಿ ರಾಜಧಾನಿಗೆ ಹೆಬ್ಬಾಗಿಲಿನಂತಿರುವ ಕಲ್ಪತರುನಾಡು, ಶೈಕ್ಷಣಿಕ ತವರೂರಾದ ತುಮಕೂರು ಜಿಲ್ಲೆಯಲ್ಲಿ ಗುಬ್ಬಿ ತಾಲೂಕು ಒಂದಾಗಿದೆ. 1986ರ ನಂತರ ಗುಬ್ಬಿ ತಾಲೂಕು ಕೇಂದ್ರವಾಗಿದ್ದು ಕಸಬಾ, ನಿಟ್ಟೂರು, ಕಡಬ, ಸಿ.ಎಸ್.ಪುರ, ಚೇಳೂರು, ಹಾಗಲವಾಡಿ ಎಂಬ ಆರು ಹೋಬಳಿಗಳನ್ನು ಹೊಂದಿದ್ದು 300ಕ್ಕೂ ಅಧಿಕ ಗ್ರಾಮಗಳನ್ನು ಒಳಗೊಂಡಿದೆ. ಕಸಬಾ ಹೋಬಳಿಯಲ್ಲಿ ಕಂಡುಬರುವ ಗ್ರಾಮಗಳಲ್ಲಿ ಅಮ್ಮನಘಟ್ಟ ಗ್ರಾಮವು ಒಂದಾಗಿದೆ. ಇದು ತನ್ನದೇ ಆದಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದೆ. ಗುಬ್ಬಿಯಿಂದ ತೆಂಕಣ ಭಾಗಕ್ಕೆ 05ಕಿ.ಮೀ ದೂರದಲ್ಲಿ ಅಮ್ಮನಘಟ್ಟ ಗ್ರಾಮವಿದೆ.

ಅಮ್ಮನಘಟ್ಟ ಎಂಬ ಹೆಸರು ಬರಲು ಕಾರಣವೇನು ಎಂಬ ವಿಷಯವನ್ನು ಹಿರಿಯರೊಡನೆ ಚರ್ಚಿಸಿದಾಗ ವೀರಭದ್ರ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಾಗ ತಳಪಾಯವನ್ನು ಹಾಕಲು ಭೂಮಿಯನ್ನು ಅಗೆಯುವಾಗ ಮುಂಡವಿಲ್ಲದ ಒಂದು ಸ್ತ್ರೀ ವಿಗ್ರಹ ದೊರಕಿದ್ದು ಅದರ ಮುಖದಲ್ಲಿ ಕೂದಲುಗಳು (ರೋಮ) ಕಂಡುಬಂದಿದ್ದರಿಂದ ಆ ಗ್ರಾಮಕ್ಕೆ ಅಮ್ಮನಗಡ್ಡ ಎಂದು ಕರೆಯುತ್ತಿದ್ದರು. ಕಾಲಾನಂತರದಲ್ಲಿ ಅಮ್ಮನಘಟ್ಟವಾಗಿದೆ ಎಂದು ಹೇಳುತ್ತಾರೆ.

ಪ್ರಾಕ್ತನಾದಾರದ ಹಿನ್ನೆಲೆಯಲ್ಲಿ ಗಮನಿಸಿದಾಗ ಅಮ್ಮ ಎಂದರೆ ಗ್ರಾಮದ ಅಧಿದೇವತೆ ಘಟ್ಟ ಎಂದರೆ ನೀರಿರುವ ತಾಣ ಅಥವಾ ಎತ್ತರದ ಪ್ರದೇಶ ಎಂದರ್ಥವನ್ನು ಕೊಡುತ್ತದೆ. ಇದನ್ನು ಗಮನಿಸಿದಾಗ ಈ ಗ್ರಾಮದಲ್ಲಿ ಸ್ತ್ರೀ ದೇವತೆಯಾದ ಮಾರಮ್ಮ (ಕೆಂಪಮ್ಮ) ಇದ್ದು ಊರ ಮುಂಭಾಗದಲ್ಲಿ ಕೆರೆ ಇರುವುದರಿಂದ ಅಮ್ಮನಘಟ್ಟ ಎಂದಾಗಿದೆ.

ಮೇಲಿನ ಎರಡು ಅಂಶಗಳ ಜೊತೆಗೆ ಮತ್ತೊಂದು ಮಹತ್ವದ ಅಂಶವಿದೆ. ಅಮ್ಮನಘಟ್ಟ ಎಂಬ ಹೆಸರಿರುವ ಒಂದು ತಾಮ್ರಶಾಸನ ಲಭ್ಯವಾಗಿದೆ. ಕರ್ನಾಟಕವನ್ನು ಆಳ್ವಿಕೆ ಮಾಡಿದ ಹೆಸರಾಂತ ಮನೆತನವಾದ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಗುಬ್ಬಿ ಹೊಸಹಳ್ಳಿ ಒಂದು ಪಾಳೇಯಪಟ್ಟಾಗಿತ್ತು. ಈ ಪಾಳೇಯಪಟ್ಟಿನ ಹಿರೇಮಠದ ವಂಶಸ್ಥರಾದ ಲಿಂ|| ಚನ್ನಬಸವ ಆರಾಧ್ಯರು ಹೊನ್ನುಡಿಕೆಯಲ್ಲಿ ವಾಸವಾಗಿದ್ದು ಅವರ ಮನೆಯಲ್ಲಿ ದೊರಕಿರುವ ಈ ತಾಮ್ರಶಾಸನದಲ್ಲಿ ಅಮ್ಮನಘಟ್ಟದ ಉಲ್ಲೇಖವಿದೆ. ಈ ಶಾಸನ 101/2 ಅಂಗುಲ ಉದ್ದ 81/2 ಅಂಗುಲ ಅಗಲ 800 ಗ್ರಾಂ ತೂಕದ 03 ಮಿಲಿಮೀಟರ್ ದಪ್ಪದ ತಾಮ್ರಶಾಸನದ ಮೇಲೆ ಯಾವ ಮುದ್ರೆಯೂ ಇಲ್ಲ. ಇದರ ಹಿಂಬದಿಯಲ್ಲಿ ಸೂರ್ಯ, ಚಂದ್ರ ಮತ್ತು ಲಿಂಗು ಮುದ್ರೆಯ ಚಿಹ್ನೆ ಇದೆ. ಈ ಶಾಸನದಲ್ಲಿ ಅಕ್ಷರ ದೋಷಗಳು ಕಂಡುಬರುತ್ತವೆ. ಈ ಶಾಸನದಲ್ಲಿ ಬಿದರೆ, ಗೌರೀಪುರ, ಅಮ್ಮನಘಟ್ಟ, ಲಕ್ಕೇನಹಳ್ಳಿ ಗ್ರಾಮಗಳ ಹೆಸರುಗಳು ಕಂಡುಬರುತ್ತವೆ. ಅಮ್ಮನಘಟ್ಟ ಗ್ರಾಮದ ಬಗ್ಗೆ ಲಿಖಿತವಾಗಿ ಸಿಕ್ಕಿರುವ ಪ್ರಥಮ ದಾಖಲೆಯಾಗಿದೆ.

ಬಿದಿರೆ ಸೀಮೆ, ಮಧ್ಯದ ಗೋಪುಪುರ ಇಂದು ಗೌರಿಪುರವಾಗಿದೆ. ತೆಂಕಲು ಅಂಮನಕಟಿತು, ಅಮ್ಮನಘಟ್ಟವಾಗಿದೆ. ಪಡುವಲು ಲಖೆನಹಳ್ಳಿ, ಲಕ್ಕೇನಹಳ್ಳಿ ಎಂದಾಗಿದೆ. ಹೀಗೆ ಈ ಶಾಸನದಲ್ಲಿ ಕಂಡುಬರುವ ಎಲ್ಲಾ ಹಳ್ಳಿಗಳನ್ನು ಈಗಲೂ ಗುರುತಿಸಬಹುದಾಗಿದೆ. ಈ ಶಾಸನದ ಅಂತ್ಯದಲ್ಲಿ ವಿಜಯನಗರದ ಅರಸರ ಒಪ್ಪವಾದ ಶ್ರೀ ವಿರೂಪಾಕ್ಷ ಎಂಬುದನ್ನು ಬರೆದಿದೆ. ಈ ಶಾಸನಾಧಾರದ ಹಿನ್ನೆಲೆಯಲ್ಲಿ ಗಮನಿಸಿದಾಗ 14-15ನೇ ಶತಮಾನದಲ್ಲಿ ಈ ಗ್ರಾಮ ಉಗಮಗೊಂಡಿದೆಯೆಂದು ತಿಳಿದುಬರುತ್ತದೆ.

**ಭೌಗೋಳಿಕ ಪರಿಸರ ಮತ್ತು ವಿಸ್ತೀರ್ಣ**

ಪ್ರತಿಯೊಂದು ಪ್ರದೇಶದ ಭೌಗೋಳಿಕ ಪರಿಸರದಲ್ಲಿ ಸಂಸ್ಕೃತಿಯು ಕೂಡ ತನ್ನ ಹುಟ್ಟು ಮತ್ತು ಅಂತ್ಯವನ್ನು ಕಂಡುಕೊಳ್ಳುತ್ತವೆ. ಒಂದು ಪ್ರದೇಶದ ಸಂಸ್ಕೃತಿಯ ವಿಕಾಸದಲ್ಲಿ ಭೌಗೋಳಿಕ ಅಂಶಗಳು ತುಂಬಾ ಸಹಕಾರಿಯಾಗಿವೆ. ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಮಾನವ ಸಂಸ್ಕೃತಿ ಬೆಳೆಯಬೇಕಾದರೆ ಅಲ್ಲಿನ ಹವಾಗುಣ. ಮಣ್ಣಿನ ರಚನೆ ಮತ್ತು ಫಲವತ್ತತೆ ಸಂಪತ್ತು ನದಿ ಬಯಲಿನಂತಹ ಅಂಶಗಳು ಕಾರಣವಾಗಿವೆ. ಉತ್ತಮ ಭೌಗೋಳಿಕ ಅಂಶಗಳನ್ನು ಒಳಗೊಂಡಿರುವ ಈ ಪ್ರದೇಶದಲ್ಲಿ. ಇಲ್ಲಿನ ಜನ ಸಂಸ್ಕೃತಿಯನ್ನು ತಿಳಿಯಲು ಸಹಕಾರಿಯಾಗಿ ನಿಲ್ಲುತ್ತವೆ. ಸಂಸ್ಕೃತಿಯ ದೃಷ್ಠಿಕೋನದಲ್ಲಿ ತನ್ನದೇ ಆದಂತಹ ವಿಶಿಷ್ಟ ಸ್ಥಾನ ಪಡೆದಿರುವ ಗುಬ್ಬಿ ತಾಲೂಕಿನಲ್ಲಿ ಅಮ್ಮನಘಟ್ಟ ತನ್ನದೇ ಆದಂತಹ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡಿದೆ.

ಅಮ್ಮನಘಟ್ಟ ಗ್ರಾಮವು ಕೋಡಿಹಟ್ಟಿ, ಹೊಸಹಟ್ಟಿ, ಮಜರೆ ಗ್ರಾಮಗಳು ಸೇರಿಕೊಂಡು ಇದೇ ಗ್ರಾಮದ ಭೋವಿ ಕಾಲೋನಿ, ತೋಟದ ಬೈಲು, ಸಿದ್ದನಂಜಪ್ಪನ ತೋಟ ಒಳಗೊಂಡ ಕಂದಾಯ ಗ್ರಾಮವಾಗಿದ್ದು, 880, 631818 ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. 930.30 ಎಕರೆ ಖುಷ್ಕಿ ಭೂಮಿ. 96.12 ಎಕರೆ ತರಿ, 270.09ಎಕರೆ ಬಾಗಾಯ್ತು ಪ್ರದೇಶವಿದೆ. 86.16ಎಕರೆ ಗೋಮಾಳವನ್ನು ಹೊಂದಿದೆ. 13-19ರಿಂದ 140 ಉತ್ತರ ಅಕ್ಷಾಂಶ ಮತ್ತು 76-51ರಿಂದ 420 ಪೂರ್ವ ರೇಖಾಂಶಗಳ ನಡುವೆ ಕಂಡುಬರುತ್ತದೆ.

ಗ್ರಾಮದ ಭೂ ಮೇಲ್ಮೈ ಬಯಲು ಪ್ರದೇಶದಿಂದ ಕೂಡಿದ್ದು, ಸಮತಟ್ಟಾದ ಮರಳು ಮಿಶ್ರಿತ ಕೆಂಪು ಮಣ್ಣಿನ, ಕಪ್ಪುಮಣ್ಣಿನ ಕೃಷಿಗೆ ಯೋಗ್ಯವಾದ ಫಲವತ್ತಾದ ಭೂಮಿಯನ್ನು ಹೊಂದಿದೆ. ಈ ಪ್ರದೇಶದಲ್ಲಿ ಹೆಚ್ಚು ಮರಳು ಮಿಶ್ರಿತ ಕೆಂಪು ಮಣ್ಣು ಕಂಡುಬರುವುದರಿಂದ ಕಡಿಮೆ ಮಳೆ ಬಿದ್ದರೂ ವಿವಿಧ ಬೆಳೆ ಬೆಳೆಯಲು ಅನುಕೂಲಕರವಾಗಿದೆ. ಯಾವುದೇ ಬೆಟ್ಟಗುಡ್ಡಗಳು ಕಂಡುಬರುವುದಿಲ್ಲ.

**ಹವಾಮಾನ**

ಗ್ರಾಮ ಪರಿಸರದ ವಾಯುಗುಣ ತಾಲೂಕು ಕೇಂದ್ರಕ್ಕೆ ಹೋಗ್ಗಿಕೊಂಡಂತೆಯೇ ಇದೆ. ಇಲ್ಲಿಯ ವಾಯುಗುಣ ಸಮಶೀತೋಷ್ಣ ಮಾದರಿಯಾಗಿದ್ದು ಮಳೆಗಾಲ, ಬೇಸಿಗೆ ಕಾಲ ಚಳಿಗಾಲ ಎಂದು ಮೂರು ಋತುಗಳು ಕಂಡುಬರುತ್ತವೆ. ಇತ್ತೀಚೆಗೆ ಹವಾಮಾನ ವೈಪರೀತ್ಯದಿಂದಾಗಿ ಸರಿಯಾದ ಸಮಯಕ್ಕೆ ಮಳೆ ಬೀಳುತ್ತಿಲ್ಲ. ವಾರ್ಷಿಕ ಸರಾಸರಿ 529 ಮಿ.ಮೀಟರ್ ಮಳೆಯಾಗುತ್ತಿದ್ದು ಅದರಲ್ಲೂ ಕ್ಷೀಣತೆವುಂಟಾಗಿದೆ. ಹುಣಸೆ, ಮಾವು, ಹಲಸು, ಹೊಂಗೆ, ಬೇವು, ಜಾಲಿ, ತೇಗ ಮುಂತಾದ ವಿವಿಧ ಜಾತಿಯ ಸಸ್ಯರಾಶಿಗಳು ಮಳೆಯನ್ನೇ ಅವಲಂಬಿಸಿವೆ. ಜೂನ್, ಜುಲೈ ತಿಂಗಳಿನಿಂದ ಸಸ್ಯಗಳು ನಿಧಾನವಾಗಿ ಹಚ್ಚ ಹಸಿರನ್ನು ಪಡೆಯಲು ಸಜ್ಜಾಗಿ ಆಗಸ್ಟ ಮಧ್ಯಭಾಗದ ವೇಳೆಗೆ ಅಚ್ಚ ಹಸಿರನ್ನು ಹುಟ್ಟು ಕಂಗೊಳಿಸುತ್ತವೆ. ಶೇ 300ಫಿ ನಿಂದ 400ಫಿ ವರೆಗೆ ಅಧಿಕ ತಾಪಮಾನವಿದ್ದರೆ ಚಳಿಗಾಲದಲ್ಲಿ 110ಫಿ ನಿಂದ 120ಫಿ ವರೆಗೆ ಕನಿಷ್ಟ ತಾಪಮಾನವಿರುತ್ತದೆ.

**ಅರಣ್ಯ ಸಂಪತ್ತು ಮತ್ತು ಪ್ರಾಣಿ ಪಕ್ಷಿಗಳು**

ಮಾನವ ಮತ್ತು ಅರಣ್ಯದ ನಡುವೆ ನಿಕಟವಾದ ಸಂಬಂಧವಿದೆ. ಶುದ್ದವಾದ ಗಾಳಿ, ನೀರು, ಮಣ್ಣಿನ ಫಲವತ್ತತೆ ಭೂಮಿಯ ತೇವಾಂಶವನ್ನು ಅರಣ್ಯ ಹಿಡಿದಿಡುತ್ತದೆ. ಅಮ್ಮನಘಟ್ಟದ ಪ್ರಾದೇಶಿಕ ವ್ಯಾಪ್ತಿಯಲ್ಲಿ 187.27273 ಹೆಕ್ಟೇರ್‌ಗಳಷ್ಟು ಸಾಮಾಜಿಕ ಅರಣ್ಯವನ್ನು ಹೊಂದಿದೆ. ಗ್ರಾಮದ ದಕ್ಷಿಣದಿಂದ ಪಶ್ಚಿಮದವರೆಗೂ ಹರಡಿಕೊಂಡಿದೆ. ಯಾವುದೇ ಬೆಲೆ ಬಾಳುವ ಮರಗಳು ಮತ್ತು ದಟ್ಟವಾದ ಅರಣ್ಯ ಪ್ರದೇಶ ಕಂಡುಬರುವುದಿಲ್ಲ. ಅತ್ಯಧಿಕ ಮಳೆ ಬೀಳದೆ ಇರುವುದರಿಂದ ಎತ್ತರವಾದ ಮತ್ತು ದಪ್ಪವಾದ ಮರಗಳು ಕಂಡುಬರುವುದಿಲ್ಲ. ನೀಲಗಿರಿ, ತಂಗಡಿ, ತುಗ್ಗಲಿ, ಕಗ್ಗಲ, ಬಿದಿರು, ಹೊಂಗೆ, ಬೇವು ಮುಂತಾದ ಜಾತಿಯ ಮರಗಳು ಕಂಡುಬರುತ್ತವೆ. ಗ್ರಾಮದ ದಕ್ಷಿಣ ಭಾಗದಲ್ಲಿದ್ದ ಅರಣ್ಯವನ್ನು ಕಡಿದು ಇತ್ತೀಚೆಗೆ ಅರಣ್ಯ ಇಲಾಖೆ ಹೊಸದಾಗಿ ತೇಗ, ಸರ್ವೆ, ಅರ್ಕಿಲಸ್

ನಂತಹ ಬೆಲೆಬಾಳುವ ಗಿಡಗಳನ್ನು ಬೆಳೆಸುತ್ತಿದ್ದಾರೆ. ಪಶ್ಚಿಮ ದಿಕ್ಕಿನಲ್ಲಿ ಸೌದೆಯನ್ನು ಒದಗಿಸಬಲ್ಲಂತಹ ಮರಗಳೇ ಹೆಚ್ಚಾಗಿವೆ. ಬಡವರ್ಗದವರು ವರ್ಷವಿಡೀ ಉರುವಲಿಗೆ ಅರಣ್ಯದ ಮರಗಳನ್ನೇ ಕಡಿದು ಬಳಸುತ್ತಿದ್ದರು. ಆದರೆ ಇತ್ತೀಚೆಗೆ ಅರಣ್ಯ ಇಲಾಖೆಯವರು ರಕ್ಷಣೆಯ ದೃಷ್ಠಿಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಇಂತಹ ಅರಣ್ಯ ಪ್ರದೇಶದಲ್ಲಿ ನರಿ, ಮುಂಗುಸಿ, ತೋಳ, ಕಾಡುಹಂದಿ, ಮುಳ್ಳಂದಿ ಮೊಲ, ಗೂಬೆ, ಕೋತಿ, ಉಡ ವಿವಿಧ ಜಾತಿಯ ಹಾವುಗಳು ಕಾಡು ಪ್ರಾಣಿಗಳಾಗಿವೆ. ಆಗಾಗ ಚಿರತೆಗಳು ವಲಸೆ ಬರುತ್ತವೆ. ಕಾಡುಪಕ್ಷಿಗಳಾದ ಹದ್ದು, ಕೋಗಿಲೆ, ನವಿಲು, ಗೌಜಲಕ್ಕಿ, ಕಾಡುಕೋಳಿ, ಗಿಳಿ, ಮರಕುಟಕ, ಗುಬ್ಬಚ್ಚಿ ಪಾರಿವಾಳದಂತಹ ಕಾಡು ಪಕ್ಷಿಗಳು ಕಂಡುಬರುತ್ತವೆ.

ಗ್ರಾಮದಲ್ಲಿ 2150 ಸಾಕುಪ್ರಾಣಿಗಳಿವೆ. ದನಗಳು, ಹಸುಗಳು, ಕುರಿಗಳು, ಮೇಕೆಗಳು, ಟಗರು, ಎಮ್ಮೆ, ಕೋಣಗಳಿವೆ, ಸುಮಾರು 794 ಸಾಕುಪಕ್ಷಿಗಳಿವೆ. ನಾಟಿಕೋಳಿ, ಗಿರಿರಾಜ ಕೋಳಿ, ಕಲ್ಲುಕೋಳಿ, ಟರ್ಕಿಕೋಳಿ, ನವಿಲಿನಂತಹ ಸಾಕುಪಕ್ಷಿಗಳಿವೆ. ಕೃಷಿಯ ಜೊತೆಯಲ್ಲೇ ಕೆಲವರು ಹೈನುಗಾರಿಕೆ ಅವಲಂಬಿಸಿರುವುದರಿಂದ ರೇಡಾಯನ್, ಜೆರ್ಸಿ ಹೆಚ್.ಎಫ್ ತಳಿಗಳ ಸೀಮೆಹಸುಗಳನ್ನು ಸಾಕಿದ್ದಾರೆ.

**ಜಲಸಂಪತ್ತು**

ಈ ಗ್ರಾಮದಲ್ಲಿ ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು ನೀರಿನ ಸಂಪನ್ಮೂಲಗಳಾಗಿವೆ. ಅಮ್ಮನಘಟ್ಟ ಗ್ರಾಮದಲ್ಲಿ ಎರಡು ಕೆರೆಗಳು ಕಂಡುಬರುತ್ತವೆ. ಸರ್ವೆ ನಂ.151ರಲ್ಲಿ 77.38 ಎಕರೆ ವಿಸ್ತೀರ್ಣದ ದೊಡ್ಡ ಕೆರೆಯಿದೆ. ಸರ್ವೆ ನಂ.74ರಲ್ಲಿ 30.11 ಎಕರೆ ವಿಸ್ತೀರ್ಣವುಳ್ಳ ಊರ ಮುಂದಿನ ಕೆರೆಯಿದೆ. ಈ ಗ್ರಾಮವು ನೀರಾವರಿಗೆ ಈ ಎರಡು ಕೆರೆಯನ್ನು ಆಶ್ರಯಿಸಿದೆ. ಈ ಎರಡೂ ಕೆರೆಗಳಿಗೆ ಮಳೆಯ ನೀರಿನ ಜೊತೆಗೆ ಆಗಸ್ಟ್ ಕೊನೆಯಿಂದ ಅಕ್ಟೋಬರ್ ನವಂಬರ್ ತಿಂಗಳವರೆಗೆ ಮಾನವ ನಿರ್ಮಿತ ಕಾಲುವೆಗಳ ಮೂಲಕ ಹೇಮಾವತಿ ನದಿ ನೀರನ್ನು ಅರಿಸುತ್ತಾರೆ. ಇದರಿಂದ ಅಂತರ್ಜಲ ಸುಧಾರಣೆಗೆ ಅನುಕೂಲವಾಗಿದೆ. ಇತ್ತೀಚೆಗೆ ಬೀಳುವ ಮಳೆಯ ಪ್ರಮಾಣದಲ್ಲಿ ಕುಸಿತ ಉಂಟಾಗಿರುವುದಿಂದ ಮಳೆ ನೀರಿಗೆ ಕೆರೆಗಳು ತುಂಬುತ್ತಿಲ್ಲ. ನೀರಾವರಿಯಲ್ಲಿ ಕೆರೆಗಳನ್ನು ಹೊರತುಪಡಿಸಿದರೆ. ಬಾವಿಗಳು ಪ್ರಮುಖ ಪಾತ್ರವಹಿಸುತ್ತವೆ. ಹಿಂದೆ ಕಪಿಲೆ ಮತ್ತು ಏತದ ಮೂಲಕ ನೀರನ್ನು ಮೇಲಕ್ಕೆ ತೆಗೆಯುತ್ತಿದ್ದರು. ಇತ್ತೀಚೆಗೆ ತೆರೆದ ಬಾವಿಗಳು ನೀರಿಲ್ಲದೆ ಒಣಗಿ ಬಣಗುಡುತ್ತಿವೆ. ಸುಮಾರು 450 ಅಡಿ ಆಳದಿಂದ 1200 ಅಡಿ ಆಳದವರೆಗಿನ ಕೊಳವೆ ಬಾವಿಗಳನ್ನು ಕೊರೆಸಿ ಆ ಮೂಲಕ ನೀರನ್ನು ಹೊರತೆಗೆದು ಕೃಷಿಗೆ ಬಳಸಲಾಗುತ್ತಿದೆ.

ಕುಡಿಯುವ ನೀರಿಗಾಗಿ ಒಂದು ಎತ್ತರದ ಮೇಲ್ತಾಪಟು ಇದೆ (ಓವರ್‌ಟ್ಯಾಂಕ್) ಇದಕ್ಕೆ ನೀರನ್ನು ಸಂಗ್ರಹಿಸಿ ಗ್ರಾಮಸ್ಥರಿಗೆ ಸಾರ್ವಜನಿಕ ಮತ್ತು ವಯಕ್ತಿಕ ಕೊಳಾಯಿ ಸಂಪರ್ಕಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ 20ಕ್ಕೂ ಅಧಿಕ ಮಿನಿಟ್ಯಾಂಕ್‌ಗಳನ್ನು ಇಡಲಾಗಿದೆ. ಮತ್ತು ಒತ್ತುವ ಕೈಪಂಪುಗಳಿವೆ.

**ಜನಸಂಖ್ಯೆ**

ಅಮ್ಮನಘಟ್ಟ ಗ್ರಾಮದಲ್ಲಿ ಒಟ್ಟು 427 ಮನೆಗಳಿದ್ದು 2138 ಜನಸಂಖ್ಯೆಯನ್ನು ಹೊಂದಿದ್ದು 1086 ಪುರುಷರು 1052 ಮಹಿಳೆಯರಿದ್ದಾರೆ. 1000ಕ್ಕೆ 969ರಷ್ಟು ಲಿಂಗಾನುಪಾತವಿದೆ. ಶೇ.67.4%ರಷ್ಟು ಸಾಕ್ಷರತೆಯಿದೆ. ಇಲ್ಲಿ ಕಾಂಕ್ರಿಟ್ ಮನೆಗಳು ಹೆಂಚು ಮತ್ತು ಶೀಟ್‌ಮನೆಗಳಿವೆ. ಸರ್ಕಾರಿ ವಸತಿ ಯೋಜನೆಗಳಾದ ಆಶ್ರಯಮನೆಗಳು ಜನತಾಮನೆಗಳು ಇಂದಿರಾ ಆವಾಸ್ ಯೋಜನೆ, ಬಸವ ಯೋಜನೆಯಲ್ಲಿ ಮನೆ ಪಡೆದಿರುವ ಫಲಾನುಭವಿಗಳಿದ್ದಾರೆ.

**ಪ್ರಾಗಿತಿಹಾಸ ಮತ್ತು ಚಾರಿತ್ರಿಕ ಹಿನ್ನೆಲೆ**

ಒಂದು ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ಮಹತ್ವವನ್ನು ಆ ಪ್ರದೇಶದಲ್ಲಿ ಮಾನವ ಬಳಸಿಬಿಟ್ಟು ಹೋಗಿರುವ ಪಳೆಯುಳಿಕೆಗಳು ಮತ್ತು ಅವರು ನಿರ್ಮಿಸಿರುವ ಹಲವಾರು ಸ್ಮಾರಕಾವಶೇಷಗಳಿಂದ ತಿಳಿಯಬಹುದು.

ಈ ಗ್ರಾಮವು ಪ್ರಾಗಿತಿಹಾಸ ಕಾಲದಿಂದಲೂ ಹೆಚ್ಚು ಮಹತ್ವ ಪಡೆದಿದೆ. ಈ ಗ್ರಾಮದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ, ಕ್ವಾರ್ಟ್‌ಜೈಟ್ ಶಿಲೆಯಿಂದ ಮಾಡಿರುವ ಮತ್ತು ಚಕ್ಕೆಗಳನ್ನು ಎಬ್ಬಿರುವ ಸೂಕ್ಷ್ಮ ಶಿಲಾಯುಗದ ಉಪಕರಣಗಳು ಪತ್ತೆಯಾಗಿವೆ. ಇದೇ ಗ್ರಾಮದ ತಳವಾರಿಕೆ ಕೆಲಸ ನಿರ್ವಹಿಸುವ ಗೋವಿಂದಯ್ಯನವರಿಗೆ ನೀಡಿರುವ ಸರ್ವೇನಂಬರ್ 159ರ ಇನಾಂ ಭೂಮಿಯಲ್ಲಿ ನವಶಿಲಾಯುಗದ ಒಂದು ಕೈಗೊಡಲಿ ಪತ್ತೆಯಾಗಿದೆ. ಡೋಲ್‌ರೈಟ್ ಶಿಲೆಯಿಂದ ತಯಾರಿಸಿದ್ದು ಬೂದು ಬಣ್ಣದಿಂದ ಕೂಡಿದೆ. ಗಡುಸಾದ, ಮತ್ತು ಭಾರವಾದ ತ್ರಿಕೋನಾಕಾರದ ಕೊಡಲಿಯು 21.ಸೆಂಮೀ ಉದ್ದ 7.5 ಸೆಂ.ಮೀ ಅಗಲವಾಗಿದೆ. ಕೊಡಲಿಯ ಒಂದು ಭಾಗ ಚೂಪಾಗಿದ್ದರೆ ಮತ್ತೊಂದು ಬದಿಯನ್ನು ಉಜ್ಜಿ ನಯಗೊಳಿಸಿರುವುದರಿಂದ ಹರಿತವಾಗಿದೆ.

ಈ ಆಯುಧವನ್ನು ಉಜ್ಜಿ ನಯಗೊಳಿಸಲು ಬಳಸಿರುವ ಒಂದು ಸಾಣೆಕಲ್ಲು ಕೂಡ ಪತ್ತೆಯಾಗಿದೆ. ಹಾಗಾಗಿ ಈ ಗ್ರಾಮವು ಪ್ರಾಗಿತಿಹಾಸದ ಜೊತೆ ಸಂಬಂಧ ಹೊಂದಿರುವುದು ತಿಳಿಯುತ್ತದೆ. ಆದರೆ ಇದು ಒಂದು ಪ್ರಾಗಿತಿಹಾಸಕಾಲದ ನೆಲೆಯಾಗಿತ್ತು ಎಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ.

ಈ ಗ್ರಾಮವು ಪರೋಕ್ಷವಾಗಿ ಅನೇಕ ರಾಜಮನೆತಗಳ ಆಳ್ವಿಕೆಗೆ ಒಳಪಟ್ಟಿದೆಯೆಂದಾದರೂ ವಿಜಯನಗರ ಸಾಮ್ರಾಜ್ಯ ಕಾಲಕ್ಕಿಂತ ಪೂರ್ವ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಆಧಾರಗಳು ದೊರೆಯುವುದಿಲ್ಲ. ವಿಜಯನಗರ ಕಾಲಘಟ್ಟ, ವಿಜಯನಗರೋತ್ತರ ಕಾಲಕ್ಕೆ ಸಂಬಂಧ ಪಟ್ಟಂತಹ ವೀರಗಲ್ಲುಗಳು ಮತ್ತು ಧಾರ್ಮಿಕ ಸ್ಮಾರಕಗಳು ಕಂಡುಬರುತ್ತವೆ. ಇಂತಹ ಪುರಾತತ್ವ ಅವಶೇಷಗಳು ಸಂಸ್ಕೃತಿಯ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಭಾಗದಲ್ಲಿ ವಿಜಯನಗೋರತ್ತರ ಕಾಲದಲ್ಲಿ ಸಣ್ಣ ಪಾಳೇಯ ಪಟ್ಟುಗಳಾದ ಗುಬ್ಬಿ ಹೊಸಹಳ್ಳಿ ಪಾಳೇಯಗಾರರು, ಬಿದಿರೆ ಪಾಳೇಯಗಾರರು, ಹಾಗಲವಾಡಿ ಪಾಳೇಯಗಾರರು ವಿಜಯನಗರ ಕಾಲದಿಂದ ಪ್ರಸಿದ್ಧಿ ಪಡೆದ ಈ ಮನೆತನಗಳು ವಿಜಯನಗರದ ಅವನತಿಯ ನಂತರ ತಮ್ಮ ಸಾರ್ವಭೌಮತ್ವವನ್ನು ವಿಸ್ತರಿಸಿಕೊಂಡು ಜನಪ್ರಿಯ ಪ್ರಭುಗಳೆನಿಸಿದರು. ಸ್ಥಳೀಯವಾಗಿ ಪ್ರಬಲರಾಗಿದ್ದ ಪಾಳೇಯಗಾರರು ತಮ್ಮ ತಮ್ಮ ಪಾಳೇಯಪಟ್ಟುಗಳನ್ನು ಸಂಸ್ಥಾನವೆಂದು ಕರೆದುಕೊಂಡು ಕೇಂದ್ರಸ್ಥಾನಗಳನ್ನಾಗಿ ಮಾಡಿಕೊಂಡು ಸುತ್ತಮುತ್ತಲಿನ ಪ್ರದೇಶಗಳನ್ನು ತಮ್ಮ ಇಡಿತದಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿದ್ದಾರೆ. ಆ ಮೂಲಕ ತಮ್ಮನ್ನು ಅರಸರೆಂದು ಹೆಸರಿಸಿಕೊಳ್ಳಲು ಶ್ರಮಿಸಿದ್ದಾರೆ.

ಮೈಸೂರು ಒಡೆಯರ ಕಾಲದಲ್ಲಿ ಫೌಜುದಾರರ ಆಳ್ವಿಕೆ ಪ್ರಾರಂಭಗೊಂಡಿತು. ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಪಾಳೇಯಗಾರರು ಅಧಿಕಾರ ಕಳೆದುಕೊಂಡು ಕುಗ್ಗಿ ಹೋದರು. ಕಾಲಾನಂತರದಲ್ಲಿ ಮೈಸೂರು ಸಂಸ್ಥಾನವನ್ನು ಬ್ರಿಟೀಷರು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು ಶೋಷಣೆಗೆ ಒಳಗಾದ ಜನರು ಬ್ರಿಟೀಷರ ವಿರುದ್ಧವಾಗಿ ಗಾಂಧೀಜಿಯವರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಪ್ರಭಾವದಿಂದ ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಇಡೀ ರಾಷ್ಟ್ರವೇ ಆಂದೋಲನದಲ್ಲಿ ಪಾಲ್ಗೊಂಡಿತ್ತು. ಈ ಅಮ್ಮನಘಟ್ಟ ಗ್ರಾಮದ ಜನತೆಯು ಅದರಿಂದ ಹೊರತಾಗಿರಲಿಲ್ಲ. ಸ್ವಾತಂತ್ರ್ಯ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಈ ಗ್ರಾಮದ ಜನರು ಗಾಢವಾದ ಅಭಿಮಾನವುಳ್ಳವರಾಗಿದ್ದರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ಗ್ರಾಮದ ನಿವೃತ್ತ ಶಿಕ್ಷಕರಾದ ದಿವಂಗತ ಬಸವಲಿಂಗಯ್ಯ, ದಿವಂಗತ ಸಿದ್ಧಲಿಂಗಪ್ಪ, ದಿವಂಗತ ಅಡವೀಶಪ್ಪ, ದಿವಂಗತ ಮೃತ್ಯುಂಜಯಪ್ಪ, ದಿವಂಗತ ಸಿದ್ಧನಂಜಪ್ಪ, ಬ್ರಿಟೀಷರ ವಿರುದ್ಧ ಹೋರಾಡಿದ ಪುಣ್ಯ ಪುರುಷರಾಗಿದ್ದು ಗ್ರಾಮದ ಹೆಮ್ಮೆಯ ಪ್ರತೀಕವಾಗಿದ್ದಾರೆ.

**ದೇವಾಲಯಗಳು**

ದೇವಾಲಯಗಳು ಈ ಗ್ರಾಮದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿವೆ. ಸಾಂಪ್ರದಾಯಿಕ ಸಂಸ್ಕೃತಿಯುಳ್ಳ ಗ್ರಾಮದಲ್ಲಿ ದೇವತಾರಾದನೆಯು ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿದೆ. ಇಲ್ಲಿನ ಜನತೆ ನೆಮ್ಮದಿಯ ಜೀವನಕ್ಕೆ ಪೂರಕವಾಗಿ ಕಂಡುಕೊಂಡಂತಹ ಮಾರ್ಗವೇ ದೇವತೆಯ ಆರಾಧನೆ. ಇಲ್ಲಿನ ಜನರು ನಂಬಿರುವ ಅಭೂತಪೂರ್ವ ಶಕ್ತಿಗಳಲ್ಲಿ ದೈವಿಕ ಶಕ್ತಿಯು ಪ್ರಮುಖವಾದುದಾಗಿದೆ. ಈ ಗ್ರಾಮದಲ್ಲಿ ನಾಲ್ಕು ದೇವಾಲಯಗಳಿದ್ದು ಎರಡು ಶೈವ, ಒಂದು ವೈಷ್ಣವ ಮತ್ತು ಒಂದು ಶಾಕ್ತ ಪಂಥದ ದೇವಾಲಯಗಳಾಗಿವೆ. ಇಲ್ಲಿನ ಶೈವ ದೇವಾಲಯಗಳು ವಿಜಯನಗರ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿದ್ದು ಇತ್ತೀಚೆಗೆ ಇವುಗಳನ್ನು ಜೀರ್ಣೋದ್ದಾರಗೊಳಿಸಿದ್ದರೆ ವೈಷ್ಣವ ದೇವಾಲಯ ಪಾಳೇಯಗಾರರ ಕಾಲದಲ್ಲಿ ನಿರ್ಮಿಸಲಾಗಿತ್ತು. ಆದರೆ ಈ ವೈಷ್ಣವ ದೇವಾಲಯವನ್ನು ಸಂಪೂರ್ಣವಾಗಿ ಹೊಸದಾಗಿ ನಿರ್ಮಿಸಲಾಗಿದೆ.

ಇಲ್ಲಿನ ಮಹಾಲಿಂಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗುಡಿ, ಸುಖನಾಸಿ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಲಿಂಗುವಿದೆ. ಇದರಲ್ಲಿ ಬ್ರಹ್ಮಪೀಠ, ವಿಷ್ಣುಪೀಠ ಪಾಣಿಪೀಠವಿದ್ದು, ಪಾಣಿಪೀಠದ ಮೇಲೆ ಲಿಂಗುವನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಹಿಂಭಾಗದಲ್ಲಿ ಲೋಹದಿಂದ ನಿರ್ಮಿಸಿರುವ ಮಹಾಲಿಂಗೇಶ್ವರನ ಮೂರ್ತಿಯಿದೆ. ಮತ್ತು ಪ್ರಭಾವಳಿಯಿದೆ. ಗರ್ಭಗುಡಿಯ ಮುಂದೆ ಸುಖನಾಸಿಯಿದ್ದು ಸುಮಾರು 1/2 ಅಡಿ ವೇದಿಕೆಯ ಮೇಲೆ ಗರ್ಭಗುಡಿಯಲ್ಲಿನ ಲಿಂಗುವಿಗೆ ಅಭಿಮುಖವಾಗಿ ಕಪ್ಪುಶಿಲೆಯಲ್ಲಿ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಆಕರ್ಷಕ ಡುಬ್ಬ ಅಲಂಕಾರಿಕ ಸರಪಳಿಗಳಿವೆ. ಇದೇ ಭಾಗದಲ್ಲಿ ಉತ್ತರಾಭಿಮುಖವಾಗಿ ಒಂದು ಗಣೇಶ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಸುಖನಾಸಿಯ ಮುಂದೆ ಮಂಟಪವಿದ್ದು ಅದರಲ್ಲಿ ಎರಡು ವೃತ್ತಾಕಾರದ ಸಾಧಾರಣ ಕಂಭಗಳಿದ್ದು ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ದೇವಾಲಯದ ಮುಂಭಾಗದಲ್ಲಿ ಅಭಿಮುಖವಾಗಿ ನಿರ್ಮಿಸಿರುವ ನಂದಿ ಮಂಟಪವಿದೆ. ದೇವಾಲಯದ ಮೇಲ್ಛಾವಣಿಯ ಮುಂದಿನ ಭಾಗದಲ್ಲಿ ದೇವ ಕೋಷ್ಟಕಗಳಿದ್ದು ಮಧ್ಯದ ಕೋಷ್ಟಕದಲ್ಲಿ ಈಶ್ವರ, ಗಣೇಶ ಮತ್ತು ಪಾರ್ವತಿ ಶಿಲ್ಪಗಳಿವೆ. ಅದರ ಮೇಲೆ ಕಳಶವಿದೆ. ಅದರ 2 ಬದಿಯ ಕೋಷ್ಟಕಗಳಲ್ಲಿ ಒಂದರಲ್ಲಿ ಗಣೇಶ ತಬಲ ಹಿಡಿದು ನಿಂತಿರುವ ಮತ್ತು ಮತ್ತೊಂದು ವೀಣೆ ಹಿಡಿದು ನಿಂತಿರುವ ಶಿಲ್ಪಗಳಿವೆ. ದೇವಾಲಯದ ಮೇಲೆ ನಾಲ್ಕು ಮೂಲೆಗಳಲ್ಲಿ ನಾಲ್ಕು ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ಕಲ್ಲಿನ ಮಂಟಪವಿದೆ ಅಮವಾಸ್ಯೆಯ ವಿಶೇಷ ಪೂಜೆಯಲ್ಲಿ ಮತ್ತು ಇತರ ಧಾರ್ಮಿಕ ಕಾರ್ಯಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ದೇವಾಲಯದ ಮುಂದಿನ ಆವರಣದಲ್ಲಿ ಒಂದು ಮಜ್ಜನ ಭಾವಿಯಿದ್ದು ನೀರಿಲ್ಲದೆ ಬತ್ತಿಹೋಗಿದೆ. ಈ ದೇವಾಲಯ ಕೆರೆಯ ದಡದಲ್ಲಿದ್ದು ಮುಜರಾಯಿ ಇಲಾಖೆಗೆ ಸೇರಿದೆ.

**ವೀರಭದ್ರ ದೇವಾಲಯ**

ವೀರಭದ್ರ ದೇವಾಲಯವು ಊರ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿದೆ. ಈ ದೇವಾಲಯದಲ್ಲಿ ಗರ್ಭಗುಡಿ, ಸುಖನಾಸಿ, ಮಂಟಪ, ತೆರೆದ ಮಂಟಪಗಳಿವೆ. ಗರ್ಭಗುಡಿಯಲ್ಲಿ 11/2 ಅಡಿ ಪೀಠದ ಮೇಲೆ ವೀರಭದ್ರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಹಿಂದೆ ಲೋಹದ ಪ್ರಭಾವಳಿಯಿದೆ. ವೀರಭದ್ರ ಮೂರ್ತಿಯ ಮುಖವಾಡ ಮತ್ತು ಕತ್ತಿಯನ್ನು ಬೆಳ್ಳಿಯಿಂದ ಮಾಡಿಸಿ ಇಟ್ಟಿದ್ದಾರೆ. ಗರ್ಭಗುಡಿಯ ಮುಂದೆ ಸುಖನಾಸಿಯಿದ್ದು ಇದರ ಬಾಗಿಲುವಾಡಕ್ಕೆ ಹಿತ್ತಾಳೆಯಿಂದ ಮಾಡಿರುವ ಬಾಗಿಲುವಾಡವನ್ನು ಜೋಡಿಸಿದ್ದಾರೆ. ಅಲಂಕಾರಿಕ ಲತಾ ಸುರುಳಿಗಳು. ಎಡ ಮತ್ತು ಬಲಬದಿಯಲ್ಲಿ ಆಕರ್ಷಕ ದ್ವಾರಪಾಲಕ ವಿಗ್ರಹಗಳಿವೆ. ಲಲ್ಲಾಟ ಬಿಂಬವು ತುಂಬಾ ಆಕರ್ಷಣೀಯವಾಗಿದ್ದು ನಂದಿ ಮತ್ತು ಶಿವಲಿಂಗವನ್ನು ಇಡಲಾಗಿದೆ. ಸುಖನಾಸಿಯ ಒಳಭಾಗದಲ್ಲಿ ಬಲಭಾಗಕ್ಕೆ ಗಣೇಶ ಮೂರ್ತಿಯಿದ್ದರೆ ಎಡಭಾಗದಲ್ಲಿ ಉತ್ಸವ ಮೂರ್ತಿಗಳನ್ನಿಟ್ಟಿದ್ದಾರೆ. ಸುಖನಾಸಿಯ ಮುಂದೆ ಮಂಟಪವಿದ್ದು ಎರಡು ಕಂಭಗಳಿವೆ. ಇವುಗಳು ಮಂಟಪದ ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ಕಂಭಗಳಲ್ಲಿ

ಮೇಲ್ಭಾಗ ಮತ್ತು ಕೆಳಭಾಗ ಚೌಕಾಕಾರವಾಗಿದ್ದು 8 ಪಟ್ಟಿಕೆಗಳಿವೆ. ಸಾಧಾರಣವಾದ ನಾಲ್ಕು ಮುಖದ ಬೋಧಿಗೆಗಳಿವೆ. ದೇವಾಲಯದ ಮೇಲ್ಛಾವಣಿಯ 4 ಮೂಲೆಗಳಲ್ಲಿ ಎರಡು ದೇಹ ಒಂದು ಮುಖವುಳ್ಳ ನಂದಿಗಳಿವೆ. ಮೇಲ್ಛಾವಣಿಯ ಮೇಲ್ಭಾಗದ ಮುಂಭಾಗದಲ್ಲಿ ಅಲಂಕಾರಿಕ ದೇವಕೋಷ್ಠಕವಿದ್ದು ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಮೇಲೆ ಕಳಶವಿದೆ. ಗರ್ಭಗುಡಿಯ ಮೇಲೆ ಸ್ಥಳೀಯ ಶೈಲಿಯ ಶಿಖರವಿದ್ದು ಶಿಖರದ ಎರಡು ಮೂಲೆಯಲ್ಲಿ ಹಿಂದಕ್ಕೆ ಮುಖಮಾಡಿರುವ ಎರಡು ನಂದಿಗಳಿದ್ದರೆ ಶಿಖರದ ಕಳಶದ ಕೆಳಭಾಗದಲ್ಲಿ 4 ದಿಕ್ಕುಗಳಿಗೂ 2 ದೇಹದ ಒಂದು ಮುಖವುಳ್ಳ ನಂದಿಗಳಿವೆ. ಶಿಖರದ ಮೇಲೆ ಲೋಹದಿಂದ ಮಾಡಿರುವ ಕಳಶವನ್ನು ಇಡಲಾಗಿದೆ. ಈ ದೇವಾಲಯವು ಮುಜರಾಯಿ ಇಲಾಖೆ ಅಧೀನಕ್ಕೆ ಒಳಪಟ್ಟಿದೆ.

**ರಂಗನಾಥಸ್ವಾಮಿ ದೇವಾಲಯ**

ಅಮ್ಮನಘಟ್ಟ ಊರ ಮುಂದೆ ಪೂರ್ವಾಭಿಮುಖವಾಗಿ ಈ ದೇವಾಲಯವಿದೆ. ಈ ದೇವಾಲಯದಲ್ಲಿ ಗರ್ಭಗುಡಿ ಮತ್ತು ಮುಖಮಂಟಪವಿದೆ. ಗರ್ಭಗುಡಿಯಲ್ಲಿ ಸುಮಾರು 1 ಅಡಿ ಎತ್ತರದ ವೇದಿಕೆಯ ಮೇಲೆ ರಂಗನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಹಿಂದೆ ಲೋಹದ ಪ್ರಭಾವಳಿಯಿದೆ. ಗರ್ಭಗುಡಿಯ ಮುಂದೆ ಮಂಟಪವಿದ್ದು ಮಂಟಪದ ಎಡಭಾಗದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ಬಲಭಾಗದಲ್ಲಿ ರಾಮ, ಲಕ್ಷ್ಮಣ, ಸೀತೆಯನ್ನು ಒಳಗೊಂಡ ಲೋಹದ ಉತ್ಸವ ಮೂರ್ತಿಗಳನ್ನು ಇಡಲಾಗಿದೆ. ಎರಡು ಸಾಧಾರಣ ಕಂಭಗಳಿದ್ದು ಮೇಲ್ಛಾವಣಿಯನ್ನು ಹೊತ್ತು ನಿಂತಿವೆ. ದೇವಾಲಯದ ಮುಂದೆ ಸುಮಾರು ನಾಲ್ಕು ಅಡಿ ಎತ್ತರದ ವೇದಿಕೆಯ ಮೇಲೆ 6 ಅಡಿ ಎತ್ತರದ ದೀಪಸ್ತಂಭವಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಶಿಖರವಿದೆ. ಶಿಖರದ ತುದಿಯಲ್ಲಿ ಲೋಹದ ಕಳಶವನ್ನು ಇಡಲಾಗಿದೆ. ಈ ದೇವಾಲಯ ಮುಜರಾಯಿ ಇಲಾಖೆಯ ಅಧೀನಕ್ಕೆ ಒಳಪಟ್ಟಿದೆ.

**ಶ್ರೀ ಕೆಂಪಮ್ಮ ದೇವಾಲಯ (ಮಾರಮ್ಮ ದೇವಾಲಯ)**

ಊರ ಮುಂಭಾಗದಲ್ಲಿ ರಂಗನಾಥ ಸ್ವಾಮಿ ದೇವಾಲಯದ ಎಡಭಾಗದಲ್ಲಿ ಗ್ರಾಮದ ಶಕ್ತಿ ದೇವತೆಯಾದ ಮಾರಮ್ಮನ ದೇವಾಲಯವಿದೆ. ಈ ದೇವಾಲಯದಲ್ಲಿ ಗರ್ಭಗುಡಿ ಮತ್ತು ಮುಖಮಂಟಪವಿದೆ ಗರ್ಭಗುಡಿಯಲ್ಲಿ ಹಿಂದೆ ಗೂಡಿನಲ್ಲಿ ಮಾರಮ್ಮನನ್ನು ಇಟ್ಟು ಪೂಜೆ ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಶಿಲೆಯಿಂದ ಮಾಡಿರುವ ವಿಗ್ರಹವನ್ನು ತಂದು ಪ್ರತಿಷ್ಠಾಪಿಸಲಾಗಿದೆ. ಗೂಡಿನಲ್ಲಿದ್ದ ದೇವರನ್ನು ಮೆರವಣಿಗೆ ದೇವರಾಗಿ ಮುಖಮಂಟಪದಲ್ಲಿಟ್ಟಿದ್ದಾರೆ. ಮಂಟಪದಲ್ಲಿ ಎರಡು ಸಾಧಾರಣ ಕಂಭಗಳಿದ್ದು ಇಡೀ ದೇವಾಲಯದ ಮೇಲ್ಛಾವಣಿಯನ್ನು ಹೊತ್ತು ನಿಂತಿವೆ.

**ವೀರಗಲ್ಲುಗಳು ಮತ್ತು ಮಹಾಸತಿಕಲ್ಲು**

ಅಮ್ಮನಘಟ್ಟದ ಪಾರಂಪರಿಕ ಸಂಸ್ಕೃತಿಯನ್ನು ಬಿಂಬಿಸುವ ವೀರಗಲ್ಲು ಮತ್ತು ಮಹಾಸತಿ ಕಲ್ಲುಗಳು ಕಂಡುಬಂದಿವೆ. ಈ ಗ್ರಾಮದ ಜನರು ಧಾರ್ಮಿಕ ನೆಲೆಗಟ್ಟಿನಿಂದ ಹೆಚ್ಚು ಪ್ರಭಾವಿತಗೊಂಡಿದ್ದು ಪ್ರಾಚೀನ ಕಾಲದಿಂದಲೂ ಸದ್ಗತಿ ಮತ್ತು ಮೋಕ್ಷವನ್ನು ಪಡೆಯುವುದನ್ನೇ ತಮ್ಮ ಗುರಿಯಾಗಿಟ್ಟುಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವರ ಜೀವನದಲ್ಲಿ ಮರಣ, ಸಮಾಧಿ, ಬಲಿದಾನ, ವೀರಮರಣ ಮುಂತಾದವುಗಳು ಸಮಾಜದಲ್ಲಿ ಪರಂಪರೆಯಿಂದ ಬಂದಿರುವ ಆಚರಣೆಗಳಾಗಿವೆ. ಇಂತಹ ಅಸಾಮಾನ್ಯ ವಿಶಿಷ್ಟ ಮರಣಗಳನ್ನು ಪ್ರಾಚೀನ ಕಾಲದಿಂದಲೂ ಗುರುತಿಸಬಹುದಾಗಿದೆ. ಇದರ ನೆನಪಿಗಾಗಿ ಕಲ್ಲಿನಲ್ಲಿ ವೀರರ ಕೆತ್ತನೆ, ಮಹಾಸತಿಗಲ್ಲು ಪ್ರತಿಷ್ಠಾಪಿಸುವ ಪರಂಪರೆ ಸಮಾಜದ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ.

ಅಮ್ಮನಘಟ್ಟ ಗ್ರಾಮದಲ್ಲಿ ನಾಲ್ಕು ವೀರಗಲ್ಲುಗಳು ಕಂಡುಬರುತ್ತವೆ. ಈ ವೀರಗಲ್ಲುಗಳ ಮೇಲೆ ಯಾವುದೇ ಶಾಸನ ಕಂಡುಬರದೇ ಇರುವುದರಿಂದ ಕಾಲವನ್ನು ನಿರ್ಧರಿಸುವಲ್ಲಿ ಗೊಂದಲ ಉಂಟಾಯಿತು. ಇತಿಹಾಸ ತಜ್ಞರ

ಜೊತೆಯಲ್ಲಿ ಚರ್ಚಿಸಿದಾಗ ಈ ವೀರಗಲ್ಲುಗಳು ಸುಮಾರು 15ನೇ ಶತಮಾನಕ್ಕೆ ಸಂಬಂಧಪಟ್ಟವು ಎಂಬ ಒಮ್ಮತಕ್ಕೆ ಬರಲಾಗಿದೆ.

ಒಂದನೇ ವೀರಗಲ್ಲು, ಇದೇ ಗ್ರಾಮದ ವೀರಭದ್ರ ಸ್ವಾಮಿ ದೇವಾಲಯದ ಅರ್ಚಕರಾದ ಲೇ||ಚಂದ್ರಯ್ಯನವರ ಜಮೀನಿನ ತೋಟದ ಬದುವಿನಲ್ಲಿ ಇದೆ. ಇದು ಪ್ರಥಮ ನೋಟಕ್ಕೆ ವೀರಗಲ್ಲಂತೆ ಕಂಡರೂ. ಅದರ ಎಡ ಮತ್ತು ಬಲಕ್ಕೆ ಇರುವ ಕಲ್ಲು ಚಪ್ಪಡಿಗಳನ್ನು ಗಮನಿಸಿದಾಗ ವೀರರ ಗುಡಿಯಾಗಿದ್ದಿರಬಹುದು ಎಂದು ಸ್ಪಷ್ಟವಾಗುತ್ತದೆ. ಆ ಕಲ್ಲುಗಳು ಇಂದಿಗೂ ಕೂಡ ಅಲ್ಲೇ ಇವೆ. ಇಲ್ಲಿ ಇರುವ ವೀರಗಲ್ಲು ಪೂರ್ವಾಭಿಮುಖವಾಗಿದ್ದು ಸುಮಾರು ಎರಡು ಅಡಿ ಅಗಲ ಮತ್ತು ಸುಮಾರು ಎರಡೂವರೆ ಅಡಿ ಎತ್ತರವಾಗಿದೆ. ಇದು ಮೊಣಕಾಲಿನವರೆಗೆ ಭೂಮಿಯಲ್ಲಿ ಹೂತಿರುವುದರಿಂದ ನಿರ್ಧಿಷ್ಟವಾಗಿ ಅಳತೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಈ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಬಾಣವನ್ನು ಹಿಡಿದು ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನು ಉದ್ದನೆಯ ಜಡೆಯನ್ನು ಬಿಟ್ಟಿದ್ದು ಸಮರೋಚಿತವಾದ ಉಡುಪನ್ನು ಧರಿಸಿದ್ದಾನೆ. ಕೈಗಳಿಗೆ ಕಡಗವನ್ನು, ಕೊರಳಿಗೆ ಕಂಠಾಭರಣ, ಸೊಂಟದಲ್ಲಿ ಕಟಿಸೂತ್ರವನ್ನು ಧರಿಸಿರುವನು ವೀರನ ಮೇಲ್ಭಾಗದಲ್ಲಿ ಕಲ್ಲಿನ ತುದಿಯ ಎರಡು ಭಾಗದಲ್ಲಿ ಸೂರ್ಯ ಮತ್ತು ಚಂದ್ರನನ್ನು ಚಿತ್ರಿಸಲಾಗಿದೆ. ಸೂರ್ಯನನ್ನು ಚಿತ್ರಿಸಿರುವ ಕಡೆಯಲ್ಲಿ ಅಕ್ಷರಗಳನ್ನು ಕೊರೆಯಲು ಪ್ರಯತ್ನಿಸಿರುವಂತೆ ಗೋಚರಿಸುತ್ತದೆ. ಆದರೆ ಅದರ ಸ್ಪಷ್ಟತೆಯಿಲ್ಲ

ಎರಡನೇ ವೀರಗಲ್ಲು ಇನಾಂ ಭೂಮಿ ಬೋರನಾಯ್ಕನ ಜಮೀನಿನಲ್ಲಿ ಹಲಸಿನ ಗಿಡದ ಕೆಳಗೆ ನೆಲದ ಮೇಲೆ ಬಿದ್ದಿದೆ. ಇದು ವಿನಾಶದ ಅಂಚಿನಲ್ಲಿದ್ದು ಏನನ್ನೂ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ ವೀರಗಲ್ಲಿನಲ್ಲಿ ಕಲ್ಲಿನ ಚಕ್ಕೆಗಳು ಎದ್ದಿವೆ. ಕಪ್ಪು, ನೀಲಿ ಛಾಯೆಯುಳ್ಳ ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ಇದರಲ್ಲಿ ಇಬ್ಬರು ವೀರರನ್ನು ಧನುರ್ದಾರಿಗಳನ್ನಾಗಿ ಬಿಡಿಸಲಾಗಿದೆ. ವೀರರು ಸಮರೋಚಿತವಾದ ಉಡುಪನ್ನು ಧರಿಸಿ ಕೆಳಗೆ ಕಚ್ಚೆಯನ್ನು ಧರಿಸಿರುವಂತೆ ಕಾಣುವುದನ್ನು ಬಿಟ್ಟರೆ ಬೇರೆ ಯಾವುದೇ ಅಂಶಗಳಲ್ಲಿ ಸ್ಪಷ್ಟತೆಯಿಲ್ಲ. ಇಬ್ಬರು ವೀರರು ಕೂಡ ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿ ಇಡಿದಿರುವಂತೆ ಚಿತ್ರಿಸಲಾಗಿದೆ. ಇಬ್ಬರು ವೀರರ ತಲೆಯ ತುರುಬನ್ನು ಬಲಭಾಗಕ್ಕೆ ಬಿಡಿಸಲಾಗಿದೆ. ಇದು ಸುಮಾರು 2.5 ಅಡಿ ಉದ್ದ 2 ಅಡಿ ಅಗಲವಾಗಿದೆ.

3ನೇ ವೀರಗಲ್ಲು ರಾಮಪ್ಪನ ಒಣಿಯಲ್ಲಿದೆ ಅಮ್ಮನಘಟ್ಟದಿಂದ ತಿಪ್ಪೂರಿಗೆ ಹೋಗುವ ಮಾರ್ಗದಲ್ಲಿ ರಸ್ತೆಯ ಬದಿಯಲ್ಲಿದೆ. ಈ ವೀರಗಲ್ಲು ಅತ್ಯಂತ ಆಕರ್ಷಣೀಯವಾಗಿದ್ದು ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಸುಮರು 3 ಅಡಿ ಎತ್ತರವಾಗಿದ್ದು 2 ಅಡಿ ಅಗಲವಾಗಿದೆ. ವೀರಗಲ್ಲಿನಲ್ಲಿ ಕುದುರೆಯ ಮೇಲೆ ವೀರ ಆಸೀನ ಭಂಗಿಯಲ್ಲಿ ಕುಳಿತ್ತಿದ್ದು ಎಡಗೈಯಲ್ಲಿ ಕುದುರೆಯ ಲಗಾಮನ್ನು ಇಡಿದು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಹಿಂದಕ್ಕೆ ಓರೆಗಣ್ಣಿನಿಂದ ತಿರುಗಿ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನು ಕೈ ಮತ್ತು ಕಾಲ್ಗಳಿಗೆ ಕಡಗವನ್ನು ಧರಿಸಿದ್ದು ತಲೆಗೆ ಪೇಟ ಕಟ್ಟಿರುವಂತೆ ಭಾಸವಾಗುತ್ತದೆ. ಕೊರಳಿಗೆ ಕಂಠಿಹಾರ ಧರಿಸಿದ್ದಾನೆ. ಕುದುರೆಗೆ ಹಾಕಿರುವ ಮುಖವಾಡ ಲಗಾಮು ಸ್ಪಷವಾಗಿ ಗೋಚರವಾಗುತ್ತದೆ. ಕುದುರೆ ಕಾಲುಗಳಿಗೂ ಕಾಲ್ಗಳಿಗೆ ಕಡಗವನ್ನು ಹಾಕಲಾಗಿದ್ದು ಕುದುರೆಯು ಮುಂದಿನ ಕಾಲನ್ನು ಎತ್ತಿ ಮುಂದೆ ಹೋಗುತ್ತಿರುವಂತೆ ಕಾಣುತ್ತದೆ. ಮುಂದೆ ಬಲಭಾಗದಲ್ಲಿ ಒಬ್ಬ ಸ್ತ್ರೀಯನ್ನು ನಿಂತ ಭಂಗಿಯಲ್ಲಿ ಕೆತ್ತಲಾಗಿದ್ದು ತನ್ನ ಬಲಗೈ ಮೇಲೆತ್ತಿ ಆಶೀರ್ವದಿಸುತ್ತಿರವಂತೆ ಮತ್ತೊಂದು ಕೈ ದೇಹಕ್ಕೆ ಅಂಟಿಕೊಂಡಂತೆ ಇಳಿ ಬಿಟ್ಟಿರುವಂತೆ ಚಿತ್ರಿಸಲಾಗಿದೆ. ಇದು ವೀರನ ಸತಿ ಇರಬಹುದು. ಈ ವೀರಗಲ್ಲಿನ ಮೇಲ್ಭಾಗದ ಎಡ ಮತ್ತು ಬಲಭಾಗದಲ್ಲಿ ಸೂರ್ಯ, ಚಂದ್ರರನ್ನು ಬಿಡಿಸಲಾಗಿದೆ.

4ನೇ ವೀರಗಲ್ಲು (ಅಡುಗೆಭಟ್ಟ) ಶಿವರುದ್ರಯ್ಯ s/o ಗಂಗಣ್ಣ ಜಮೀನಿನಲ್ಲಿದೆ. ಇದು ಸುಮಾರು 4 ಅಡಿ ಉದ್ದ 2 ಅಡಿ ಅಗಲವಾಗಿದೆ. ಕಪ್ಪು ನೀಲಿಛಾಯೆಯುಳ್ಳ ಕಲ್ಲನ್ನು ಬಳಸಲಾಗಿದೆ. ಈ ವೀರಗಲ್ಲಿನಲ್ಲಿ ವೀರನು

ಕುದುರೆಯ ಮೇಲೆ ಆಸೀನ ಭಂಗಿಯಲ್ಲಿ ಕುಳಿತಿದ್ದು ಎಡಗೈಯಲ್ಲಿ ಕುದುರೆಯ ಲಗಾಮನ್ನು ಬಲಗೈಯಲ್ಲಿ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿರುವ ಖಡ್ಗವನ್ನು ಹಿಡಿದು ವೀರ ಹಿಂದಕ್ಕೆ ತಿರುಗಿ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನು ಕೈಕಡಗ, ಕಾಲಿನ ಕಡಗಳನ್ನು ಧರಿಸಿದ್ದಾನೆ. ಕೊರಳಿಗೆ ಕಂಠಾಭರಣ, ಶಿರಾಸ್ತ್ರಣ ಧರಿಸಿ ಸಮರೋಚಿತವಾದ ಉಡುಪನ್ನು ಧರಿಸಿದ್ದಾನೆ. ವೀರನು ಕುಳಿತಿರುವ ಕುದುರೆ ತನ್ನ ಮುಂದಿನ ಎರಡು ಕಾಲುಗಳನ್ನು ಮೇಲೆತ್ತಿ ನೆಗೆಯುತ್ತಿರುವಂತೆ ಚಿತ್ರಿಸಲಾಗಿದೆ. ವೀರಗಲ್ಲಿನ ಬಲಭಾಗದಲ್ಲಿ ನಿಂತ ಭಂಗಿಯಲ್ಲಿ ಒಂದು ವೀರನ ಚಿತ್ರವಿದ್ದು ಕೈ ಕಡಗ ತೋಳುಬಂಧಿ, ಶಿರಾಸ್ತ್ರಣ, ಕಂಠಾಭರಣ, ಧರಿಸಿ ಸಮರೋಚಿತವಾದ ಉಡುಪು ಧರಿಸಿ ಬಲಗೈಯಲ್ಲಿ ಕತ್ತಿ ಇಡಿದಿರುವಂತೆ ಚಿತ್ರಿಸಲಾಗಿದೆ. ಇದು ವಿನಾಶದ ಅಂಚಿನಲ್ಲಿದೆ. ಇತ್ತೀಚೆಗೆ ನಿಧಿಗಳ್ಳರು ಈ ವೀರಗಲ್ಲಿನ ಅಡಿಯಲ್ಲಿ ನಿಧಿ ಇದೆ ಎಂದು ಇದನ್ನು ಕಿತ್ತು ಹಾಕಿದ್ದಾರೆ ಮತ್ತೆ ಅದೇ ಜಮೀನಿನವರು ರಕ್ಷಣೆಯನ್ನು ಮಾಡಿದ್ದಾರೆ.

## ಮಹಾಸತಿಕಲ್ಲು

ಗ್ರಾಮದಲ್ಲಿ ಕಂಡುಬರುವ ಪ್ರಾಚ್ಯಾವಶೇಷಗಳಲ್ಲಿ ಮಹಾಸತಿಕಲ್ಲು ಒಂದಾಗಿದ್ದು ವೀರಗಲ್ಲಿನಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ಆತ್ಮ ಬಲಿದಾನದ ನೆನಪಿಗಾಗಿ ಹಾಕಿಸಿರುವ ಸ್ಮಾರಕ ಶಿಲ್ಪವಾಗಿದೆ. ಅಮ್ಮನಘಟ್ಟದಿಂದ ತಿಪ್ಪೂರಿಗೆ ಹೋಗುವ ಮಾರ್ಗದಲ್ಲಿ ರಾಮಪ್ಪನ ಒಣಿ ಎಂದು ಕರೆಯಲಾಗುವ ಪ್ರದೇಶದಲ್ಲಿ ಈ ಮಹಾಸತಿಕಲ್ಲಿದೆ. ಇದರ ಬಗ್ಗೆ ಜನತೆಯಲ್ಲಿ ಗೌರವ ಯುತ ಭಾವನೆಯಿದೆ. ಇದನ್ನು ಉತ್ತರಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಭೂಮಿಯ ಮೇಲ್ಭಾಗದಿಂದ ಸುಮಾರು ಎರಡು ಅಡಿ ಎತ್ತರವಾಗಿದ್ದು 11/4 ಅಡಿ ಅಗಲವಾಗಿದೆ. ಆತ್ಮ ಬಲಿಯಾಗಿರುವ ಸ್ತ್ರೀ ರವಿಕೆ ಮತ್ತು ಲಂಗವನ್ನು ವಸ್ತ್ರಗಳಾಗಿ ಧರಿಸಿದ್ದಾಳೆ. ತನ್ನ ಕೈಗಳನ್ನು ಮೇಲೆತ್ತಿ ಎರಡು ಕೈಗಳ ಹಸ್ತಗಳನ್ನು ಜೋಡಿಸಿ ನಮಸ್ಕರಿಸಿರುವ ರೀತಿಯಲ್ಲಿದೆ. ಎರಡು ಕೈಗಳಲ್ಲಿ ಕಡಗಗಳಿವೆ. ತುರುಬನ್ನು ಗುಂಡಾಕಾರವಾಗಿ ಕಟ್ಟಿದ್ದಾಳೆ. ಈ ಗ್ರಾಮದ ಕೋಲ್ಕಾರ ಮನೆತನದಲ್ಲಿ ಯಾವುದೇ ಹೆಣ್ಣುಮಕ್ಕಳ ಮದುವೆಯಾದರೂ ವಿವಾಹಕ್ಕೆ ತಂದ ಬಟ್ಟೆ ಮತ್ತು ಆಭರಣಗಳನ್ನು ಈ ಮಹಾಸತಿಕಲ್ಲಿನ ಬಳಿ ಇಟ್ಟು ಮೊದಲು ಪೂಜೆ ಮಾಡಿದ ನಂತರದಲ್ಲಿ ಬಳಸುತ್ತಾರೆ.

ಈ ಗ್ರಾಮದ ಕೋಲ್ಕಾರ ಮನೆತನಕ್ಕೆ ಸೇರಿದ ಜನರು ಯಾವುದೇ ಊರಿನಲ್ಲಿದ್ದರೂ ಇಲ್ಲಿಗೆ ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ. ಒಣಿ ತಿಮ್ಮವ್ವ ಎಂಬ ಹೆಸರಿಸಲಾಗಿದೆ. ಆತ್ಮಬಲಿಯಾದ ಹೆಣ್ಣುಮಗಳು ನಿಮ್ಮ ಗಂಡುಗಾಳಿಯಾಗಲೀ, ಹೆಣ್ಣು ಮಣ್ಣಾಗಲೀ ಎಂದು ಶಾಪ ಇಟ್ಟಳೆಂಬ ನಂಬಿಕೆಯಿದೆ.

## ಲಿಂಗುಮುದ್ರೆಕಲ್ಲು

ಇದೇ ಗ್ರಾಮದ ಎ.ಎಲ್.ನಟರಾಜು s/o ಲಕ್ಷ್ಮೀನರಸಿಂಹಯ್ಯ ಎಂಬುವರ ಜಮೀನಿನಲ್ಲಿ ಸುಮಾರು 4 ಅಡಿ ಉದ್ದದ ಲಿಂಗುಮುದ್ರೆ ಕಲ್ಲು ದೊರೆತಿದ್ದು, ಅದನ್ನು ಅವರು ಪ್ರತ್ಯೇಕವಾಗಿ ಬೇರೆ ಕಡೆ ಪ್ರತಿಷ್ಠಾಪಿಸಿದ್ದಾರೆ. ಭೂಮಿಯ ಮೇಲೆ ಸುಮಾರು 11/2 ಅಡಿ ಉದ್ದವಾಗಿದ್ದು ಅದರ ಮೇಲೆ ಲಿಂಗುವನ್ನು ಕೆತ್ತಲಾಗಿದೆ. ಪ್ರತಿವರ್ಷ ಮಹಾಶಿವರಾತ್ರಿಯಂದು ವಿಶೇಷ ಪೂಜೆ, ಅಭಿಷೇಕ ನೆರವೇರಿಸುತ್ತಾರೆ.

## ಕರವುಗಲ್ಲುಗಳು

ಈ ಗ್ರಾಮದಲ್ಲಿ ಕಂಡುಬರುವ ಪ್ರಾಚ್ಯಾವಶೇಷಗಳಲ್ಲಿ ಕರವುಗಲ್ಲುಗಳು ಕೂಡ ಈ ಊರಿನ ಸಂಸ್ಕೃತಿಯ ಪ್ರತೀಕವಾಗಿವೆ. ಈ ಊರಿನಲ್ಲಿ 7 ಕರವುಗಲ್ಲುಗಳಿದ್ದು ಇವುಗಳಲ್ಲಿ ಮೂರು ಎತ್ತರವಾಗಿದ್ದು ಉಳಿದ ನಾಲ್ಕುಕಲ್ಲುಗಳು ಚಿಕ್ಕದಾಗಿವೆ. ವರ್ಷಕ್ಕೊಮ್ಮೆ ನಡೆಯುವ ಕಾರಬ್ಬದ ದಿನದಂದು ಆ ವರ್ಷದಲ್ಲಿ ಯಾರ ತಳವಾರಿಕೆ ಇರುತ್ತದೆಯೋ ಅವರು ಕೋಲ್ಕಾರನ ಸಹಾಯದೊಂದಿಗೆ ಎಲ್ಲಾ ಕರವುಗಲ್ಲುಗಳಿಗೂ ಕೆಮ್ಮಣ್ಣು

ಮತ್ತು ಸುಣ್ಣವನ್ನು ನೀರಿನಲ್ಲಿ ಬೆರೆಸಿ ಅದ ಮಾಡಿಕೊಂಡು ಕೆಮ್ಮಣ್ಣು ಮತ್ತು ಸುಣ್ಣದ ಪಟ್ಟಿಯನ್ನು ಹಾಕುತ್ತಾರೆ. ಕಾರ ಹಬ್ಬದಲ್ಲಿ ಈ ಕರವುಗಲ್ಲುಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಊರಿನ ಪಟೇಲರ ಮನೆಗೆ ವೀರಭದ್ರಸ್ವಾಮಿ ದೇವಾಲಯದಿಂದ ನಗಾರಿ, ವಾದ್ಯ, ಪತ್ತು, ಕಹಳೆ, ಮುಂತಾದವುಗಳೊಂದಿಗೆ ಊರಿನ ಪ್ರಮುಖರೊಡಗೂಡಿ ಹೋಗಿ ಕರವುಗಲ್ಲುಗಳಿಗೆ ಎಡೆಯನ್ನು ತರುತ್ತಾರೆ. ಹಣ್ಣು, ಕಾಯಿ, ಪೂಜಾ ಸಾಮಗ್ರಿ (ಕಿಚುಡಿ, ಹಲಸಿನಹಣ್ಣು ವಿಶೇಷವಾಗಿರುತ್ತದೆ) ಮುಂದೆ ತಳವಾರ ಕಾಯಿ ಮೊಟ್ಟೆಯಲ್ಲಿ ಕೆಂಡವನ್ನು ತರುತ್ತಾರೆ. ವೀರಭದ್ರ ಸ್ವಾಮಿ ದೇವಾಲಯದ ಬಲಭಾಗದಲ್ಲಿ ಇರುವ ಕರವುಗಲ್ಲಿಗೆ ಪೂಜೆ ಮಾಡಿದ ನಂತರ ಊರ ಮುಂಭಾಗದಲ್ಲಿರುವ ಕರವುಗಲ್ಲಿಗೆ ಎಡೆಯನ್ನು ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ಆ ಎಡೆಯನ್ನು ತಳವಾರನಿಗೆ ನೀಡಲಾಗುತ್ತದೆ. ಇತ್ತೀಚೆಗೆ ಊರ ಮುಂಭಾಗದಲ್ಲಿರುವ ಎರಡು ಮತ್ತು ವೀರಭದ್ರಸ್ವಾಮಿ ದೇವಾಲಯದ ಬಳಿ ಇರುವ ಕರವುಗಲ್ಲಿಗೆ ಹಾಳಾಗದಂತೆ ಕಟ್ಟೆಯನ್ನು ಕಟ್ಟಲಾಗಿದೆ. ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನ ಕಟ್ಟಡದ ಒಳಗೆ ಒಂದು ಕರವುಗಲ್ಲಿದ್ದು ಕಛೇರಿ ತೆರೆದಿರುವ ದಿನದಂದು ಪ್ರತಿನಿತ್ಯ ಪೂಜೆ ಮಾಡುತ್ತಾರೆ.

**ಕರವುಗಲ್ಲು ಇರುವ ಸ್ಥಳ**

1ನೇ ಕರವುಗಲ್ಲು - ವೀರಭದ್ರಸ್ವಾಮಿ ದೇವಾಲಯದ ಬಲಭಾಗ, ಗ್ರಂಥಾಲಯದ ಪಕ್ಕದಲ್ಲಿದೆ.

2ನೇ ಕರವುಗಲ್ಲು - ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಕಟ್ಟಡದ ಒಳಭಾಗ.

3ನೇ ಕರವುಗಲ್ಲು - ಕಲ್ಮನೆ ಶಿವಣ್ಣನವರ ಪ್ರಕಾರ ಗೋಡೆಯ ಬಳಿ.

4 ಮತ್ತು 5ನೇ ಕರವುಗಲ್ಲುಗಳು - ಶಿವಣ್ಣನವರ ಮನೆಯ ಪ್ರಕಾರ ಗೋಡೆ ಮತ್ತು ರಂಗನಾಥಸ್ವಾಮಿ ದೇವಾಲಯದ ಮಧ್ಯೆ ಇರುವ ರಸ್ತೆಯಲ್ಲಿ

6ನೇ ಕರವುಗಲ್ಲು - ರಂಗನಾಥಸ್ವಾಮಿ ದೇವಾಲಯದ ದಕ್ಷಿಣ ಭಾಗದಲ್ಲಿ.

7ನೇ ಕರವುಗಲ್ಲು - ಗುಬ್ಬಿಗೆ ಹೋಗುವ ರಸ್ತೆ ಬದಿಯಲ್ಲಿ ಕೆರೆಯ ಮುಂಭಾಗದಲ್ಲಿ ಕಂಡುಬರುತ್ತವೆ.

**ಪ್ರಾಚೀನ ಬಾವಿಗಳು**

ಗ್ರಾಮದಲ್ಲಿ 3 ಪ್ರಾಚೀನ ಕಲ್ಲಿನ ಭಾವಿಗಳಿವೆ. ಮಹಾಲಿಂಗೇಶ್ವರ ದೇವಾಲಯದ ಮುಂದೆ ಒಂದು ಮಜ್ಜನ ಭಾವಿಯಿದ್ದು ದೇವಾಲಯದ ಪೂಜಾ ಕೈಂಕರ್ಯಗಳಗೆ ಆ ಭಾವಿಯ ನೀರನ್ನು ಬಳಸುತ್ತಿದ್ದರು. ಆದರೆ ಇತ್ತೀಚೆಗೆ ನೀರಿಲ್ಲದೆ ಒಣಗಿ ಹೋಗಿದೆ. ಊರಿನ ಮುಂದಿನ ಕೆರೆಯ ಮುಂಭಾಗದಲ್ಲಿ ಈಗಿನ ಗ್ರಾಮಪಂಚಾಯ್ತಿಯ ಸಮೀಪದಲ್ಲಿದೆ. ಇದನ್ನು ಹಿಂದೆ ಹರಿಜನರ ಕುಡಿಯುವ ನೀರಿಗಾಗಿ ಬಳಸಲಾಗುತ್ತಿತ್ತು. ಆದರೆ ಇತ್ತೀಚೆಗೆ ನೀರಿಲ್ಲದೆ ಒಣಗಿ ಹೋಗಿದೆ. ಅವರಿಗೆ ಸರ್ಕಾರದ ವತಿಯಿಂದ ಕೊಳಾಯಿ ಸಂಪರ್ಕದ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಮತ್ತೊಂದು ಸೆಕ್ರಟರಿ ಸಿದ್ಧರಾಮಯ್ಯನವರ ಮನೆ ಬಳಿಯಿದ್ದು ಅದನ್ನು ಇತ್ತೀಚೆಗೆ ಮುಚ್ಚಲಾಗಿದೆ.

**ಸಾಮಾಜಿಕ ಸ್ಥಿತಿಗತಿಗಳು**

ಸಾಮಾಜಿಕ ವ್ಯವಸ್ಥೆ ಸಾಮಾಜಿಕ ಸಂಸ್ಥೆಗಳೆಂಬ ಚಕ್ರದ ಮೇಲೆ ಬರುತ್ತಿರುವ ಗಾಡಿಯಿದ್ದಂತೆ ಆತ್ಮೀಯ ಒಡನಾಟ, ಸಾಮಾಜಿಕ ಸಂಬಂಧದ ಮೂಲಕ ನಮ್ಮ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸಿ ಸಂಪದ್ಭರಿತ ಸಂಸ್ಕೃತಿಯ ತವರೂರನ್ನಾಗಿಸಿದ ಕೀರ್ತಿ ಈ ಊರಿನ ಜನರಿಗೆ ಸಲ್ಲುತ್ತದೆ. ಈ ಗ್ರಾಮದಲ್ಲಿ ವೀರಶೈವ

ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣರು, ನಾಯಕ, ತಿಗಳ, ಉಪ್ಪಾರ, ಶೆಟ್ಟಿ, ವೈಷ್ಣವ, ಭೋವಿ, ಮಾದಿಗ, ಒಲೆಯ, ತಮಿಳಿಯನ್ ಸಮುದಾಯದವರಿದ್ದಾರೆ. ಇದೇ ಅಲ್ಲದೆ ವೃತ್ತಿ ಆಧಾರಿತ ಜಾತಿಗಳಾದ ಮಡಿವಾಳ, ಕ್ಷೌರಿಕ, ಕಮ್ಮಾರರಿದ್ದು ಇವರು ಇಂದಿಗೂ ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ಸಮಾಜ ಪುರುಷ ಪ್ರಧಾನವಾದ ಸಮಾಜವಾಗಿದ್ದು ಈ ಗ್ರಾಮದಲ್ಲಿ ಬಹುಪಾಲು ವಿಭಕ್ತ ಕುಟುಂಬಗಳೇ ಇವೆ. ಒಂದು ಅವಿಭಕ್ತ ಕುಟುಂಬವಿದ್ದು ಸುಮಾರು 60ಮಂದಿ ವಾಸಮಾಡುತ್ತಿದ್ದಾರೆ. ಇಲ್ಲಿನ ಸಮಾಜದಲ್ಲಿ ಮಕ್ಕಳ ವಿವಾಹಕ್ಕೆ ಸಂಬಂಧಿಸಿದಂತೆ ಕುಟುಂಬದ ಘನತೆ ಗೌರವಗಳಿಗೆ ಅನುಗುಣವಾಗಿ ಜಾತಿ, ಉಪಜಾತಿ, ಕುಲ, ಗೋತ್ರಗಳ ನಡುವೆ ಗಮನ ಹರಿಸಿ ವಿವಾಹ ಕಾರ್ಯ ನೆರವೇರಿಸುತ್ತಾರೆ. ಇತ್ತೀಚೆಗೆ ಜಾತಿಪದ್ಧತಿಯ ಕಠಿಣ ನೀತಿ ನಿಯಮಗಳು ಮತ್ತು ವಿವಾಹದ ಸಂದರ್ಭದಲ್ಲಿ ನಡೆಯುತ್ತಿದ್ದ ಸಾಂಪ್ರದಾಯಿಕ ವಿಧಿ ವಿಧಾನಗಳು ಕಡಿಮೆಯಾಗಿವೆ.

ಈ ಗ್ರಾಮದಲ್ಲಿ ವಿಭಿನ್ನ ಜನ ಸಮುದಾಯಗಳು ಇರುವುದರಿಂದ ಸಸ್ಯಹಾರಿಗಳು ಮತ್ತು ಮಾಂಸಹಾರಿಗಳಿದ್ದಾರೆ. ಉಡುಪುಗಳನ್ನು ಧರಿಸುವುದು ಸಾಮಾನ್ಯ ಸಂಗತಿಯಾದರೂ ಬೇರೆ ಬೇರೆ ಸಂದರ್ಭಗಳಲ್ಲಿ ಧರಿಸುವಂತಹ ಉಡುಪುಗಳು ಕಣ್ಣಿಗೆ ಕಟ್ಟುವಂತಿರುತ್ತವೆ. ಸಂಪತ್ತಿನ ಸ್ವಲ್ಪ ಭಾಗವನ್ನು ಸುಖ ಸಂತೋಷ ಮನರಂಜನೆಗೆ ವಿನಿಯೋಗಿಸುತ್ತಾರೆ. ಈ ಗ್ರಾಮದ ಜನರು ತಮ್ಮ ತಮ್ಮ ವಯಸ್ಸಿಗೆ ಅನುಗುಣವಾಗಿ ಉಡುಪುಗಳನ್ನು ಧರಿಸುತ್ತಾರೆ. ಸ್ತ್ರೀ ಪುರುಷರಿಬ್ಬರೂ ಆಭರಣಪ್ರಿಯರಾಗಿದ್ದು ಇವರು ತೊಡುವ ಆಭರಣಗಳು ಈ ಪ್ರದೇಶದ ಕಲಾತ್ಮಕತೆಯನ್ನು ವ್ಯಕ್ತಪಡಿಸುವುದರ ಜೊತೆಗೆ ಸಂಪ್ರದಾಯ ಶ್ರೀಮಂತಿಕೆಗೂ ಕನ್ನಡಿ ಹಿಡಿದಂತಿದೆ. ಎಷ್ಟೇ ಬಡತನವಿದ್ದರೂ ಮದುವೆ ಸಂದರ್ಭಕ್ಕೆ ಕಡ್ಡಾಯವಾಗಿ ಆಭರಣ ಮಾಡಿಸುತ್ತಾರೆ.

ಈ ಸಮಾಜದಲ್ಲಿ ಸ್ತ್ರೀಯರು ಗೌರವಯುತವಾದ ಸ್ಥಾನವನ್ನು ಪಡೆದಿದ್ದು ಪುರುಷರಂತೆಯೇ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಸ್ಥಾನಮಾನ ಪಡೆದಿದ್ದಾರೆ. ಏಕಪತ್ನಿತ್ವ ವ್ಯವಸ್ಥೆಯಿದ್ದು ಗಂಡ ಸತ್ತ ವಿಧವೆ ಇನ್ನೊಂದು ಮದುವೆಗೆ ಒಪ್ಪದೆ ಏಕಾಂತವಾಗಿ ಜೀವನ ಸಾಗಿಸುತ್ತಿದ್ದಾರೆ. ಇಲ್ಲಿನ ಮಹಿಳೆಯರು ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಮಹಿಳೆಯರು ಎಂ.ಎ, ಇಂಜಿನಿಯರಿಂಗ್, ಸಿ.ಎ., ಮುಂತಾದ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಿಕ್ಷಣ ಪಡೆದ ಕೆಲವು ಸ್ತ್ರೀಯರು ಸರ್ಕಾರಿ ಉದ್ಯೋಗದಲ್ಲೂ ಸೇವೆಸಲ್ಲಿಸುತ್ತಿದ್ದಾರೆ. ಶಿವರತ್ನ ಎಂಬುವವರು ತುಮಕೂರು ಜಿಲ್ಲಾ ರೈತ ಸಂಘದ ಮಹಿಳಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಆಯಗಾರಿಕೆ ವ್ಯವಸ್ಥೆ**

ಇದು ಪ್ರಾಚೀನ ಕೃಷಿ ಸಮಾಜದ ಒಂದು ಅವಿಭಾಜ್ಯ ಅಂಗವಾಗಿತ್ತು. ಕೃಷಿಯನ್ನು ಅವಲಂಬಿಸಿರುವ ರೈತ ಕುಟುಂಬಗಳು, ರೈತರನ್ನು ಆಶ್ರಯಿಸಿ ಬದುಕುವ ಕೈ ಕಸುಬಿನವರು ಕೈ ಕಸುಬಿನವರನ್ನು ಆಶ್ರಯಿಸಿ ಬದುಕುವ ರೈತ ಕುಟುಂಬಗಳು ಅವರ ಕರ್ತವ್ಯ ಪ್ರಜ್ಞೆಗೆ ಅನುಗುಣವಾಗಿ ಆಯ ಪದ್ಧತಿ ಪ್ರಚಲಿತದಲ್ಲಿದೆ. ಕೃಷಿ ಕಾರ್ಯಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸುವ ತಮ್ಮ ಗ್ರಾಮಗಳ ರಕ್ಷಣೆಯಂತಹ ಮತ್ತು ದೇವರ ಕಾರ್ಯಗಳಲ್ಲಿ ಪತ್ತು ಹಿಡಿಯುವವರಿಗೆ ಸತ್ತಾಗ ತಮಟೆ ಬಡಿಯುವಂತಹ ಇತರೆ ಕೆಲಸಗಳಿಗೆ ವರ್ಷಕ್ಕೊಮ್ಮೆ ರೈತರು ತಾವು ಬೆಳೆದಿದ್ದರಲ್ಲಿ ಧಾನ್ಯ ರೂಪದಲ್ಲಿ ಕೊಡುವ ಪ್ರತಿಫಲಕ್ಕೆ ಆಯಾ ಎನ್ನಲಾಗುತ್ತದೆ. ಆಯಾ ಪಡೆಯುವವರನ್ನು ಅಡದೆಯವರು ಎಂದು ಕರೆಯುತ್ತಾರೆ. ಈ ಗ್ರಾಮದ ಗೌಡ, ಪಟೇಲ, ಶಾನುಭೋಗ, ಪಣಗಾರ, ತಳವಾರ, ತೋಟಿ, ನೀರಗಂಟಿ, ಅಕ್ಕಸಾಲಿಗ, ಕಮ್ಮಾರ, ಅಗಸ, ಕ್ಷೌರಿಕರು ಇದ್ದಾರೆ. ಗೌಡ, ಪಟೇಲ ಆಡಳಿತ ವ್ಯವಸ್ಥೆ ನಡೆಸುವ ಕರ್ತವ್ಯ ಹೊಂದಿದ್ದಾರೆ. ಶಾನುಭೋಗ ಇವರಿಗೆ ಸಹಾಯಕ ಕೆಲಸವನ್ನು ನಿರ್ವಹಿಸುತ್ತಾರೆ. ಗೌಡನ ಕೆಲಸದಲ್ಲಿ ತಳವಾರ ಮತ್ತು ಕೋಲ್ಕಾರ ನೆರವಿಗೆ ಬರುತ್ತಾರೆ. ತಳವಾರರು ಗ್ರಾಮಗಳ ರಕ್ಷಕರಾಗಿ ಗ್ರಾಮಸೇವೆಯೇ ದೇಶಸೇವೆಯೆಂದು ನಂಬಿ ಪೋಲಿಸರಂತೆ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಆಧುನೀಕರಣದಿಂದ ಆಡಳಿತ

ವ್ಯವಸ್ಥೆಯಲ್ಲಿ ಬದಲಾವಣೆಯಾಗಿ ಗ್ರಾಮ ಪಂಚಾಯ್ತಿಗಳು ಆಡಳಿತದ ಜವಬ್ದಾರಿ ಹೊತ್ತಿವೆ. ಆದರೂ ಗೌಡ, ಪಟೇಲರ ಪಾತ್ರ ಪ್ರಮುಖವಾಗಿದೆ.

ಆಯಗಾರರ ಒಂದು ಭಾಗವಾದ ತಳವಾರಿಕೆ ವಿಶಿಷ್ಟ ಸ್ಥಾನಮಾನ ಪಡೆದುಕೊಂಡಿದೆ. ವೀರಶೈವ ಲಿಂಗಾಯಿತರು ಬಹುಸಂಖ್ಯಾತರಾಗಿದ್ದಾರೆ. 5 ತಳವಾರ ಕುಟುಂಬಗಳು ಇವೆ. (ವೆಂಕಟನಾಯ್ಕ, ಗಿರಿನಾಯ್ಕ, ಕೆಂಪಯ್ಯ ಗೋವಿಂದಯ್ಯ, ಭದ್ರನಾಯಕ) ತಳವಾರರಿಗೆ ಗ್ರಾಮದ ಜನತೆ ಆಯವನ್ನು ನೀಡುತ್ತಾರೆ. ಮತ್ತು ಸರ್ಕಾರ ಇವರಿಗೆ ಜಮೀನನ್ನು ಮಂಜೂರು ಮಾಡಿದೆ. ತಳವಾರಿಕೆಯಲ್ಲಿ ಕೋಲನ್ನು ವಂಶಪಾರಂಪರೆಯಿಂದ ಬಳಸಿಕೊಂಡು ಬಂದಿದ್ದಾರೆ. ಆ ಮನೆತನದ ಸರದಿ ಮುಗಿದ ನಂತರ ಮತ್ತೊಂದು ಮನೆತನಕ್ಕೆ ಕೊಡುತ್ತಾರೆ. ಹಬ್ಬ ಜಾತ್ರೆಗಳಲ್ಲಿ ಮನೆಮನೆಗಳಿಗೆ ವಿಷಯ ಮುಟ್ಟಿಸುವುದು, ಜಾತ್ರಾ ಖರ್ಚಿಗೆ ಹಣವನ್ನು ವಸೂಲಿ ಮಾಡುವುದು, ನ್ಯಾಯ ಪಂಚಾಯ್ತಿಗಳಿದ್ದಾಗ ತಿಳಿಸುವುದು, ಉನ್ನತ ವರ್ಗದ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೆ ಅವರನ್ನು ಭೂಮಿಯಲ್ಲಿ ಊಳಲು ತೆಗೆದುಕೊಂಡು ಹೋಗಲು ಚಟ್ಟಕಟ್ಟುವುದು, ಭೂಮಿಯಲ್ಲಿ ಮುಚ್ಚಿದ ನಂತರ ತಳವಾರನಿಗೆ ಕಂಚು ಅಥವಾ ಹಿತ್ತಾಳೆ ತಟ್ಟೆಯಲ್ಲಿ ಊಟಕ್ಕೆ ಇಟ್ಟು, ಆ ತಟ್ಟೆ ಅಥವಾ ಚಂಬನ್ನು ಆತನಿಗೆ ನೀಡುತ್ತಾರೆ. ಹಿಂದಿನಿಂದಲೂ ಗ್ರಾಮರಕ್ಷಣೆ ಮತ್ತು ಕಾವಲುಗಾರಿಕೆಯನ್ನು ಮಾಡಿಕೊಂಡು ಬಂದವರಾಗಿದ್ದಾರೆ.

ಪಣಗಾರ ಊರಿನ ದೇವತಾ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಊರಿನ ಯಾವುದೇ ಮನೆಗೆ ದೇವರನ್ನು ಕರೆತರುವಾಗ ಗೌಡ, ಪಟೇಲರ ಜೊತೆಗೆ ಪಣಗಾರರ ಅನುಮತಿ ಪಡೆಯಬೇಕಾಗುತ್ತದೆ. ಬಡಿಗ ಮತ್ತು ಕಮ್ಮಾರರು ಕೃಷಿ ಕೆಲಸಗಳಿಗೆ ಮುಖ್ಯವಾದ ಉಪಕರಣ ಮಾಡಿಕೊಡುತ್ತಾರೆ. ಅಕ್ಕಸಾಲಿಗರು ಆಭರಣ ಮಾಡಿಕೊಡುತ್ತಿದ್ದರು ಇತ್ತೀಚೆಗೆ ಅವರ ಕುಟುಂಬದವರು ಯಾರು ಇಲ್ಲ. ಮಡಿವಾಳರು ಜಾತ್ರೆ ಮತ್ತು ದೇವರ ಉತ್ಸವಗಳಲ್ಲಿ ದೇವರನ್ನು ಒತ್ತು ಹೋಗುವವರಿಗೆ ಬಟ್ಟೆಯನ್ನು ಹಾಕುತ್ತಾರೆ. ಪತ್ತುಗಳನ್ನು ಹಿಡಿಯುವ ಕೆಲಸವನ್ನು ಮಾಡುತ್ತಾರೆ. ಇವರಿಗೆ ಸರ್ಕಾರ ಭೂಮಿಯನ್ನು ನೀಡಿದೆ. ನೀರ್ಗಂಟಿ ಊರಿನ ಆಯಗಾರರಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಇವರು ಊರಿನ ಕೆರೆಗಳ ನಿರ್ವಹಣೆ ಮತ್ತು ತೂಬುಗಳ ನಿರ್ವಹಣೆ ಮಾಡುತ್ತಾರೆ. ಕೆರೆಗಳು ತುಂಬಿದಾಗ ಬೇಸಿಗೆ ಕಾಲದಲ್ಲಿ ತೂಬನ್ನು ಎತ್ತುವುದರ ಮೂಲಕ ನೀರನ್ನು ಗದ್ದೆಗಳಿಗೆ ಬಿಡುವುದು ಇವರ ಕೆಲಸವಾಗಿದೆ. ಇವರ ಕೆಲಸಕ್ಕೆ ಪ್ರತಿಯಾಗಿ ಕೆರೆಯ ಹಿಂದೆ ಏಳು ಹೆಜ್ಜೆ ಇಡುವಷ್ಟು ಜಾಗದಲ್ಲಿ ಬೆಳೆಯುವ ಬೆಳೆಯನ್ನು ಅವನಿಗೆ ನೀಡುತ್ತಾರೆ. ಕೋಲ್ಕಾರ ಮತ್ತು ತೋಟಿ (ಹೊಲೆಯ ಮತ್ತು ಮಾದಿಗ) ತಳವಾರನಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಈ ಊರಿನ ಕೆಲಸಗಳಲ್ಲಿ ಸ್ವಚ್ಛತೆ ಕಾಪಾಡುತ್ತಾರೆ. ಜಾತ್ರೆ, ಕಾರ್ತೀಕಮಾಸ ಪೂಜೆ, ಅಭಿಷೇಕ, ವಿಶೇಷ ಪೂಜೆ ಮುಂತಾದ ಸಂದರ್ಭದಲ್ಲಿ ವಾದ್ಯ ಮತ್ತು ಕಹಳೆ ಊದುವ ಸೇವೆ ಮಾಡುತ್ತಾರೆ. ಇವರಿಗೂ ಸಹ ಸರ್ಕಾರ ಉಂಬಳಿಯಾಗಿ ಜಮೀನನ್ನು ನೀಡಿದೆ. ಕ್ಷೌರಿಕರು ಉನ್ನತ ವರ್ಗದವರ ಮನೆಯ ಬಳಿ ಹೋಗಿ ಕ್ಷೌರವನ್ನು ಮಾಡುವ ಕೆಲಸವನ್ನು ನಿರ್ವಹಿಸುತ್ತಾರೆ. ಗೌಡ, ಪಟೇಲ, ಶ್ಯಾನುಭೋಗ ಪಣಗಾರರನ್ನು ಹೊರತುಪಡಿಸಿ ಉಳಿದವರಿಗೆ ಅವರ ಕೆಲಸಕ್ಕೆ ಪ್ರತಿಫಲವಾಗಿ ವರ್ಷದ ಕೊನೆಯಲ್ಲಿ ಸುಗ್ಗಿ ಕಾಲದಲ್ಲಿ ತಾವು ಬೆಳೆದ ಬೆಳೆಯಲ್ಲಿ ಕಾಳು ಕಡ್ಡಿ ನೀಡುತ್ತಾರೆ. ಆದರೆ ಇತ್ತೀಚೆಗೆ ಮಳೆ ಬೆಳೆ ಸರಿಯಾದ ಸಮಯಕ್ಕೆ ಆಗದೇ ಇರುವುದರಿಂದ ಕೆಲವರು ಹಣವನ್ನು ನೀಡುತ್ತಾರೆ. ಆಯಗಾರರು ಕ್ರಮ ತಪ್ಪಿದರೆ ಬುದ್ದಿ ಹೇಳುವುದು ಊರ ಪ್ರಮುಖರಿಗೆ ಇರುತ್ತದೆ. ಆಯ ಕೊಡುವಲ್ಲಿ ಯಾರಾದರೂ ಮೀನಾಮೇಷ ಎಣಿಸಿದವರ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ಊರ ಮುಖಂಡರಿಗಿದೆ. ಜಾಗತೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಆಯಗಾರಿಕೆ ಸಂಸ್ಕೃತಿ ಗ್ರಾಮ ಸಮಾಜದಲ್ಲಿ ಕಣ್ಮರೆಯಾಗುತ್ತಿದ್ದರೂ ಈ ಗ್ರಾಮದಲ್ಲಿ ಇಂದಿಗೂ ಆಯಗಾರಿಕೆ ಪದ್ಧತಿ ಜೀವಂತವಾಗಿದೆ. ಪ್ರಧಾನವಾದ ಸಮಾಜದಲ್ಲಿ ಆಯಗಾರ ಒಬ್ಬ ಕೂಲಿ ಕಾರ್ಮಿಕನಾಗಿ ಕಂಡುಬರುವುದಿಲ್ಲ. ಆಯಗಾರರಿಗೆ ಹೆಚ್ಚು ಧಾನ ನೀಡಿದಷ್ಟು ಭೂಮಿತಾಯಿ ಹೆಚ್ಚು ಬೆಳೆ ನೀಡುತ್ತಾಳೆ ಎಂಬ ನಂಬಿಕೆಯಿದೆ.

**ಆರ್ಥಿಕ ವ್ಯವಸ್ಥೆ**

ಈ ಗ್ರಾಮದ ಬಹುಪಾಲು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕೆರೆಗಳ ಆಶ್ರಯದಲ್ಲಿ ಗದ್ದೆಗಳಿವೆ. ಮಳೆಯನ್ನೇ ಅವಲಂಬಿಸಿಕೊಂಡು ಕೃಷಿ ಮಾಡುವ ಹೊಲ ಮತ್ತು ಬೆದ್ದಲು ಜಮಿನುಗಳಿವೆ. ಇಲ್ಲಿನ ಭೂ ಪ್ರದೇಶ ಕೆಂಪುಮಣ್ಣು ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣಿನಿಂದ ಕೂಡಿದ್ದು ತೆಂಗು, ಅಡಿಕೆ, ವೀಳೆದೆಲೆ ಬೆಳೆಯುತ್ತಾರೆ. ಈ ಬೆಳೆಗಳು ಭಾವಿಗಳು ಮತ್ತು ಕೊಳವೆ ಭಾವಿಗಳನ್ನು ಆಶ್ರಯಿಸಿವೆ. ರಾಗಿ, ಜೋಳ, ಸಜ್ಜೆ, ತೊಗರಿ, ಅಲಸಂದೆ, ನವಣೆ, ಹುರುಳಿ ಮುಂತಾದ ಬೆಳೆ ಬೆಳೆಯುತ್ತಾರೆ. ಇತ್ತೀಚೆಗೆ ಈ ಗ್ರಾಮದ ರೈತರು ಸಾವಯವ ಕೃಷಿಯ ಕಡೆಗೆ ಗಮನ ಅರಿಸುತ್ತಿದ್ದಾರೆ. ಇದೇ ಊರಿನ ಎ.ಎಸ್.ಶಂಕರಪ್ಪ ಮತ್ತು ಎ.ಎಸ್.ಮಹೇಶ್ ಪ್ರಮುಖ ಸಾವಯವ ಕೃಷಿಕರಾಗಿದ್ದು ಮೆಣಸು, ಏಲಕ್ಕಿ, ವೆನಿಲಾ, ಪಪ್ಪಾಯಿ, ಕೋಕಾ ಮುಂತಾದ ಬೆಳೆ ಬೆಳೆಯುತ್ತಾರೆ. ಮಹೇಶ್‌ರವರಿಗೆ ಬಾಗಲಕೋಟೆ ಕೃಷಿ ವಿಶ್ವವಿದ್ಯಾಲಯ ಶ್ರೇಷ್ಠ ತೋಟಗಾರಿಕಾ ಪ್ರಶಸ್ತಿ, ಭೂಮಿ ನೆಟ್‌ವರ್ಕ್ ಬೆಂಗಳೂರು ಇವರಿಂದ ಫೆಲೋಶಿಪ್ ಅವಾರ್ಡ್, ಗುಬ್ಬಿ ತಾಲ್ಲೂಕು ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ವೋದಯ ಮಂಡಳಿ ಪ್ರಶಸ್ತಿ, ಗುಬ್ಬಿ ಸಿರಿ, ಸೂಪರ್ ಸ್ಟಾರ್ ರೈತ ಪ್ರಶಸ್ತಿಗಳು ಸಂಧಿವೆ. ಕೃಷಿ ಕಾಲೇಜುಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸ ನೀಡಿದ್ದಾರೆ ಮತ್ತು ತಮ್ಮ ಜಮೀನಿನಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ನೈಸರ್ಗಿಕ ಕೃಷಿ ಬಗ್ಗೆ ತರಭೇತಿ ನೀಡುತ್ತಿದ್ದಾರೆ. ಶಂಕರಪ್ಪನವರು ತಾಲೂಕಿನಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದ್ದು ನಗರ ಪ್ರದೇಶಗಳ ಕಲ್ಯಾಣ ಮಂಟಪಗಳಲ್ಲಿನ ಊಟದ ಎಲೆಯನ್ನು ತಂದು ಬಾವಿಯಲ್ಲಿ ಕೊಳೆಯಿಸಿ ಅದರ ನೀರನ್ನು ಹನಿ ನೀರಾವರಿ ಮೂಲಕ ತೋಟಗಾರಿಕೆಗೆ ಬಳಸಿಕೊಳ್ಳುತ್ತಿದ್ದಾರೆ. ಮಳೆ ನೀರು ಕೊಯ್ಲಿಗೂ ಹೆಸರುವಾಸಿಯಾಗಿದ್ದಾರೆ. ಇವರು ಸಾವಯವ ಕೃಷಿಯ ಬಗ್ಗೆ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ.

ಈ ಗ್ರಾಮದಲ್ಲಿ ನಗರ ಪ್ರದೇಶ ಮತ್ತು ಇತರ ಗ್ರಾಮಗಳಿಗೆ ಸಂಚರಿಸಲು ಉತ್ತಮವಾದ ಸಾರಿಗೆ ಸಂಪರ್ಕವಿದೆ. ಕೃಷಿಯ ಜೊತೆಯಲ್ಲೇ ಕೆಲವರು ಪಶುಸಂಗೋಪನೆಯನ್ನು ಅವಲಂಬಿಸಿದ್ದಾರೆ. ಕುರಿ, ಮೇಕೆ, ಎತ್ತು, ಎಮ್ಮೆ, ಕೋಣ, ಹಸುಗಳು ಮತ್ತು ಸೀಮೆ ಹಸುಗಳನ್ನು ಸಾಕುತ್ತಿದ್ದಾರೆ.

ಸಾಂಪ್ರದಾಯಿಕ ಉದ್ಯೋಗಿಗಳಾದ ಬಡಗಿಗಳು, ಗುಡಿಕಾರರು ಭಜಂತ್ರಿಗಳು, ಮಡಿವಾಳರು ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಆಧುನಿಕವಾಗಿ ಬಹುಪಾಲು ಜನರು ಸ್ವಯಂ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಬಟ್ಟೆ ಹೊಲಿಯುವುದು. ತೆಂಗು, ಅಡಿಕೆ, ಮಾವು, ಹುಣಸೆ, ಅಡಿಕೆಪಟ್ಟೆ, ಲೋಹದ ಪಾತ್ರೆ ವ್ಯಾಪಾರ ಮಾಡುವುದು, ದಿನಸಿ ಅಂಗಡಿ, ಸೈಕಲ್‌ರಿಪೇರಿ, ಎಲೆಕ್ಟ್ರಿಕ್ ಮೋಟರ್ ವೈಂಡಿಂಗ್ ಮಾಡುವುದು, ಟೀ ಅಂಗಡಿಗಳನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ. ಕೆಲವರು ಷಾಮಿಯಾನ, ಫ್ಲವರ್ ಡೆಕೋರೇಷನ್, ಕೋಳಿಫಾರಂ ನಡೆಸುವುದು, ಟೆಂಪೋ, ಆಟೋ, ಓಡಿಸುವುದನ್ನು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಖಾಸಗಿ ಕಂಪನಿಗಳಲ್ಲಿ, ಸರ್ಕಾರೇತರ ಸಂಘಸಂಸ್ಥೆಗಳಲ್ಲಿ, ಅನುದಾನಿತ ಶಿಕ್ಷಣ ಸಂಸ್ಥೆ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವವರಿದ್ದಾರೆ. ಸ್ವತಂತ್ರವಾಗಿ ನ್ಯಾಯಾಂಗ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ವಕೀಲರಿದ್ದಾರೆ. ರಕ್ಷಣಾಇಲಾಖೆ, ಪೋಲೀಸ್‌ಇಲಾಖೆ, ಕಂದಾಯಇಲಾಖೆ, ಭೂಮಪಾನಇಲಾಖೆ, ಶಿಕ್ಷಣಇಲಾಖೆ, ಕಾಲೇಜುಶಿಕ್ಷಣಇಲಾಖೆ, ಮುಂತಾದ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರುಗಳಿದ್ದಾರೆ.

**ಕೈಗಾರಿಕೆಗಳು**

ಈ ಗ್ರಾಮದಲ್ಲಿ ಯಾವುದೇ ಬೃಹತ್ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ. ಸಣ್ಣ ಕೈಗಾರಿಕೆಗಳು ಕಂಡುಬರುತ್ತವೆ. ಪ್ರಕೃತಿ ರಾಗಿಹಿಟ್ಟಿನ ಗಿರಣಿ ಇದ್ದು ಇಲ್ಲಿ ರಾಜ್ಯ ಮತ್ತು ಅಂತರಾಜ್ಯದಿಂದ ರಾಗಿ ಕೊಂಡು ತಂದು ಹಿಟ್ಟನ್ನು ಮಾಡಿ ನಗರ ಪ್ರದೇಶಗಳಿಗೆ ಸರಬರಾಜು ಮಾಡುತ್ತಾರೆ. ಉಳಿದಂತೆ ಮೂರು ಹಿಟ್ಟಿನ ಗಿರಣಿಗಳಿವೆ.

ಒಂದು ಅಡಿಕೆ ತಟ್ಟೆ ತಯಾರಿಕಾ ಕೈಗಾರಿಕೆಯಿದ್ದು ತಟ್ಟೆಗಳನ್ನು ತಯಾರಿಸಿ ನಗರ ಪ್ರದೇಶ ಮತ್ತು ಅಂತರಾಜ್ಯಕ್ಕೆ ಕಳುಹಿಸುತ್ತಾರೆ. ತೆಂಗಿನಕಾಯಿ ಎಣ್ಣೆ ಕೈಗಾರಿಕೆ, ಶುದ್ದೀಕರಿಸಿದ ಕುಡಿಯುವ ನೀರಿನ ಕೈಗಾರಿಕೆಯಿದ್ದು ನಗರ ಪ್ರದೇಶದ ಅಂಗಡಿಗಳಿಗೆ ನೀರು ಸರಬರಾಜು ಮಾಡುತ್ತಾರೆ. ಪ್ಲೈನಿಂಗ್ ಮಿಲ್‌ಗಳು ಕಂಡುಬರುತ್ತವೆ.

**ಹಣಕಾಸು ವ್ಯವಸ್ಥೆ**

ರಾಷ್ಟ್ರೀಯ ಬ್ಯಾಂಕ್ ಆದ ಎಸ್.ಬಿ.ಐನವರು ಈ ಗ್ರಾಮದಲ್ಲಿ ಉಚಿತವಾಗಿ ಖಾತೆಗಳನ್ನು ತೆರೆದು ನಿಗಧಿತ ಪ್ರಮಾಣದ ಹಣವನ್ನು ಖಾತೆಗೆ ಸೇರಿಸುವ ಮತ್ತು ಖಾತೆಯಿಂದ ತೆಗೆಯಲು ಅವಕಾಶ ಕಲ್ಪಿಸಿದ್ದಾರೆ. ವ್ಯವಸಾಯ ಸೇವಾ ಸಹಕಾರ ಸಂಘದಲ್ಲೂ ಬ್ಯಾಂಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಲ್ಲಿ ರೈತರಿಗೆ ನಿಗಧಿತ ಪ್ರಮಾಣದಲ್ಲಿ ಸಾಲಸೌಲಭ್ಯವನ್ನು ವಿತರಿಸಲಾಗುತ್ತದೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಯಡಿಯಲ್ಲಿ ಸ್ತ್ರೀ ಶಕ್ತಿ ಸಂಘಗಳು ರಚನೆಗೊಂಡಿದ್ದು ಸಂಘದ ಸದಸ್ಯರುಗಳು ನಿಗಧಿತ ಪ್ರಮಾಣದಲ್ಲಿ ಹಣವನ್ನು ಉಳಿತಾಯ ಮಾಡುತ್ತಿದ್ದಾರೆ. ಮತ್ತು ಸಂಘದ ಸದಸ್ಯರುಗಳಿಗೆ ಉಳಿತಾಯದ ಹಣದಲ್ಲಿ ಕಡಿಮೆ ಬಡ್ಡಿಗೆ ನಿಗಧಿತ ಪ್ರಮಾಣದಲ್ಲಿ ಸಾಲವನ್ನು ನೀಡುತ್ತಾರೆ. ಇದೇ ಅಲ್ಲದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು, ಐ.ಡಿ.ಎಫ್, ಗ್ರಾಮೀಣ ಕೂಟಗಳು ಮುಂತಾದ ಸಂಘಗಳಿದ್ದು ಆ ಸಂಘಗಳ ಸದಸ್ಯರು ಕಡಿಮೆ ಬಡ್ಡಿಯಲ್ಲಿ ಹಣವನ್ನು ತೆಗೆದುಕೊಂಡು ಆರ್ಥಿಕವಾಗಿ ಸದೃಢತೆಯತ್ತಾ ಹೆಜ್ಜೆ ಇಡುತ್ತಿದ್ದಾರೆ.

**ಸಮುದಾಯ ಸೌಲಭ್ಯಗಳು**

ಅಮ್ಮನಘಟ್ಟ ಗ್ರಾಮದಲ್ಲಿ ಗ್ರಾಮಪಂಚಯ್ತಿಯಿದ್ದು ಅದರ ಆಡಳಿತಕ್ಕೆ ಒಳಪಟ್ಟಿದೆ. ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಇಲಾಖೆಯಿದೆ. ಇದರಲ್ಲಿ ಹಣಕಟ್ಟಲು, ತೆಗೆದುಕೊಳ್ಳಲು, ವ್ಯವಸ್ಥೆಯಿದೆ. ಅಂಚೆ ಜೀವವಿಮೆ, ಆರ್.ಡಿ ಸುಕನ್ಯಾಸಮೃದ್ಧಿ ಯೋಜನೆ ಮುಂತಾದ ಸೌಲಭ್ಯ ಕಲ್ಪಿಸಲಾಗಿದೆ. ಸರ್ಕಾರಿ ದೂರವಾಣಿ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಗ್ರಾಮ ಸಮುದಾಯದಲ್ಲಿ ಆದ್ಯತಾ ಪಡಿತರ ಚೀಟಿ ಇರುವವರಿಗೆ ಅನ್ನಭಾಗ್ಯ ಯೋಜನೆಯಡಿಯಲ್ಲಿ ಅಕ್ಕಿ, ಸೀಮೆಎಣ್ಣೆ, ಇತರೆ ಆಹಾರ ಪದಾರ್ಥ ನೀಡಲಾಗುತ್ತಿದೆ. ಹಿರಿಯ ನಾಗರೀಕರಿಗೆ ಗುರುತಿನ ಚೀಟಿ, ವೃದ್ಧಾಪ್ಯವೇತನ ವಿಧಾವ ವೇತನ, ಸಂಧ್ಯಾಸುರಕ್ಷಾ ವೇತನ, ವಿಕಲಚೇತನ ವೇತನ ಪಡೆಯುತ್ತಿರುವ ಫಲಾನುಭವಿಗಳಿದ್ದಾರೆ. ಬಸವಯೋಜನೆ, ಅಂಬೇಡ್ಕರ್ ವಸತಿಯೋಜನೆ, ಇಂದಿರಾಗಾಂಧಿ ಆವಾಸ್ ಯೋಜನೆ ಮುಂತಾದ ಯೋಜನೆಗಳಡಿಯಲ್ಲಿ ವಸತಿ ವ್ಯವಸ್ಥೆ ಕಲ್ಪಿಸಿದೆ. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಪ್ರತೀ ವಾರಕ್ಕೊಮ್ಮೆ ಆರೋಗ್ಯ ಶುಶ್ರುಷಕಿಯರು ಗ್ರಾಮಕ್ಕೆ ಭೇಟಿ ನೀಡುತ್ತಾರೆ. ವ್ಯವಸಾಯ ಸೇವಾ ಸಹಕಾರ ಸಂಘವಿದೆ.

ಪ್ರಾಥಮಿಕ ಪೂರ್ವ ಹಂತದ ಒಂದು ಅಂಗನವಾಡಿ ಕೇಂದ್ರವಿದೆ. 24 ಮಕ್ಕಳು ಕಲಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಒಂದರಿಂದ ಏಳನೇ ತರಗತಿವರೆಗಿನ ಸರ್ಕಾರಿ ಹಿರಿಯ ಮಾಧ್ಯಮಿಕ ಪಾಠಶಾಲೆಯಿದ್ದು 118 ಮಕ್ಕಳು ಕನ್ನಡ ಭಾಷಾ ಮಾಧ್ಯಮದಲ್ಲಿ ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಶೌಚಾಲಯ, ಸಮವಸ್ತ್ರ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ.

**ಜಾನಪದ ವೈಶಿಷ್ಟ್ಯತೆಗಳು**

ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ತಿಳುವಳಿಕೆ, ಅನುಭವ ಕಲೆ, ಹಬ್ಬ, ಜಾತ್ರೆ, ಆಚರಣೆ, ನಂಬಿಕೆ, ಸಂಪ್ರದಾಯ, ನಡೆ, ನುಡಿ ಮುಂತಾದ ಅಂಶಗಳು ಆಧುನಿಕ ಸಮಾಜಕ್ಕೆ ಅನುಗುಣವಾಗಿ ಮುಂದುವರಿದು ಕೊಂಡು ಬರುತ್ತಿವೆ. ಪ್ರಜ್ಞಾ ಪೂರ್ವಕವಾಗಿ ಕಾಪಾಡಿಕೊಂಡು ಬಂದ ಮಾನವ ಜೀವನದ ಸಂಸ್ಕೃತಿಯ ಅವಿಭಾಜ್ಯ ಅಂಶಗಳಾಗಿವೆ. ಈ ಗ್ರಾಮದ ಜನರು ಮಕರ ಸಂಕ್ರಾಂತಿ ಶಿವರಾತ್ರಿ, ಯುಗಾದಿ, ರಾಮನವಮಿ, ಬಸವ ಜಯಂತಿ, ಗೌರಿ, ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಈ

ಗ್ರಾಮದಲ್ಲಿ ಜಾನಪದ ಕಲಾವಿದರುಗಳಿದ್ದಾರೆ. ಕೊಂಬುಕಹಳೆ, ತಮಟೆ, ನಗಾರಿ, ತಬಲ, ಹರೇವಾದನ, ನಂದಿಧ್ವಜಕುಣಿತ, ಕಲಾವಿದರುಗಳಿದ್ದಾರೆ. (ಪುಟ್ಟಯ್ಯ, ಚಂದ್ರಯ್ಯ ಬೋಜಯ್ಯ, ಬಸವರಾಜು, ಈರದಾಸಪ್ಪ, ಸಿದ್ದರಾಮಯ್ಯ ಮುಂತಾದವರು) ಬಾಯಿಬಿಟ್ಟರೆ ಗಾದೆ ಮಾತು ಬರುವ ಗಂಗಮ್ಮ ಶ್ರೇಷ್ಠ ಗಾದೆ ಮಾತಿನ ಕಲಾವಿದರಿದ್ದಾರೆ.

ಈ ಗ್ರಾಮದ ಜನರು ಕೃಷಿಯನ್ನೇ ತನ್ನ ಜೀವಂತ ಬದುಕನ್ನಾಗಿಸಿಕೊಂಡಿರುವುದರಿಂದ ಕೃಷಿಗೆ ಸಂಬಂಧಿಸಿದ ಆಚರಣೆಗಳು ರೂಢಿಯಲ್ಲಿವೆ. ಹೊನ್ನಾರು ಹೂಡುವುದು, ಬಿತ್ತನೆ ಪೂಜೆ, ಕೊಯಲು ಪೂಜೆ, ಕಣ ಮಾಡುವುದು. ರಾಶಿಪೂಜೆಯಂತಹ ಆಚರಣೆಗಳಿವೆ. ರಾಶಿ ಪೂಜೆ ಕೃಷಿಯ ಕೊನೆಪೂಜೆಯಾಗಿದ್ದು ಈ ಸಂದರ್ಭದಲ್ಲಿ ದಡ್ಡಿ ಭತ್ತದ ಅಕ್ಕಿಯನ್ನು ನೀರಿನಲ್ಲಿ ನೆನಸಿ ಅದಕ್ಕೆ ಕಾಯಿ ಬೆಲ್ಲ ಹಾಕಿದ ಫಲಹಾರವನ್ನು ಎಡೆಮಾಡುತ್ತಾರೆ. ಕಣದಲ್ಲಿ ಕೆಲಸ ಮಾಡಿದ ಮತ್ತು ಹತ್ತಿರದ ಕಣದವರೆಗೆ ಇತರ ಜನರಿಗೆ ಫಲಹಾರವನ್ನು ಹಂಚುತ್ತಾರೆ. ರಾಶಿ ಪೂಜೆಯ ನಂತರ ಮನೆಗೆ ತರುವ ಮೊದಲು ಕಣದಲ್ಲೇ ದಾಸಪ್ಪ, ತಳವಾರ, ತೋಟಿ, ಭಜಂತ್ರಿ, ಮಡಿವಾಳರಿಗೆ ಧಾನ್ಯವನ್ನು ಕೊಡುತ್ತಾರೆ.

ಈ ಊರಿನ ಜಾತ್ರೆಯು ಕೇವಲ ಧಾರ್ಮಿಕ ಮಹತ್ವವಾಗಷ್ಟೇ ಉಳಿಯದೇ ಸಾಮಾಜಿಕ ಭಾವೈಕ್ಯತೆಯ ಸಂಕೇತವಾಗಿ ರೂಪುಗೊಂಡಿದೆ. ಸಂಸ್ಕೃತಿಯ ಸಂಗಮವಾಗಿ ವಿವಿಧ ಕಲೆಗಳ ವಿಕಾಸಕ್ಕೂ ಕಾರಣವಾಗಿದೆ. ಗ್ರಾಮದ ಎಲ್ಲಾ ಕುಟುಂಬಗಳು ಸೇರಿ ಸ್ವರ್ಣ ಗೌರಮ್ಮನವರ ಜಾತ್ರೆಯನ್ನು ಮಾಡುತ್ತಾರೆ. ಇತ್ತೀಚೆಗೆ ಕೆಂಪಮ್ಮನ ಜಾತ್ರೆಯನ್ನು ಮಾಡುತ್ತಿದ್ದಾರೆ. ಪ್ರತಿವರ್ಷ ರಾಮನವಮಿಯಂದು ರಂಗನಾಥಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಪ್ರತೀ ಅಮವಾಸ್ಯೆಯಂದು ವೀರಭದ್ರಸ್ವಾಮಿಯ ಉತ್ಸವ ಮತ್ತು ವಿಶೇಷ ಪೂಜೆ ಮತ್ತು ಅಭಿಷೇಕಗಳು ನಡೆಯುತ್ತವೆ.

ಆಧುನಿಕ ಸಮಾಜದಲ್ಲಿ ನಂಬಿಕೆಗಳು ತಮ್ಮ ಜೀವಂತಿಕೆಯನ್ನು ಕಳೆದುಕೊಳ್ಳುತ್ತಿದ್ದರೂ ಈ ಊರಿನ ಜನಮನದಲ್ಲಿ ಇನ್ನೂ ಬೇರೂರಿವೆ. ಇವು ಮಾನವ ಜನಾಂಗದ ಸಂಸ್ಕೃತಿಯ ಜೀವ ನಾಡಿಗಳಾಗಿವೆ. ವಿದ್ಯಾವಂತ ಸಮಾಜ ಸಂಪ್ರದಾಯಗಳನ್ನು ಕಡೆಗಣಿಸಿದರೂ ಕೆಲವೊಮ್ಮೆ ಇವು ಜೀವನಕ್ಕೆ ಅನಿವಾರ್ಯ ಎಂಬಂತೆ ಅರಿವಿಲ್ಲದಂತೆ ಸಾಮಾಜಿಕ ಬದುಕಿನಲ್ಲಿ ನುಸುಳಿಕೊಳ್ಳುತ್ತವೆ.

- ಮೋಡ ಕಟ್ಟಿದರೆ ಮಳೆ ಬರುತ್ತೆ.
- ಪ್ರಯಾಣ ಮಾಡುವಾಗ ನರಿ ಅಡ್ಡ ಬಂದರೆ ಒಳ್ಳೆಯದಾಗುತ್ತೆ.
- ಹೊನ್ನಾರು ಹೂಡದೆ ಹೊಲ ಉಳುವಂತಿಲ್ಲ.
- ಒಳ್ಳೆ ಕೆಲಸಕ್ಕೆ ಹೊರಟಾಗ ಬಳೆಮಾರುವವರು, ಮುತ್ತೈದೆ, ತುಂಬಿದ ಕೊಡ ಬಂದರೆ ಒಳ್ಳೆಯದು.
- ಗುದ್ದಲಿ ಹೆಗಲ ಮೇಲೆ ಒತ್ತವರು, ಸೌದೆ ಹೊರೆ ಹೊತ್ತವರು, ವಿಧವೆ, ಬೆಕ್ಕು, ಎದುರಿಗೆ ಬರಬಾರದು.
- ರಾತ್ರಿವೇಳೆ ಕ್ಷೌರಿಕರನ್ನು ನೆನೆಸಬಾರದು.
- ಸಂಜೆವೇಳೆ ಮನೆ ಕಸ ಗುಡಿಸಿ ಹೊರಹಾಕಬಾರದು.
- ರಾತ್ರಿ ಮಲಗಿ ಬೆಳಿಗ್ಗೆ ಏಳುವಾಗ ದೇವರ ಫೋಟೋ ನೋಡಿ ಹೇಳಬೇಕು.
- ಮನೆ ಮುಂದೆ ಕಾಗೆ ಅರಚಿದರೆ ನಂಟರು ಬರುತ್ತಾರೆ.
- ಹಲ್ಲಿ ಲೊಚಗುಟ್ಟಿದರೆ ಅಂದುಕೊಂಡಿದ್ದು ಹಿಡೇರುತ್ತದೆ.
- ರಾತ್ರಿವೇಳೆ ಗೂಬೆ ಕೂಗಿದರೆ ಯಾರೋ ಸಾಯುತ್ತಾರೆ.
- ಕನಸಿನಲ್ಲಿ ಅನ್ನ ಕಂಡರೆ ಸತ್ತ ಸುದ್ದಿ ಬರುತ್ತೆ.
- ಬ್ರಾಹ್ಮಣರಿಗೆ ಹಸುದಾನ ಕೊಟ್ಟರೆ ಒಳ್ಳೆಯದಾಗುತ್ತೆ.
- ಒಡೆದ ಕನ್ನಡಿ ಮನೆಯಲ್ಲಿಡಬಾರದು.

- ಸಂಜೆ ವೇಳೆಯಲ್ಲಿ ಮುತ್ತೈದೆಯರ ಕೈಬಳೆ ಒಡೆಯಬಾರದು.
- ಸತ್ತ ಶವ ಹೊತ್ತ ವ್ಯಕ್ತಿ ಸ್ನಾನ ಮಾಡಲೇಬೇಕು.
- ಅಮವಾಸ್ಯೆದಿನ ಮಗು ಜನಿಸಿದರೆ ಶಾಂತಿ ಮಾಡುವುದು.
- ಮುಟ್ಟಾದ ಹೆಣ್ಣು ಮಕ್ಕಳು ಏಕಾಂತದಲ್ಲಿರಬೇಕು.
- ಕಾಲು ತೊಳೆಯುವಾಗ ನೀರಿನಿಂದ ಇಮ್ಮಡಿ ನೆನೆಯಬೇಕು.
- ಬಡಗಣ ದಿಕ್ಕಿಗೆ ತಲೆ ಹಾಕಿ ಮಲಗಬಾರದು.
- ಕಾಗೆ ತಗುಲಿದರೆ ಸ್ನಾನ ಮಾಡಿ ಪೂಜೆ ಮಾಡಬೇಕು.
- ತೊನ್ನು ಅತ್ತಿರುವ ವ್ಯಕ್ತಿ ಸತ್ತರೆ ಸುಡಬೇಕು.

**ಪ್ರಾದೇಶಿಕ ಗಾದೆಗಳು**

- ಗಂಗಳ ಹೋದುದಕ್ಕೆ ಚೆಂಬು ಕೊಟ್ಟು ಕಣಿ ಕೇಳಿದಂಗೆ
- ಮನಸ್ಸಿದಂತೆ ಮಾದೇವ
- ಕಳ್ಳನ ಮನಸ್ಸು ಉಳ್ಳುಳ್ಳಗೆ
- ದಿನ ಸಾಯುವವರಿಗೆ ಅಳುವವರು ಯಾರು
- ಕುಣಿಲಾರದವಳಿಗೆ ನೆಲಡೊಂಕು
- ಕುಂಟನಿಗೆ ಒಂದು ಚೇಷ್ಟೆ ಕುರುಡನಿಗೆ ನಾನಾ ಚೇಷ್ಟೆ
- ಅಯ್ಯೋ ಎಂದರೆ ಆರು ತಿಂಗಳು ರೋಗ
- ಊರು ಇದ್ವತಾವ ಹೊಲಗೇರಿ
- ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
- ಹಾಸಿಗೆಯಿದ್ದಷ್ಟು ಕಾಲು ಚಾಚು
- ಭರಣಿ ಮಳೆ ಆದ್ರೆ ಧರಣಿಲ್ಲ ಫಲ
- ಕಿವಿಕಿತ್ತರೂ ಕಿರಿಮಗ ಪ್ರೀತಿ
- ಎರಡು ಕಣ ಕಾದು ದಾಸಯ್ಯ ಕೆಟ್ಟ
- ಮನೆಗೆ ಮಾರಿ ಪರರಿಗೆ ಉಪಕಾರಿ
- ಓತಿಕ್ಯಾತನಿಗೆ ಬೇಲಿ ಸಾಕ್ಷಿ
- ಅಡಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು

**ಉಪಸಂಹಾರ**

ಪಾರಂಪರಿಕ ಸಂಸ್ಕೃತಿ ಮತ್ತು ಐತಿಹಾಸಿಕತೆಗೆ ಹೆಸರಾಗಿರುವ ಗುಬ್ಬಿ ತಾಲೂಕಿನಲ್ಲಿ ಅಮ್ಮನಘಟ್ಟವೂ ಒಂದಾಗಿದೆ. ಸಮನ್ವಯತೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಈ ಗ್ರಾಮದಲ್ಲಿ ಪ್ರಾಗೈತಿಹಾಸಿಕ ಆಯುಧಗಳು ದೇವಾಲಯಗಳು, ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ಲಿಂಗು ಮುದ್ರೆಕಲ್ಲುಗಳು, ಕರವುಗಲ್ಲುಗಳು, ಇಂದಿಗೂ ಮೂಲಸಾಕ್ಷಿಗಳಾಗಿ ಪರಂಪರೆಯನ್ನು ಪ್ರತಿ ಬಿಂಬಿಸುತ್ತಿವೆ. ಈ ಪ್ರಬಂಧವು ಸಂಪೂರ್ಣವಾಗಿ ಅಮ್ಮನಘಟ್ಟದ ಸಾಂಸ್ಕೃತಿಕ ಪರಂಪರೆಯನ್ನು ಕುರಿತ ಅಧ್ಯಯನವಾಗಿದೆ. ಇಂತಹ ಒಂದು ಸಣ್ಣ ಪ್ರಯತ್ನದಿಂದ ಅಮ್ಮನಘಟ್ಟದ ಪರಿಚಯ, ಭೌಗೋಳಿಕತೆ, ವಾಯುಗುಣ, ಅರಣ್ಯಸಂಪತ್ತು, ಜಲಸಂಪತ್ತು, ಭೂಮೇಲ್ಮೈ ಸ್ವರೂಪ, ಪ್ರಾಗಿತಿಹಾಸ ಆಯುಧಗಳು, ಚಾರಿತ್ರಿಕ ಹಿನ್ನೆಲೆ, ದೇವಾಲಯಗಳು, ವೀರಗಲ್ಲುಗಳು, ಮಹಾಸತಿಕಲ್ಲು, ಲಿಂಗುಮುದ್ರೆಕಲ್ಲು, ಸಾಮಾಜಿಕ ಆಯಾಮಗಳು, ಜಾನಪದ ವೈಶಿಷ್ಟ್ಯತೆ ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿ ಗಮನಿಸಲಾದ ಮಹತ್ವದ ಅಂಶವೆಂದರೆ ನಿಧಿಗಳ್ಳರು ಒಂದು ವೀರಗಲ್ಲನ್ನು ಅಗೆದು

ಬೀಳಿಸಿದ್ದರು. ಅದನ್ನು ಮತ್ತೆ ನಿಲ್ಲಿಸಿ ಮೂಲ ಸ್ವರೂಪಕ್ಕೆ ದಕ್ಕೆಯಾಗದಂತೆ ಸಂರಕ್ಷಿಸಲಾಗಿದೆ. ಹೀಗೆ ನಮ್ಮ ಪಾರಂಪರಿಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಮತ್ತು ಹೊಣೆಗಾರಿಕೆಯಾಗಿದೆ.

**ಆಧಾರ ಗ್ರಂಥಗಳು**


1. ತಿಪ್ಪೇರುದ್ರಸ್ವಾಮಿ ಹೆಚ್., ``ಕರ್ನಾಟಕ ಸಂಸ್ಕೃತಿ ಸಮೀಕ್ಷೆ'', ಡಿ.ವಿ.ಕೆ ಪ್ರಕಾಶನ, ಮೈಸೂರು, 2007
2. ಚಿದಾನಂದ ಮೂರ್ತಿ ಎಂ., ``ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'', ಸಪ್ನಬುಕ್‌ಹೌಸ್, ಬೆಂಗಳೂರು, 1966
3. ಅಪರ್ಣ ಕೂ.ಸ., ``ದೇವಾಲಯ ವಾಸ್ತುಶಿಲ್ಪ ಪರಿಚಯ'', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
4. ``ತಿಳಿಯೋಣ ನಮ್ಮೂರ ಇತಿಹಾಸ'', ಸಾರ್ವಜನಿಕ ಶಿಕ್ಷಣ ಇಲಾಖೆ, ಗುಬ್ಬಿ
5. ಬೆಟಗೇರಿ ಕೃಷ್ಣಶರ್ಮ., ``ಕರ್ನಾಟಕ ಜನಜೀವನ'', ಸಮಾಜ ಪುಸ್ತಕಾಲಯ, ಧಾರವಾಡ, 1971
6. ಮಹಾದೇವಯ್ಯ ಟಿ.ಆರ್., ``ಗುಬ್ಬಿ ತಾಲ್ಲೂಕು ದರ್ಶನ'', ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು, 1984
7. ಲಕ್ಷ್ಮಣ್ ತೆಲಗಾವಿ (ಸಂ)., ``ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ'', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003
8. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2004
9. ಸಿದ್ದಲಿಂಗಪ್ಪ ಕೆ.ಎಸ್.(ಸಂ)., ``ಚೆನ್ನುಡಿ'' ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತುಮಕೂರು, 1994
10. ಶಿವತಾರಕ್, ಕೆ.ಬಿ., ``ಕರ್ನಾಟಕದ ಪುರಾತತ್ವ ನೆಲೆಗಳು'', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001
11. ಸೋಮಶೇಖರ್ ಎಸ್.ವೈ., ``ಜಟಿಂಗ ರಾಮೇಶ್ವರ ಸಾಂಸ್ಕೃತಿಕ ದರ್ಶನ'', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
12. ಶ್ರೀನಿವಾಸ ಎ.ಜಿ., ``ನವಶಿಲಾಯುಗದ ಶಿಲಾಕೊಡಲಿ ಪತ್ತೆ'', ಪ್ರಜಾವಾಣಿ ದಿನಪತ್ರಿಕೆ, ಅಕ್ಟೋಬರ್ 24.2018

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಕುವೆಂಪು ಕಥನ ಕವನಗಳಲ್ಲಿ ಪ್ರಕೃತಿ ಮತ್ತು ಸಾಮಾಜಿಕ ಪ್ರಜ್ಞೆ

**ಕರಿಬಸಣ್ಣ ಟಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.

## ಪ್ರಸ್ತಾವನೆ

ಕುವೆಂಪು ಕನ್ನಡದ ಮೇರು ಪ್ರತಿಭೆ. 20ನೇ ಶತಮಾನದಲ್ಲಿ ಕಂಡ ಯುಗದ ಕವಿ. ನವೋದಯ ಕಾಲದಲ್ಲಿ ಪ್ರಕೃತಿ ಕವಿಯೆಂದೇ ಪ್ರಸಿದ್ಧಿ ಪಡೆದವರು. ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿರುವ ಕವಿ. ಭಾವಗೀತೆ, ಕಥೆ, ಕಾದಂಬರಿ, ಕಥನಕವನ, ನಾಟಕ, ಜೀವನ ಚರಿತ್ರೆ, ವಿಮರ್ಶೆ, ವೈಚಾರಿಕ ಪ್ರಬಂಧ, ಮೀಮಾಂಸೆ, ಮಹಾಕಾವ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕುವೆಂಪು ಬರಹಗಳು ಮುಂಚೂಣಿಯಲ್ಲಿ ನಿಂತಿವೆ.

ಪ್ರಕೃತಿ ಕವಿ ಎಂದೇ ಕರೆಯಿಸಿಕೊಳ್ಳುವ ಕುವೆಂಪು ಮಲೆನಾಡಿನ ಗಿಡ, ಮರ, ಪಕ್ಷಿ, ಹೂ, ತಳಿರು, ಹಸಿರು ವನಗಳು, ನದಿ, ಗೊಬ್ಬರ ಹೀಗೆ ಎಲ್ಲವನ್ನು ಕಾವ್ಯದ ವಸ್ತುವಾಗಿ ತಂದು ಅದರ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಕೊಳಲು, ಪಾಂಚಜನ್ಯ, ನವಿಲು, ಪಕ್ಷಿಕಾಶಿ, ಕಲಾಸುಂದರಿ ಕವನ ಸಂಕಲನಗಳಲ್ಲಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮಧುಮಗಳು ಕಾದಂಬರಿಗಳಲ್ಲಿ, ಅವರ ಬೆರಳ್ಗೆ ಕೊರಳ್ ನಾಟಕದಲ್ಲಿ ಹಾಗೂ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಕಣ್ಣಿಗೆ ಕಟ್ಟುವ ಪ್ರಕೃತಿ ಚಿತ್ರಣ ಕಾಣಬಹುದು. ಪ್ರಕೃತಿ ಕೂಡ ಅವರ ಕೆಲವೊಂದು ಕೃತಿಗಳಲ್ಲಿ ಒಂದು ಪಾತ್ರವಾಗಿ ಕಾರ್ಯ ನಿರ್ವಹಿಸುವ ನಿದರ್ಶನಗಳನ್ನು ನೋಡಬಹುದಾಗಿದೆ.

ಕುವೆಂಪು `ಕಥನ ಕವನ' ಪ್ರಕಾಶಕ್ಕೆ ಕೊಟ್ಟಿರುವ ಕೊಡುಗೆ ಶ್ರೇಷ್ಠವಾದದ್ದು. ಕಥನ ಕವನಗಳಲ್ಲಿ ಪ್ರಕೃತಿಯ ಸೊಬಗನ್ನು ಕಟ್ಟಿಕೊಡುತ್ತಲೇ ಸಾಮಾಜಿಕ ಪರಿಸರದಲ್ಲಿ ಮಾನವನ ನಡವಳಿಕೆಯ ವಿಭಿನ್ನ ಸ್ವರೂಪಗಳನ್ನು ಕೂಡ ಚಿತ್ರಿಸಿರುತ್ತಾರೆ. ಮರಸು ಬೇಟೆ, ನಾಗಿ, ಕರಿಸಿದ್ದ ಇತ್ಯಾದಿ ಕುವೆಂಪು ಬರೆದ ಪ್ರಮುಖ ಕಥನ ಕವನಗಳು. ಪ್ರಕೃತಿಯ ಮಡಿಲಿನಲ್ಲಿ ಮಾನವ ``ಭಾವಜೀವಿ' ' ಎಂದು ಹೇಳುತ್ತಲೇ ಹೃದಯ ವಿದ್ರಾವಕವಾದ ದುರಂತಗಳನ್ನು ಸಹೃದಯನ ಮನ ಕರಗುವಂತೆ ಚಿತ್ರಿಸಿದ್ದಾರೆ.

ಜನಪದ ಸಾಹಿತ್ಯದ ಪ್ರಮುಖ ಕಥನ ಕವನಗಳಾದ `ಕೆರೆಗೆ ಹಾರ' , `ನಾಗರಪಂಚಮಿ' , `ಸತ್ಯವಂತೆ ಹಡೆದವ್ವ' ಮಾದರಿಯಲ್ಲಿ ದುರಂತ ಕಥನ ಕವನಗಳನ್ನು ಆಧುನಿಕ ಸಾಹಿತ್ಯ ಸಂದರ್ಭದಲ್ಲಿಯೂ ರಚನೆಯಾಗಿವೆ. ಕುವೆಂಪುರವರ `ನಾಗಿ' ಮತ್ತು `ಕರಿಸಿದ್ದ' ದುರಂತ ಕಥನ ಕವನಗಳ ಉತ್ತಮ ಮಾದರಿಗಳಾಗಿ ಸಿಗುತ್ತವೆ.

## ಕಥನ ಕವನ ತಂತ್ರ ಮತ್ತು ಗುಣಲಕ್ಷಣಗಳು

1. ಕಥನ ಕವನ ಉತ್ತಮ ವಸ್ತು ವಿಷಯ ಹೊಂದಿರಬೇಕು.
2. ಅನವಶ್ಯಕವಾದ ವರ್ಣನೆ, ಅತಿಯಾದ ನೀತಿಬೋಧೆ ತುಂಬಿ ಓದುಗರಿಗೆ ಬೇಸರ ಉಂಟುಮಾಡಬಾರದು.
3. ಕಥೆ ಹೇಳುವ ರೀತಿ ಸೊಗಸಾಗಿರಬೇಕು.
4. ಕಥೆಯನ್ನು ಸಂಕ್ಷಿಪ್ತವಾಗಿ ಅರ್ಥವಾಗುವಂತೆ ಬೇಗ ಬೇಗನೇ ಹೇಳಬೇಕು.

5. ಘಟನೆಗಳನ್ನು ಚುರುಕಾಗಿ ಚಿತ್ರಿಸಬೇಕು. ಓದುಗನಿಗೆ ಬೇಸರ ಉಂಟುಮಾಡುವ ಸನ್ನಿವೇಶಗಳನ್ನು ತೇಲಿಸಿ ಮುಂದುವರಿಸಬೇಕು.
6. ಒಮ್ಮೆ ಬಳಸಿದ ವರ್ಣನೆ ಮತ್ತು ಸನ್ನಿವೇಶವನ್ನು ಮತ್ತೆ ಬಳಸಬಾರದು.
7. ಕಥೆಯ ಆರಂಭದಷ್ಟೇ ಅಂತ್ಯವೂ ಮುಖ್ಯವಾಗಿ ಪರಿಣಾಮಕಾರಿಯಾಗಿ ಚಿತ್ರಿಸಿರಬೇಕು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಾಸ್ತಿ, ಪು.ತಿ.ನ., ಕುವೆಂಪು, ಎಸ್.ವಿ.ಪರಮೇಶ್ವರ ಭಟ್, ಕೆ.ನರಹರಿಶಾಸ್ತ್ರಿ, ಜಿ.ಪಿ.ರಾಜರತ್ನಂ, ಸು.ರಂ.ಎಕ್ಕುಂಡಿ ಮುಂತಾದವರು ಕಥನ ಕವನಗಳನ್ನು ರಚಿಸಿದ್ದಾರೆ. ಕುವೆಂಪುರವರು ಬರೆದಿರುವ `ನಾಗಿ' ಮತ್ತು `ಕರಿಸಿದ್ದ' ಕವನಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿಮರ್ಶೆಗೆ ಒಳಪಡಿಸುತ್ತಿದ್ದೇನೆ. ಕುವೆಂಪು ತಮ್ಮ ಬರಹದಲ್ಲಿ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಎಲ್ಲ ಕಡೆಗಳಲ್ಲೂ ಚಿತ್ರಿಸುವಂತೆ ಈ ಎರಡೂ ಕವನಗಳಲ್ಲೂ ಚಿತ್ರಿಸುತ್ತಾರೆ. ಆದರೆ ಕಥಾಘಟನೆಯ ಮುಂದುವರಿಕೆಗೆ, ಸನ್ನಿವೇಶಗಳಿಗೆ ಪೂರಕವಾಗಿ, ಎಲ್ಲಾ ದುರಂತಗಳಿಗೆ ಸಾಕ್ಷಿಯಾಗಿ ಇಲ್ಲಿ ಪ್ರಕೃತಿ ಚಿತ್ರಣಗೊಂಡಿದೆ. ಕರಿಸಿದ್ದನ ಕುಟುಂಬವೂ ಒಂದು ಬಡತನ ತುಂಬಿದ ಸಾಮಾನ್ಯ ಕುಟುಂಬ. ನಾಗಿಯ ಕುಟುಂಬವೂ ಬಡಕುಟುಂಬ. ಆದರೂ ದುರಂತದ ವಿಭಿನ್ನ ಸ್ವರೂಪಗಳನ್ನು ಕವಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

**``ನಾಗಿ' ' ಕಥನ ಕವನದ ಸಾರಾಂಶ**

ಮಾದ ಬೇಟೆಗೆ ಹೋಗಿದ್ದ ಸಂದರ್ಭದಲ್ಲಿ ಆತನ ಮಗಳಾದ `ನಾಗಿ' ಯನ್ನು ಮಲತಾಯಿ ರಾತ್ರಿ ಹೊತ್ತಿನಲ್ಲಿ ಬೈದು ಹೊಡೆದು ಕಳೆದುಹೋದ ದನ `ತುಂಗೆ' ಯನ್ನು ಹುಡುಕಿ ತರಲು ಕಳುಹಿಸುತ್ತಾಳೆ. ದನ ಹುಡುಕಿ ತಂದು ಕೊಟ್ಟಿಗೆಗೆ ಕಟ್ಟದ ಹೊರತು ಗುಡಿಸಲಿಗೆ ಬರಲೇಬೇಡ ಎಂದು ಹೊರಗೆ ನೂಕುತ್ತಾಳೆ. ಸಣ್ಣ ಹುಡುಗಿ ನಾಗಿ ಕತ್ತಲಿಗೆ ಹೆದರಿ ದನವನ್ನು ಹುಡುಕುತ್ತಾ ಹೊಲಗದ್ದೆಗಳನ್ನೆಲ್ಲಾ ದಾಟಿ, ಹಳ್ಳಗಳನ್ನು ದಾಟಿ, ಹಸಿವಿನಿಂದ ತತ್ತರಿಸುತ್ತಾ ಕರಿಯಕಲ್ಲು, ಪೊದೆಗಳನ್ನು `ತುಂಗೆ' ಎಂದು ಭ್ರಮಿಸುತ್ತಾ, ಅಳುತ್ತಾ ಮುಂದೆ ಮುಂದೆ ನಡೆದು ದಟ್ಟವಾದ ಕಾಡಿನ ಮದ್ಯಕ್ಕೆ ಬಂದು ಸೇರುತ್ತಾಳೆ. ಕತ್ತಲಿಗೆ ಹೆದರಿ ತನ್ನ ತಾಯಿಯನ್ನು ನೆನೆದು ಮುಂದುವರಿಯುತ್ತಾಳೆ.

ಮಾದ ಕಾಡಿನಲ್ಲಿ ಅಲೆದು ಬೇಟೆ ಸಿಗದೇ ಕಂಗಾಲಾಗಿ ತಾಳ್ಮೆಗೆಟ್ಟಿದ್ದನು. ಕಂಬಳಿ ತೊಪ್ಪೆ ಹಾಕಿಕೊಂಡು ದೂರದಲ್ಲಿ ಬರುತ್ತಿದ್ದ ನಾಗಿಯನ್ನೇ ಹಂದಿ ಎಂದು ತಿಳಿದು ಗುರಿಯಿಟ್ಟು ಈಡು ಹೊಡೆಯುತ್ತಾನೆ. ನಾಗಿಯ ಎದೆಗೆ ಗುಂಡು ತಾಕಿ ಆಕೆ ನರಳಿದಾಗ ಮಗಳೆಂದು ಗುರುತಿಸಿ, ಸತ್ತ ಮಗಳನ್ನು ಅಪ್ಪಿ ರೋಧಿಸುತ್ತಾ ಅಲ್ಲೆ ಪ್ರಾಣ ಬಿಡುತ್ತಾನೆ. ಮಾದ, ನಾಗಿ ಇಬ್ಬರನ್ನು ಊರ ಜನರೊಂದಿಗೆ ಮಾದಿ ಹುಡುಕಿ ಕಾಣದೆ ಸುಮ್ಮನಾಗುತ್ತಾಳೆ. ತಿಂಗಳಿಗೆ ಮಾದನನ್ನು ಮರೆತ ಮಾದಿ ಮತ್ತೊಬ್ಬನೊಂದಿಗೆ ಕೂಡಿ ಸುಖಜೀವನ ಆರಂಭಿಸುತ್ತಾಳೆ. ಆರುತಿಂಗಳ ನಂತರ ಮಾದ ಮತ್ತು ನಾಗಿಯ ಅಸ್ಥಿಪಂಜರಗಳನ್ನು ನೋಡಿ ಮಾದಿ ಹೆದರಿ ಸತ್ತುಹೋಗುತ್ತಾಳೆ. ಇದು ``ನಾಗಿಯ' ' ಕಥಾ ಹಂದರ.

ಕವಿ ಕಥೆಯ ಓಟಕ್ಕೆ ತಕ್ಕಂತೆ ಸನ್ನಿವೇಶಗಳನ್ನು ಬಳಸುತ್ತಾ ಬೇಗನೆ ಕಥೆಯನ್ನು ಮುಂದುವರಿಸಿದ್ದಾರೆ. ಮಾದ, ನಾಗಿಯ ದುರಂತವನ್ನು ಸಹೃದಯನ ಮನಸ್ಸು ಕರಗುವಂತೆ ಚಿತ್ರಿಸಿದ್ದಾರೆ. ಆರಂಭದಂತೆ ಅಂತ್ಯವೂ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಸಮಾಜದಲ್ಲಿ ಮಲತಾಯಿಯಾಗಿ ಬರುವವಳು ನಿಜವಾದ ತಾಯ್ತನ ನೀಡಲು ಸಾಧ್ಯವಿಲ್ಲ ಎಂಬ ನಂಬಿಕೆಗೆ ಪೂರಕವಾಗಿ ಮಾದಿ ನಾಗಿಯನ್ನು ಕತ್ತಲಾಗಿದ್ದರೂ ಮನೆಯೊಳಗೆ ಸೇರಿಸದೆ ಕಳುಹಿಸುವ ಸನ್ನಿವೇಶ ಹಾಗೂ ಸತ್ತ ವ್ಯಕ್ತಿಗಳ ಬಗ್ಗೆ ಹರಡುವ ರೀತಿಯೇ ಇಲ್ಲಿ ಮಾದ, ನಾಗಿಯ ಆತ್ಮವೂ

ಸುತ್ತುತ್ತವೆಂದೂ, ಅನ್ಯಾಯ ಮಾಡಿದ ಮಾದಿಯನ್ನು ಬಲಿ ತೆಗೆದುಕೊಂಡವೆಂದೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಮಲೆನಾಡಿನ ಒಂದು ಗುಡಿಸಲು ಬಡತನಕ್ಕೆ ಸಾಕ್ಷಿಯಾಗಿ ಕಾಣುತ್ತಿದ್ದ ರೀತಿ, ದಟ್ಟವಾದ ಕಾಡಿನ ದೊಡ್ಡ ಮರಗಳು ನಾಗಿಯ ಭೀತಿಯನ್ನು ಹೆಚ್ಚಿಸಿತ್ತೆಂದೂ ಚಿತ್ರಿಸುತ್ತಾ ಪ್ರಕೃತಿಯನ್ನು ಕಥೆಗೆ ಪೂರಕವಾಗಿ ಬಳಸಿಕೊಂಡಿರುವ ರೀತಿ ಕವಿಪ್ರಜ್ಞೆಯನ್ನು ವಾಸ್ತವಿಕತೆಯ ನೆಲೆಗಟ್ಟನ್ನು ವಿವರಿಸುತ್ತದೆ.

**ಕರಿಸಿದ್ದ ಕಥನ ಕವನ**

ಕುಪ್ಪಳ್ಳಿ ಬಳಿಯ ಕಾಡಿನಂಚಿನಲ್ಲಿದ್ದ ಒಂದು ಗುಡಿಸಲಿನಲ್ಲಿ ವಾಸವಾಗಿದ್ದ ಕೆಳಜಾತಿಯ ಕರಿಸಿದ್ದ ದನ ಕಾಯುವ ಕಾಯಕವನ್ನು ನಿರ್ವಹಿಸುತ್ತಿದ್ದನು. ಅವನ ಹೆಂಡತಿ ಗಿಡ್ಡಿ ದಿನಕೂಲಿ ಮಾಡುತ್ತಿದ್ದಳು. ಅವರಿಬ್ಬರಿಗೆ ಬಹುಕಾಲದ ನಂತರ ಒಂದು ಗಂಡುಮಗುವಾಗುತ್ತದೆ. ಆತನಿಗೆ ಬೈರವನೆಂದು ಹೆಸರಿಡುತ್ತಾರೆ. ಮಗುವಿಗೆ ಹಾಲು, ಎಣ್ಣೆ, ಬೆಣ್ಣೆ, ಇಲ್ಲದೇ ಬೆಳೆಯುತ್ತದೆ. ಬೆಳೆದ ಬೈರನಿಗೆ ಹಂಡನಾಯಿ ಒಡನಾಡಿಯಾಗಿರುತ್ತದೆ. ಪ್ರಕೃತಿಯ ಮಡಿಲಲ್ಲಿ ಬೆಳೆದ ಬೈರನ ಬಾಲಲೀಲೆಗಳನ್ನು ನೋಡಿ ಸುಖಿಸುವ ಸಿದ್ದ ಮತ್ತು ಗಿಡ್ಡಿ ಮಲೆನಾಡಿನ ಹಳ್ಳಿಗಳ ಕೂಲಿಕಾರ ಸಂಸಾರಗಳ ಪ್ರತಿನಿಧಿಗಳಾಗಿ ಚಿತ್ರಣಗೊಂಡಿದ್ದಾರೆ.

ಸಿದ್ದ ಮತ್ತು ಗಿಡ್ಡಿ ಜಗದ ದೊಂಬಿ ಗಲಭೆಗಳಿಂದ ದೂರವಾಗಿ, ಸಿರಿಗೆ ಕರುಬದೇ, ಬಡತನಕ್ಕೆ ಹೇಸಿ ಗೋಳಿಡದೇ, ಅತಿ ಆಸೆ, ಅತಿ ಭೋಗಗಳಿಲ್ಲದೇ ಸರಳವಾಗಿ ಜೀವನ ನಡೆಸುತ್ತಿದ್ದ ದಂಪತಿಗೆ ಬೈರನ ಸಾವಿನ ದುರಂತ ಎದುರಾಗುತ್ತದೆ. ಮೀನು ಹಿಡಿಯಲು ಹೋದ ಸಿದ್ದನೊಂದಿಗೆ ಬೈರ ಮತ್ತು ನಾಯಿ ಕೆರೆಯ ಬಳಿಗೆ ಹೋಗಿರುತ್ತಾರೆ. ಬೈರ ಕಾಲು ಜಾರಿ ಕೆಳಗೆ ಬಿದ್ದು ಸಾಯುತ್ತಾನೆ. ಗಿಡ್ಡಿ ಮತ್ತು ಸಿದ್ದ ಮೌನವಾಗಿ ಮರುಗುತ್ತಾರೆ.

ಕರಿಸಿದ್ದ ಕಥನ ಕವನವು ಬೈರನ ದುರಂತದೊಂದಿಗೆ ಕೊನೆಯಾಗುವಾಗ ಕವಿ ಸಾಮಾಜಿಕ ಪರಿಸರದ ಚಿತ್ರಣವನ್ನು ನೀಡುತ್ತಾರೆ. ಲೋಕದ ಎಲ್ಲಾ ವಿಚಾರಗಳ ನಡುವೆ ಬೈರನ ಸಾವೂ ಸೇರಿತ್ತು. ಆದರೆ ಪತ್ರಿಕೆಗಳಲ್ಲಿ ಮಹಾಯುದ್ಧಗಳು, ರೈಲುಕಂಬಿ ಹಳಿ ತಪ್ಪಿದ್ದು, ಕಾಶಿಯಲ್ಲಿ ನಡೆದ ವೇದಪಾಠ, ಆಕಸ್ಮಿಕ ಅಪಘಾತಗಳು ಮುಂತಾದವು ವರದಿಯಾಗುತ್ತವೆ. ಆದರೆ ಬೈರನ ಸಾವಿಗೆ ಎಲ್ಲಿಯೂ ಪ್ರತಿಕ್ರಿಯೆಯಿಲ್ಲ, ಮೌನ ತುಂಬಿದೆ. ಆದರೆ ಸಾವಿಗೆ ಮೇಲು ಕೀಳಿಲ್ಲವೆಂಬ ಸತ್ಯವನ್ನು ಕವಿ ಇಲ್ಲಿ ವ್ಯಕ್ತಪಡಿಸಿದ್ದಾರೆ.

**ಆಕರ ಗ್ರಂಥಗಳು**


1. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಬಂಧ : ಎಸ್.ಅನಂತನಾರಾಯಣ.
2. ಕುವೆಂಪು ಸಮಗ್ರ ಕಾವ್ಯ : ಕನ್ನಡ ವಿ.ವಿ.
3. ಕುವೆಂಪು ದರ್ಶನ ಮತ್ತು ಸಂದೇಶ : ಲೇ|| ದೇ.ಜ.ಗೌ.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಮಹಿಳೆಯರಿಗೆ ಶಿಕ್ಷಣ ಮತ್ತು ಸಮಾನತೆ

**ಡಾ. ಬಿ.ನಿರ್ಮಲ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ,
ಸ.ಪ್ರ.ದ. ಕಾಲೇಜು, ತುಮಕೂರು.
nirmalabma@gmail.com Ph: 9902498873

## ಪ್ರಸ್ತಾವನೆ

ಮನುಷ್ಯನ ಸಾಂಸ್ಕೃತಿಕ ಇತಿಹಾಸವನ್ನು ಕೆದಕುತ್ತಾ ಹೊರಟರೆ ಹೆಣ್ಣಿಗೆ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವಿದೆ. ಮಾನವ ಶಾಸ್ತ್ರಜ್ಞರು ಗುರುತಿಸುವಂತೆ ಪ್ರಾಚೀನ ಸಮಾಜದಲ್ಲಿ ಕುಟುಂಬ ಪರಿಕಲ್ಪನೆಗಳಾದ ತಾಯಿ-ಮಗು ಇವರ ಸಂಬಂಧ ತಾಯಿಯೊಟ್ಟಿಗೆ ಗುರುತಿಸಲ್ಪಡುತ್ತಿತ್ತೇ ಹೊರತು ತಂದೆಯೊಂಟಿಗಲ್ಲ. ಮಗುವಿನ ಪರಿಪೂರ್ಣ ಹಕ್ಕು ತಾಯಿಯದಾಗಿತ್ತು. ಈ ಹಿನ್ನೆಲೆಯಲ್ಲಿ ತಾಯಿಗೆ ಅಪಾರವಾದ ಗೌರವ ಸ್ಥಾನಮಾನಗಳಿದ್ದವು. ಪ್ರಸ್ತುತದಲ್ಲಿಯೂ ಮೂಲವಾಸಿ ಬುಡಕಟ್ಟುಗಳು, ಕೇರಳ ಹಾಗೂ ಕರಾವಳಿ ಕರ್ನಾಟಕದ ಬ್ರಾಹ್ಮಣೇತರ ಸಮುದಾಯಗಳಲ್ಲಿ ಮಾತೃರೂಪಿ ವ್ಯವಸ್ಥೆ, ಸಂಸ್ಕೃತಿ ಅಸ್ತಿತ್ವದಲ್ಲಿದೆ. ಇಲ್ಲಿ ಆಸ್ತಿ ವಂಶಪರಂಪರೆಯ ಹಕ್ಕುಗಳೆಲ್ಲವೂ ತಾಯಿಗೆ ಸೇರಿದ್ದಾಗಿದೆ. ತಲೆಮಾರಿನಿಂದ ತಲೆಮಾರಿಗೆ, ತಾಯಿಯಿಂದ ಮಗಳಿಗೆ ಅದು ವರ್ಗವಾಗುತ್ತಾ ಸಾಗುತ್ತದೆ.

ಕೃಷಿ ಸಂಸ್ಕೃತಿಯ ಶೋಧ ಹೆಣ್ಣಿನ ಸಾಧನೆಯಾದರೂ ಅದೂ ದಬಾವಣೆಗೆ ಒಳಗಾದದ್ದು ದುರಂತವೇ ಸರಿ. ಈ ಸಂದರ್ಭದಲ್ಲಿ ಕೃಷಿಯಿಂದ ಪುರುಷ ಸರ್ವಾಧಿಕಾರಿಯಾದ. ಪುರುಷ ಪ್ರಧಾನತೆ ಮತ್ತು ಮಹಿಳಾ ಅಧೀನತೆ ಖಾಸಗಿ ಆಸ್ತಿಯ ಉಗಮದೊಟ್ಟಿಗೆ ಆರಂಭಗೊಂಡಿತು. ಇಡೀ ಉತ್ಪಾದನಾ ವ್ಯವಸ್ಥೆಗೆ ಗಂಡು ಒಡೆಯನಾದ. ಈ ಮೂಲಕ ಹೆಣ್ಣು ಶಿಕ್ಷಣ ಮತ್ತು ಹೊರಜಗತ್ತಿನಿಂದ ದೂರವಾಗಿ ಗೃಹಬಂಧನಕ್ಕೊಳಗಾದಳು.

ಶಿಕ್ಷಣ ಮತ್ತು ಆರ್ಥಿಕ ಚೈತನ್ಯ ಕಳೆದುಕೊಂಡ ಹೆಣ್ಣು ದೌರ್ಬಲ್ಯಕ್ಕೊಳಗಾದಳು. ಅಲ್ಲಿಂದಲೇ ಹೆಣ್ಣಿನ ಮೇಲೆ ದಬ್ಬಾಳಿಕೆ ಆರಂಭಗೊಂಡಿತು. ಗಂಡು ವ್ಯಾಖ್ಯಾನಿಸಿದ ರೀತಿ, ಆತ ಹೇರಿದ ನಿಯಮ ನಿಬಂಧನೆಯಂತೆ ಬದುಕಲಾರಂಭಿಸಿದಳು. ಗಂಡಿನ ಆಜ್ಞಾಪಾಲಕಳ ರೀತಿ ಪಾತ್ರ ನಿರ್ವಹಿಸಲಾರಂಭಿಸಿದಳು. ಆತ ರೂಪಿಸಿದ ಮೌಲ್ಯಗಳ ಪಾಲಕಳಾದಳು. ಇವೆಲ್ಲವೂ ಅನಂತರದ ಕಾಲಘಟ್ಟದಲ್ಲಿ ರೂಪುಗೊಂಡ ಸಾಮಾಜಿಕ ಸಾಂಸ್ಕೃತಿಕ ಉತ್ಪನ್ನ. ನಾವು ಪೂರ್ವಕ್ಕೆ ಹೊಗಿ ಸಂಸ್ಕೃತಿಯ ಅವಲೋಕನ ಮಾಡಿದರೆ ಹೆಣ್ಣಿನ ಚಿತ್ರಣ ಬೇರೆಯದೇ ಆಗಿತ್ತು ಆಕೆಯ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶಗಳಿದ್ದವು. ಗಾರ್ಗಿ, ಮೈತ್ರೇಯಿ, ಲೋಪಮುದ್ರಾ, ಘೋಷಾ, ಯಮಿ, ಪುಲೋಮಿ, ನೋದಾರಂತಹ ಅನೇಕ ಸ್ತ್ರೀಯರು ಪ್ರವಾದಿ ವಿದ್ವಾಂಸರುಗಳ ಧಾರ್ಮಿಕ ಕಾರ್ಯಗಳಲ್ಲಿ ಪುರುಷ ಪಂಡಿತರಿಗೆ ಸರಿಸಮಾನವಾಗಿ ಭಾಗವಹಿಸಿ ತಾತ್ವಿಕ ಚರ್ಚೆಗಳಲ್ಲಿ ಪಾಲ್ಗೊಂಡು ವಿಚಾರ ಮಂಡನೆ ಮಾಡಿ ತಮ್ಮ ಶಾಸ್ತ್ರ ಪ್ರವೀಣತೆಯನ್ನು ಮೆರೆಯುತ್ತಿದ್ದುದುಂಟು. ಸಾಮಾನ್ಯ ಮಹಿಳೆಯರೂ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಮಾನಗಳನ್ನು ಪಡೆದುಕೊಂಡು ಮನೆಯಲ್ಲಿ, ಸಮಾಜದಲ್ಲಿ ವಿಶೇಷ ಗೌರವ ಮನ್ನಣೆಗಳಿಗೆ ಭಾಜನರಾಗಿದ್ದರು. ಕುಟುಂಬದಲ್ಲಿ `ಮಾತೃದೇವೋಭವ' ಎಂಬ ಭಾವನೆಯಿದ್ದು ತಾಯಿಗೆ ಮೊದಲ ನಮನ, ನಂತರದ್ದು ತಂದೆಗೆ ಗೌರವ `ಪಿತ್ರುದೇವೋಭವ' . ಆಸ್ತಿ, ವಂಶಗಳ ಹಕ್ಕು, ಅಧಿಕಾರ ಪಿತೃಪ್ರಧಾನ ಕುಟುಂಬ

ವ್ಯವಸ್ಥೆ ತಂದೆಯದಾದರೂ ಪರಂಪರೆ ಹಾಗೂ ಸಂಸ್ಕಾರಗಳಿಗೆ ತಾಯಿಯೇ ಗುರುವಾಗಿದ್ದಳು. ತಾಯಿ ಮಗುವಿನ ಬಾಂಧವ್ಯ ಆಪ್ತವಾದುದು ಮತ್ತು ಪವಿತ್ರವಾದುದು. ಮಗು ಭ್ರೂಣದ ಸ್ಥಿತಿಯಿಂದ ಬಾಲ್ಯಾವಸ್ಥೆಯವರೆಗೆ ತಾಯಿಯನ್ನೇ ಆಶ್ರಯಿಸಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಿಂದ `ನೂಲಿನಂತೆ ಸೀರೆ, ತಾಯಿಯಂತೆ ಮಕ್ಕಳು' ಎಂಬ ಗಾದೆ ಪ್ರಚಲಿತದಲ್ಲಿದೆ. ಗಾಂಧೀಜಿ, ಈಶ್ವರಚಂದ್ರ ವಿದ್ಯಾಸಾಗರ, ವೀರೇಶಲಿಂಗಂನಂತಹ ಶಿಕ್ಷಣತಜ್ಞರು `ಮಹಿಳೆ ಒಬ್ಬ ಪುರುಷನಿಗಿಂತ ಹೆಚ್ಚು ಚೆನ್ನಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಸಬಲ್ಲಳು' ಎಂದು ಅಭಿಪ್ರಾಯಪಟ್ಟಿದ್ದಾರೆ. ಮಾಂಸದ ಮುದ್ದೆಯಂತಿರುವ ಮಗುವನ್ನು ಮನುಷ್ಯನನ್ನಾಗಿ ರೂಪಿಸಿ ಕಲಿಸುವವಳು ತಾಯಿ. ಹಾಗಾಗಿಯೇ `ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು' ಎಂದು ಕವಿವಾಣಿ ಸಾರಿ ಹೇಳಿದೆ.

ಹೆಣ್ಣು ಯಾವಾಗ ವಿದ್ಯಾಭ್ಯಾಸದಿಂದ ದೂರವಾದಳೋ ಆ ಕ್ಷಣದಿಂದಲೇ ಹೆಣ್ಣಿನ ಅಧೀನತೆ, ಶೋಷಣೆಯ ಪರ್ವ, ಆರಂಭಗೊಂಡಿತು. ಹೆಣ್ಣನ್ನು ಶಿಕ್ಷಣದಿಂದ ಹೊರಗಿಟ್ಟದ್ದೇ ಅವಳನ್ನು ಪುರುಷಾಧೀನವಾಗಿಸಲು, ವಸಾಹತುಶಾಹಿ ಏನೆಲ್ಲಾ ಎಡವಟ್ಟುಗಳನ್ನು ಮಾಡಿ ನಮ್ಮೆಲ್ಲರನ್ನು ತಲ್ಲಣಗೊಳಿಸಿದರೂ, ಕೆಲವು ಅನಿಷ್ಟ ಪದ್ಧತಿಗಳನ್ನು ನಮ್ಮಿಂದ ದೂರವಾಗಿಸಿತು. ಅದರಲ್ಲೂ ಮಹಿಳಾ ಸಮಸ್ಯೆಗಳಾದ ಬಾಲ್ಯವಿವಾಹ, ಬಹುಪತ್ನಿತ್ವ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆಯಂತಹ ಅನೇಕ ದುಷ್ಟ ನಡಾವಳಿಗಳನ್ನು ಬುಡಸಮೇತ ಕಿತ್ತೆಸೆಯಲು ಸ್ತ್ರೀ ಶಿಕ್ಷಣವನ್ನು ಪ್ರಧಾನವಾಗಿ ಕಂಡುಕೊಳ್ಳಲಾಯ್ತು. ದೇಶೀಯ ಶಿಕ್ಷಣ ಕ್ರಮ ನಾಶವಾಗಿ ಇಂಗ್ಲಿಷ್ ಶಿಕ್ಷಣ ಪದ್ಧತಿ ಆರಂಭಗೊಂಡದ್ದು ಮಹಿಳೆಯರ ಪಾಲಿಗೆ ಹೊಸ ಹೊಂಗಿರಣವೇ ಸರಿ. ಅಕ್ಷರದ ಓದು-ಬರೆಹ ಕೇಳಿಸಿಕೊಳ್ಳುವಿಕೆಗೂ ಹೆಣ್ಣಿಗೆ ನಿಷೇಧವಿತ್ತು. ಇಡೀ ಶಿಕ್ಷಣ ವ್ಯವಸ್ಥೆಯಿಂದ ಮಹಿಳೆಯನ್ನು ದೂರ ಇಡಲಾಗಿತ್ತು. ಮುಂದೆ ಸ್ತ್ರೀ ಶಿಕ್ಷಣ ಮತ್ತು ಮಹಿಳಾ ಸಮಾನತೆಗಳು ಹೊಸ ಇತಿಹಾಸ ರೂಪಿಸುವಲ್ಲಿ ಬುನಾದಿಯಾಯ್ತು. ಈ ಸಂದರ್ಭದಲ್ಲಿ ಎರಡು ಅಂಶಗಳು ಪ್ರಮುಖವಾದವು. ಒಂದನೆಯದು ಹೆಣ್ಣು ಶಿಕ್ಷಣವನ್ನು ಪಡೆಯುವಂತಾದುದು, ಮತ್ತೊಂದು ಹೆಣ್ಣಿನ ಕುರಿತ ಹೊಸ ಚಿಂತನಾಕ್ರಮ ಆರಂಭಗೊಂಡುದು. ಇವುಗಳು ಮಹಿಳೆಯ ಬದುಕಿನಲ್ಲಿ ಹೊಸ ಹೊಂಗಿರಣ ಮೂಡಿಸಿದವು.

ಗಾಂಧೀಜಿಯವರಿಗೆ ಸ್ತ್ರೀ ಶಿಕ್ಷಣದಿಂದ ಸ್ತ್ರೀಶಕ್ತಿ ಹೆಚ್ಚುತ್ತದೆಂಬ ನಂಬಿಕೆ ಅಪಾರವಾಗಿತ್ತು. ಆದ್ದರಿಂದಲೇ ಸ್ತ್ರೀ ಶಿಕ್ಷಣ ಮತ್ತು ಸಮಾನತೆಯ ಕುರಿತು ಒತ್ತಿಹೇಳುತ್ತಾ ಮಹಿಳಾ ಶಕ್ತಿಯನ್ನು ತಮ್ಮ ಹೋರಾಟಕ್ಕೆ ಸಕ್ರಿಯವಾಗಿ ಬಳಸಿಕೊಳ್ಳಲು ಬಯಸಿದರು. ಹಾಗಾಗಿಯೇ ರಾಷ್ಟ್ರೀಯ ಚಳುವಳಿಯ ಅಂಗವನ್ನಾಗಿ ಸ್ತ್ರೀ ಶಿಕ್ಷಣವನ್ನು ಬೆಂಬಲಿಸಲಾಯ್ತು. ಅಂದು ಸ್ತ್ರೀ ಶಿಕ್ಷಣದಿಂದ ಹೆಣ್ಣನ್ನು ಒಳ್ಳೆಯ ತಾಯಿ ಮತ್ತು ಗೃಹಿಣಿಯನ್ನಾಗಿ ರೂಪಿಸುವ ಅಗತ್ಯವಿತ್ತು. ಕುಟುಂಬದಲ್ಲಿ ಹಾಗು ಪರಿಸರದಲ್ಲಿ ನಾಡು, ನುಡಿಯ ಬಗ್ಗೆ ಕಾಳಜಿ, ರಾಷ್ಟ್ರಪ್ರಜ್ಞೆ ಮತ್ತು ರಾಷ್ಟ್ರಪ್ರೇಮವನ್ನು ಮೂಡಿಸುವಲ್ಲಿ ಹೆಣ್ಣಿನ ಪಾತ್ರ ಪ್ರಮುಖವಾದುದೆಂಬ ಸತ್ಯದ ಅರಿವು ಗಾಂಧೀಜಿಯವರಿಗಿತ್ತು. ಈ ಎಲ್ಲಾ ಹೊಣೆಗಾರಿಕೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಆಕೆ ಶಿಕ್ಷಿತಳಾಗಬೇಕೆಂಬ ಹಂಬಲ ಅವರದಾಗಿತ್ತು. ಮಹಿಳೆ ಸ್ವಾವಲಂಬಿಯಾಗಬೇಕೆಂಬ ಮಹದಾಸೆ ಗಾಂಧೀಜಿಯವರದ್ದು. ಹೆಣ್ಣಿನ ಸ್ವಾವಲಂಬಿ ಬದುಕಿಗೆ ಶಿಕ್ಷಣ ಅಡಿಪಾಯ ಎಂಬ ಭಾವನೆಯಿಂದ ಕಾರ್ಯಪ್ರವೃತ್ತರಾಗಿ ನಿಂತರು. ಮಹಿಳಾ ಶಿಕ್ಷಣದ ಫಲವಾಗಿ ಮಹಿಳೆಯರು ರಾಷ್ಟ್ರೀಯ ಚಳುವಳಿಯ ಭಾಗವಾಗಿ ಸ್ತ್ರೀಶಕ್ತಿಯ ಬಿಡುಗಡೆಯ ಹಾಡು ಹಾಡಿದರು. ಸಾಂಪ್ರದಾಯಿಕತೆಯನ್ನು ಕಿತ್ತೆಸೆದು, ಮಹಿಳೆಯರು ತಮ್ಮನ್ನು ತಾವು ಸ್ಥಾಪಿಸಿಕೊಂಡರು. ಸ್ತ್ರೀಯರು ಶಿಕ್ಷಿತರಾದ್ದರಿಂದ ಅವರಲ್ಲಿ ಆತ್ಮವಿಶ್ವಾಸ ಮತ್ತು ಶೋಷಣೆಯ ವಿರುದ್ಧ ಹೋರಾಡುವ ಮನಸ್ಥಿತಿಗಳು ರೂಪುಗೊಂಡವು. ಇದರ ಫಲವಾಗಿ ಸ್ತ್ರೀ ಮುಕ್ತಿಯ ಕದ ತಟ್ಟಲಾಯ್ತು.

ಸ್ತ್ರೀ ಶಿಕ್ಷಣದ ಪ್ರಯತ್ನಗಳು ವಸಾಹತು ಕಾಲದಿಂದ ನಡೆಯುತ್ತಾ ಬಂದಿದ್ದರೂ ನಿರೀಕ್ಷಿತ ಫಲ ಸಾಧನೆ ಆಗಿಲ್ಲ. ಸ್ತ್ರೀ ಪುರುಷರ ನಡುವೆ ಶಿಕ್ಷಣದಲ್ಲಿ ಅಸಮಾನತೆ ಇಂದಿಗೂ ಉಳಿದಿರುವುದು ದುಃಖದ ಸಂಗತಿಯಾಗಿದೆ. ಪ್ರತಿಶತ ಸಂಖ್ಯೆಯಲ್ಲಿ ಮಹಿಳಾ ಅಕ್ಷರಸ್ಥರ ಸಂಖ್ಯೆ ಪುರುಷರಿಗಿಂತ ಗಣನೀಯವಾಗಿ ಕಡಿಮೆ ಇದೆ. ಮಹಿಳಾ

ಶಿಕ್ಷಣಕ್ಕೆ ತೊಡಕಾಗಿರುವ ಅಂಶಗಳನ್ನು ಗಮನಿಸಿದರೆ ಮುಖ್ಯವಾದುದು ನಮ್ಮಲ್ಲಿರುವ ಲಿಂಗಭೇದ ನೀತಿ ಹಾಗೂ ಮಹಿಳಾ ಬದುಕಿನ ಇಕ್ಕಟ್ಟುಗಳು ಪ್ರಮುಖವಾದವು. ಜನರಲ್ಲಿರುವ ಹೆಣ್ಣಿನ ಬಗೆಗಿನ ತಪ್ಪು ತಿಳುವಳಿಕೆಗಳಾದ `ಹೆಣ್ಣು ಕಲಿತು ಏನಾಗಬೇಕು ?' `ಹೆಣ್ಣು ಪರರ ವಸ್ತು' , `ಮದುವೆ ಹಾಗೂ ತಾಯ್ತನಗಳೆ ಅವಳಿಗೆ ಪ್ರಧಾನ' ಗಳಂತಹ ಗ್ರಹಿಕೆಗಳು ಸ್ತ್ರೀ ಶಿಕ್ಷಣಕ್ಕೆ ಅಡ್ಡಿ ಉಂಟುಮಾಡುತ್ತಿವೆ. ಮಹಿಳೆಯರ ಬದುಕಿನ ಜೈವಿಕ ಪಲ್ಲಟಗಳು ಶಿಕ್ಷಣಕ್ಕೆ ಅಡ್ಡಿಯಾಗಿವೆ. ಕುಟುಂಬದ ದಿನನಿತ್ಯದ ಅಗತ್ಯಗಳನ್ನು ಪೂರೈಸುವಲ್ಲಿ ಆಕೆಗೆ ವಿದ್ಯಾಭ್ಯಾಸಕ್ಕೆ ಬಿಡುವು ಸಿಗುವುದೇ ದುಸ್ತರವಾಗಿದೆ. ಹೆಣ್ಣು ಮದುವೆ, ತಾಯ್ತನ, ಅನಾರೋಗ್ಯಗಳಿಂದ ಬಳಲುತ್ತಾ ಬದುಕನ್ನು ಸವೆಸುತ್ತಿದ್ದಾಳೆ. ಶಿಕ್ಷಣವಿಲ್ಲದೆ ಮಹಿಳೆಯರು ಮೌಢ್ಯತೆಗೆ ಒಳಗಾಗಿ ಆತ್ಮವಿಶ್ವಾಸವನ್ನು ಕಳೆದುಕೊಂಡು ಬಳಲುತ್ತಿದ್ದಾರೆ. ಹಾಗಾಗಿಯೇ ಸರ್ಕಾರ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಕಾಳಜಿ, ಕಳಕಳಿ ವಹಿಸಿ ಅನೇಕ ರೀತಿಯ ಕಾರ್ಯಕ್ರಮಗಳ ಮೂಲಕ ವಿವಿಧ ಸೌಲಭ್ಯಗಳನ್ನು ನೀಡುತ್ತಾ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಆದರೂ ಗಣನೀಯ ಪ್ರಮಾಣದಲ್ಲಿ ಅದು ಪರಿಣಾಮ ಬೀರದಿರುವುದು ವಿಶಾದದ ಅಂಶವಾಗಿದೆ. ಮೊದಲು ಜನರಲ್ಲಿ ಅರಿವು ಮೂಡಿ ಅದರ ಮಹತ್ವ ತಿಳಿದು ಮನಸ್ಸುಗಳು ಬದಲಾದಾಗ ಮಾತ್ರ ಸ್ತ್ರೀಗೆ ಶಿಕ್ಷಣ ದೊರೆತು, ಸಮಾಜದಲ್ಲಿ ಸಮಾನತೆ ಮೂಡಲು ಸಾಧ್ಯವಾಗುತ್ತದೆಂಬುದು ನನ್ನ ಆಲೋಚನೆ.

## ಗ್ರಂಥ ಋಣ


1) ಡಾ. ಹೆಮಲತಾ ಹೆಚ್.ಎಂ. - ಮಹಿಳಾ ಅಧ್ಯಯನ : ಡಿ.ವಿ.ಕೆ.ಮೂರ್ತಿ, ಪ್ರಕಾಶನ ಮೈಸೂರು, 2007.
2) ಡಾ. ಗಾಯಿತ್ರಿ ನಾವಡ - ಮಹಿಳಾ ಸಂಕಥನ : ಕನ್ನಡ ಪುಸ್ತಕ ಪ್ರಾಧಿಕಾರ, 2003.
3) ಡಾ. ಗೀತಾ ಕೃಷ್ಣಮೂರ್ತಿ - ಮಹಿಳಾ ಹಕ್ಕುಗಳು : ಮಹಿಳಾ ಅಧ್ಯಯನ ಕೇಂದ್ರ, ಹಂಪಿ 2009.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ತುಮಕೂರು ಜಿಲ್ಲೆಯ ಕಣ ಸಂಸ್ಕೃತಿ.

**ಲಕ್ಷ್ಮೀಕಾಂತ**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-583276
ಮೊ.ಸಂ-9900389923, Email-llakshmikantha960@gmail.com

**ಪ್ರಸ್ತಾವನೆ.**

ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ 'ಕಣ' ಎಂಬುದು ಮಹತ್ವದ ಪಾತ್ರವನ್ನು ವಹಿಸಿದೆ. ಇದು ದೇವಾಲಯದಷ್ಟೇ ಪೂಜನೀಯವಾದ ಸ್ಥಾನವನ್ನು ಪಡೆದಿದೆ. 'ಕಣ' ಎಂಬುದು ಹೊಲ ಅಥವಾ ಗದ್ದೆಗಳಲ್ಲಿ ಧಾನ್ಯಗಳ ಒಕ್ಕಣೆಗಾಗಿ ಚೌಕಾಕಾರವಾಗಿ ಇಲ್ಲವೇ ವೃತ್ತಾಕಾರವಾಗಿ ರಚಿಸುವ ಅಂಗಳವಾಗಿದೆ. ಧಾನ್ಯಗಳ ಕೊಯ್ಲು ಮುಗಿದ ನಂತರ ಉಳಿದ ಪೈರಿನ ಕೂಳೆಗಳನ್ನು ಕೆತ್ತಿ ನೆಲವನ್ನು ಸಮತಟ್ಟಾಗಿಸಿಕೊಂಡು ಕಣವನ್ನು ನಿರ್ಮಿಸಲಾಗುತ್ತದೆ. ನಂತರ ನೀರಿನಿಂದ ನೆನೆಸಿ ದನಗಳಿಂದ ತುಳಿಸಿ ಸಗಣಿ ಬಗ್ಗಡದಿಂದ ಸಾರಿಸಲಾಗುತ್ತದೆ. ಈ ರೀತಿಯಾಗಿ ನಿರ್ಮಿತಗೊಂಡ ಕಣದ ಆವರಣದ ಮಧ್ಯಭಾಗದಲ್ಲಿ ವಿಶೇಷವಾಗಿ 'ಆಲ' ದ ಅಥವಾ 'ಕಕ್ಕೆ' ಮರದ ತೊಡೆ ಗಾತ್ರದ ಗೂಟವೊಂದನ್ನು ನಿಲ್ಲಿಸಲಾಗುತ್ತದೆ. ಇದು ನಾಲ್ಕೈದು ಅಡಿ ಎತ್ತರವಿದ್ದು ಇದನ್ನು 'ಮೇಟಿ ದೇವರು' ಎಂದು ಕರೆಯುತ್ತಾರೆ. ಇದಕ್ಕೆ ಪೂಜೆ ಸಲ್ಲಿಸಿದ ತರುವಾಯ ಕಣದ ಚಟುವಟಿಕೆಗಳು ಪ್ರಾರಂಭವಾಗುತ್ತವೆ.

ತುಮಕೂರು ಜಿಲ್ಲೆಯು ಬಯಲು ನಾಡಿನ ಪ್ರದೇಶ. ಈ ಜಿಲ್ಲೆಯ ಜನರು ಕೃಷಿಯನ್ನೆ ಮುಖ್ಯ ಕಸುಬನ್ನಾಗಿ ಅವಲಂಬಿಸಿದ್ದಾರೆ. ಇಂತಹ ಜಿಲ್ಲೆಯು ಕೃಷಿ ಚಟುವಟಿಕೆಯ ಪ್ರತಿಯೊಂದು ಹಂತದಲ್ಲಿಯೂ ತನ್ನದೇ ಆದ ವಿಶಿಷ್ಟ ಆಚರಣೆ, ಪೂಜಾ ವಿಧಿ ವಿಧಾನಗಳನ್ನು ರೂಢಿಸಿಕೊಂಡಿದೆ. ಹಾಗೆಯೇ ಇಂದಿಗೂ ಅವುಗಳನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ನೋಡಬಹುದು. ಇವು ನಮ್ಮ ಜನಪದರ ಬದುಕಿನ ಭಾಗವೇ ಆಗಿವೆ.

ತುಮಕೂರು ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗುವುದೇ 'ಹೊನ್ನಾರು' ಕಟ್ಟುವುದರ ಮೂಲಕ. ಇದು ಮುಂಗಾರಿನ ಮೊಟ್ಟ ಮೊದಲ ಉಳುಮೆಯಾಗಿರುತ್ತದೆ. ಮೊದಲ ಮಳೆ ಬಿದ್ದ ನಂತರ ಊರಿನ ಹಿರಿಯರೆಲ್ಲ ಸೇರಿ ಒಂದು ಜೊತೆ ಎತ್ತು, ನೇಗಿಲು, ನೊಗಗಳೊಡನೆ ಗ್ರಾಮದ ದೇವಾಲಯದಲ್ಲಿ 'ಪಿಳ್ಳಾರತಿ' (ಪಿಳ್ಳೇರಾಯ), ನೆಲಗಡಲೆ ಅಕ್ಕಿ, ಹಣ್ಣು ಕಾಯಿಗಳಿಂದ ಪೂಜಿಸಿ ಊರ ಸುತ್ತಲು ಒಂದು ಸುತ್ತು ದನಗಳಿಗೆ ಹೂಡಿದ ನೇಗಿಲು ನೊಗದೊಂದಿಗೆ ಪ್ರದಕ್ಷಿಣೆ ಹಾಕಿಸುತ್ತಾರೆ. ಏಕೆಂದರೆ ಊರಿಗೆ ಒಳ್ಳೆಯದಾಗಲಿ ಮತ್ತು ಫಸಲು ಉತ್ತಮವಾಗಿ ಬರಲಿ ಎಂಬುದು ಇದರ ಹಿಂದಿನ ಆಶಯ. ಈ ಕಾರಣಕ್ಕೆ ಗ್ರಾಮದ ಸುತ್ತು ಬರುತ್ತಾರೆ. ತದನಂತರ ಗ್ರಾಮದ ಮುಖ್ಯಸ್ಥ ಅಥವಾ ಹೊನ್ನಾರು ಕಟ್ಟಿಸಿದ ವ್ಯಕ್ತಿಯ ಹೊಲದಲ್ಲಿ ನಾಲ್ಕೈದು ಸುತ್ತು ಉಳುವ ಮೂಲಕ ಈ ಆಚರಣೆಯು ಮುಕ್ತಾಯವಾಗುತ್ತದೆ. 'ಹೊನ್ನಾರು' ರೈತರಿಗರ ಲಕ್ಷ್ಮಿಯ ಸ್ವರೂಪವಾದ ಕಾರಣ ಕೃಷಿಯಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ.

ಇದು ಜಿಲ್ಲೆಯ ಒಟ್ಟಾರೆ 'ಹೊನ್ನಾರು' ಕಟ್ಟುವ ಆಚರಣೆಯಾದರೆ, ಕುಣಿಗಲ್ಲು ಮೊದಲಾದ ತಾಲ್ಲೂಕುಗಳಲ್ಲಿ 'ಯುಗಾದಿ' ಹಬ್ಬದ 'ವಸ್ತಡಕಿ' ನ ದಿನ 'ಹೊನ್ನಾರು' ಕಟ್ಟುವ ರೂಢಿ ಇದೆ. 'ವಸ್ತಡಕಿ' ನ

ದಿನವೇ ಹೊನ್ನಾರು ಕಟ್ಟಿದರೆ ಶಾಸ್ತ್ರ, ದಿನ, ವಾರ, ನಕ್ಷತ್ರಗಳನ್ನು ಕೇಳುವುದಿಲ್ಲ. ಈ ದಿನವನ್ನು ಹೊರತುಪಡಿಸಿ ಬೇರೆ ದಿನಗಳಲ್ಲಾದರೆ ದಿನ, ವಾರ, ನಕ್ಷತ್ರ ಹಾಗೂ ಯಾರ ಹೆಸರಿನಲ್ಲಿ 'ಹೊನ್ನಾರು' ಕಟ್ಟಬೇಕು ಎಂಬುದನ್ನು ಮೊದಲೆ ನಿರ್ಧರಿಸಿರುತ್ತಾರೆ. ಇದರ ಜೊತೆಗೆ ಯಾವ ಬಣ್ಣದ ಎತ್ತುಗಳನ್ನು ಕಟ್ಟಬೇಕು ಎಂಬ ಅಂಶಗಳನ್ನು ಕೇಳಿ 'ಹೊನ್ನಾರು' ಕಟ್ಟುವ ಸಂಪ್ರದಾಯವಿದೆ. ಯಾವುದೇ ಕಾರಣಕ್ಕು 'ಪರ್ಸುಳಿ' ಇರುವ ಎತ್ತುಗಳನ್ನು ಹೊನ್ನಾರಿಗೆ ಕಟ್ಟುವುದಿಲ್ಲ. ಈ ಸುಳಿ ಇರುವ ರಾಸುಗಳನ್ನು ಸಾಕಿದರೆ ಆ ಮನೆ ನಾಶವಾಗುತ್ತದೆ ಎಂಬ ನಂಬಿಕೆ ಇದೆ. 'ಕೀಳ್ ಸುಳಿ' ಮತ್ತು 'ಧವನ ಸುಳಿ' ಎಂಬ ಸುಳಿ ನಇರುವ ರಾಸುಗಳು ಉತ್ತಮವಾದವು. ಇವುಗಳನ್ನು ಹೊನ್ನಾರಿಗೆ ಕಟ್ಟುವರು. ಜೊತೆಗೆ ಒಂದೇ ಬಣ್ಣದ ಎತ್ತುಗಳನ್ನು ಕಟ್ಟುವರು. ಇದರ ತರುವಾಯ 'ಬೆನಕ' ನನ್ನು ಪೂಜಿಸಿ, ಊರ ಸುತ್ತಲು ಒಂದು ಸುತ್ತು ಬಂದ ನಂತರ ಸಮೀಪದ ಹೊಲದಲ್ಲಿ ಮೂರ್ನಾಲ್ಕು ಸುತ್ತು ಉಳುತ್ತಾರೆ.

ವೈಯಕ್ತಿಕವಾಗಿ ಉಳುಮೆಗೆ ತೊಡಗುವ ರೈತರು ತಮ್ಮ ಮನೆಗಳಲ್ಲಿನ ನೇಗಿಲು, ನೊಗಗಳನ್ನು ತೊಳೆದು ಮನೆಯಲ್ಲಿಟ್ಟು ಪೂಜಿಸಿ ನಂತರ ಉಳುಮೆಗೆ ತೊಡಗುವರು. 'ಬಿತ್ತನೆ' ಕಾರ್ಯವು 'ಹೊನ್ನಾರಿ' ನಂತೆಯೆ ಬಹಳ ಪ್ರಮುಖವಾದುದು. ಹೊಲಗಳಲ್ಲಿ ಬಿತ್ತನೆ ಮಾಡುವ ಮೊದಲು ಗರಿಕೆ ಪತ್ರೆ ಮತ್ತು ಸಗಣಿ ಉಂಡೆಯಿಂದ 'ಪಿಳ್ಳೇರಾಯ' ನನ್ನು ಮಾಡಿ ಸಮೀಪದ ದೇವಾಲಯಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಂತರ ಬಿತ್ತನೆ ಮಾಡಲು ತಂದಿರುವ 'ಬೀಜದ ರಾಗಿ' ಯಲ್ಲಿ ಸ್ವಲ್ಪವನ್ನು ದೇವಾಲಯದ ಬಳಿ ಹರಡಿ, ಅದರ ಮೇಲೆ ಪಿಳ್ಳೇರಾಯನನ್ನು ಇಟ್ಟು ಪೂಜಿಸಿದ ಮೇಲೆ ಹೊಲಗಳಲ್ಲಿ ಬಿತ್ತನೆ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಇದನ್ನು ಕೆಲವು ಭಾಗಗಳಲ್ಲಿ 'ಹೊಲ ಚೆಲ್ಲುತ್ತೇವೆ' ಎಂದರೆ ಮತ್ತೆ ಕೆಲವು ಕಡೆ 'ಬಿತ್ತುತ್ತೇವೆ' ಎಂಬ ಪದವನ್ನು ಬಳಸುತ್ತಾರೆ. ಈ ಸಂದರ್ಭದಲ್ಲಿ ನೇಗಿಲು, ನೊಗ, ಹಗ್ಗ, ಮಿಣಿ, ಜಿಗಣಿ, ಮೇಣಿ, ಸಡ್ಡೆ, ಕೂರಿಗೆ, ಹಲುವೆ, ಕುಂಟೆ, ಈಚ, ಹೆಗ್ಗುಂಟೆ, ಮುಳ್ಳಲುವೆ ಮೊದಲಾದ ಪರಿಕರಗಳು ಬಳಕೆಗೊಳ್ಳುತ್ತವೆ. ಬಿತ್ತನೆಯಾದ ಹನ್ನೆರಡನೆಯ ದಿನಕ್ಕೆ ರಾಗಿ ಪೈರಿಗೆ 'ಕುಂಟೆ' ಹೊಡೆಯಲಾಗುತ್ತದೆ.

ಇದರ ತರುವಾಯ 'ಹಸಿರು ಹಾಕುವ' ಆಚರಣೆ ನಡೆಯುತ್ತದೆ. ರಾಗಿ ಬೆಳೆಯ 'ಗರಿ' ಕಾಲದಲ್ಲಿ ಅಂದರೆ ಉತ್ತರೆ ಮಳೆಯ ಸಮಯದಲ್ಲಿ, ಮತ್ತೆ ಕೆಲವು ಕಡೆ 'ಮಾರ್ನಾಮಿ' ಹಬ್ಬದ ಮರುದಿನ ಈ ಆಚರಣೆಯನ್ನು ಮಾಡುತ್ತಾರೆ. ಅಂದು ಕುರಿ, ಕೋಳಿ, ಮೇಕೆ ಮೊದಲಾದವುಗಳನ್ನು ಬಲಿ ಕೊಟ್ಟು ಅದರ ರಕ್ತವನ್ನು ಎಡೆ ಅನ್ನದಲ್ಲಿ ಬೆರೆಸಿಕೊಂಡು ಹೊಲದ ಬೆಳೆಯ ಸುತ್ತಲು ಎರಚುತ್ತಾರೆ. ಈ ಸಂದರ್ಭದಲ್ಲಿ ಕೆಲವೆಡೆ 'ಬೆಚ್ಚಿನ ಕಡ್ಡಿ' ನಿಲ್ಲಿಸುವ ಸಂಪ್ರದಾಯವಿದೆ. ಯಾವುದೇ ರೋಗಗಳು ಹೊಲದ ಬೆಳೆಗಳಿಗೆ ತಗುಲದೆ ಇರಲಿ ಎಂಬ ಕಾರಣಕ್ಕೆ ರಕ್ತ ಬೆರೆಸಿದ ಅನ್ನವನ್ನು ಎರಚುತ್ತಾರೆ. ಜೊತೆಗೆ ಈ ರೋಗವನ್ನು ಉಂಟು ಮಾಡುವ 'ಸೀಡೇ ದೇವರ' ಶಾಂತಿಗಾಗಿಯೂ ಈ ಕಾರ್ಯ ನಡೆಯುತ್ತದೆ. ಹೊಲಕ್ಕೆ ಸೀಡೇ ಏಳದಿರಲಿ ಎಂದು ಈ ದೈವವನ್ನು ಪೂಜಿಸಿ ನಂತರ ಹೊಲಕ್ಕೆ 'ಹಾರ' ಕೊಟ್ಟಂತೆ ಬೆಚ್ಚಿನ ಕಡ್ಡಿ ನಿಲ್ಲಿಸುತ್ತಾರೆ.

ಕುಯ್ಲಿನ ಸಂದರ್ಭದ ಆಚರಣೆಗಳಲ್ಲಿ, ಬೆಳೆಯನ್ನು ಕುಯ್ಯುವ ಮೊದಲು 'ಹೊಲ ಹೆಚ್ಚು ಮಾಡುವ' ಆಚರಣೆಯನ್ನು ಮಾಡಲಾಗುತ್ತದೆ. ಕಾರಣ ಹೆಚ್ಚಿಗೆ ರಾಗಿ ಮತ್ತು ಹುಲ್ಲು ಆಗಲಿ ಎಂಬುದು. ಈ ಸಮಯದಲ್ಲಿ ಮೊಸರು ಅನ್ನವನ್ನು ಎಡೆ ಇಟ್ಟು, ಮಣ್ಣು ಗುಡ್ಡೆ ಮಾಡಿ ಅದರ ಮೇಲೆ ಐದು ಅಥವಾ ಒಂಭತ್ತು ಬೆನಕಗಳನ್ನು ಪ್ರತಿಷ್ಠಾಪಿಸುತ್ತಾರೆ. 'ಅಣ್ಣೆ' ಹೂ ಮೊದಲಾದ ಹೂವುಗಳನ್ನು ಹಾಕಿ, 'ಬಳೆ ಬಂಗಾರ' , ಹೊಲ ಕುಯ್ಯುವ ಕುಡ್ಲು (ಕುಡುಗೋಲು) ಗಳನ್ನು ಇಟ್ಟು ಪೂಜಿಸುತ್ತಾರೆ. ಪ್ರಕೃತಿ ಆರಾಧಕರಾಗಿರುವ ಜನಪದರು ತಮ್ಮ ಸುತ್ತಲಿನ ಮರ, ಗಿಡ, ಕಲ್ಲು, ಮಣ್ಣುಗಳಲ್ಲಿಯೆ ದೈವವನ್ನು ಕಾಣುವಂತಹವರು. ಆ ಕಾರಣವಾಗಿ ಅವರ ಬದುಕಿನ ಪ್ರತಿ ಸಂದರ್ಭದಲ್ಲಿಯೂ ಇವು ಪ್ರಮುಖವಾದ ಸ್ಥಾನವನ್ನು ಪಡೆದಿವೆ. ನಂತರ ಮೂರು ಇಡಿಯಷ್ಟು ಬೆಳೆಯನ್ನು ಕುಯ್ದು ಇಟ್ಟು, ನಂತರದಲ್ಲಿ ಕಟಾವನ್ನು ಪ್ರಾರಂಭಿಸುತ್ತಾರೆ. ಕಟಾವಿನ ಕೊನೆಯಲ್ಲಿ ಮೂರು ಪೈರಿನ ದಂಟುಗಳನ್ನು ಬಿಟ್ಟು ಅವುಗಳಿಗೆ 'ಅಣ್ಣೆ' ಹೂ, 'ಉಚ್ಚಳ್ಳು' ಹೂ ಮೊದಲಾದ ಮೂರು ಬಗೆಯ ಹೂಗಳಿಂದ

ಪೂಜಿಸಲಾಗುತ್ತದೆ. ಇದಕ್ಕೆ 'ಬೆಳು ಮುಂಬು' ಬಿಡುವುದು ಎನ್ನುತ್ತಾರೆ. ಇದಕ್ಕೆ ಕಾರಣ ಕಣಜ ತುಂಬಲಿ ಎಂಬುದು. ಈ ಸಂದರ್ಭದಲ್ಲಿ ಹೊಲ ಕುಯ್ಯುವ ಕುಡ್ಲಿನ ಮೂತಿಯಿಂದ ಹೊಲದಲ್ಲಿ ನೆಲವನ್ನು ಬಗೆದು ತೆನೆಯನ್ನು ಉಜ್ಜಿ ಬಂದ ರಾಗಿಯನ್ನು ಅದರಲ್ಲಿ ಹಾಕಿ, ಹೂಗಳಿಂದ ಪೂಜಿಸುತ್ತಾರೆ. ನಮ್ಮ ಜನಪದರಲ್ಲಿ 'ಅಣ್ಣೆ' ಹೂವು 'ಕಣಜದ ದೇವರು' ಎಂಬ ನಂಬಿಕೆ ಇರುವ ಕಾರಣವಾಗಿ ಇದಕ್ಕೆ ಮಹತ್ವದ ಸ್ಥಾನವಿದೆ. ಅಲ್ಲದೆ ಆ ಹೂವಿನ ರಚನೆ ಕೂಡ ಇದಕ್ಕೆ ಕಾರಣವಾಗಿರಬಹುದು. ಈ ಹಿನ್ನೆಲೆಯಲ್ಲಿ ಕೃಷಿಯ ಎಲ್ಲ ಪೂಜೆಯ ಸಂದರ್ಭಗಳಲ್ಲಿಯೂ ಪ್ರಮುಖವಾಗಿ ಬಳಕೆಗೊಳ್ಳಲ್ಪಡುತ್ತದೆ.

ಕಟಾವಿನ ಬೆಳೆ ಒಣಗಿದ ನಂತರ ಸಣ್ಣ ಸಣ್ಣ ಕಂತೆಗಳನ್ನಾಗಿ ಕಟ್ಟಿ 'ಮೆದೆ' ಅಥವಾ 'ಬಣವೆ' ಯನ್ನು ಹಾಕುತ್ತಾರೆ. ಈ ರೀತಿ ಹಾಕುವಾಗ ಕೊನೆಯ ಕಂತೆಗೆ ಐದು ಅಥವಾ ಒಂಭತ್ತು ಬೆನಕಗಳನ್ನು ಇಟ್ಟು, 'ಅಣ್ಣೆ' ಹೂ ಮೊದಲಾದ ಹಲವು ಜಾತಿಯ ಹೂಗಳಿಂದ ಹಾಕಿ ಮೆದೆಗೆ ಸೇರಿಸುತ್ತಾರೆ. ಇದರ ಜೊತೆಗೆ ತುಮಕೂರು ಜಿಲ್ಲೆಯ ಕುಣಿಗಲ್ಲು, ತುರುವೇಕೆರೆ ತಾಲ್ಲೂಕಿನ ಪ್ರದೇಶಗಳಲ್ಲಿ ಸಂಕ್ರಾಂತಿ ಹಬ್ಬದ ದಿನ ಈ ಮೆದೆಗಳಿಗೆ 'ಪತ್ರೆ' ಹಾಕುವ ಸಂಪ್ರದಾಯವಿದೆ. ಅಂದು ಎಕ್ಕದ ಗಿಡದ ಎಲೆ, ದೊಡ್ಡ ಪತ್ರೆ ಹಾಗೂ ಬಾಡು ಬಕ್ಕ ಇಲ್ಲವೆ ಎಲಚಿ ಗಿಡ ಈ ಮೂರು ರೀತಿಯ ಪತ್ರೆಯನ್ನು ಹಾಕುವ ರೂಢಿ ಇದೆ. ಕೊರಟಗೆರೆ ತಾಲ್ಲೂಕಿನ ಹಳ್ಳಿಗಳಲ್ಲಿ ತೆನೆಯನ್ನಷ್ಟೆ ಕುಯ್ಯುತ್ತಾರೆ. ನಂತರದ ದಂಟನ್ನು ಕುಯ್ದು ಮೆದೆಗಳಿಗೆ ಹಾಕಿಕೊಳ್ಳುತ್ತಾರೆ.

ಈ ಎಲ್ಲ ಕೆಲಸಗಳು ಮುಗಿದ ಮೇಲೆ ಪ್ರಾರಂಭವಾಗುವುದೆ 'ಕಣ' ದ ಕೆಲಸ. ತುಮಕೂರು ಜಿಲ್ಲೆಯ ಕಣ ಸಂಸ್ಕೃತಿಯು ವಿಶಿಷ್ಟವಾದದ್ದು. ಈ ಜಿಲ್ಲೆಯ ಮುಖ್ಯ ಬೆಳೆ 'ರಾಗಿ' ಯಾದ ಕಾರಣವಾಗಿ, ಅದನ್ನು 'ಒಕ್ಕಣೆ' ಮಾಡಲು 'ಕಣ' (ಧಾನ್ಯಗಳನ್ನು ಒಕ್ಕುವುದಕ್ಕಾಗಿ ಸಿದ್ಧಪಡಿಸಿದ ಸ್ಥಳ) ಬಹಳ ಪ್ರಮುಖವಾಗಿರುವುದರಿಂದಾಗಿ ಕಣ ಸಂಸ್ಕೃತಿ ಇಂದಿಗೂ ಜೀವಂತವಾಗಿದೆ. ಹೊಲ ಕುಯ್ಯುವ ಸಂದರ್ಭದಲ್ಲಿಯೇ ಕಣದ ಜಾಗವನ್ನು ಮೊದಲೆ ನಿರ್ಧರಿಸಿದ್ದು, ಹೊಲ ಕಟ್ಟಿದ ನಂತರ ಆ ಜಾಗದಲ್ಲಿಯೆ ಬಣವೆಯನ್ನು ಹಾಕುತ್ತಾರೆ. ಬಹುತೇಕ ಒಂದೇ ಜಾಗದಲ್ಲಿಯೇ ಪ್ರತಿ ವರ್ಷ ಕಣವನ್ನು ಮಾಡುತ್ತಾರೆ. ಕಾರಣ ಆ ಜಾಗ ಗಟ್ಟಿಯಾಗಿರುತ್ತದೆಂದು. 'ಕಣ' ಕ್ಕೆ ನಿರ್ಧಾರವಾದ ಈ ಜಾಗದಲ್ಲಿನ ರಾಗಿ, ಜೋಳದ 'ಕೂಳೆ' ಗಳನ್ನು ಕೆತ್ತಿ ಸ್ವಚ್ಛಗೊಳಿಸುತ್ತಾರೆ. ನಂತರ ನೀರನ್ನು ಹಾಕಿ ದನಗಳಿಂದ ತುಳಿಸಿ, ಹಲಗೆ ಹೊಡೆದು ಸಮ ಮಾಡುತ್ತಾರೆ. ಇದಕ್ಕೆ 'ಕಣ' ಎಂಬ ಹೆಸರನ್ನಿಟ್ಟು ಇದರ ಮಧ್ಯಭಾಗದಲ್ಲಿ 'ಮೇಟಿ' ಯನ್ನು ನೆಡುತ್ತಾರೆ. ಇದು ಕಣದ 'ಗಂಡ' ನೆಂಬ ನಂಬಿಕೆ ರೈತರಲ್ಲಿದೆ. ಆಲ ಅಥವಾ ಬೇವಿನ ಮರದ ಕಡ್ಡಿ (ಉದ್ದನೆಯ ತುಂಡು) ಗಳನ್ನು ಮೇಟಿಯಾಗಿ ನೆಡುವರು.

'ಮೇಟಿ' ಯನ್ನು ನೆಟ್ಟ ನಂತರ ಕಣದ ಒಂದು ಮೂಲೆಯಲ್ಲಿ 'ಬಗ್ಗಡದ ಗುಂಡಿ' ಯನ್ನು ತೋಡಿ ಅದರಲ್ಲಿ ನೀರು ಮತ್ತು ಸಗಣಿಗಳನ್ನು ಮಿಶ್ರಣ ಮಾಡಿ ವಾರಾನುಗಟ್ಟಲೆ ಕೊಳೆಯಲು ಬಿಡುತ್ತಾರೆ. ಹುಲ್ಲು ಬಡಿಯುವ ಎರಡು ದಿನ ಮೊದಲು ಕಣವನ್ನು ಸಾರಿಸಿ ಒಣಗಲು ಬಿಡುತ್ತಾರೆ.

ಕಣ ಒಣಗಿದ ಮೇಲೆ ಹುಲ್ಲು ಬಡಿಯುವ ಕೆಲಸಗಳು ಆರಂಭಗೊಳ್ಳುತ್ತವೆ. ಹುಲ್ಲನ್ನು ಬಡಿಯಲು ಕಲ್ಲಿನ ಗುಂಡುಗಳನ್ನು ಬಳಸುತ್ತಾರೆ. ರಾಗಿ ಹುಲ್ಲನ್ನು ಹರಡಿ ಅದರ ಮೇಲೆ ಗುಂಡನ್ನು ಒಡೆಯುತ್ತಾರೆ. ನಂತರ 'ನೆರಗೋಲಿ' ನ ಸಹಾಯದಿಂದ ರಾಗಿ ಬೇರ್ಪಟ್ಟ ಹುಲ್ಲನ್ನು ತೆಗೆದು ಕಣದಲ್ಲಿಯೆ ಒಂದು ಕಡೆ 'ಸಾರ್ವೆ' ಹಾಕುತ್ತಾರೆ. ಆಮೇಲೆ ಹೊರೆ ಕಟ್ಟಿ ಮೆದೆಗೆ ಹಾಕುತ್ತಾರೆ. ನಂತರ 'ಪತ್ರೆ' ಯನ್ನು ಹೊಡೆದುಕೊಂಡು 'ದೊಡ್ಡ ಗಾಬ' ನ್ನು ಪ್ರತ್ಯೇಕಿಸಿ ಗುಡ್ಡೆ ಮಾಡಲಾಗುತ್ತದೆ. ನಂತರ 'ಉಬ್ಬಲು' ಮಿಶ್ರಿತ 'ರಜ' ವನ್ನು (ಸಣ್ಣ ಗಾಬು) ಮಧ್ಯಭಾಗದಲ್ಲಿ ರಾಶಿ ಮಾಡುತ್ತಾರೆ.

ಸಂಜೆಯ ಹೊತ್ತಿನಲ್ಲಿ ಕಣದ ಕೆಲಸ ಮುಗಿಸಿ ಹೊರಬರುವಾಗ 'ಕಾಲುಗಟ್ಟುವ' ನಿಯಮವಿದೆ. 'ಕೊಂಗ' ವನ್ನು ಕೈಯಲ್ಲಿಡಿದು ರಾಗಿಯಿಂದ ಒಂದು ಹಿಡಿ ತೆಗೆದುಕೊಂಡು 'ಕೊಂಗ' ದಿಂದ ಮೂರು ನಾಮಗಳನ್ನು

ಬರೆದು ರಾಶಿಯನ್ನು ಸುತ್ತು ಬರುತ್ತಾರೆ. ನಂತರ ಎಲ್ಲರು ಕಣದಿಂದ ಹೊರ ಹೋಗುತ್ತಾರೆ. ಆದರೆ ರಾತ್ರಿಗೆ ನಾಲ್ಕೈದು ಜನ ಬಂದು ಕಣದಲ್ಲಿಯೇ ಉಳಿದುಕೊಳ್ಳುತ್ತಾರೆ. (ಕಾವಲು ಕಾಯುತ್ತಾರೆ) ಕಣದ ಪಕ್ಕದಲ್ಲಿಯೇ ಹುಲ್ಲಿನಲ್ಲಿ ಗೂಡು ಮಾಡಿಕೊಂಡು ಒಕ್ಕಣೆ ಮುಗಿಯುವವರೆಗೂ ಎಲ್ಲ ರಾತ್ರಿಗಳಲ್ಲೂ ಇಲ್ಲೆ ಇರುತ್ತಾರೆ. ಕೆಲವರು ಅಡುಗೆಯನ್ನು ಸಹ ಇಲ್ಲಿಯೆ ಮಾಡಿಕೊಳ್ಳುತ್ತಾರೆ.

ರಾಶಿಯಾದ ತರುವಾಯ 'ಕುದುರೆ' ಯ (ರಜ ತೂರಲು ಬಳಸುವ ಒಂದು ಹಲಗೆಗೆ ಎದುರು ಬದುರು ಜೋಡಿಸುವ ಕವಲುಗಳುಳ್ಳ ಎರಡು ಮರಗಳ ಸಾಧನ) ಸಹಾಯದಿಂದ 'ತೂರ' ಲು ಪ್ರಾರಂಭಿಸುತ್ತಾರೆ. ಈ ರೀತಿ ತೂರಿದ ನಂತರ ರಾಗಿಯಿಂದ ಬೇರ್ಪಡುವ 'ಹೊಟ್ಟ' ನ್ನು 'ಉಬ್ಬಲು' ಎಂತಲು, ನುಣ್ಣನೆಯ ಮಣ್ಣನ್ನು 'ಗೌರಮ್ಮ' ಎಂತಲೂ ಕರೆಯುವರು. 'ಕಡ್ಡಿ ಜರಡಿ' ಯಿಂದ ಬೇರ್ಪಡುವ ರಾಗಿಯ ಸಣ್ಣ ಕಡ್ಡಿಗಳನ್ನು 'ನಾಮದ ಕಡ್ಡಿ' ಎನ್ನುವರು. 'ಗುನಿ' ಯನ್ನು ತೂರಿದ ನಂತರ 'ಬಂಡಾಡಿ' (ಜರಡಿಯಾಡಿ) 'ರಜ' ವನ್ನು 'ನಿಲುವು' ಎತ್ತುತ್ತಾರೆ. ನಂತರ ಅದನ್ನು ಕಾಲುಗಟ್ಟಿ, 'ಸಣ್ಣಕ್ಕಿ' , 'ಗುನಿ' ಹಾಗೂ 'ಮುಂದಂಡೆ' ಗಳನ್ನು ಸ್ವಚ್ಛಗೊಳಿಸಿಕೊಳ್ಳುವರು. ಕಣದ ಸಂದರ್ಭದಲ್ಲಿ 'ಮೊರ' ವನ್ನು 'ಕೊಂಗ' ಎಂದು, 'ಪೊರಕೆ' ಯನ್ನು 'ಇಡುಗ್ಲು' ಎಂದು, 'ಗಾಳಿ' ಯನ್ನು 'ವಾಯು ದೇವರು' ಎಂಬ ಹೆಸರುಗಳಿಂದ ಕರೆಯುವರು. ರಜವನ್ನು ಸ್ವಚ್ಛಗೊಳಿಸುವಾಗ ವಾಯುದೇವರನ್ನು ಈ ರೀತಿಯಾಗಿ ಆಹ್ವಾನಿಸುವರು. 'ಹೈಲ್ಗ ಸಾಮಿ ಹೆಬ್ಬೈಲ್ಗ, ಗಾಳಿ ದೇವರು ಬಂದು ಧೂಳು ದೇವರನ್ನು ಹೊತ್ಕೊಂಡು ಹೋಗ' .

ಇದಾದ ಮೇಲೆ ನಡೆಯುವುದೇ ರಾಶಿ ಪೂಜೆ. 'ರಜ' ವನ್ನು ಒಂದು ಕಡೆ 'ಗುಡ್ಡೆ' ಮಾಡಿ 'ಕಾಲುಗಟ್ಟಿ' ನಂತರ ಉಬ್ಬಲು ಗಡ್ಡೆ, ಗುನಿಗಳನ್ನು ರಾಶಿ ಮಾಡಿ ಅವುಗಳಿಗೆ ಅರಿಶಿಣ, ಕುಂಕುಮ ಇಟ್ಟು, 'ಕಕ್ಕೆ' ಸೊಪ್ಪಿನ 'ಪತ್ರೆ ' ಯನ್ನು ಇಡಲಾಗುತ್ತದೆ. ಕಣದಲ್ಲಿ ರಾಶಿ ಪೂಜೆ ಮಾಡುವಾಗ 'ಕಣದ ಭೂತದ ದೇವರು' ಮಾಡಿ ಕಕ್ಕೆ ಪತ್ರೆಯಿಂದ ಪೂಜಿಸುತ್ತಾರೆ. ಇದು ಎಲ್ಲ ದೇವರುಗಳಿಗೂ ಬಹಳ ಶ್ರೇಷ್ಠವಾದ ಪತ್ರೆಯಾಗಿರುವ ಕಾರಣವಾಗಿ ಕಕ್ಕೆ (ಇದಕ್ಕೆ 'ಬ್ಯಾಟೆ ಪತ್ರೆ' ಎಂಬ ಮತ್ತೊಂದು ಹೆಸರೂ ಇದೆ) ಪತ್ರೆಯನ್ನು ಬಳಸುತ್ತಾರೆ. 'ಕುದುರೆ' , 'ಗುಂಡು' ಗಳಿಗೆ ಕಕ್ಕೆ ಪತ್ರೆ, ಅರಿಶಿಣ ಕುಂಕುಮ ಇಟ್ಟು ರಾಶಿಗೆ ಹಲವು ಬಗೆಯ ಹೂವು, ಅರಿಶಿಣ, ಕುಂಕುಮಗಳಿಂದ ಪೂಜಿಸಿ ಅವರವರ ಶಕ್ತ್ಯಾನುಸಾರ 'ಚರುಪು' ಮಾಡಿಸುವ ಪರಿಪಾಠಗಳಿವೆ. ಇದು ಕಣದ ಕೆಲಸಗಳ ಅಂತಿಮ ಘಟ್ಟವಾಗಿದ್ದು, ಕೊನೆಯಲ್ಲಿ ರಜವನ್ನು ಚೀಲಗಳಲ್ಲಿ ತುಂಬಿಕೊಂಡು ಮನೆಗಳಿಗೆ ಒಯ್ಯುತ್ತಾರೆ. ಈ ರೀತಿ ತೆಗೆದುಕೊಂಡು ಹೋಗುವಾಗ 'ರಜ' ದ ತಳವನ್ನು ಸಂಪೂರ್ಣವಾಗಿ ಖಾಲಿ ಮಾಡದೆ, ತಳದಲ್ಲಿ ಸ್ವಲ್ಪ ರಾಗಿಯನ್ನು ಬಿಟ್ಟು ಮಾರನೆಯ ದಿನ ಅದನ್ನು ತೆಗೆದುಕೊಂಡು ಹೋಗುತ್ತಾರೆ. ಇದರೊಂದಿಗೆ ಕಣ ಸಂಬಂಧಿ ಆಚರಣೆಗಳು ಮುಕ್ತಾಯಗೊಳ್ಳುತ್ತವೆ.

## ಬದಲಾದ ಸಂದರ್ಭದಲ್ಲಿ ಕಣ ಸಂಸ್ಕೃತಿ

'ಆರಂಭಕ್ಕೆ ಆಚಾರವಿಲ್ಲವಂತೆ' ಎಂಬ ಗಾದೆ ಮಾತಿನಂತೆ ಇಂದು ಆಧುನಿಕತೆಯ ಕಾರಣವಾಗಿ ಹಾಗೂ ಬದಲಾದ ಮಾನವನ ಜೀವನ ಶೈಲಿಯ ಪರಿಣಾಮವಾಗಿ ಕಣ ಸಂಸ್ಕೃತಿ ಬದಲಾವಣೆ ಹಾಗೂ ಅವನತಿಯ ಹಾದಿಯಲ್ಲಿರುವುದನ್ನು ಗಮನಿಸಬಹುದು. ಇದಕ್ಕೆ ಪ್ರಮುಖವಾಗಿ ಎರಡು ಕಾರಣಗಳಿವೆ. 1)ರಸ್ತೆ ಒಕ್ಕಣೆ 2)ರಾಗಿ ಒಕ್ಕುವ ಯಂತ್ರಗಳ ಬಳಕೆ

**ರಸ್ತೆ ಒಕ್ಕಣೆ** : ಇದು ಕಳೆದ ಆರು-ಏಳು ವರ್ಷಗಳಿಂದ ರೂಢಿಗೆ ಬಂದಿದೆ. ಒಕ್ಕಣೆಗೆ ಗುಂಡು ಬಳಸುತ್ತಿದ್ದ ರೈತರು ಕಣದಲ್ಲಿಯೇ ಗುಂಡಿನ ಬದಲು, ಟ್ರ್ಯಾಕ್ಟರ್‌ಗಳಿಂದ ಒಕ್ಕಣೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಶೀಘ್ರವಾಗಿ ಒಕ್ಕಣೆ ಮಾಡಿಕೊಳ್ಳುವುದು ಇದರ ಹಿಂದಿನ ಉದ್ದೇಶ. ಮೊದಲು ನಾಲ್ಕೈದು ಕುಟುಂಬಗಳು ಒಂದು ಕಣದಲ್ಲಿ ವಾರಾನುಗಟ್ಟಲೆ ಒಕ್ಕಣೆಯಲ್ಲಿ, ಇಪ್ಪತ್ತು-ಮೂವತ್ತು ಜನ ಕೆಲಸ ಮಾಡುತ್ತಿದ್ದರು. ಟ್ರ್ಯಾಕ್ಟರ್ ಬಳಕೆಯಿಂದ

ಮೂರ್ನಾಲ್ಕು ದಿನಗಳಲ್ಲಿ ಒಕ್ಕಣೆ ಮುಗಿಯುವ ಹಂತಕ್ಕೆ ಬಂದಿತು. ಮತ್ತೆ ಕೆಲವರು ಊರಿನಲ್ಲಿ ಹಾದು ಹೋಗಿರುವ ಡಾಂಬರ್ ರಸ್ತೆಗಳಿಗೆ ಬೆಳಗಿನ ಜಾವವೆ ಹುಲ್ಲನ್ನು ಹರಡಿ ಸಂಜೆಯವರೆಗೂ ಬಿಟ್ಟು, ಅದರ ಮೇಲೆ ವಾಹನಗಳು ಓಡಾಡಿದ ನಂತರ ಹುಲ್ಲನ್ನು ತೆಗೆದು ರಾಗಿ ಸಂಗ್ರಹಿಸಿಕೊಳ್ಳುತ್ತಿದ್ದರು. ಇದರಿಂದ ಹಣ, ಸಮಯ ಹಾಗೂ ಶ್ರಮಗಳು ಉಳಿತಾಯವಾಗುವುದು ಸಾಧ್ಯ ಎಂಬ ವಾದ ರಸ್ತೆ ಒಕ್ಕಣೆಗಾರರದು. ಆದರೆ ಇದರಿಂದಾಗಿ ಅನೇಕ ರಸ್ತೆ ಅಪಘಾತಗಳು ಸಂಭವಿಸಿ ಪ್ರಾಣಹಾನಿಗಳಾಗಿವೆ.

ರಸ್ತೆ ಒಕ್ಕಣೆಯೂ ಇಂದು ಉಳಿದಿಲ್ಲ. ವೈಜ್ಞಾನಿಕತೆಯ ಅಳವಡಿಕೆ ಕೃಷಿ ಕ್ಷೇತ್ರದಲ್ಲಿ ಆದಂತೆ ಒಕ್ಕಣೆಗೂ ಯಂತ್ರೋಪಕರಣಗಳು ಬಂದವು. ಇದರಿಂದ ಕೆಲವೇ ಗಂಟೆಗಳಲ್ಲಿ ಒಕ್ಕಣೆ ಕೆಲಸ ಮುಗಿದು ಹೋಗುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ಇಂದು ಕಣ ಸಂಸ್ಕೃತಿಯ ಆಚರಣೆಗಳು ನಿಧಾನವಾಗಿ ಜನ ಮಾನಸದಿಂದ ಕಣ್ಮರೆಯಾಗುತ್ತಿವೆ.

**ಕೆಲವು ಕೃಷಿ ಸಂಬಂಧಿ ನಂಬಿಕೆಗಳು.**

ಕೃಷಿ ಕಾರ್ಯದಲ್ಲಿ ಹಲವು ಆಚರಣೆಗಳನ್ನು ಮಾಡುವಂತೆ ಕೆಲವೊಂದು ನಂಬಿಕೆಗಳು ರೈತ ಸಮುದಾಯದಲ್ಲಿ ಹಾಸು ಹೊಕ್ಕಾಗಿರುವುದು ಕಂಡುಬರುತ್ತದೆ. ಅವುಗಳೆಂದರೆ

1. ಸೋಮವಾರದ ದಿನ ಕೃಷಿ ಕಾರ್ಯಗಳನ್ನು ಮಾಡುವುದಿಲ್ಲ. ಅಂದು ಹೊಲ ಗದ್ದೆಗಳನ್ನು ಉಳುವುದಾಗಲಿ, ಕೃಷಿ ಚಟುವಟಿಕೆಗಳಿಗೆ ದನಗಳನ್ನು ಬಳಸುವುದಾಗಲಿ ನಿಷೇಧಿತವಾಗಿರುತ್ತದೆ. ಆದರೆ ಕೆಲವು ಪ್ರದೇಶಗಳಲ್ಲಿ ಕೋಣಗಳನ್ನು ಬಳಸಿ ಸೋಮವಾರವು ಉಳುಮೆ ಮಾಡುತ್ತಾರೆ.
2. ದನಗಳ ಹೆಗಲ ಮೇಲೆ ನೊಗವನ್ನು ಹಾಕಿಕೊಂಡು ಊರೊಳಗೆ ಬರುವುದಿಲ್ಲ.
3. ಚಪ್ಪಲಿಗಲನ್ನು ಹಾಕಿಕೊಂಡು ನೇಗಿಲು, ನೊಗಗಳನ್ನು ಮುಟ್ಟುವುದಾಗಲಿ, ಉಳುಮೆ ಮಾಡುವುದಾಗಲಿ ಮಾಡುವಂತಿಲ್ಲ.
4. ಬೆಳೆಗಳ ನಡುವೆ ಇರುವ ಕಳೆಯನ್ನು ಕಿತ್ತ ನಂತರ ಅದನ್ನು ಹೊಲದಲ್ಲಿಯೆ ಬಿಡುವಂತಿಲ್ಲ. ಕಾರಣ ರಾತ್ರಿ ವೇಳೆ ಭೂಮಿ ತಾಯಿ ಹೊಲವನ್ನು ಪರೀಕ್ಷಿಸುತ್ತಾಳೆಂದು, ಆಗ ಕಿತ್ತ ಕಳೆ ಆಕೆಯ ಕಣ್ಣಿಗೆ ಬಿದ್ದರೆ ಶಾಪ ನೀಡುವಳು ಎಂದೂ, ಬೆಳೆ ಚೆನ್ನಾಗಿ ಬರುವುದಿಲ್ಲ ಎಂಬ ನಂಬಿಕೆ ರೈತರಲ್ಲಿದೆ.

**ಕಣ ಸಂಬಂಧಿ ನಂಬಿಕೆಗಳು**

1. ಚಪ್ಪಲಿ ಹಾಕಿಕೊಂಡು ಕಣಕ್ಕೆ ಬರುವಂತಿಲ್ಲ. ಏಕೆಂದರೆ ಕಣಕ್ಕೆ ಮನೆಯಷ್ಟೆ ಮಹತ್ವದ ಸ್ಥಾನವಿದೆ. ಈ ಕಾರಣವಾಗಿಯೆ ಹಿರಿಯರು ಹೇಳುವುದು 'ಕಣ ಮನೆ ಅನ್ನೋದು ಯಾತಕ್ಕಾಯ್ತು' ಎಂಬ ಮಾತುಗಳು ಮುಖ್ಯವಾದವು.
2. ಮುಟ್ಟಾದ ಸ್ತ್ರೀಯರು ಮೂರ್ನಾಲ್ಕು ದಿನಗಳವರೆಗೆ ಕಣಕ್ಕೆ ಬರುವಂತಿಲ್ಲ.
3. ದೆವ್ವ, ಗಾಳಿಗಳು ಕಣದ ಕಡೆ ಸುಳಿಯುವುದಿಲ್ಲ ಎಂಬ ನಂಬಿಕೆ ಇದೆ.
4. ಕಣದಲ್ಲಿ ಏಳು ಎಂಬ ಸಂಖ್ಯೆಯನ್ನು ಹೇಳುವುದಿಲ್ಲ. ಬದಲಾಗಿ 'ಹೆಚ್ಚಲಿ' ಎನ್ನುತ್ತಾರೆ.
5. ಕಣದಲ್ಲಿ ಅಶ್ಲೀಲ ವಿಚಾರಗಳನ್ನು ಮಾತನಾಡುವಂತಿಲ್ಲ.
6. ಕಣದಲ್ಲಿ 'ಮೇಟಿ' ಯನ್ನು ನಿಲ್ಲಿಸಿದ ನಂತರ ಅಲ್ಲಿ ಯಾವುದೇ ರೀತಿಯ ಮುಟ್ಟು ಚಿಟ್ಟುಗಳು, ಮೈಲಿಗೆಗಳು ಆಗುವಂತಿಲ್ಲ. ಕಣವು ಅಪವಿತ್ರಗೊಳ್ಳುವಂತಿಲ್ಲ.

**ಕಣದಲ್ಲಿ ಬಳಸುವ ಶಬ್ದಗಳ ವಿವರ**

1. ಮೇಟಿ : ಕಣದ ಗಂಡನೆಂಬ ನಂಬಿಕೆ ಇದ್ದು, ಧಾನ್ಯವನ್ನು ಒಕ್ಕುವ ಅಂಗಳದ ಅಥವಾ ಕಣದ ಮಧ್ಯ ಭಾಗದಲ್ಲಿ ಎತ್ತುಗಳನ್ನು ಕಟ್ಟಿ ತುಳಿಸಲು ಅನುಕೂಲವಾಗುವಂತೆ ನೆಟ್ಟಿರುವ ಆಲ, ಕಕ್ಕೆ ಅಥವಾ ಬೇವಿನ ಕಂಬ.
2. ಗೌರಮ್ಮ : ರಾಗಿಯನ್ನು ನಿಲುವು ಎತ್ತಿದ ನಂತರ ಬರುವ ಒಂದು ಬಗೆಯ ನುಣ್ಣನೆ ಮಣ್ಣು.
3. ಕೊಂಗ : ಧಾನ್ಯವನ್ನು ತೂರಲು ಹಾಗೂ ಕೇರಲು ಬಳಸುವ ಮೊರ.
4. ವಾಯು ದೇವರು : ಗಾಳಿ
5. ಇಡುಗ್ಲು : ಪೊರಕೆ ಅಥವಾ ಬರಲು
6. ನಾಮದ ಕಡ್ಡಿ : ಕಡ್ಡಿ ಜೆಡಿಯಿಂದ ಬೇರ್ಪಟ್ಟ ಸಣ್ಣ ಸಣ್ಣ ರಾಗಿಯ ಕಡ್ಡಿಗಳು.
7. ರಜ : ರಾಗಿ.
8. ಬಂಡಿ : ರಾಗಿಯನ್ನು ಹುಲ್ಲು ಪತ್ರೆಗಳಿಂದ ಸ್ವಚ್ಛಗೊಳಿಸಲು ಬಳಸುವ ಜರಡೆ.
9. ಮುಂದಂಡೆ : ರಾಗಿ ತೂರಿದಾಗ ಬರುವ ಉಬ್ಬಲು ಮತ್ತು ಅದು ಬಿದ್ದ ಪ್ರದೇಶ.
10. ನೆರಗೋಲು : ತುದಿಯು ಕೊಕ್ಕೆಯಾಕಾರದಲ್ಲಿರುವ ಉದ್ದನೆಯ ಬಿದಿರಿನ ಕೋಲು.
11. ಪತ್ರೆ : ಗುಂಡಿನಿಂದ ಹೊಡೆದ ಮೇಲೆ ರಾಗಿಯಿಂದ ಬೇರ್ಪಟ್ಟ ಹುಲ್ಲು.
12. ಹುಲ್ಲು ಬಡಿಯುವ ಕೋಲು : ಹುಲ್ಲು ಬಡಿಯಲು ಬಳಸುವ ಬಿದಿರಿನ ಕೋಲು.
13. ಗುಂಡು : ಹುಲ್ಲು ಬಡಿಯಲು ದನಗಳಿಗೆ ಕಟ್ಟಿ ಎಳೆಯುವ ಕಲ್ಲಿನ ಗುಂಡನೆಯ ವಸ್ತು.
14. ಬಗ್ಗಡದ ಗುಂಡಿ : ಕಣ ಸಾರಿಸಲು ನೀರು ಮತ್ತು ಸಗಣಿಗಳನ್ನು ಮಿಶ್ರಣ ಮಾಡುವ ಸ್ಥಳ.
15. ಉಬ್ಬಲು : ರಾಗಿಯನ್ನು ತೂರಿದ ನಂತರ ಬರುವ ಹೊಟ್ಟು ಅಥವಾ ಸಿಪ್ಪೆ.
16. ಸಣ್ಣಕ್ಕಿ : ತೂರಿದ ನಂತರ ಉಳಿಯುವ ಸಣ್ಣ ಹೊಟ್ಟು ಮಿಶ್ರಿತ ರಾಗಿ.
17. ಕಡ್ಡಿ ಜರಡಿ : ಅಗಲ ಕಣ್ಣುಗಳುಳ್ಳ ಬಿದಿರಿನ ಚೌಕಾಕಾರದ ಜರಡಿ. ನಾಮದ ಕಡ್ಡಿಗಳನ್ನು ಬೇರ್ಪಡಿಸಲು ಇದನ್ನು ಬಳಸುವರು.
18. ಕುದುರೆ : ರಜ ತೂರಲು ಬಳಸುವ ಒಂದು ಹಲಗೆಗೆ ಎದುರು ಬದುರು ಜೋಡಿಸುವ ಕವಲುಗಳುಳ್ಳ ಎರಡು ಮರಗಳ ಸಾಧನ ನೋಡಲು ಕುದುರೆಯ ಆಕಾರದಲ್ಲಿಯೆ ಇರುತ್ತದೆ.

**ಉಪಸಂಹಾರ**

ಕಣ ಸಂಸ್ಕೃತಿ ಇಂದು ತನ್ನ ಸಾಂಸ್ಕೃತಿಕ ಅನನ್ಯತೆಯಿಂದ ದೂರ ಸರಿಯುತ್ತಿದೆ. ಇಂದಿನ ಜಾಗತೀಕರಣ ಹಾಗೂ ಆಧುನಿಕ ಉಪಕರಣಗಳ ಬಳಕೆಯ ಕಾರಣವಾಗಿ ತನ್ನ ಮೂಲ ದೇಸಿ ತನವನ್ನು ಕಳೆದುಕೊಂಡಿದೆ. ತಂತ್ರಜ್ಞಾನದ ಪ್ರತಿಫಲವಾಗಿ ಆವಿಷ್ಕರಣೆಗೊಂಡ ಯಂತ್ರಗಳು ಗ್ರಾಮೀಣರ ಕೆಲಸಗಳನ್ನು ಕಸಿದುಕೊಂಡು ಅವರನ್ನು ನಿರುದ್ಯೋಗಿಗಳನ್ನಾಗಿಸಿದೆ. ಈ ಕಾರಣವಾಗಿ ಉಂಟಾದ ಸಾಮಾಜಿಕ ಅಂತರ ಜನಪದರಲ್ಲಿ ಸಾಂಸ್ಕೃತಿಕ ಬಿಕ್ಕಟ್ಟುಗಳಿಗೂ ಎಡೆಮಾಡಿಕೊಟ್ಟಿತು. ಹಿಂದಿನ ಸಹಭಾಗಿತ್ವದ ಮನಸ್ಸುಗಳಾಗಲಿ, ಹಂಚಿ ತಿನ್ನುವ ವಿಶಾಲ ಚಿಂತನೆಗಳಾಗಲಿ ಇಂದು ಕಣ್ಮರೆಯಾಗಿವೆ. ಕಣದಲ್ಲಿ ಹಾಡಲ್ಪಡುತ್ತಿದ್ದ ಗಾದೆ, ಒಗಟುಗಳು ಹಾಗೂ ಹಂತಿ ಪದಗಳು ಜನಪದರ ನಾಲಿಗೆಯಿಂದ ದೂರವಾಗಿವೆ. ಇಂತಹ ಅಮೂಲ್ಯ ಸಂಪತ್ತನ್ನು ಸಂಗ್ರಹಿಸಿ ದಾಖಲಿಸುವ ಜೊತೆಗೆ ಇಂದಿನ ಯುವಪೀಳಿಗೆಗೆ ಅವುಗಳ ಸಾರವತ್ತತೆಯ ಮಹತ್ವವನ್ನು ಅರಿವು ಮಾಡಿಕೊಡಬೇಕಿದೆ. ಹಾಗಯೇ ಕನ್ನಡ ನಾಡಿನಾದ್ಯಂತ ಬಳಕೆಯಲ್ಲಿರುವ ಕಣ ಸಂಬಂಧಿ ನಂಬಿಕೆಗಳು, ಗಾದೆ, ಒಗಟು ಮತ್ತು ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಕ್ರಮಬದ್ಧವಾದ ಅಧ್ಯಯನಕ್ಕೆ ಒಳಪಡಿಸುವುದು ಇಂದಿನ ಅತೀ ಜರೂರಿನ ಕಾರ್ಯವಾಗಿದೆ.

**ವಕ್ತೃಗಳ ವಿವರ.**

| ಹೆಸರು | ತಂದೆಯ ಹೆಸರು | ಜಾತಿ | ವಯಸ್ಸು | ಗ್ರಾಮ |
|---|---|---|---|---|
| ಸಿದ್ದಗಂಗಮ್ಮ. | ರಂಗಯ್ಯ | ಒಕ್ಕಲಿಗ | 49 | ಗೌರೀಪುರ |
| ವೀರನಾರಾಯಣಗೌಡ. | ನಾರಾಯಣಪ್ಪ | ಒಕ್ಕಲಿಗ | 38 | ಚೊಟ್ಟನಹಳ್ಳಿ |
| ಸಿದ್ದರಂಗಮ್ಮ | ರಂಗಯ್ಯ | ಒಕ್ಕಲಿಗ | 45 | ಮುಗಳೂರು. |
| ನಂಜಪ್ಪ | ಪಾತಯ್ಯ | ಮಡಿವಾಳ | 56 | ಗೌರೀಪುರ |
| ಕೃಷ್ಣಪ್ಪ | ಕೆಂಪಯ್ಯ | ಒಕ್ಕಲಿಗ | 59 | ಗೌರೀಪುರ |
| ತಿಮ್ಮಣ್ಣ | ವೆಂಕಟಪ್ಪ | ಬೆಸ್ತ | 76 | ಕೌತಮಾರನಹಳ್ಳಿ |
| ಕದರಪ್ಪ | ಮಂಚಗೊಂಡನಹಳ್ಳಿ. | ಮಾದಿಗ | 78 | ಕೌತಮಾರನಹಳ್ಳಿ |

**ಪರಾಮರ್ಶನ ಗ್ರಂಥಗಳು.**

1. ಅರವಿಂದ ಮಾಲಗತ್ತಿ (ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ-ಜಾನಪದ, 2006, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಮಾಸ್ತಿ ಅವರ ಕಥನ ಕವನಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಪ್ರಜ್ಞೆ

**ಡಾ. ಎಸ್.ಶಶಿರೇಖಾ**
ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ. ಕಾಲೇಜು, ತುಮಕೂರು.

**ಪ್ರಸ್ತಾವನೆ**

ಸಾಹಿತ್ಯ ಸೃಜನಶೀಲ ಸೃಷ್ಟಿಕಲೆ. ಸಾಹಿತ್ಯವು ಆಯಾ ಕಾಲಘಟ್ಟದ ಮನೋಧರ್ಮದೊಂದಿಗೆ ಅಂದಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ದಾಖಲಿಸುವುದಲ್ಲದೆ, ಅಲ್ಲಿನ ದೃಷ್ಟಿಕೋನವನ್ನು ಸಾರ್ವತ್ರೀಕರಿಸುತ್ತದೆ. ಮಾಸ್ತಿ ನವೋದಯ ಸಂದರ್ಭದಲ್ಲಿ ಬಂದ ಮುಖ್ಯ ಪ್ರತಿಭೆ. ಅವರ ಕಥನ ಕವನಗಳು ನವೋದಯ ಮನೋಧರ್ಮದ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು, ಸಾಮಾಜಿಕ ಚೌಕಟ್ಟಿನಲ್ಲಿ ಸಂಘರ್ಷಕ್ಕಿಂತಲೂ ಹೆಚ್ಚು ಮೃದುತ್ವ ಮತ್ತು ಆದರ್ಶವಿದೆ. ಮಾನವೀಯತೆಯ ನೆಲೆಗಟ್ಟಿನಲ್ಲಿ, ನೈತಿಕತೆಯ ತಳಹದಿಯಲ್ಲಿ ಸಾಹಿತ್ಯ ವಿಚಾರಗಳು ರೂಪುಗೊಳ್ಳುತ್ತವೆ. ಕವಿ ಪೂರ್ವನಿರ್ಧಾರಿತ ಆಶಯವನ್ನು ಪ್ರಜ್ಞಾವಂತಿಕೆಯಲ್ಲಿ ಸಾಕಾರಗೊಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಭಾವನಾತ್ಮಕವಾದ ಸನ್ನಿವೇಶಗಳಲ್ಲಿ ಬಳಕೆಯಾಗುವ ಭಾಷೆ ಓದುಗರ ಮನಸ್ಸಿಗೆ ಹೆಚ್ಚು ಆಪ್ತವಾಗುತ್ತದೆ. ಸರಳವಾದ ವಿಚಾರಗಳು ಮಾನವೀಯ ನೆಲೆಯಲ್ಲಿ ನಿಂತು ವಿಶಾಲವಾದ್ದೊಂದು ಚಿಂತನೆಗೆ ದಾರಿ ಮಾಡಿಕೊಡುತ್ತದೆ. ಮಾಸ್ತಿಯವರ ಬರವಣಿಗೆಯಲ್ಲಿ ಕಥನ ಕವನಗಳಿಗೆ ಮಹತ್ವದ ಸ್ಥಾನ ನೀಡಲಾಗಿದೆ. ಮಾಸ್ತಿ ಅವರ ಕಥನ ಕವನಗಳಲ್ಲಿ ಸಹಜವಾಗಿಯೇ ವಸ್ತುನಿಷ್ಠತೆಯಿಂದ ಸಾಹಿತ್ಯ ಸಮಾಜಮುಖಿಯಾಗಿ ವ್ಯಕ್ತಿನಿಷ್ಟತೆಯ ಕಡೆಗೆ ತಿರುಗಿದ್ದು ವ್ಯಕ್ತಿ ಸಹಜವಾದ ಆಧ್ಯಾತ್ಮಿಕತೆ, ನಿಸರ್ಗ ಪ್ರೇಮ, ಜೀವನ ಪ್ರೀತಿ ಮತ್ತು ಆದರ್ಶಪ್ರಿಯತೆಯತ್ತ ಮುಖ ಮಾಡುತ್ತಿರುವುದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಕಥೆಗಳನ್ನು ಹೇಳುವುದು ಒಂದು ಸೃಜನಶೀಲ ಕ್ರಿಯೆ. ಅದನ್ನು ಕೇಳುವುದು ಒಂದು ಅಭಿರುಚಿ. ಎಲ್ಲ ದೇಶದ ಭಾಷೆಗಳಲ್ಲಿಯೂ ಕಥೆಗಳಿವೆ. ಕಥೆಗಳನ್ನು ಗದ್ಯರೂಪದಲ್ಲಿ ಹೇಳಬಹುದು, ಪದ್ಯರೂಪದಲ್ಲಿಯೂ ಹೇಳಬಹುದಾಗಿದೆ. ಕಥೆಗಳನ್ನು ಹೇಳುವ ಮೂಲಕ ಮನುಷ್ಯನನ್ನು ಬುದ್ಧಿವಂತನನ್ನಾಗಿ, ಜ್ಞಾನಿಯನ್ನಾಗಿ ಮಾಡಬಹುದಾಗಿದೆ. ನೀತಿಬೋಧನೆ, ವೀರಪರಾಕ್ರಮಗಳ ವರ್ಣನೆ, ಸಾಧು ಸಂತರ ಗುಣಗಾಣ, ಲೋಕ ಕಲ್ಯಾಣದ ಕೆಲಸಗಳು ಹಾಗೂ ಸಾಮಾನ್ಯರ ಜನಜೀವನ ದರ್ಶನ ಎಲ್ಲವನ್ನು ಕಥೆಗಳ ಮೂಲಕ ತಿಳಿಸಬಹುದು. ಕಥೆಗಳು ಆಯಾ ಕಾಲಘಟ್ಟದಲ್ಲಿನ ಸಮಾಜ , ಸಂಸ್ಕೃತಿ, ಲೋಕವಿಚಾರಗಳ ದರ್ಶನ ಮಾಡಿಸುತ್ತವೆ. ಕಥನ ಕವನಗಳು ಕೂಡ ಈ ಎಲ್ಲ ಅಂಶಗಳನ್ನು ಒಳಗೊಂಡು ರೂಪುಗೊಂಡಿರುತ್ತವೆ.

ಕಥನ ಕವನ ಸುಂದರವಾದ ವಸ್ತು ವಿಷಯವನ್ನು ಒಳಗೊಂಡಿರುತ್ತದೆ. ಅನವಶ್ಯಕವಾದ ವರ್ಣನೆಯಾಗಲೀ, ಅತಿಯಾದ ನೀತಿಬೋಧೆಯಾಗಲಿ ಇರುವುದಿಲ್ಲ. ಓದಗರ ಕುತೂಹಲ ಕೆರಳಿಸಿ ಬೇಗ ಬೇಗನೆ ಮುಂದಿನ ಘಟನೆಗಳನ್ನು ತಿಳಿಯುವ ಆಸೆ ಹುಟ್ಟುವಂತೆ ಕಥೆಯನ್ನು ಹೆಣೆಯಲಾಗಿರುತ್ತದೆ. ಕಥನ ಕವನಗಳಲ್ಲಿ ಆರಂಭ ಮತ್ತು ಅಂತ್ಯ ಬಹಳ ಮುಖ್ಯವಾಗಿರುತ್ತದೆ. ಘಟನೆಗಳನ್ನು ನೇರವಾಗಿ ಚುರುಕಾಗಿ ಚಿತ್ರಿಸಿ ಓದುಗರ ಕುತೂಹಲವನ್ನು ಉಳಿಸುತ್ತಾ ಸಾಗಬೇಕು. ಬೇಗ ಬೇಗನೆ ಮುಂದಿನ ಘಟನೆಗಳಿಗೆ ಹೋಗಬೇಕು. ಇದು ಕಥನ ಕವನದ ಮುಖ್ಯತಂತ್ರ. ಭಾವನೆಗಳಿಗೆ ಹೃದಯ ಸ್ಪರ್ಶಿಸುವುದು ಕಥನ ಕವನದ ಮುಖ್ಯ ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ಮಾಸ್ತಿ ಅವರ ಕಥನ ಕವನಗಳನ್ನು ಅವಲೋಕಿಸಬಹುದಾಗಿದೆ.

ಸಣ್ಣಕಥೆಯ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಮಾಸ್ತಿ ಅವರು ಕಥನ ಕವನ ಕ್ಷೇತ್ರದಲ್ಲಿಯೂ ಅಗ್ರಗಣ್ಯರೆನಿಸಿದ್ದಾರೆ. ಮಾಸ್ತಿಯವರ ಕಥನ ಕವನಗಳು ಗುಣದಲ್ಲೂ, ಗಾತ್ರದಲ್ಲೂ ದೊಡ್ಡ ಸ್ಥಾನವನ್ನು ಅಲಂಕರಿಸಿವೆ. ಶಾಸನ ಕವಿಗಳಿಂದ ಅರಂಭವಾದ ಕಥನ ಕವನಗಳು ಹರಿಹರನ ಪ್ರತಿಭೆಯಲ್ಲಿ ರಗಳೆಯ ಚೌಕಟ್ಟಿನಲ್ಲಿ ಒಂದು ಲಲಿತರಗಳೆಯಲ್ಲಿ ಹೇರಳವಾದ ಸಾಹಿತ್ಯವನ್ನು ಸೃಷ್ಟಿಸಿಕೊಟ್ಟಿತು. ಆನಂತರದ

ಸಾಹಿತ್ಯದಲ್ಲಿ ಕಣ್ಮರೆಯಾಯಿತು. ಆದರೆ ಪಾಶ್ಚಾತ್ಯ ಸಾಹಿತ್ಯದ ಸರಳ ರಗಳೆಗೆ ಹೊಸತೊಂದು ಆಯಾಮ ದೊರಕಿ ಕನ್ನಡದಲ್ಲಿ ಕಥನ ಕವನಗಳು ಹುಟ್ಟಿಕೊಂಡವು. ಮಾಸ್ತಿ, ಪುತಿನ, ಕುವೆಂಪು, ಎಸ್.ಪರಮೇಶ್ವರ ಭಟ್, ಕೆ.ನರಸಿಂಹ ಶಾಸ್ತ್ರಿ, ಜಿ.ವರದರಾಜರಾವ್, ಜಿ.ಪಿ.ರಾಜರತ್ನಂ ಮುಂತಾದವರು ಕನ್ನಡದಲ್ಲಿ ಕಥನ ಕವನಗಳನ್ನು ರಚಿಸಿದ್ದಾರೆ. ಕಥನ ಕವನಗಳ ವೈವಿಧ್ಯತೆ, ಗುಣ ಸಂಖ್ಯೆ ಮತ್ತು ಗಾತ್ರ ಎಲ್ಲದರಲ್ಲಿಯೂ ಮಾಸ್ತಿಯನ್ನು ಮೀರಿಸುವ ಕಥನ ಕವನ ರಚನಕಾರರಿಲ್ಲವೆಂದೇ ಹೇಳಬಹುದು. ಮಾಸ್ತಿ ಅವರ ನವರಾತ್ರಿ, ಗೌಡರಮಲ್ಲಿ, ರಾಮನವಮಿ ಮತ್ತು ಮೂಕನ ಮಕ್ಕಳು ಕಥನ ಕವನಗಳನ್ನು ಮುಖ್ಯವಾಗಿ ಇಲ್ಲಿ ವಿಶ್ಲೇಷಿಸಬಹುದಾಗಿದೆ.

### ನವರಾತ್ರಿ ಕಥನ ಕವನ

ಮಾಸ್ತಿಯವರೇ ಹೇಳಿಕೊಂಡಿರುವಂತೆ `ನವರಾತ್ರಿ' ಕಥನ ಕವನಗಳನ್ನು ಆಂಗ್ಲ ಕಥನ ಕವನಕಾರ 14ನೆಯ ಶತಮಾನದ ಚಾಸರನ `ಕ್ಯಾಂಟರ್ ಬರೀ ಟೇಲ್ಸ್' ಕಥಾಗುಚ್ಛದ ಮಾದರಿಯಲ್ಲಿ ರಚಿಸಿದ್ದಾರೆ. ಅಲ್ಲದೆ ತಮಗೆ ಕಥಾ ಕಲೆಗಾರಿಕೆಗೆ ಸ್ಫೂರ್ತಿ ವಾಲ್ಮೀಕಿ, ಕುಮಾರವ್ಯಾಸ, ಸೋಮದೇವ ಮತ್ತು ಇತರ ಕವಿಗಳೆಂದು ಪ್ರಸ್ತಾವನೆಯಲ್ಲಿ ನೆನೆದು ಮುಂದುವರಿಯುತ್ತಾರೆ. ನವರಾತ್ರಿಯ ಆರಂಭದಲ್ಲಿ ಮಾಸ್ತಿಯವರು ಸಂಪ್ರದಾಯದಂತೆ ದೇವತಾ ಸ್ತುತಿ ಮಾಡಿದ್ದಾರೆ. ನಂತರ ತಾಯಿನಾಡಿನ ವರ್ಣನೆ ಬರುತ್ತದೆ. ಕನ್ನಡ ನಾಡಿನ ವರ್ಣನೆ, ಕನ್ನಡ ನಾಡಿನ ನದಿ ಕಾವೇರಿಯ ವರ್ಣನೆ, ಮೈಸೂರು ದೇಶದ ಅರಸು ಮನೆತನದ ವರ್ಣನೆ, ಮೈಸೂರು ದಸರಾ ಕಥನ ಗೋಷ್ಠಿಯ ವರ್ಣನೆಗಳಲ್ಲಿ ಮೈಸೂರು ದಸರಾ ಸಂಸ್ಕೃತಿಯನ್ನು ಪೂರ್ಣವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನವರಾತ್ರಿಯ ಉತ್ಸವದ ವಿಜೃಂಭಣೆಗೆ ಮೈಸೂರು ಅರಸರ ಕೊಡುಗೆಯನ್ನು ಚಿತ್ರಿಸುತ್ತಲೇ ಕವಿ ಮೈಸೂರು ಜನತೆಯ ಸಾಹಿತ್ಯಾಸಕ್ತಿ, ಪ್ರೋತ್ಸಾಹವನ್ನು, ಕನ್ನಡ ನಾಡಿನ ಜನತೆಯ ಸಂಸ್ಕೃತಿ ಮತ್ತು ಸಹೃದಯತೆಯನ್ನು ಹಾಗೂ ನಿಸರ್ಗ ಸೌಂದರ್ಯವನ್ನು ಚಿತ್ರಿಸಿದ್ದಾರೆ.

ತೆಂಕಣದ ಅಂಚಿನಲಿ ಮೂಡಣದ ಮಲೆಸಾಲು
ಪಡುಮಲೆಯ ಸಾಲು ಒಂದೊಂದನೀಕ್ಷಿಸಿ ಕಲೆದು
ಆಟದಲಿ ಬೆರೆವ ತರಳರತೆರಕೆ ಕ್ರೀಡೆಯಲಿ
ಬೆರೆತಿರಲು ನೆಲನ ಚೆಲುಸಂತೆ ನೆರೆಯಿತೊ ಇಲ್ಲಿ

ನವರಾತ್ರಿಯ ವೈಭವವನ್ನು ವರ್ಣಿಸುವ ಮೊದಲು ಕವಿ ಮೈಸೂರು ರಾಜ್ಯದ ಸೌಂದರ್ಯವನ್ನು ಓದುಗರ ಮನಮುಟ್ಟುವಂತೆ ವರ್ಣಿಸುವಾಗ ತೆಂಕಣದ ಮತ್ತು ಪಡುಮಲೆಗಳು ಶೋಭಿಸುವ ರೀತಿಯನ್ನು ಅದರ ಸೊಬಗನ್ನು ವಿವರಿಸುತ್ತಾರೆ. ದಕ್ಷಿಣದ ಮತ್ತು ಪೂರ್ವದ ಬೆಟ್ಟಸಾಲುಗಳು ಒಂದನ್ನೊಂದು ಕಲೆತು ಆಟವಾಡುತ್ತಿರುವಂತೆ ಕಂಡುಬರುವ ಕಾರಣ ಭೂಮಿಯ ಚೆಲವು ಹೆಚ್ಚಿದೆ ಎಂದು ವಿವರಿಸಿದ್ದಾರೆ.

### ಗೌಡರ ಮಲ್ಲಿ ಕಥನ ಕವನ

ಮಾಸ್ತಿ ಅವರು ರಚಿಸಿದ ಅತ್ಯುತ್ತಮ ಶೃಂಗಾರ ಕಥನ ಕವನ ಗೌಡರ ಮಲ್ಲಿ. ಮಾಸ್ತಿಯವರೇ ಹೇಳಿರುವಂತೆ ಇದೊಂದು ಕಾಲ್ಪನಿಕ ಕಥನ ಕವನ. ಇದು ಜನಪದ ಕಥೆಗಳ ಮಾದರಿಯಲ್ಲಿ ರೂಪುಗೊಂಡಿದೆ. ನಡುಹರೆಯದಲ್ಲಿ ಹೆಂಡತಿಯನ್ನು ಕಳೆದುಕೊಂಡ ಗೌಡ ಯಾರನ್ನೂ ಮದುವೆಯಾಗದೇ ಉಳಿಯುತ್ತಾನೆ. ಆದರೆ ಬೇಡರ ಜಾತಿಯ ಹೆಣ್ಣು ಮಲ್ಲಿಯನ್ನು ಕಂಡಾಗ ಪ್ರೀತಿ ಹುಟ್ಟುತ್ತದೆ. ಮಲ್ಲಿ ಬಸವಿ ಎಂದು ತಿಳಿದೂ ಗೌಡ ಆಕೆಯನ್ನು ಪ್ರೀತಿಸಿ ಕೂಡಿಗೆ ಮಾಡಿಕೊಳ್ಳುತ್ತಾನೆ. ಗೌಡ, ಮಲ್ಲಿ ಪ್ರೇಮದ ಶ್ರೇಷ್ಠತೆ, ಮಲ್ಲಿಯ ಮುಗ್ಧತೆ, ಆದರ್ಶ ನಡತೆ, ಎಲ್ಲರ ಮನಗೆದ್ದು ಬದುಕು ಕಟ್ಟಿಕೊಳ್ಳುವ ರೀತಿಯನ್ನು ವಾಸ್ತವಿಕ ನೆಲಗಟ್ಟಿನಲ್ಲಿ ಮಾಸ್ತಿಯವರು ಚಿತ್ರಿಸಿದ್ದಾರೆ.

ಗೌಡರ ಮನೆ ಸೇರಿದ ಮಲ್ಲಿ ಒಬ್ಬ ಸೇವಕಿಯಾಗಿ ದುಡಿಯುತ್ತಾಳೆ. ಮನೆ ಸದಸ್ಯರನ್ನು ಹೊಂದಿಕೊಳ್ಳುತ್ತಾಳೆ ಎಂದೂ ಗೌಡ್ತಿಯಂತೆ ಅಧಿಕಾರ ಚಲಾಯಿಸುವುದಿಲ್ಲ. ಗೌಡ ಊಟ ಮಾಡಿದ ನಂತರ ಮಲ್ಲಿ ಊಟ ಮಾಡುತ್ತಾಳೆ. ಕೂಲಿ ಎಂದು ಕಾಳನ್ನು ಬೇಡಿ ತೆಗೆದುಕೊಂಡು ದಾನವನ್ನು ಮಾಡುತ್ತಾಳೆ. ಮಾಸ್ತಿಯವರು ಮಲ್ಲಿಯನ್ನು ಆದರ್ಶ ಮಹಿಳೆಯಾಗಿ ಚಿತ್ರಿಸುತ್ತಾರೆ. ಆದರೆ ಕೆಲವು ವಿಮರ್ಶಕರ ಪ್ರಕಾರ ಮಲ್ಲಿ ಕೇವಲ ಪರರನ್ನು ತಣಿಸುವ ಆದರ್ಶ

ಜೀತದಾಳು ಎನ್ನುತ್ತಾರೆ. ಗೌಡರ ಹೃದಯದಲ್ಲಿ ಮಲ್ಲಿಗೆ ಸ್ಥಾನವಿಲ್ಲದಿದ್ದರೆ ಈಕೆಯನ್ನು ಆದರ್ಶ ಜೀತದಾಳಾಗಿ ಭಾವಿಸಬಹುದಿತ್ತು. ಮಲ್ಲಿ ಎಲ್ಲಿಯೂ ಸಂಘರ್ಷಕ್ಕೆ ದಾರಿಮಾಡಿಕೊಟ್ಟಿಲ್ಲ. ಎಲ್ಲರನ್ನು ನಿಭಾಯಿಸುವ ಒಳ್ಳೆಯತನ ಆ ಹೆಣ್ಣಿನಲ್ಲಿ ವ್ಯಕ್ತವಾಗಿದೆ. ಬೇಡರಜಾತಿಯ ಮಲ್ಲಿ ಗೌಡನ ಮನೆಯಲ್ಲಿ ಯಜಮಾನ್ತಿಯಾಗದಿದ್ದರೂ ಕೇಂದ್ರಬಿಂದುವಾಗಿ ಮನೆಯವರೆಲ್ಲರ ಪ್ರೀತಿಗೆ ಗೌರವಕ್ಕೆ ಪಾತ್ರಳಾಗಿದ್ದಾಳೆ.

ಗೌಡ ನಿರ್ಮಿಸಿದ ಬಾವಿ, ಕೊಳ ಮತ್ತು ತೋಪಿಗೆ ಗೌಡನ ಹೆಸÀರ ಜೊತೆಯಲ್ಲಿ ಹೆಸರು ಸೇರಿಸಿ ಕರೆಯುತ್ತಾರೆ. ಗೌಡ ಸತ್ತರೂ ಆತನ ಹೆಸರು ಮಲ್ಲಿಯ ಹೆಸರಿನೊಂದಿಗೆ ರಾರಾಜಿಸುತ್ತದೆ. ಮಲ್ಲಿ ಮತ್ತು ಗೌಡನ ನಡುವಿನ ಅಗಾಧ ಪ್ರೇಮಕ್ಕೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ. ಗೌಡನ ನೆರಳಿನಂತೆ ಸದಾ ಗೌಡ ಜೊತೆಗಿದ್ದ ಮಲ್ಲಿ ಎಲ್ಲರನ್ನೂ ಚೆನ್ನಾಗಿ ನೋಡಿಕೊಂಡು ಜಾತಿ ವಿಚಾರ ಸುಳಿಯದಂತೆ ಪ್ರೀತಿಯಿಂದ ಬದುಕುತ್ತಾಳೆ. ಗೌಡನ ಸಾವಿನ ನಂತರವೂ ದಾನ ಧರ್ಮಗಳಲ್ಲಿ ತೊಡಗಿಸಿಕೊಂಡು ಮಲ್ಲಿ ಊರ ಜನರ ಕಣ್ಣಲ್ಲಿಯೂ ಉತ್ತಮ ಮಹಿಳೆ ಎನಿಸುತ್ತಾಳೆ. ನವೋದಯ ಕಾಲಘಟ್ಟದಲ್ಲಿ ಒಬ್ಬ ಕೆಳಜಾತಿಯ ಮಹಿಳೆಗೆ ಸಾಹಿತ್ಯದಲ್ಲಿ ಈ ರೀತಿಯ ಕೇಂದ್ರಸ್ಥಾನ ದೊರೆತು, ಮಹಿಳೆಯರಲ್ಲಿಯೇ ಆದರ್ಶಪ್ರಾಯವಾಗಿ ಮಲ್ಲಿ ಚಿತ್ರಣಗೊಂಡಿರುವುದು ಶ್ಲಾಘನೀಯ ಸಂಗತಿ ಎಂದೇ ಹೇಳಬಹುದು.

### ಶ್ರೀರಾಮನವಮಿ ಕಥನ ಕವನ

ಶ್ರೀರಾಮನವಮಿ ಕಥನ ಕವನದಲ್ಲಿ ಸಮಕಾಲೀನ ಸಮಾಜದಲ್ಲಿ ಮಾನವನ ಬದುಕನ್ನು ಹಸನುಗೊಳಿಸಲು ರಾಮಾಯಣದ ಅನೇಕ ಘಟನೆಗಳನ್ನು, ಪಾತ್ರಗಳನ್ನು ಸನ್ನಿವೇಶಗಳನ್ನು ವಿವರಿಸುವುದು ಉತ್ತಮ ಸಮಾಜದ ನಿರ್ಮಾಣಕ್ಕೆ ಅಗತ್ಯವೆಂಬ ಪ್ರತಿಪಾದನೆ ಇದೆ. ಬೋವನಹಳ್ಳಿಯ ಮುಂದೆ ಇರುವ ಬಸರಿ ಮರದಡಿಯಲ್ಲಿ ಕುಳಿತಿದ್ದ ಒಬ್ಬ ಗೌಡ ನಿರೂಪಕನಿಗೆ ಆ ಸ್ಥಳದ ಮಹಿಮೆಯನ್ನು ವಿವರಿಸುತ್ತಾನೆ. ಕಾಡಿನಲ್ಲಿ ಅಲೆದಾಡುತ್ತಾ ಬಂದ ರಾಮ ಸೀತೆ ಲಕ್ಷ್ಮಣ ಆ ಊರಿನ ಬಸರಿ ಮರದಡಿಗೂ ಬಂದಿದ್ದರೆಂದೂ ಅಲ್ಲಿ ಅಡಿಗೆ ಮಾಡಿ ಉಂಡರೆಂದೂ, ಸೀತೆ ಬಾವಿಗೆ ಬತ್ತದಿರೆಂದು, ಮರಕ್ಕೆ ಬಾಡದಿರೆಂದು ಹರಸಿದ್ದಾಳೆಂದು ಹೇಳುತ್ತಾನೆ. ತನ್ನ ತಾತ ಮುತ್ತಾತಂದಿರು ರಾಮ ಸೀತೆ ಇಂದಿಗೂ ಆ ಬಸರಿ ಮರದ ಕೆಳಗೆ ಬಂದು ನಡೆದಾಡಿ ಹೋಗುತ್ತಾರೆಂದು ನಂಬಿದ್ದರೆಂದು ತಿಳಿಸುವ ಗೌಡ ತಾನು ರಾಮನವಮಿಯ ದಿನ ಇಲ್ಲಿಗೆ ಬರುವುದು ಅವರು ನೋಡಲು ಸಿಗಬಹುದೆಂದು ಆಸೆಯಿಂದ ಬರುತ್ತೇನೆಂದು ಹೇಳುತ್ತಾನೆ. ಅದೇ ಸಮಯಕ್ಕೆ ಗೌಡನನ್ನು ಕರೆಯಲು ಬಂದ ಆತನ ಮಗ ಸೊಸೆಯನ್ನು ಗಮನಿಸುವ ನಿರೂಪಕ ಇವರೇ ರಾಮ ಸೀತೆ ಎಂದು ಗುರುತಿಸುತ್ತಾರೆ. ಅನ್ಯೋನ್ಯವಾಗಿರುವ ದಂಪತಿಗಳು ರಾಮ ಸೀತೆಯ ಸಮಾನ ಎಂದು ಹೋಲಿಸುವ ಕವಿಯ ಸಾಮಾಜಿಕ ಪ್ರಜ್ಞೆ ಕೆಲಸ ಮಾಡುತ್ತದೆ. ಕಥೆ ತೀರಾ ಚಿಕ್ಕದಾದರೂ ಪ್ರಕೃತಿ ವರ್ಣನೆ ಹಾಗೂ ಸಮಾಜಮುಖಿ ನಿಲುವು ಇಲ್ಲಿ ಮುಖ್ಯವಾಗಿ ಗೋಚರಿಸುತ್ತದೆ.

### ಮೂಕನ ಮಕ್ಕಳು ಕಥನ ಕವನ

ಹುಟ್ಟು ಮೂಕನಾದ ವ್ಯಕ್ತಿಗೆ ತಾರುಣ್ಯದಲ್ಲಿ ನೈಸರ್ಗಿಕವಾಗಿ ಹೆಣ್ಣಿನಾಸೆ ಚಿಗುರುತ್ತದೆ. ಹೆಣ್ಣು ಕೊಡುವವರಾರು? ಅನುಭಾವಿಯೊಬ್ಬ ಮೂಕನ ಪರಿಸ್ಥಿತಿಗೆ ಮರುಗಿ ಆತನನ್ನು ಆ ಪರಿಸ್ಥಿತಿಯಿಂದ ಹೊರತರಲು ಮೂರು ಸಸಿಗಳನ್ನು ಕೊಟ್ಟು ಅವುಗಳನ್ನು ಮಕ್ಕಳಂತೆ ಪೋಷಿಸಿ ಬೆಳೆಸಲು ಹೇಳುತ್ತಾನೆ. ಮೂಕ ಅವುಗಳನ್ನು ನೆಟ್ಟು ತನ್ನ ಮಕ್ಕಳಂತೆ ಪ್ರೀತಿಯಿಂದ ಬೆಳೆಸುತ್ತಾನೆ. ಊರಿನ ಜನ ಆ ಮರಗಳನ್ನು ಮೂಕನ ಮಕ್ಕಳೆಂದೇ ಕರೆಯುತ್ತಾರೆಂದು ಕವಿ ಹೇಳುತ್ತಾರೆ. ಮೂಕ ಬಯಸಿದ್ದು ಒಂದು ಹೆಣ್ಣಿನ ಸಾಮಿಪ್ಯವನ್ನು. ಆತನಿಗೆ ಪ್ರಯತ್ನಪಟ್ಟು ಹುಡುಕಿದ್ದರೆ ಒಂದು ಹೆಣ್ಣು ದೊರೆಯುತ್ತಿತ್ತು. ಆದರೆ ಗಿಡಗಳು ಆತನ ಮನಸ್ಸನ್ನು ಮುದಗೊಳಿಸಬಹುದು. ಆತನ ಪ್ರೀತಿ, ವಾತ್ಸಲ್ಯ ಬೇರೆಡೆಗೆ ತಿರುಗಿಸಬಹುದಷ್ಟೆ. ಆತ ಬಯಸಿದ್ದು ಈಡೇರಲಿಲ್ಲ, ಆದರೂ ಜೀವನವನ್ನು ಮತ್ತೊಂದು ರೀತಿಯಲ್ಲಿ ಸಾರ್ಥಕಪಡಿಸಿಕೊಂಡನೆಂದೇ ಹೇಳಬಹುದು.

### ಗ್ರಂಥಋಣ

1. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ : ಎಸ್.ಅನಂತನಾರಾಯಣ.
2. ಶ್ರೀನಿವಾಸ ಸಾಹಿತ್ಯ ; ಸಂ. ಡಾ. ಹಾ.ಮಾ.ನಾಯಕ.
3. ಮಾಸ್ತಿಯವರ ಕಾವ್ಯ - ಒಂದು ಅಧ್ಯಯನ : ಡಾ. ಸಿ.ಪಿ.ಸಿದ್ದಾಶ್ರಮ.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಆಮೂರ ಅವರ 'ನೀರಮೇಲಣ ಗುಳ್ಳೆ' ಯೊಳಗಿನ ಪ್ರಶ್ನೆಗಳು

**ಡಾ. ಸ್ವಾಮಿ ನ ಕೋಡಿಹಳ್ಳಿ.**
ಉಪನ್ಯಾಸಕರು, ಕನ್ನಡ ವಿಭಾಗ,
ಸ್ಕೂಲ್ ಆಫ್ ಲಿಂಗ್ವಿಸ್ಟಿಕ್ಸ್ ಅಂಡ್ ಲಾಂಗ್ವೇಜ್
ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಾಸರಗೋಡು.
swamykn85@gmail.com , ಮೊಬೈಲ್: 09845346098

## ಪ್ರಸ್ತಾವನೆ

ಆತ್ಮಚರಿತ್ರೆ ಕನ್ನಡ ಕಥನ ಸಾಹಿತ್ಯದ ಹೊಸರೂಪಗಳಲ್ಲಿ ಒಂದು. ವ್ಯಕ್ತಿಯು ತನ್ನ ಜೀವನಾನುಭವಗಳನ್ನು ವೈಯಕ್ತಿಕ ನೆಲೆಗಿಂತ ಭಿನ್ನವಾಗಿ ಸಾಮಾಜಿಕ ನೆಲೆಯಲ್ಲಿ ಅವಲೋಕಿಸುವ ಸಾಹಿತ್ಯಪ್ರಕಾರ. ಬರಹಗಾರನ ಬದುಕಿನ ಸಿಂಹಾವಲೋಕನ ಕ್ರಮವಾಗಿದ್ದರೂ ವಯಕ್ತಿಕತೆಗಿಂತ ಭಿನ್ನವಾದ ಸಾಮಾಜಿಕ ಜೀವನಕ್ರಮದ ಅಭಿವ್ಯಕಿಯನ್ನು ಇಲ್ಲಿ ಕಾಣಬಹುದು. ಆತ್ಮಕಥೆಯಲ್ಲಿ ಕಲಾತ್ಮಕತೆಯ ಜೊತೆಗೆ ವಾಸ್ತವಿಕ ಜೀವನಕ್ರಮವನ್ನು ನಿರೀಕ್ಷಿಸಬಹುದು. ಒಬ್ಬನ ಬದುಕನ್ನು ಓದುವುದರ ಜೊತೆಗೆ ಆ ಕಾಲಘ ಸಾಮಾಜಿಕ ಜೀವನಕ್ಕೆ ಆತ್ಮಕಥನಕಾರ ಸ್ಪಂದಿಸಿದ ಬಗೆ ತಿಳಿಯುತ್ತದೆ. ಸಾಹಿತ್ಯೇತರ ವ್ಯಕ್ತಿಗಳಿಂದ ರಚಿತವಾದ ಆತ್ಮಕತೆಗಳು ಭಿನ್ನ ಜ್ಞಾನಶಾಖೆಗಳ ಅರಿವನ್ನು ಪಡೆಯಲು ನೆರವಾಗಬಲ್ಲವು. ಸಾಹಿತಿಯೂ ಅಧ್ಯಾಪಕರೂ ಆದ ಜಿ.ಎಸ್ ಆಮೂರರ ಆತ್ಮಕಥೆ ನೀರಮೇಲಣ ಹುಳ್ಳೆಯಲ್ಲಿ ಅವರ ಈ ಎರಡೂ ಕ್ಷೇತ್ರಗಳ ಅನುಭವ ಜನ್ಯ ವಿಚಾರವನ್ನು ಗ್ರಹಿಸಬಹುದಾಗಿದೆ. ಇಲ್ಲಿ ತಮ್ಮ ವಯಕ್ತಿಕ ಜೀವನಕ್ಕಿಂತ ತಮ್ಮ ಅಧ್ಯಾಪನ ಮತ್ತು ಸಾಹಿತ್ಯದ ಬಗೆಗೆ ವಿಶೇಷವಾದ ಬೆಳಕನ್ನು ಚಲ್ಲಿದ್ದಾರೆ. ಇಷ್ಟಾದರೂ "ನೀರ ಮೇಲಣ ಗುಳ್ಳೆ" ಓದಿದ ಮೇಲೆ ಒಂದು ಗೊಂದಲ ನಮ್ಮೊಳಗೆ ಮಿಸುಕಾಡತೊಡಗುತ್ತದೆ. ಅದೇನೆಂದರೆ ವಿಚಾರಶೀಲ ವಿಮರ್ಶಕರಾದ ಆಮೂರರು ಕಾಣದ ಕೈಗಳನ್ನು ನಂಬಿ ತಮ್ಮ ಬದುಕನ್ನು ಅನಾಮತ್ತಾಗಿ ಅಲೌಕಿಕ ಶಕ್ತಿಯ ಕೈಗಿಟ್ಟು ತಾವು ನಿರುಮ್ಮಳವಾಗಿದ್ದುಬಿಡುತ್ತಾರಲ್ಲ ಇವರ ವಿಮರ್ಶನ ಮೊನಚು ಕೇವಲ ಬರಹಕ್ಕೆ ಮಾತ್ರ ಸೀಮಿತವಾಗಿತ್ತೆ? ಎಂದು. ಕೊನೆಯದಾಗಿ ಆತ್ಮಚರಿತ್ರೆಯನ್ನಾಗಲಿ, ಜೀವನಚರಿತ್ರೆಯನ್ನಾಗಲಿ ಓದಿಮುಗಿಸಿದೆ ಎಂದು ಹೇಳಲಾಗದು. ಇವು ಕೇವಲ ಕಲ್ಪನೆ, ವಿಶ್ಲೇಷಣೆ, ವ್ಯಾಖ್ಯಾನಗಳಾಗಿರುವುದಿಲ್ಲ ಅನುಭವದ ತುಡಿತಗಳಾಗಿರುತ್ತವೆ. ಬರಹಗಾರನ ಅನುಭವ ಓದುಗನ ಅನುಭವದೊಂದಿಗೆ ಬೆರೆತಾಗ ಓದು ಪ್ರಾರಂಭವಾಗುತ್ತದೆ ಎಂದು ಹೇಳಬಹುದು.

ಆತ್ಮಕಥೆ ವ್ಯಕ್ತಿಯು ತನ್ನ ಬದುಕನ್ನು ಇತರರು ಓದುವಂತೆ ಮಾಡುವುದು. ಯಾವ ಒಬ್ಬ ವ್ಯಕ್ತಿಯು ತಾನು ಮುಂದೆ ಬರೆಯಬಹುದಾದ ಆತ್ಮಕಥೆಯ ಬಗ್ಗೆ ಪೂರ್ವ ಯೋಜಿತವಾಗಿ ಮಾಹಿತಿಯನ್ನು ಸಂಗ್ರಹಿಸಿಟ್ಟಿರುವುದಿಲ್ಲ. ಹೆಚ್ಚೆಂದರೆ 'ದಿನಚರಿ' ಯ ರೂಪದಲ್ಲಿ ಅಂದಂದಿನ ಘಟನೆಗಳನ್ನು ಬರೆದಿಟ್ಟಿರಬಹುದು. ಆದರೆ ಈ ದಿನಚರಿ ಆತ್ಮಕಥೆಯಷ್ಟು ಕಲಾತ್ಮಕವಾಗಿರುವುದಿಲ್ಲ. ಪೂರ್ವ ಯೋಜಿತ ಕಾರ್ಯಕ್ರಮಗಳ ಪಟ್ಟಿಯ ರೀತಿಯಲ್ಲೊ, ಇಲ್ಲವೆ, ಆ ದಿನದ ಮುಖ್ಯ ಘಟನೆಯ ರೀತಿಯಲ್ಲೋ ದಿನಚರಿಯ ಬರವಣಿಗೆ ಸಾಗಿರುತ್ತದೆ. ಇವಿಷ್ಟೇ ಆತ್ಮಚರಿತೆಯ ಬರಹಕ್ಕೆ ಪೂರಕವಾಗಲಾರವು. ವ್ಯಕ್ತಿ ಕಂಡ ಜೀವನಾನುಭವಗಳು ಆತನ ಕಲಾತ್ಮಕತೆಯಲ್ಲಿ ಬೆರೆತು ಆತ್ಮಕತೆ ಜನ್ಮ ತಾಳುತ್ತದೆ. "ಆತ್ಮಚರಿತೆ ಆಂದರೆ ಅದು

ಕೇವಲ ತಮ್ಮ ವಯಕ್ತಿಕ ಬದುಕೇ ಆಗಿದ್ದರೂ ಕೌಟುಂಬಿಕವಾಗಿ ಮತ್ತು ಸಾಮಾಜಿಕವಾಗಿ ಇತರರ ಬದುಕೂ ಕೂಡಾ ತಮ್ಮ ಬದುಕಿನೊಂದಿಗೆ ಹೆಣೆದುಕೊಂಡಿರುವುದರಿಂದ ಆ ಇತರರ ಮನೋಭಾವ, ಅವರ ಸ್ಥಾನಮಾನ ಮತ್ತು ಅದನ್ನು ಚಿತ್ರಿಸುವಾಗ ಆಗುವ ಪರಿಣಾಮವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡೇ ಆತ್ಮಕತೆ ಬರೆಯಬೇಕಾಗುತ್ತದೆ." (ಪುಟ:18. ಮಹಿಳಾ ಆತ್ಮಕಥೆಗಳು: ಅನುಸಂಧಾನ) ಆದ್ದರಿಂದ ಕಲಾತ್ಮಕಥೆಯ ಜೊತೆಗೆ ವಾಸ್ತವಾಂಶ ಸದಾ ಜಾಗೃತವಾಗಿರಬೇಕಾಗುತ್ತದೆ.

ಆತ್ಮಕಥೆಯ ಇತಿಹಾಸದ ಬಗ್ಗೆ ಆಲೋಚಿಸುವುದಾರೆ "ಬಹುಮಟ್ಟಿಗೆ ಯುರೋಪ್ ಖಂಡದಲ್ಲಿ ಆತ್ಮಕಥೆಯ ಹುಟ್ಟು ಮತ್ತು ಬೆಳವಣಿಗೆ ಒಂದು ಕಾರಣ ಕ್ರೈಸ್ತಮತದ ಮುಖ್ಯ ಆಚರಣೆಗಳಲ್ಲೊಂದಾದ ಪಾಪನಿವೇದನೆ... ಈಗ ದೊರೆತಿರುವ ಗ್ರಂಥಗಳ ಆಧಾರದ ಮೇಲೆ ಕ್ರಿ.ಪೂ.120-80ರಲ್ಲಿ ಜೀವಿಸಿದ್ದ ಮಾರ್ಕಸ್ ಅರೀಲಿಯಸ್ ಎಂಬ ರಾಜನ 'ಮೆಡಿಟೇಷನ್ಸ್' ಎಂಬ ಕೃತಿಯೇ ಆತ್ಮಕತೆಯ ಗುಂಪಿಗೆ ಸೇರಿದ ಬರವಣಿಗೆಗಳಲ್ಲಿ ಅತ್ಯಂತ ಹಳೆಯದು. ಮುಂದೆ 'ಸೇಂಟ್ ಆಗಸ್‌ಟೀನ್' ಎಂಬುವವನು ಕ್ರಿ.ಶ. 350-430ರಲ್ಲಿ ಬರೆದ 'ಕನ್‌ಫೇಷನ್ಸ್' ಎಂಬ ಕೃತಿ ಈ ಮಾರ್ಗದಲ್ಲಿ ಒಂದು ಮೈಲಿಗಲ್ಲು" . (ಪುಟ:31. ಮಹಿಳಾ ಆತ್ಮಕಥೆಗಳು: ಅನುಸಂಧಾನ) ಕನ್ನಡ ಆತ್ಮಚರಿತೆಗಳ ಪರಂಪರೆ ಆರಂಭವಾದದ್ದು ಅನುವಾದ ಸಾಹಿತ್ಯದ ಮೂಲಕ. ಗಾಂಧೀಜಿಯವರ ಆತ್ಮಕಥೆಯನ್ನು 'ನನ್ನ ಸತ್ಯಶೋಧನೆ' ಎಂಬ ಹೆಸರಿನಲ್ಲಿ ನಿಟ್ಟೂರು ಶ್ರೀನಿವಾಸ ದಂಪತಿಗಳು ಅನುವಾದಿಸುವ ಮೂಲಕ ಇದನ್ನು ಆರಂಭಿಸಿದರು ಎಂದು ಶಶಿಕಲಾ ವೀರಯ್ಯಸ್ವಾಮಿಯವರು ಹೇಳುತ್ತಾರೆ. 1936ರಲ್ಲಿ ಪ್ರಕಟವಾದ ದಿ.ಹರ್ಡೇಕರ ಮಂಜಪ್ಪನವರ 'ನನ್ನ ಕಳೆದ ಮೂವತ್ತು ವರುಷಗಳು' ಕನ್ನಡದ ಮೊಟ್ಟಮೊದಲ ಆತ್ಮಚರಿತೆ. ವಾಸಂತಿ ಪಡುಕೋಣೆ ಅವರು 1977ರಲ್ಲಿ 'ಜೀವನ ಹೋರಾಟ' ಎಂಬ ಆತ್ಮಕತೆಯನ್ನು ಪ್ರಕಟಿಸಿದರು. ಇದು ಕನ್ನಡದ ಮೊದಲ ಮಹಿಳಾ ಆತ್ಮಕತೆ ಎನಿಸಿದೆ. ಹೀಗೆ ಪುರುಷರು ಆತ್ಮಕತೆಯನ್ನು ಆರಂಭಿಸಿದ ಸರಿಸುಮಾರು ನಾಲ್ಕು ದಶಕಗಳ ನಂತರ ಮಹಿಳೆಯರು ಆತ್ಮಕತೆಗಳನ್ನು ಬರೆಯಲು ಆರಂಭಿಸಿದರು. ಇದು ಕೇವಲ ಕಾಲದ ಲೆಕ್ಕಾಚಾರವಲ್ಲ. ಮಹಿಳೆಗೆ ತನ್ನ ಬಗ್ಗೆ ತಾನೇ ಬರೆದುಕೊಳ್ಳಲು ಇರುವ ಹಿಂಜರಿಕೆ, ಕುಟುಂಬವೇ ಸರ್ವಸ್ವವಾಗಿರುವಾಗ ಅಲ್ಲಿನ ಏಳು ಬೀಳುUಳÀನ್ನು ಯಥಾವತ್ತಾಗಿ ದಾಖಲಿಸಲಾಗದÀ ಸಂದಿಗ್ಧತೆ. ಪುರುಷನಿಗೆ ತನ್ನ ಒಳಗಿನ(ಕುಟುಂಬ)ದಕ್ಕಿಂತ ಹೊರಗಿನ(ಸಮಾಜ)ದ್ದು ಮುಖ್ಯವೆನಿಸುತ್ತದೆ. ಆದರೆ ಹೆಣ್ಣಿಗೆ ಕುಟುಂಬ ಮೊದಲು ಆನಂತರದ್ದು ಸಮಾಜ. ಹೊರಗಿನ ಸಮಾಜವನ್ನು ವಿವರಿಸಿಕೊಂಡಷ್ಟು ಮುಕ್ತವಾಗಿ ಒಳಗಿನ ಕುಟುಂಬವನ್ನು ವಿವರಿಸಿಕೊಳ್ಳಲಾಗದು. ಜೊತೆಗೆ ಹೆಣ್ಣು ವ್ಯಾಖ್ಯಾನಿಸಿಕೊಳ್ಳುವುದು ತನ್ನ ಬದುಕಾದರೂ ಅಲ್ಲಿ ಪುರುಷ ಚಿಂತನೆ ಕಣ್ಣಾವಲಾಗಿರುತ್ತದೆ. ಇವೆಲ್ಲವುಗಳಿಂದ ಬಿಡುಗಡೆ ಹೊಂದಿ ಹೆಣ್ಣು ಆತ್ಮಚರಿತೆ ಪ್ರಕಾರಕ್ಕೆ ಕೈ ಹಾಕಲು ಇಷ್ಟು ಕಾಲ ಬೇಕಾಯಿತು.

"ನನ್ನ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು ನಾನು ಹೇಗೆ ಎದುರಿಸಿದೆ, ಸಂಕಷ್ಟಗಳನ್ನು ಹೇಗೆ ಮೀರಿ ನಿಂತೆ, ದಾಟಿ ಬಂದೆ, ಹೇಗೆ ಜೀವನಮುಖಿಯಾಗಿ ಬೆಳೆದೆ ಎಂಬ ಸಕಾರಾತ್ಮಕ ಭಾವನೆಯಿಂದ ಬರೆದು, ಅದು ಓದುಗರಲ್ಲೂ ಅವರವರ ನಕಾರಾತ್ಮಕ ಭಾವವನ್ನು ಕಳೆದು ಜೀವನ ಪ್ರೀತಿ ಹುಟ್ಟಿಸಿದರೆ ಅಂತಹ ಆತ್ಮಚರಿತ್ರೆ ಸಾರ್ಥಕತೆ ಕಾಣುತ್ತದೆ." (ಪುಟ:31. ಮಹಿಳಾ ಆತ್ಮಕಥೆಗಳು: ಅನುಸಂಧಾನ) ಎಂದು ಹೇಮಲತಾ ಮಹಿಷಿ ಹೇಳುವುದರಲ್ಲಿ ಸಾರ್ಥಕ ಆತ್ಮಕತೆಯೊಂದು ಓದುಗರಲ್ಲಿ ತುಂಬುವ ಜೀವನ ಪ್ರೀತಿಯನ್ನು ತಿಳಿಸುತ್ತದೆ. ಸಾಹಿತ್ಯದ ಎಲ್ಲಾ ಪ್ರಕಾರಗಳ ಆಶಯವೂ ಇದೇ ಆಗಿದೆ. ಆತ್ಮಕತೆಯಲ್ಲಿ ಇತರ ಸಾಹಿತ್ಯ ಪ್ರಕಾರಗಳಂತೆ ಕಾಲ್ಪನಿಕತೆಗಾಗಲಿ, ಕವಿಸಮಯಕ್ಕಾಗಲಿ ಅವಕಾಶ ತೀರ ಕಡಿಮೆ. ಆತ್ಮಕತೆ ವಾಸ್ತವಿಕತೆಯ ಜೊತೆಯಲ್ಲಿಯೇ ಸಾಗಬೇಕಾಗುತ್ತದೆ. ಆತ್ಮಕತೆಗೆ ಅದರದೇ ಆದ ಓದುವ ವಲಯವೊಂದಿರುತ್ತದೆ. ಈ ವಲಯದಲ್ಲಿ ಬಂಧುಗಳು, ಸ್ನೇಹಿತರು, ಸಹೋದ್ಯೋಗಿಗಳು, ಅಭಿಮಾನಿಗಳು, ಎಂಬ ಈ ನಾಲ್ಕು ವಲಯಗಳಲ್ಲಿ ಆತ್ಮಚರಿತೆಯ ಓದಿಗೆ ತೊಡಗಿರುತ್ತಾರೆ. ಹಾಗಂತ ಬೇರೆಯವರು ಆತ್ಮಚರಿತ್ರೆಯನ್ನು ಓದುವುದಿಲ್ಲವೆಂದಲ್ಲ. ಆತ್ಮಚರಿತೆ ಬಿಡುಗಡೆಯಾದ ಕಾಲಕ್ಕೆ ಈ ನಾಲ್ಕು ವಲಯದ ಜನ ಪುಸ್ತಕಕ್ಕಾಗಿ ಕಾದಿರುತ್ತಾರೆ. ಆಗ ಸಹಜವಾಗಿಯೇ ಆ

ಕೃತಿಯಲ್ಲಿ ದಾಖಲಾಗಿರುವ ಘಟನೆಗಳು, ವಿವರಗಳು, ಈ ನಾಲ್ಕು ವಲಯದವರ ಒಡನಾಟದ ಘಟನೆ ಮತ್ತು ವಿವರಗಳೊಂದಿಗೆ ಹೋಲಿಕೆ-ವ್ಯತ್ಯಾಸಗಳನ್ನು ಓದುಗರು ಗ್ರಹಿಸುತ್ತಾರೆ. ಈ ಸಂದರ್ಭದಲ್ಲಿ ಕೃತಿಕಾರನಿಂದ ಮುಚ್ಚಿಡಲ್ಪಟ್ಟ ಅಂಶಗಳೆಷ್ಟು ಅತಿರಂಜಕವಾದ ಅಂಶಗಳೆಷ್ಟು ಎಂಬ ನಿಷ್ಕರ್ಷೆ ನಡೆದೇ ತೀರುತ್ತದೆ. ಈ ಸಂದರ್ಭದಲ್ಲಿ ಗಟ್ಟಿತನವನ್ನು ಉಳಿಸಿಕೊಂಡ ಕೃತಿಗಳು ಮುಂದಿನ ತಲೆಮಾರಿಗೆ ಉಳಿದುಕೊಳ್ಳುತ್ತವೆ. ಗಾಂಧೀಜಿಯವರ ಆತ್ಮಕಥೆ 'ನನ್ನ ಸತ್ಯಾನ್ವೇಷಣೆ', ಕುವೆಂಪು ಅವರ 'ನೆನಪಿನದೋಣಿಯಲ್ಲಿ', ಸಿದ್ಧಲಿಂಗಯ್ಯನವರ 'ಊರುಕೇರಿ', ಗುಬ್ಬಿ ವೀರಣ್ಣನವರ 'ಕಲೆಯೇ ಕಾಯಕ' ತುಂಬಾಡಿ ರಾಮಯ್ಯನವರ 'ಮಣೆಗಾರ' ಇತ್ಯಾದಿ ಆತ್ಮಚರಿತ್ರೆಗಳು ಅತಿರಂಜಕವಾದವುಗಳಲ್ಲ; ತಮ್ಮ ಕಾಲದ ಸಾಮಾಜಿಕ ಚಿತ್ರಣದೊಂದಿಗೆ ಆತ್ಮಚರಿತ್ರಾಕಾರನ ಬದುಕನ್ನು ಕಟ್ಟಿಕೊಡುವ ಆತ್ಮಚರಿತ್ರೆಗಳಾಗಿವೆ.

ಪ್ರಸ್ತುತ ಜಿ.ಎಸ್.ಆಮೂರ ಅವರ 'ನೀರಮೇಲಣ ಗುಳ್ಳೆ' ಎಂಬ ಆತ್ಮಕತೆ ಈ ಸಂದರ್ಭದಲ್ಲಿ ಆಯ್ದುಕೊಳ್ಳಲು ನನ್ನದೇ ಆದ ಕಾರಣಗಳಿವೆ. ಇವರು ಕನ್ನಡ ಮತ್ತು ಇಂಗ್ಲೀಷ್ ವಿಮರ್ಶಾ ಸಾಹಿತ್ಯ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿರುವವರು. ಜೊತೆಗೆ ಶಿಕ್ಷಕ ವೃತ್ತಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದವರು. ಈ ಎರಡು ಕ್ಷೇತ್ರಗಳ ಬಗೆಗಿನ ನನ್ನ ಆಸಕ್ತಿ 'ನೀರಮೇಲಣ ಗುಳ್ಳೆ' ಯನ್ನು ಓದಲು ಪ್ರೇರೇಪಿಸಿತು. ಏಕೆಂದರೆ "ಒಂದು ಆತ್ಮಕಥನದ ಓದು ಎಂದರೆ ಓರ್ವ ವ್ಯಕ್ತಿಯ ಮತ್ತು ಅವರ ಬದುಕಿನೊಂದಿಗೆ ನಡೆಸುವ ಅನುಸಂಧಾನ" (ಪುಟ:4. ಮಹಿಳಾ ಆತ್ಮಕಥೆಗಳು: ಅನುಸಂಧಾನ)ವಾಗಿರುತ್ತದೆ. ಎನ್ನುವ ಸಬಿಹಾ ಭೂಮಿಗೌಡರು ಮುಂದುವರೆದು "ಆತ್ಮಕಥೆ ಬರೆಯುವವರೂ ತಾವು ಆದು ಬಂದ ಸುಖದ ದಿನಗಳ ಜೊತೆಗೆ, ಎದುರಾದ ಇಕ್ಕಟ್ಟುಗಳನ್ನು ನಿರ್ವಹಿಸಿದ ಬಗೆ, ಮೀರಿದ ಬಗೆಯನ್ನು ತೆರೆದಿಟ್ಟಲ್ಲಿ ಅಂಥ ಆತ್ಮಕಥೆಗಳ ಓದು ನಮಗೆ ಒಂದು ಬಗೆಯ ಧೈರ್ಯ, ಸಮಸ್ಯೆಯನ್ನು ಎದುರಿಸುವ ಗಟ್ಟಿತನ, ವೈಯಕ್ತಿಕ ಮಿತಿಗಳನ್ನು ಮೀರುವ ಶಕ್ತಿ ಮತ್ತು ಸಾಂಘಿಕ ಬದುಕಿನ ಹರಹು ಮತ್ತು ಸುಖಗಳನ್ನು ತಿಳಿಸಿಕೊಡುತ್ತವೆ."(ಪುಟ:6. ಮಹಿಳಾ ಆತ್ಮಕಥೆಗಳು: ಅನುಸಂಧಾನ) ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ "ಜಗತ್ತಿನ ಎಲ್ಲಾ ಆತ್ಮಚರಿತ್ರೆಗಳೂ ಬೋಗಸ್" ಎನ್ನುವ ಬೇಕನ್‌ನ ಮಾತು 'ವೈಯಕ್ತಿಕ ಸತ್ಯ' ವೇ ಹೊರತು 'ಸಾರ್ವತ್ರಿಕ ಸತ್ಯ' ವಾಗಲಾರದು. "ತನ್ನನ್ನು ತಾನು ತಿಳಿದುಕೊಳ್ಳದೆಯೆ ಅಥವಾ ಆ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸದೆಯೆ ಆತ್ಮಚರಿತ್ರೆಯನ್ನು ಯಾರು ಬರೆಯಲಾರರು" ಎನ್ನುವ ಆಮೂರರ ಮಾತು ಇದಕ್ಕೆ ಪುಷ್ಟಿಕೊಡುತ್ತದೆ.

ಜಿ.ಎಸ್.ಆಮೂರ ಅವರು ಪುರಂದರದಾಸರ 'ನೀರಮೇಲಣ ಗುಳ್ಳೆ' ಎಂಬ ರೂಪಕವನ್ನು ತಮ್ಮ ಆತ್ಮಕತೆಯ ಶೀರ್ಷಿಕೆಯಾಗಿ ಬಳಸಿಕೊಂಡಿದ್ದಾರೆ. ಸೃಷ್ಟಿಯ ಅಸ್ಥಿರವಾದ ಈ ರೂಪಕವನ್ನು ಬಳಸಿಕೊಳ್ಳುವ ಮೂಲಕ ತಮ್ಮ ಬದುಕಿನ ಅನೇಕ ಹೊಳಹುಗಳನ್ನು ಆಮೂರರು ನೀಡಿದ್ದಾರೆ. ಈ ಆತ್ಮಕತೆಯಲ್ಲಿ 'ಮನೆ', 'ವೃತ್ತಿ', 'ಪ್ರವೃತ್ತಿ', ಎಂಬ ಮೂರು ಭಾಗಗಳಿವೆ. ಆಮೂರ ಅವರು 'ನೀರಮೇಲಣ ಗುಳ್ಳೆ' ಆತ್ಮ ಚರಿತ್ರೆಯಲ್ಲ ಹೀಗಾಗಿ ಇದರ ಕ್ರಮ ಐತಿಹಾಸಿಕವಾಗಲಾರದು(ಪುಟ:6) ಎಂದಿದ್ದಾರೆ. ಇವರ ಪ್ರಕಾರ "ಆತ್ಮಚರಿತ್ರೆ ಎಂದರೆ ಜಾಗೃತ ಜೀವನವನ್ನು ಮತ್ತೊಮ್ಮೆ ಅನುಭವಿಸುವುದು" (ಪುಟ:4) ಅದ್ದರಿಂದ 'ನಾನು, ನನ್ನ ಬದುಕು' ಕುರಿತು ತಮ್ಮ ನೆನಪನ್ನು ಆಧರಿಸಿ ತಮ್ಮದೇ ಆದ ರಚನಾ ಕ್ರಮವನ್ನು ಅನುಸರಿಸಿ ಬರೆದಿದ್ದಾರೆ. ಈ ಕಾರಣಕ್ಕಾಗಿ ಹೆಂಡತಿಯ ಸಾವಿನೊಂದಿಗೆ ಇವರ ಬದುಕು ಓದುಗರೆದುರು ತೆರೆದುಕೊಳ್ಳುತ್ತದೆ.

ಮೊದಲ ಭಾಗ 'ಮನೆ' ಯನ್ನು ತಮ್ಮ ಹೆಂಡತಿ ಶಾಂತಾ ಅವರನ್ನು ಕೇಂದ್ರೀಕರಿಸಿ ಬರೆದಿದ್ದಾರೆ. ಇದು ಅವರ ವೈಯಕ್ತಿಕತೆ ಜೀವನದ ಭಾಗವಾದರೂ ಮುಂದಿನ ಎರಡೂ ಭಾಗಗಳ ಸೂಕ್ಷ್ಮ ಎಳೆಗಳನ್ನು ಈ ಭಾಗದಲ್ಲಿ ತೆರೆದಿಟ್ಟಿದ್ದಾರೆ. ಶಾಂತಾ-ಆಮೂರರರ ಮದುವೆಗೆ ಕಾರಣರಾದವರು ಶಾಂತಾ ಅವರ ಅಣ್ಣ ರಾಮು. ಇವರು ಆಮೂರರ ಆಪ್ತ ಸ್ನೇಹಿತ ಕೂಡ. ಇವರ ಸ್ನೇಹದ ನೆನಪಾಗಿ ಆಮೂರರು ಇಂಗ್ಲಿಷಿನಲ್ಲಿ "ಟು ಆರ್.ಕೆ.ಜೆ" ಪದ್ಯ ಬರೆದದ್ದು ಅವಿಸ್ಮರಣೀಯವಾದದ್ದು. ರಾಮುವಿನ ಪ್ರೇರಣೆಯಿಂದಲೇ ಆಮೂರರು ರಾಯಿಸ್ಟ ಚಳುವಳಿಯತ್ತ

ಆಕರ್ಷಿತರಾಗುತ್ತಾರೆ. ಆದರೆ ಮೂಮೆಂಟ್ ಜೊತೆಗಿನ ತಮ್ಮ ಒಡನಾಟವನ್ನು ಆಮೂರರು ಮತ್ತೆಲ್ಲೂ ದಾಖಲಿಸಿಲ್ಲ. ಮಹಾತ್ಮಗಾಂಧಿಯವರ ಚಳವಳಿಗಳು, ಡಾ.ಅಂಬೇಡ್ಕರರ ಚಳುವಳಿ, ಸಮಾಜವಾದೀ ಸಂಘಟನೆಯ ಉದಯ- ಇಂತಹ ಕ್ರಾಂತಿಕಾರಕ ಘಟನೆಗಳು ನಡೆದದ್ದು ನನ್ನ ಜೀವಮಾನದಲ್ಲಿಯೆ ಎಂದು ತಮ್ಮ ನೆನಪನ್ನು ಮೆಲುಕು ಹಾಕುತ್ತಾರೆ. ವಿಮರ್ಶಕರಾಗಿ ಬರೆಯುವಾಗ ಎದುರಿಸದ ಕಷ್ಟವನ್ನು ಆತ್ಮಚರಿತ್ರೆಯನ್ನು ಬರೆಯುವಾಗ ಎದುರಿಸುತ್ತಾರೆ. ತಾವು ನಿರೂಪಿಸುತ್ತಿರುವ ವಿಷಯ ಈ ಸಂದರ್ಭಕ್ಕಲ್ಲ ಎಂದೂ; ಹೇಳಬಾರದನ್ನು ಇಲ್ಲಿ ಹೇಳಿಬಿಟ್ಟೆನೆಂಬ ಒತ್ತಡಕ್ಕೆ ಒಳಗಾಗಿ ನಿರೂಪಣೆಯನ್ನು ಮತ್ತೆ ಹೆಂಡತಿಯತ್ತ ತಿರುಗಿಸುತ್ತಾರೆ. ಬಾಡಿಗೆ ಮನೆಗಳ ಬಗ್ಗೆ, ಅಲ್ಲಿನ ಪರಿಸರದ ಬಗ್ಗೆ ವಿವರಿಸಿ ಅದಕ್ಕೊಂದು ಸಮರ್ಥನೆ ಕೊಡುತ್ತಾರೆ. ಮೊದಲ ಭಾಗದಲ್ಲಿ ಭಾವುಕತೆಗೆ ಹೆಚ್ಚಿನ ಆದ್ಯತೆ ಸಿಕ್ಕಿದೆ. ಈಗಾಗಲೇ ಹೇಳಿದಂತೆ ಅವರ ಹೆಂಡತಿಯ ಸುತ್ತಲಿನ ಘಟನೆಗಳು ಅನಾವರಣಗೊಂಡು ಉಳಿದಂತೆ ಮುಂದಿನ ಭಾಗಕ್ಕೆ ದೂಡಲ್ಪಟ್ಟಿವೆ.

"ನಾನು ತಾತ್ವಿಕವಾಗಿ ವಿಚಾರವಾದಿ" (ಪುಟ:34) ಎಂದು ಹೇಳಿಕೊಳ್ಳುತ್ತಲೇ ಕುಟುಂಬದಲ್ಲಿ ಘಟಿಸುತ್ತಿದ್ದ ಘಟನೆಗಳಿಗೆ ಅಲೌಕಿಕ ಶಕ್ತಿಗಳು ಕಾರಣವಾಗುತ್ತಿದ್ದವು ಎಂಬ ಘಟನೆಯನ್ನು ವಿವರಿಸುತ್ತಾರೆ. ಇದಕ್ಕೆ ತೇಜಸ್ವಿಯವರ 'ಮಾಯಾಮೃಗ' ಕತೆಯ ವಸ್ತುವನ್ನು ಪೂರಕವಾಗಿ ಚರ್ಚಿಸುತ್ತಾರೆ. ಹೀಗೆ ಕಲಾತ್ಮಕವಾದ ಕಥಾ ಭಾಗವೊಂದನ್ನು ವಾಸ್ತವಿಕ ಘಟನೆಯೊಂದಕ್ಕೆ ಪೋಷಕವಾಗಿಸಿಕೊಳ್ಳುವ ಮೂಲಕ ಮೌಢ್ಯತೆಯನ್ನು ಪುರಸ್ಕರಿಸುವ ತಮ್ಮ ಆಲೋಚನೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಡಾ.ಭಟ್ಟರ ನಾಟಿಮದ್ದಿನ ಘಟನೆಯನ್ನು ಒಪ್ಪಬಹುದಾದರೂ ಜಾತಕದಂತೆ ಮಗ ಎಲೆಕ್ಟ್ರಾನಿಕ್‌ನಲ್ಲಿ ಕೆಲಸಗಿಟ್ಟಿಸಿಕೊಳ್ಳುವುದು; ಆತ್ಮಹತೆÀ್ಯ ಮಾಡಿಕೊಂಡ ಹೆಣ್ಣೊಂದು ಇವರು ಬಾಡಿಗೆ ಮನೆ ಹಿಡಿದ ತಕ್ಷಣ ಇವರ ಮಗುವನ್ನು ಕಾಡುವುದು. ಮನೆ ಬದಲಿಸಿದ ತಕ್ಷಣ ದೆವÀ್ವದ ಕಾಟ ನಿಲ್ಲುವುದರ ಬಗ್ಗೆ ಬರೆದುಕೊಂಡಿರುವುದನ್ನು ಓದಿದಾಗ ಇವರ 'ತಾತ್ವಿಕ ವಿಚಾರವಾದಿ' ತನದ ಬಗ್ಗೆ ಪ್ರಶ್ನೆ ಏಳದೆ ಇರುವುದಿಲ್ಲ. ಶಾಂತಾ-ಆಮೂರ ದಂಪತಿಗಳಿಗೆ ರವಿ, ಶಶಿ, ಜಯಂತ, ಶ್ಯಾಮ, ಎಂಬ ನಾಲ್ಕು ಜನ ಮಕ್ಕಳು. ಮೊದಲ ಇಬ್ಬರು ಮಕ್ಕಳು ಕುಮಟೆಯಲ್ಲಿ ಹುಟ್ಟಿದರು, ಶ್ಯಾಮ ಹುಟ್ಟು ಹಠವಾದಿ, ಬೆಳೆದಂತೆ ಅಮ್ಮನಂತೆ 'ಶಾಂತ' ಚಿತ್ತ. ರವಿಯ ಕೆಲಸದ ಬಗ್ಗೆ ಹೇಳುವುದನ್ನು ಬಿಟ್ಟರೆ ತಮ್ಮ ಕುಟುಂಬದ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವುದಿಲ್ಲ. ಇದೊಂದು ಈ ಭಾಗದ ಕೊರತೆಯಾಗಿದೆ.

ಆತ್ಮಕತೆಯ ಮೊದಲ ಭಾಗದಂತೆ ಎರಡನೆಯ ಭಾಗದಲ್ಲಿಯೂ ಆಮೂರರು ಅಲೌಕಿಕ ಶಕ್ತಿಗಳು ಮನುಷ್ಯನ ಮೇಲೆ ಹಿಡಿತ ಸಾಧಿಸುತ್ತವೆ ಎಂಬ ನಂಬಿಕೆಯಲ್ಲಿಯೇ ಮುಂದುವರೆಯುತ್ತಾರೆ. "ನನ್ನ ಪೌರುಷಕ್ಕಿಂತ ದೈವಕ್ಕೆಯೇ ಪ್ರಾಮುಖ್ಯವಿದೆ. ದೈವಕ್ಕೆ ನೂರಾರು ಕೈಗಳು. ನನ್ನ ಕೈ ಸೋತಾಗಲೆಲ್ಲ, ಬೇರೆ ಕೈಗಳು ನಾನು ಮುಳುಗದಂತೆ ಎತ್ತಿ ಹಿಡಿದಿವೆ." (ಪುಟ:75) ಎಂದು ಸನಾತನಿಯಾಗಿ ಮಾತನಾಡುತ್ತಾರೆ. ಇಷ್ಟಾದರೂ ಈ ಭಾಗದಲ್ಲಿ ಶಿಕ್ಷಣ ಕ್ಷೇತ್ರದ ಅನೇಕ ಏಳು-ಬೀಳುಗಳನ್ನು ತಮ್ಮ ಪರಿಸರವನ್ನು ಆಧರಿಸಿ ಬರೆದಿದ್ದಾರೆ. ಶಿಕ್ಷಕ ವೃತ್ತಿ 'ನೊಬೆಲ್ ವೃತ್ತಿ' (ಆದರ್ಶಯುತವಾದುದು) ಎಂದು ತಿಳಿದವರು ಆಮೂರರು. 1950ರಲ್ಲಿ ಕುಮಟೆಯ ಕೆನರಾ ಕಾಲೇಜಿಗೆ ಶಿಕ್ಷಕರಾಗಿ ಸೇರಿದರು. ಅಲ್ಲಿಂದ ಗದಗ, ಗದಗದಿಂದ ಧಾರವಾಡಕ್ಕೆ, ಅಲ್ಲಿಂದ ಔರಂಗಾಬಾದಿನ ವಿಶ್ವವಿದ್ಯಾಲದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿ ಹೊಂದುವವರೆಗೆ ತಾವು ಇದ್ದಲ್ಲೆಲ್ಲ ವಿಭಾಗಗಳನ್ನು ಕಟ್ಟಿ ಬೆಳೆಸಿದ್ದಾರೆ. ಈ ಮಧ್ಯೆ ಸೀನಿಯರ್ ಫುಲ್ ಬ್ರೈಟ್ ಶಿಷ್ಯ ವೃತ್ತಿ ದೊರೆತು ಅಮೇರಿಕಾದಲ್ಲಿ ಸಂಶೋಧನೆ ಕೈಗೊಂಡರು. ವಿದ್ಯಾರ್ಥಿಪರವಾದ ಆಲೋಚನೆಯಿದ್ದ ಆಮೂರರು ಅನೇಕ ವಿದ್ಯಾರ್ಥಿಗಳ ಬದುಕನ್ನು ರೂಪಿಸಿದ್ದಾರೆ. ಶಿಕ್ಷಕ ಕಾಲಕಾಲಕ್ಕೆ ಮಾಡಬೇಕಾದ ಕೆಲಸಗಳನ್ನು ಮಾಡಿದರೆ ಅದರಿಂದ ವಿದ್ಯಾರ್ಥಿಗಳು ತಮ್ಮ ಬದುಕನ್ನು ಕಟ್ಟಿಕೊಳ್ಳುವುದಲ್ಲದೆ ಸಮಾಜವನ್ನು ಕಟ್ಟುತ್ತಾರೆ. ಶಿಕ್ಷಕನ ಮನಸ್ಸಿನಲ್ಲಿ ವಿದ್ಯಾರ್ಥಿ ಉಳಿಯುವುದು ದೊಡ್ಡದಲ್ಲ; ವಿದ್ಯಾರ್ಥಿಯ ಮನಸ್ಸಿನಲ್ಲಿ ಶಿಕ್ಷಕ ಉಳಿಯಬೇಕು. ಇದಕ್ಕೆ ತರಗತಿಯ ಒಳಗೆ ವಿಷಯಾಧಾರಿತವಾಗಿರುವುದರ ಜೊತೆಗೆ ಹೊರಗೆ ನೈತಿಕತೆಯಿಂದಿರುವುದು ಮುಖ್ಯ. ಆಮೂರರು ಹೇಳುವಂತೆ "ಒಬ್ಬ ವಿದ್ಯಾರ್ಥಿ ಶಿಕ್ಷಕನ ನೆನಪಿನಲ್ಲಿ ಉಳಿಯಬೇಕಾದರೆ ಅವನು ಬ್ರಿಲಿಯಂಟ್ ಆಗಿರಬೇಕು ಇಲ್ಲವೆ

ಕಿಡಿಗೇಡಿಯಾಗಿರಬೇಕು."(ಪುಟ:89) ಎಲ್ಲಾ ಕ್ಯಾಟಗರಿಯ ವಿದ್ಯಾರ್ಥಿಗಳು ಶಿಕ್ಷಕನಿಗೆ ಮುಖ್ಯವಾಗುತ್ತಾರೆ. "ಶಿಕ್ಷಕನ ಉದ್ಯೋಗವೆಂದರೆ ಬರಿಯ ಕ್ಲಾಸುಗಳಲ್ಲಿ ಪಾಠ ಹೇಳುವುದಲ್ಲ. ಅವರಿಗೆ ಅನೇಕ ವಿಷಯಗಳಲ್ಲಿ ಮಾರ್ಗದರ್ಶನ ಮಾಡಬೇಕಾಗುತ್ತದೆ. ಇದು ಒಂದು ಅವಕಾಶವೂ ಹೌದು. ಹೊಣೆಯೂ ಹೌದು."(ಪುಟ:88) ಎನ್ನುವ ಆಮೂರರು ಈ ಹಿನ್ನೆಲೆಯಲ್ಲಿ ಶಿಕ್ಷಕ ವೃತ್ತಿ 'ನೊಬೆಲ್ ವೃತ್ತಿ' ಎನ್ನುತ್ತಾರೆ.

ಪಿಎಚ್.ಡಿ., ಅಭ್ಯರ್ಥಿಯಾಗಿ ನೊಂದಣಿಮಾಡಿಕೊಂಡಾಗಿನಿಂದ ಹಿಡಿದು, ಮಾರ್ಗದರ್ಶಕರಾಗಿ, ಮೌಲ್ಯಮಾಪಕರಾಗಿ ಸಂಶೋಧನೆಯ ವಿಷಯದ ಆಯ್ಕೆಯಿಂದ ಅದನ್ನು ನಿರ್ವಹಿಸಬೇಕಾದ ಕ್ರಮ, ವಿದ್ಯಾರ್ಥಿಗಳ ಆಸಕ್ತಿ, ಮಾರ್ಗದರ್ಶಕರ ಕರ್ತವ್ಯಗಳ ಬಗ್ಗೆ ತಿಳಿಸಿದ್ದಾರೆ. "ವಿದ್ಯಾರ್ಥಿಗಳ ಪ್ರಬಂಧಗಳನ್ನು ಅವರ ಭಾಷೆಯ ದೃಷ್ಟಿಯಿಂದ ಮಾತ್ರ ತಿದ್ದುತ್ತಿದ್ದರು, ವಿಷಯದ ದೃಷ್ಟಿಯಿಂದಲ್ಲ."(ಪುಟ:97) ಆಮೂರರು ಸಂಶೋಧನಾ ವಿಷಯವಾದ 'ಕಾಮಿಡಿ' ಯ ಬಗ್ಗೆ ಸಂಶೋಧನೆಯನ್ನು ಕೈಗೊಂಡಾಗಲೂ ಅನೇಕರು ಇದು ಸಂಶೋಧನೆಯ ವಿಷಯವೇ ಅಲ್ಲ ಎನ್ನುತ್ತಾರೆ. ಮಾರ್ಗದರ್ಶಕರಾದ ಪ್ರೊ. ಮೆನೆಜಿಸ್ ಅವರು "ನೀನು ಏನು ಮಾಡುವವನಿದ್ದೀಯೊ ನನಗೆ ತಿಳಿಯದು, ಆದರೆ ನನಗೆ ನಿನ್ನ ಮೇಲೆ ವಿಶ್ವಾಸವಿದೆ" ಎಂದು ಹೇಳಿ ಜವಾಬ್ದಾರಿಯಿಂದ ನುಣುಚಿಕ್ಕೊಳ್ಳುತ್ತಾರೆ. ಅಧ್ಯಯನಶೀಲರಾದ ಆಮೂರರು ತಮ್ಮ ಸಂಶೋಧನೆಯಲ್ಲಿ ಯಶಸ್ವಿಯಾಗುತ್ತಾರೆ.

ಇನ್ನು ನೌಕರಿ ಸೇರಿಕೊಳ್ಳುವುದಂತು ಇವತ್ತಿನ ಕಾಲದಲ್ಲಿ ಸಾಮಾನ್ಯವಾದ ಸಂಗತಿಯಲ್ಲ. ಈಗಾಗಲೇ ಹೇಳಿದಂತೆ ಶಿಕ್ಷಕ ವೃತ್ತಿ 'ನೊಬೆಲ್' ಇದ್ದಂತೆ. ಇಡೀ ದೇಶ ಅಷ್ಟೇ ಏಕೆ ವಿಶ್ವದ ನಿರ್ವಹಣ ಶಕ್ತಿ ಶಿಕ್ಷಕ. ಇಂತಹ ಶಿಕ್ಷಕನ ಆಯ್ಕೆಯಲ್ಲಿಯೂ ಅರ್ಹತೆಗಳಿಗಿಂತ ಹಣ ಮತ್ತು ಪ್ರಭಾವಗಳು ಕೆಲಸ ಮಾಡುತ್ತಿವೆ ಎನ್ನುವುದನ್ನು ಆಮೂರರು ತಮ್ಮ ಕಾಲದಲ್ಲಿಯೇ ಗುರುತಿಸಿದ್ದಾರೆ. ನನ್ನ ಮೇಷ್ಟ್ರು ಒಬ್ಬರು ಹೇಳುವಂತೆ 'ಇವತ್ತು ಒಂದು ನಾಯಿಯನ್ನು ಅಸಿಸ್ಟೆಂಟ್ ಪ್ರೊಫೆಸರ್ ಎಂದು ನೇಮಕ ಮಾಡಿದರೆ ಇನ್ನು ಹತ್ತು-ಹದಿನೈದು ವರ್ಷಗಳಿಗೆ ಅದು ಪ್ರೊಫೆಸರ್ ಆಗಿಬಿಡುತ್ತದೆ.' ವಿಮರ್ಶೆಯ ಪರಿಭಾಷೆಯಲ್ಲಿ ಇದನ್ನು 'ಐರನಿ' ಎನ್ನುತ್ತಾರೆ. ಹಾಸ್ಯ ಎಂದುಕೊಂಡರೂ ಈ ಮಾತು ಶಿಕ್ಷಣ ವ್ಯವಸ್ಥೆಯ ದುಃಸ್ಥಿತಿಯನ್ನು ತಿಳಿಸುತ್ತದೆ. ಒಬ್ಬ ಅಸಮರ್ಥ ಶಿಕ್ಷಕನಿಂದ 20-30 ತಲೆಮಾರಿನ ವಿದ್ಯಾರ್ಥಿಗಳು ನೇರವಾಗಿ ನಾಶವಾಗುತ್ತಾರೆ. ಆದ್ದರಿಂದ ಶಿಕ್ಷಕ ವೃತ್ತಿಯ ಆಯ್ಕೆಯ ಪದ್ಧತಿಯಲ್ಲಿ "ಆಯ್ಕೆ ಸ್ವಾತಂತ್ರವಾಗಿರಬೇಕು ಹಾಗೂ ಆ ಆಯ್ಕೆಯ ಹೊಣೆಯನ್ನು ಸಂದರ್ಶಕ ಹೊರಬೇಕು ಎಂದೂ ಪರಸ್ಪರ ಪ್ರಭಾವಕ್ಕೆ ಹಾಗೂ ಕ್ಯಾನ್ವಾಸಿಂಗ್‌ಗೆ ಅವಕಾಶ ದೊರೆಯಬಾರದು" (ಪುಟ:153) ಇದನ್ನು ಆಮೂರರು ಜೀವನದುದ್ದಕ್ಕು ಪಾಲಿಸಿಕೊಂಡುಬಂದಿದ್ದಾರೆ.

ಆತ್ಮಚರಿತ್ರೆಯ ಕೊನೆಯ ಭಾಗ ಪ್ರವೃತ್ತಿಗೆ ಸಂಬಂಧಿಸಿದ್ದು. ಪತ್ರಕರ್ತನಾಗಬೇಕು ಎಂದುಕೊಂಡಿದ್ದವರು ಅನಿರೀಕ್ಷಿತವಾಗಿ ಶಿಕ್ಷಕ ವೃತ್ತಿಗೆ ಸೇರುತ್ತಾರೆ. ಇದರ ಒಂದು ಭಾಗವಾಗಿ ಓದಿನಲ್ಲಿ ಕ್ರಿಯಾಶೀಲರಾಗುತ್ತಾರೆ. ತನ್ನದಲ್ಲದ ಇಂಗ್ಲಿಷ್ ಭಾಷೆಯಲ್ಲಿ ಬರವಣಿಗೆ ಆರಂಭಿಸುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿ ಕವಿತೆ, ಕತೆ ಬರೆಯುತ್ತಿದ್ದವರು ಮುಂದೆ ವಿಮರ್ಶಕರಾಗಿ ರೂಪುಗೊಳ್ಳುತ್ತಾರೆ. ವಿಮರ್ಶಕರಾಗಿ ಬೆಳೆಯಲು ಹಾಗೂ ಓದುಗರೊಡನೆ ಕ್ರಿಯಾಶೀಲ ಸಂಬಂಧವನ್ನು ಸಾಧಿಸಲು ಇವರಿಗೆ ಸಾಧ್ಯವಾದದ್ದು ವಿಚಾರ ಸಂಕಿರಣಗಳು ಹಾಗೂ ಪತ್ರಿಕೆಗಳ ಮೂಲಕ. ನಾನೇಕೆ ಬರೆಯುತ್ತೇನೆ? ಎಂಬ ಪ್ರಶ್ನೆ ಎಲ್ಲರಿಗೂ ಕಾಡಿದಂತೆ ಆಮೂರರನ್ನು ಕಾಡಿದೆ. ಅದಕ್ಕೆ ಅವರ ಉತ್ತರ- "ಕೆಲವೇ ಕೆಲವು ಅಪವಾದಗಳನ್ನು ಬಿಟ್ಟರೆ ನನ್ನ ಲೇಖನ ಸಂಪೂರ್ಣವಾಗಿ ವ್ಯಕ್ತಿ ಅಥವಾ ಸಂಸ್ಥೆಗಳ ಅಗತ್ಯಗಳಿಂದ ನಿಯಂತ್ರಿತವಾದದ್ದು" (ಪುಟ:191) ಎಂದು ಖಚಿತಪಡಿಸುತ್ತಾರೆ.

"ಒಂದು ಕವಿತೆಯನ್ನು ತನ್ನಷ್ಟಕ್ಕೆ ತಾನೇ ಹೇಳಿಕೊಂಡಂತೆ ಬರೆಯಬಹುದು, ಕತೆ-ಕಾದಂಬರಿಯಗಳನ್ನು ಆಂತರಿಕ ಒತ್ತಡಗಳಿಂದ ಬಿಡುಗಡೆ ಹೊಂದುವ ಇರಾದೆಯಿಂದ ರಚಿಸಬಹುದು. ಆದರೆ ವಿಮರ್ಶೆ ಓದುಗರನ್ನು ಉದ್ದೇಶಿಸಿ ರಚಿತವಾಗುವ ಒಂದು ಪ್ರಕಾರ" . "(ಪುಟ:190) ಇದರಿಂದ ಓದುಗ ಮತ್ತು

ಲೇಖಕರಿಬ್ಬರಿಗೂ ಲಾಭವಿದೆ ಎಂದು ಆಮೂರರು ನಂಬಿದವರು. ಅವರ ಓದಿನ ವ್ಯಾಪಕತೆಯನ್ನು ಅವರ ಬರಹದಲ್ಲೂ ಗುರುತಿಸಬಹುದು. 'ಸಮಕಾಲೀನ ಕಥೆ-ಕಾದಂಬರಿ' , 'ಅರ್ಥಲೋಕ' , 'ವ್ಯವಸಾಯ' , 'ಸಾತ್ವಿಕ ಪಥ' , 'ಅಮೃತವಾಹಿನಿ' , 'ಸೀಮೋಲ್ಲಂಘನ' , 'ನಿಂದ ಹೆಜ್ಜೆ' , 'ಸಮಾರಾಧನ' , 'ನಿಮಿತ್ತ-ಅನಿಮಿತ್ತ' , 'ನಿರಂತರ' , 'ಹಿಂಗಾರು' , 'ವಿಚಾರಿತ' , 'ಕೊರಳು-ಕೊಳಲು' , ಜೊತೆಗೆ ಬೇಂದ್ರೆಯವರ ಮೇಲಿನ ವಿಶೇಷ ಆಸಕ್ತಿಯಿಂದ 'ಭುವನದ ಭಾಗ್ಯ' , 'ದತ್ತಾತ್ರೇಯ ರಾಮಚಂದ್ರ ಬೇಂದ್ರೆ' , 'ಬೇಂದ್ರೆ ಕಾವ್ಯದ ಪ್ರತಿಮಾ ಲೋಕ' , 'ಸಂಭಾವಿತ' ಎಂಬ ಪುಸ್ತಕಗಳನ್ನೂ ಬರೆದಿದ್ದಾರೆ.

'ಅ.ನ.ಕೃಷ್ಣರಾಯರು' ಕೃತಿಯನ್ನು ಕುರಿತು ಬರೆಯುವ ಸಂದರ್ಭದಲ್ಲಿ "ಜನಪ್ರಿಯವಾದರೂ ಸಾಹಿತ್ಯ ಸಾಹಿತ್ಯವೇ" ಎಂಬ ವಿಚಾರವನ್ನು ಮಂಡಿಸುತ್ತಾರೆ. ಜನಪ್ರಿಯ ಸಾಹಿತ್ಯ ವಿಚಾರವನ್ನು ಗಂಭೀರವಾಗಿ ಪರಿಗಣಿಸದಿದ್ದರೂ, ಸಾಮಾನ್ಯ ಓದುಗನು ಗ್ರಹಿಸಬಹುದಾದ ಆಕರ್ಷಕ ಗುಣವಿರುತ್ತದೆ. ಸಹಜವಾಗಿಯೇ ವಿಮರ್ಶಕರಿಂದ ಅವಜ್ಞೆಗೆ ಒಳಗಾಗುತ್ತದೆ. ಅ.ನ.ಕೃ, ತ.ರಾ.ಸು, ಇತ್ತೀಚಿನ ದಿನಗಳಲ್ಲಿ ಭೈರಪ್ಪನವರ ಕಾದಂಬರಿಗಳು ಈ ರೀತಿಯ ಅವಜ್ಞೆಗೆ ಒಳಗಾಗುತ್ತಿವೆ.

ಲೇಖಕನ ಒಂದು ಕವಿತೆ, ಕತೆ, ಕಾದಂಬರಿಯನ್ನು ಅರ್ಥ ಮಾಡಿಕೊಳ್ಳುವುದರಿಂದ ಅವನ ಪ್ರತಿಭೆ ಹಾಗೂ ಸಾಧನೆಗಳ ಸಮರ್ಪಕ ಅರಿವು ಸಾಧ್ಯವಾಗುವುದಿಲ್ಲ. ಆದ್ದರಿಂದ ಲೇಖಕನ ಕೃತಿಗಳ ಒಟ್ಟು ಗ್ರಹಿಕೆಯಿಂದ ಲೇಖಕನ ಪ್ರತಿಭೆಯನ್ನು ಗ್ರಹಿಸಬಹುದು ಎಂಬುದು ಆಮೂರ ಅವರ ಅಭಿಪ್ರಾಯ. ಇದರ ಫಲವಾಗಿಯೇ 'ಭುವನದ ಭಾಗ್ಯ' , 'ಅ.ನ.ಕೃಷ್ಣರಾಯರು' , ಆದ್ಯರಂಗಾಚಾರ್ಯ' , ಕೃತಿಗಳು ರಚನೆಗೊಂಡಿವೆ. ವಿಮರ್ಶಕ ಗ್ರಹಿಸಬೇಕಾದದ್ದು ಕೃತಿಯ ಆಂತರ್ಯವನ್ನೇ ಹೊರತು ಕೃತಿಕಾರನ ಖಾಸಗೀ ಜೀವನವಲ್ಲ. ಏಕೆಂದರೆ "ಪ್ರತಿಯೊಬ್ಬ ಲೇಖಕನಿಗೂ ಅವನ ಖಾಸಗೀ ಜೀವನ ಪವಿತ್ರವಾಗಿರುತ್ತದೆ. ಅದನ್ನು ಬಹಿರಂಗಗೊಳಿಸುವುದು ವಿಮರ್ಶಕನ ಧರ್ಮವಲ್ಲ. 'ಸೆನ್ಸೆಷನಲ್' ಆಗಿ ಬರೆಯುವುದು ಬೇರೆ 'ಸೆನ್ಸಿಬಲ್' ಆಗಿ ಬರೆಯುವುದು ಬೇರೆ" (ಪುಟ:206) ಎನ್ನುತ್ತಾರೆ ಆಮೂರರು.

ಭಾಷಾಂತರದ ವಿಷಯವಾಗಿಯೂ ಆಮೂರರು ಕೆಲವು ವಿಚಾರಗಳನ್ನು ಚರ್ಚಿಸುತ್ತಾ "ಭಾಷಾಂತರ ಯಶಸ್ವಿಯಾಗುವುದು ಭಾಷಾಂತರಕಾರ ಬೇರೆ ಭಾಷೆಯ ಕೃತಿಗಳನ್ನು ತನ್ನ ಭಾಷೆಗೆ ತರಲು ಯತ್ನಿಸಿದಾಗ, ತನ್ನ ಭಾಷೆಯ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸುವಾಗ ಅಲ್ಲ" (ಪುಟ:217) ಎನ್ನುತ್ತಾರೆ. ಹಾಗೆಯೆ ಭಾಷಾಂತರ ಕ್ರಿಯೆಯಲ್ಲಿ 'ಲೋಪ' , 'ಆದೇಶ' , 'ಆಗಮ' , ಎಂಬ ಮೂರು ಪರಿಣಾಮಗಳನ್ನು ಚರ್ಚಿಸಿ ಭಾಷಾಂತರ ಕ್ರಿಯೆಯು ಒಂದು ಕಲಾತ್ಮಕ ರಚನೆ ಎಂದಿದ್ದಾರೆ.

**ಸಮಾರೋಪ:**

ನೀರಮೇಲಣ ಗುಳ್ಳೆ ಆತ್ಮಕತೆಯನ್ನು ಓದಿಮುಗಿಸಿದ ಮೇಲೆ ಓದುಗರಾದ ನಮ್ಮಲ್ಲಿ "ನನ್ನದು ಮಾನವತವಾದೀ ಎಡಪಂಥದ ದೃಷ್ಟಿ" (ಪುಟ:228), "ನಾನು ಗಾಂಧೀವಾದಿಯಲ್ಲ. ಆದರೆ 'ಹಿಂದ್ ಸ್ವರಾಜ್' ದಂಥ ಪಠ್ಯಗಳು ನನ್ನನ್ನು ಗಾಢವಾಗಿ ಪ್ರಭಾವಿಸಿವೆ. ಸ್ವದೇಶೀಯ ತತ್ವದಲ್ಲಿ ನನಗೆ ನಂಬಿಕೆಯಿದೆ" .(ಪುಟ:229), "ನನಗೆ ನಾಸ್ತಿಕರ ಮೇಲೆ ದ್ವೇಷವಿಲ್ಲ. ಆದರೆ ನಾನು ಖಂಡಿತವಾಗಿಯೂ ಆಸ್ತಿಕ" (ಪುಟ:229) ಎಂಬ ಈ ಮೂರು ಹೇಳಿಕೆಗಳನ್ನು ಆಮೂರರು ತಮ್ಮ ಆತ್ಮಕತೆಯ ಕೊನೆಯ ಭಾಗದಲ್ಲಿ ದಾಖಲಿಸುತ್ತಾ "ನನ್ನ ತ್ರಿಲೋಕ ಸಂಚಾರದಲ್ಲಿ ಈ ಚಲನಶೀಲ ತಿಳುವಳಿಕೆ(ಜ್ಞಾನ) ತುಂಬಾ ಪ್ರಯೋಜನಕಾರಿಯಾಗಿವೆ" (ಪುಟ:229) ಎಂದಿದ್ದಾರೆ. ಈ ಹೇಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳ ನಡುವಿನ ವಿರೋದಾಭಾಸ ಎಂತಹವರಿಗಾದರೂ ತಿಳಿಯುವಂತಹದ್ದು. "ನೀರ ಮೇಲಣ ಗುಳ್ಳೆ" ಓದಿದ ಮೇಲೆ ಒಂದು ಗೊಂದಲ ನಮ್ಮೊಳಗೆ ಮಿಸುಕಾಡತೊಡಗುತ್ತದೆ. ಅದೇನೆಂದರೆ ವಿಚಾರಶೀಲ ವಿಮರ್ಶಕರಾದ ಆಮೂರರು ಕಾಣದ ಕೈಗಳನ್ನು ನಂಬಿ

ತಮ್ಮ ಬದುಕನ್ನು ಅನಾಮತ್ತಾಗಿ ಅಲೌಕಿಕ ಶಕ್ತಿಯ ಕೈಗಿಟ್ಟು ತಾವು ನಿರುಮ್ಮಳವಾಗಿದ್ದುಬಿಡುತ್ತಾರಲ್ಲ ಇವರ ವಿಮರ್ಶನ ಮೊನಚು ಕೇವಲ ಬರಹಕ್ಕೆ ಮಾತ್ರ ಸೀಮಿತವಾಗಿತ್ತೆ? ಎಂದು. ಕೊನೆಯದಾಗಿ ಆತ್ಮಚರಿತ್ರೆಯನ್ನಾಗಲಿ, ಜೀವನಚರಿತ್ರೆಯನ್ನಾಗಲಿ ಓದಿಮುಗಿಸಿದೆ ಎಂದು ಹೇಳಲಾಗದು. ಇವು ಕೇವಲ ಕಲ್ಪನೆ, ವಿಶ್ಲೇಷಣೆ, ವ್ಯಾಖ್ಯಾನಗಳಾಗಿರುವುದಿಲ್ಲ ಅನುಭವದ ತುಡಿತಗಳಾಗಿರುತ್ತವೆ. ಬರಹಗಾರನ ಅನುಭವ ಓದುಗನ ಅನುಭವದೊಂದಿಗೆ ಬೆರೆತಾಗ ಓದು ಪ್ರಾರಂಭವಾಗುತ್ತದೆ ಎಂದು ಹೇಳಬಹುದು.

**ಆಕರ ಗ್ರಂಥಗಳು**


1. ಆಮೂರ.ಜಿ.ಎಸ್ -ನೀರಮೇಳಣ ಗುಳ್ಳೆ, 2015, ವಸಂತ ಪ್ರಕಾಶನ,
2. ಸಬಿಹಾ ಭೂಮಿಗೌಡ -ಮಹಿಳಾ ಆತ್ಮಕಥೆಗಳು: ಅನುಸಂಧಾನ, 2011, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಪ್ರಾಚೀನ ಕನ್ನಡ ಅನುವಾದ ಸಾಹಿತ್ಯದ ಸಮೀಕ್ಷೆ

**ಸೈಯದ್ ಬಿ.**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583276
ಮೊ : 9880051998, **Gmail :** syducta@gmail.com

## ಪ್ರಸ್ತಾವನೆ

ಯಾವುದೇ ಭಾಷೆಯ ಸಾಹಿತ್ಯ ಬೆಳೆಯಬೇಕಾದರೆ ಅದರ ಮೇಲೆ ಬೀರುವಂತಹ ಇತರೆ ಭಾಷೆಯ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವಗಳು ಮುಖ್ಯ. ಈ ಪ್ರೇರಣೆ, ಪ್ರಭಾವಗಳು ಅನುಕರಣೆ ಮೂಲಕ ಪ್ರವೇಶಿಸಿ ಅನುವಾದಕ್ಕೆ ಒಳಪಡುತ್ತವೆ. ಇಂತಹ ಅನುವಾದಗಳೇ ಮುಂದುವರೆದು ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಒಂದು ಭಾಷೆಯಲ್ಲಿ ರಚನೆಯಾದ ಉತ್ತಮ ಸಾಹಿತ್ಯ ಕೃತಿಯು ತನ್ನ ಭಾಷೆಯ ಇತರೆ ಸಾಹಿತ್ಯ ಕೃತಿಗಳ ಮೇಲೆ ಹಾಗೂ ಕವಿಗಳ ಮೇಲೆ ಪ್ರಭಾವ ಬೀರುವುದರ ಜೊತೆಗೆ, ಅನ್ಯ ಭಾಷೆಯ ಸಾಹಿತ್ಯದ ಮೇಲೂ ಕೂಡ ಪ್ರಭಾವ ಬೀರುತ್ತದೆ. ಅನ್ಯಭಾಷಾ ಸಾಹಿತ್ಯದಿಂದ ಪ್ರಭಾವ ಹಾಗೂ ಪ್ರೇರಣೆಗೊಂಡ ಕೃತಿಯಲ್ಲಿ ಅನ್ಯ ಸಂಸ್ಕೃತಿಯ ಸಂಪರ್ಕವಾಗುತ್ತದೆ. ಆ ಸಂಸ್ಕೃತಿಯನ್ನು ತನ್ನ ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಿ ಮಾಡಿಕೊಳ್ಳುತ್ತದೆ. ಕನ್ನಡ ಸಾಹಿತ್ಯದ ಇತಿಹಾಸವನ್ನೇ ನೋಡಿದಾಗ ಇಲ್ಲಿ ರಚನೆಯಾದ ಅನೇಕ ಕೃತಿಗಳ ಮೇಲೆ ತನ್ನ ಭಾಷೆಯ ಸಾಹಿತ್ಯ ಹಾಗೂ ಅನ್ಯಭಾಷೆಯ ಸಾಹಿತ್ಯದ ಪ್ರೇರಣೆ, ಪ್ರಭಾವಗಳು ಅಪಾರವೆಂಬುದು ಸ್ಪಷ್ಟ. ಆದ್ದರಿಂದ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅನುವಾದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಅದೇ ರೀತಿ ಆಧುನಿಕ ಸಂದರ್ಭದಲ್ಲೂ ಕೂಡ ಅನುವಾದಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದು ಸಾಹಿತ್ಯ ದೃಷ್ಟಿಯಿಂದ ಮಹತ್ವವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಇಂದು ಹೆಚ್ಚಾಗಿ ಅನುವಾದಕ್ಕೆ 'ಅನುವಾದ ಸಾಹಿತ್ಯ' ವೆಂದು ಬಳಸುವುದಕ್ಕಿಂತ 'ಭಾಷಾಂತರ ಸಾಹಿತ್ಯ' ವೆಂದು ಬಳಸಲಾಗುತ್ತಿದೆ. ಇದು 'ಭಾಷಾಂತರ' ಮತ್ತು 'ಅನುವಾದ' ಎಂಬುದರ ಮಧ್ಯೆ ಕೆಲವೊಮ್ಮೆ ಗೊಂದಲ ಉಂಟಾಗುವಂತೆ ಮಾಡುವುದು ಸಹಜ. ಆದರೆ ಸಾಹಿತ್ಯ ವಲಯದಲ್ಲಿ ಈ ಎರಡನ್ನು ಒಂದೇ ಅರ್ಥದಲ್ಲಿ ಬಳಸಲಾಗುತ್ತಿದೆ. ನಮ್ಮ ಸಾಂಸ್ಕೃತಿಕ ಪರಿಸರಕ್ಕೆ ಭಾಷಾಂತರವೆಂಬುದು ಹೊಸ ರೀತಿಯ ಪರಿಭಾಷೆ. ವಸಾಹತುಶಾಹಿಗಳ ಕಾಲಘಟ್ಟದಲ್ಲಿ ಇಂಗ್ಲಿಷ್‌ನ 'Translation' ಎಂಬ ಪದಕ್ಕೆ ಸಂವಾದಿಯವಾಗಿ ಕನ್ನಡದಲ್ಲಿ 'ಭಾಷಾಂತರ' ವೆಂದು ಕರೆದುಕೊಂಡಿರುವುದು ಇದಕ್ಕೆ ಕಾರಣ. ಭಾರತೀಯ ಸಾಹಿತ್ಯದಲ್ಲಿ 'ಭಾಷಾಂತರ' ವೆಂದು ಕರೆದುಕೊಳ್ಳುವ ಪೂರ್ವದಲ್ಲಿಯೇ ಅದರ ಪರ್ಯಾಯ ಪದವಾಗಿ ಸಂಸ್ಕೃತದ ಪ್ರಭಾವದಿಂದ ದೇಶದ್ಯಾಂತ 'ಅನುವಾದ' ಎಂಬ ಪದ ನಮ್ಮಲ್ಲಿ ಚಾಲ್ತಿಯಲ್ಲಿತ್ತು, ಈಗಲೂ ಇದೆ. ಕನ್ನಡ ಸಾಹಿತ್ಯದಲ್ಲಿಯೂ ಕೂಡ 'ಅನುವಾದ' ದ ಬಗ್ಗೆ ಪಂಪಾದಿಗಳಿಂದಲೂ ಗುರುತಿಸಬಹುದು. ಆದ್ದರಿಂದ ನಾವು ಭಾಷಾಂತರವೆಂದು ಕರೆದುಕೊಳ್ಳುವುದಕ್ಕಿಂತ ಅನುವಾದವೆಂದು ಕರೆದುಕೊಂಡಾಗ ಅನುವಾದ ಸಾಹಿತ್ಯದ ಇತಿಹಾಸವು ಇನ್ನೂ ಪ್ರಾಚೀನತೆ ಪಡೆಯುತ್ತ ಹೋಗುತ್ತದೆ. ಜೊತೆಗೆ ನಮ್ಮ ಆಸ್ಮಿತೆಯನ್ನು ಉಳಿಸಿಕೊಂಡಂತೆ ಆಗುತ್ತದೆ. ಆ ಕಾರಣದಿಂದ ಈ ಲೇಖನದಲ್ಲಿ ಭಾಷಾಂತರವೆಂಬ ಪರಿಭಾಷೆಯನ್ನು ಬಳಸುವ

ಬದಲು ನಮ್ಮ ಸಾಂಸ್ಕೃತಿಕ ಪರಿಸರಕ್ಕೆ ಹತ್ತಿರವಿರುವ, ನಮ್ಮದೇ ಪರಿಭಾಷೆಯಾಗಿರುವ ಅನುವಾದ ಎಂಬುದನ್ನು ಬಳಸಲಾಗುತ್ತದೆ.

ಅನುವಾದ ಸಾಹಿತ್ಯ ಕುರಿತ ವಿಮರ್ಶೆ, ಅಧ್ಯಯನ, ಚರ್ಚೆಗಳ ಸಂದರ್ಭದಲ್ಲಿ ಕೇವಲ ಶಿಷ್ಟ ಸಾಹಿತ್ಯಕ್ಕೆ ಮಾತ್ರ ಅನುವಾದ ಸಾಹಿತ್ಯವನ್ನು ಸೀಮಿತಗೊಳಿಸಲಾಗುತ್ತದೆ. ಆದರೆ ಮೌಖಿಕವಾಗಿ ಹರಡಿರುವ ಅನುವಾದ ಸಾಹಿತ್ಯವನ್ನು ಗುರುತಿಸುವುದಿಲ್ಲ, ಮೌಖಿಕವಾಗಿ 'ರಾಮಾಯಣ' , 'ಮಹಾಭಾರತ' ಹಾಗೂ 'ಕುರಾನ್' ಅಂತಹ ಅನೇಕ ಧಾರ್ಮಿಕ ಪಠ್ಯಗಳು ಹಾಗೂ ಕುಮಾರವ್ಯಾಸನ 'ಗದುಗಿನ ಭಾರತ' ದಂತಹ ಕೃತಿಗಳು, ಜನಪದ ವೀರರಿಗೆ ಸಂಬಂಧಿಸಿದ ಲಾವಣಿ ಗೀತೆಗಳು ಹಾಗೂ ಜನಪದ ಮಹಾಕಾವ್ಯಗಳು ಇನ್ನೂ ಅನೇಕ ಮೌಖಿಕ ಕೃತಿಗಳು ಸಾವಿರಾರು ವರ್ಷಗಳಿಂದ ಒಬ್ಬರ ಬಾಯಿಂದ ಇನ್ನೊಬ್ಬರಿಗೆ ಪಸರಿಸುವಲ್ಲಿ ಮೌಖಿಕ ಅನುವಾದವು ಕೆಲಸ ಮಾಡುತ್ತ ಬಂದಿದೆ. ಇಲ್ಲಿ ಯಾವ ಭಾಷೆಯ ಲಿಪಿಯು ಅನುವಾದದ ಮಧ್ಯೆ ಕೆಲಸ ಮಾಡುವುದಿಲ್ಲ. ಇಲ್ಲಿ ಭಾಷೆ ಮಾತ್ರ ಮುಖ್ಯ ಹೊರತು ಲಿಪಿ ಮುಖ್ಯವಾಗಿರುವುದಿಲ್ಲ. ಇಂತಹ ಮೌಖಿಕ ಅನುವಾದದ ಪರಂಪರೆಗೆ ನಿರ್ದಿಷ್ಟವಾದ ಇಂತಿಷ್ಟೇ ಇತಿಹಾಸ ಗುರುತಿಸುವುದು ಕಷ್ಟ. ಇದರ ಇತಿಹಾಸ ದೀರ್ಘವಾಗಿರುತ್ತದೆ. ಇಂತಹ ಮೌಖಿಕ ಅನುವಾದ ಸಾಹಿತ್ಯವನ್ನು ಕುರಿತ ಹೆಚ್ಚಿನ ಅಧ್ಯಯನಗಳ ಅಗತ್ಯತೆ ಮತ್ತು ಅನಿವಾರ್ಯತೆ ಹೆಚ್ಚಿದೆ.

ಕರ್ನಾಟಕವನ್ನು ಒಳಗೊಂಡಂತೆ ಭಾರತದ ಈಗಿನ ಅನೇಕ ರಾಜ್ಯಗಳು ಅನ್ಯ ಭಾಷೆಯ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದವು, ಜೊತೆಗೆ ತನ್ನ ಗಡಿಯನ್ನು ಇತರೆ ಭಾಷೆಯ ರಾಜ್ಯಗಳೊಂದಿಗೆ ಹಂಚಿಕೊಂಡಿವೆ. ಆದ್ದರಿಂದ ಇಲ್ಲಿ ಬಹುಭಾಷಾ ಪರಿಸರಕ್ಕೆ ದೀರ್ಘವಾದ ಇತಿಹಾಸವಿದೆ. ಇಲ್ಲಿನ ಗಡಿ ಪ್ರದೇಶಗಳ ಸಾಮಾಜಿಕ ವ್ಯವಸ್ಥೆಯಲ್ಲಿ ರಾಜ್ಯ, ರಾಜ್ಯಗಳ ಮಧ್ಯೆ ವ್ಯಾವಹಾರಿಕ ಸಂಬಂಧಗಳ ಜೊತೆಗೆ ವೈವಾಹಿಕ ಸಂಬಂಧಗಳು ನಡೆಯುತ್ತ ಬಂದಿವೆ. ಈ ಸಂಬಂಧಗಳು ಬಹುಭಾಷೆ, ದ್ವಿಭಾಷೆ ವಾತಾವರಣಕ್ಕೆ ಶಾಶ್ವತ ಅಡಿಪಾಯವನ್ನು ಹಾಕಿವೆ. ಹೀಗೆ ಅನೇಕ ಭಾಷೆಗಳೊಂದಿಗೆ ಅನುಸಂಧಾನ ಮಾಡುವ ಇಲ್ಲಿನ ಜನರು ಮೌಖಿಕ ಸ್ವರೂಪದಲ್ಲಿ ಅನುವಾದವನ್ನು ತಮಗೆ ಅರಿವಿಲ್ಲದಂತೆ, ಜೀವನದ ಭಾಗವಾಗಿ ಪ್ರತಿನಿತ್ಯ ಮಾಡುತ್ತಿರುತ್ತಾರೆ. ಇಂತಹ ಸೂಕ್ಷ್ಮಗಳನ್ನು ಗ್ರಹಿಸಿದಾಗ ಅನುವಾದವೆಂಬುದು ಜನಜೀವನದಲ್ಲಿ ಹಾಸುಹೊಕ್ಕಾಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಪ್ರಾಚೀನ ಭಾರತೀಯ ಸಂದರ್ಭದಲ್ಲಿ ಬಹುಭಾಷಿಕತೆ, ಬಹುಸಂಸ್ಕೃತಿಗಳಲ್ಲಿಯೇ ಕನ್ನಡ ಅನುವಾದ ಮೂಲ ನೆಲೆಯನ್ನು ಗುರುತಿಸಬಹುದಾಗಿದೆ. ಭಾರತದಲ್ಲಿ ಕ್ರಿ.ಪೂರ್ವದ ಕಾಲಘಟ್ಟದಲ್ಲಿ ಪ್ರಚಲಿತದಲ್ಲಿದ್ದ ಬೌದ್ಧ, ಜೈನ ಮತ್ತು ವೈದಿಕ ಧಾರ್ಮಿಕ ಪರಂಪರೆಗಳು ಅನುಕ್ರಮವಾಗಿ ತಮ್ಮ ಧಾರ್ಮಿಕ ತತ್ವ ಸಿದ್ಧಾಂತಗಳನ್ನು ಪಾಳಿ, ಪ್ರಾಕೃತ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ದಾಖಲಿಸಿದ್ದರು. ಈ ಧರ್ಮಗಳ ಪ್ರಚಾರದ ಸಂದರ್ಭದಲ್ಲಿ ಅನ್ಯಭಾಷಿಕರ ಕಡೆಗೆ ವಿಸ್ತರಿಸುವ ಸಂದರ್ಭಗಳಲ್ಲಿ ಭಾಷೆಗಳ ನಡುವೆ ಕೊಡು ಕೊಳ್ಳುವಿಕೆಗಳ ವಿಚಾರ ವಿನಿಮಯಗಳು ನಡೆಯುವಲ್ಲಿ ಅನುವಾದ ಪ್ರಕ್ರಿಯೆಗಳು ಜೀವಂತವಾಗಿದ್ದವು. ಸಂಸ್ಕೃತ ಭಾಷೆಗೆ ಶೈಕ್ಷಣಿಕ ಮಾನ್ಯತೆ ದೊರೆಯುತ್ತಿದ್ದಂತೆ ಬೌದ್ಧ, ಜೈನ ಮತೀಯ ವಿಚಾರಗಳನ್ನು ಸಂಸ್ಕೃತದಲ್ಲಿ ಬರೆಯುವ ಪ್ರಯತ್ನಗಳು ಆರಂಭವಾದವು. ಲಿಖಿತ ಪರಂಪರೆಯಲ್ಲಿ ಸಂಸ್ಕೃತ ಭಾಷೆಗೆ ಸ್ಥಾನಮಾನಗಳು ದೊರೆಯುತ್ತಿದ್ದಂತೆ ಪಾಳಿ, ಪ್ರಾಕೃತ ಭಾಷೆಗಳಲ್ಲಿದ್ದ ಪಠ್ಯಗಳು ಸಂಸ್ಕೃತಕ್ಕೆ ಅನುವಾದ ಮಾಡಲು ಆರಂಭವಾಯಿತು. "ಈ ಮೂರು ಭಾರತೀಯ ಭಾಷೆಗಳ ನಡುವಿನ ಕೊಡು ಕೊಳ್ಳುವಿಕೆಯು ಇಲ್ಲಿನ ಸ್ಥಳೀಯ ಭಾಷೆಗಳ ಕಡೆಗೆ ತಿರುಗಿತು. ಕ್ರಿ.ಶ 2-3ರ ಸುಮಾರಿಗೆ ದಕ್ಷಿಣ ಭಾರತದಲ್ಲಿ ತಮಿಳು, ಕನ್ನಡಗಳು ತಮ್ಮದೇ ಆದ ಸಾಹಿತ್ಯ ಪರಂಪರೆಯ ನಿರ್ಮಾಣಕ್ಕೆ ಮುಂದಾದಾಗ ಸಹಜವಾಗಿಯೇ ಸಂಸ್ಕೃತ, ಪ್ರಾಕೃತ, ಪಾಳಿಗಳು ಈ ಭಾಷೆಗಳಿಗೆ ಆಕರವನ್ನು ಒದಗಿಸತೊಡಗಿದವು. ಹಾಗೆ ನಿರ್ಮಾಣವಾದ ಒಂದು ಭಾಷಾಂತರ ಪರಂಪರೆ ಕನ್ನಡದ್ದು" .(ಭಾಷಾಂತರ ಪ್ರವೇಶಿಕೆ, ಪು.60). ಈ ರೀತಿಯ ಅನುವಾದ ಪರಂಪರೆ ಕನ್ನಡದಲ್ಲಿ ಶುರುವಾದ ನಂತರ ಕರ್ನಾಟಕದಲ್ಲಿ ಬೌದ್ಧ, ಜೈನ ಇತರೆ ಧರ್ಮಗಳ ಪ್ರಾಬಲ್ಯ ಹೆಚ್ಚಾಗ ತೊಡಗಿತು. ಆ ಧರ್ಮಗಳ ಸಿದ್ಧಾಂತ, ತತ್ವಗಳು ಪ್ರಚಾರದ

ದೃಷ್ಟಿಯಿಂದ ಕನ್ನಡಕ್ಕೆ ಸಂಸ್ಕೃತ, ಪ್ರಾಕೃತ, ಪಾಳಿ ಇತರೆ ಭಾಷೆಗಳಿಂದ ಅನುವಾದ ಮಾಡುವ ಪ್ರಕ್ರಿಯೆ ಆರಂಭವಾಯಿತು.

ಕ್ರಿ.ಶ. 450ರ ಕಾಲದ ಹಲ್ಮಿಡಿ ಶಾಸನವು ಕನ್ನಡದ ಮೊಟ್ಟ ಮೊದಲ ಶಾಸನವಾಗಿದೆ. ಈ ಶಾಸನವು ಕನ್ನಡ, ಸಂಸ್ಕೃತ ಎರಡು ಭಾಷೆಗಳ ಸಮ್ಮಿಲನದಿಂದ ರಚಿತವಾಗಿದ್ದು, ಸಂಸ್ಕೃತದ ಪ್ರಾಬಲ್ಯ ಹೆಚ್ಚಾಗಿದೆ. ಶಾಸನದಲ್ಲಿನ ಕನ್ನಡ, ಸಂಸ್ಕೃತ ಭಾಷೆಯಿಂದ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವವಿರುವುದು ತಿಳಿಯುತ್ತದೆ. ಕರ್ನಾಟಕದಲ್ಲಿ ಬಹುಭಾಷಿಕತೆ ಎಂಬುದು ಸಾಮಾಜಿಕ ಮತ್ತು ಪ್ರಾದೇಶಿಕ ವಲಯದಲ್ಲಿ ಅಷ್ಟೆಯಲ್ಲದೇ ಶಿಷ್ಟ ವಲಯವನ್ನು ಕೂಡ ಆವರಿಸಿಕೊಂಡಿತ್ತೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಆವರಿಸಿದ್ದ ಬಹುಭಾಷಿಕ ಪರಿಸರವೇ ಮುಂದಿನ ಅನುವಾದಗಳಿಗೆ ದಾರಿಯಾಯಿತು. ಕನ್ನಡ ಸಾಹಿತ್ಯದ ಆದಿ ಕೃತಿಯಾದ 'ಕವಿರಾಜಮಾರ್ಗ' ದಲ್ಲಿ(ಕ್ರಿ.ಶ 850) ಉಲ್ಲೇಖವಾದ ಗದ್ಯ, ಪದ್ಯ ಕವಿಗಳಿಂದ ಹಾಗೂ ಅವರ ಅನುಪಲಬ್ದ ಕೃತಿಗಳನ್ನು ವಿದ್ವಾಂಸರು ಗುರುತಿಸಿರುವುದರಿಂದ 'ಕವಿರಾಜಮಾರ್ಗ' ಪೂರ್ವದಲ್ಲಿಯೇ ಅನುವಾದ ಕೃತಿಗಳು ಕನ್ನಡದಲ್ಲಿ ಇದ್ದವೆಂದು ಅಭಿಪ್ರಾಯಿಸಬಹುದು.

'ಕವಿರಾಜಮಾರ್ಗ' ದಿಂದ ಆರಂಭಗೊಂಡ ಪ್ರಾಚೀನ ಕನ್ನಡ ಸಾಹಿತ್ಯವು ತನ್ನ ಪರಂಪರೆಯನ್ನು ಸಂಸ್ಕೃತ ಸಾಹಿತ್ಯದ ಪ್ರೇರಣೆ, ಪ್ರಭಾವದಿಂದ ಸ್ವತಂತ್ರವಾಗಿ ಕಟ್ಟಿಕೊಳ್ಳಲು ಶುರು ಮಾಡಿತು. ಅಲಂಕಾರ ಗ್ರಂಥದಿಂದ ಆರಂಭವಾಗಿ ಗದ್ಯ, ಕಾವ್ಯ, ವ್ಯಾಕರಣ, ಕಾವ್ಯಮೀಮಾಂಸೆ ಹೀಗೆ ಅನೇಕ ಕೃತಿಗಳು ರಚನೆಯಾದವು. ಆದರೆ ಈ ಅನುವಾದಗಳು ಯಥಾವತ್ತಾಗದೇ ಭಾವಾನುವಾದ, ರೂಪಾಂತರ, ಸಾರ ಸಂಗ್ರಹಗಳ ರೂಪದಲ್ಲಿ ಆಗಿದ್ದು ಲಕ್ಷ್ಯ ಭಾಷೆಯಲ್ಲಿನ ಸಾಂಸ್ಕೃತಿಕ ಬೇಡಿಕೆಗಳೇ ಕಾರಣವಾಗಿದೆ. ಈ ಬೇಡಿಕೆಗಳೇ ಅನುವಾದದ ಸ್ವರೂಪವನ್ನು ಬದಲು ಮಾಡುತ್ತವೆ. ಅನುವಾದ ಎಂಬುದು ಕೇವಲ ನೇರಾನುವಾದವಲ್ಲ ಅದನ್ನು ಅನುವಾದಿಸುವ ಸಂದರ್ಭದಲ್ಲಿ ಸ್ಥಳೀಯ ಭಾಷೆ, ಸಂಸ್ಕೃತಿ, ಸಮಾಜಕ್ಕೆ ಹೊಂದುವಂತೆ ಬದಲಾವಣೆ ಮಾಡುವುದು ಕೂಡ ಅನುವಾದವಾಗುತ್ತದೆ. ಮೂಲ ಭಾಷೆಯಲ್ಲಿದ್ದ ಗದ್ಯ ಕೃತಿಯನ್ನು ಪದ್ಯಕ್ಕೆ, ಪದ್ಯದಿಂದ ಗದ್ಯಕ್ಕೆ ಅನುವಾದಿಸುವುದು ಹಾಗೂ ರಗಳೆ, ಷಟ್ಪದಿ, ಸಾಂಗತ್ಯ ಮುಂತಾದ ದೇಸಿ ಛಂದಸ್ಸಿನ ಪ್ರಕಾರಗಳಲ್ಲಿ ಅನುವಾದಿಸುವುದು. ಮುಂದುವರೆದು ಕೃತಿಕಾರ ತನ್ನ ಅನುಕೂಲ ಹಾಗೂ ತನ್ನ ಪ್ರತಿಭೆ, ಶೈಲಿಯನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಹೊಸ ಪಾತ್ರಗಳನ್ನು, ಹೊಸ ಸನ್ನಿವೇಶ, ಪ್ರಸಂಗ, ವರ್ಣನೆಗಳನ್ನು ಸೇರಿಸುವುದು, ತನಗೆ ಅನಗತ್ಯ ಹಾಗೂ ತನ್ನ ಸಮಾಜಕ್ಕೆ ಬೇಡವೆಂದು ಅನಿಸುವ ವಿಷಯಗಳನ್ನು ತೆಗೆಯುವುದು. ಹಾಗೂ ಬೇರೊಂದು ಕವಿಯ ಪ್ರಭಾವಕ್ಕೆ ಒಳಪಟ್ಟು ಅವನ ಶೈಲಿಯನ್ನು ಅನುಸರಿಸುವುದು, ತನ್ನ ಕಾವ್ಯದಲ್ಲಿ ಬರುವ ಪಾತ್ರ, ಸನ್ನಿವೇಶ, ವರ್ಣನೆ ಮುಂತಾದವುಗಳನ್ನು ರಚಿಸುವ ಸಂದರ್ಭಗಳಲ್ಲಿ ಬೇರೊಂದು ಕೃತಿಗಳಲ್ಲಿನ ಪಾತ್ರ, ಸನ್ನಿವೇಶ, ವರ್ಣನೆ ಮುಂತಾದವುಗಳನ್ನು ಯಥಾವತ್ತು ಅನುವಾದಿಸುವುದು ಅಥವಾ ಅದರ ಪ್ರಭಾವಕ್ಕೆ ಒಳಗಾಗಿ ತನ್ನದೇ ಭಿನ್ನ ನೆಲೆಯಲ್ಲಿ ಗ್ರಹಿಸಿ ಅದನ್ನು ಮರು ಸೃಷ್ಟಿಸುವುದು. ಇಲ್ಲವೇ ಅದನ್ನು ತನಗೆ ಬೇಕಾದ ರೀತಿಯಲ್ಲಿ ರೂಪಾಂತರಿಸಿಕೊಳ್ಳುವುದು. ಹೀಗೆ ಅನೇಕ ಮಾರ್ಪಾಡುಗಳನ್ನು ಮಾಡಿಕೊಳ್ಳುವ ಮಾದರಿಗಳು ಅಧುನಿಕ ಪೂರ್ವ ಕನ್ನಡ ಅನುವಾದ ಸಾಹಿತ್ಯದಲ್ಲಿ ಕಾಣುತ್ತದೆ.

ನಮಗೆ ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಕೃತಿಯಾಗಿ ಸಿಗುವುದು ಕ್ರಿ.ಶ. 850ರಲ್ಲಿ ರಚನೆಯಾದ 'ಕವಿರಾಜಮಾರ್ಗ' . ಇದು ಸಂಸ್ಕೃತದಿಂದ ಅನುವಾದವಾದ ಒಂದು ಲಾಕ್ಷಣಿಕ ಕೃತಿ. ಈ ಕೃತಿಗೆ ಮೂಲ ಆಕರ ಸಂಸ್ಕೃತದ ದಂಡಿಯ 'ಕಾವ್ಯಾದರ್ಶ' ಹಾಗೂ ಭಾಮಹನ 'ಕಾವ್ಯಾಲಂಕಾರ' . ಆದರೆ ಈ ಎರಡು ಕೃತಿಗಳ ಪೂರ್ಣ ಪ್ರಮಾಣದ ಅನುವಾದವಲ್ಲ, ಅವುಗಳಿಂದ ಪ್ರಭಾವಕ್ಕೆ ಒಳಪಟ್ಟ ಕೃತಿ. ಕವಿರಾಜಮಾರ್ಗದಲ್ಲಿ ಒಟ್ಟು 536 ಪದ್ಯಯಗಳಿದ್ದು ಅದರಲ್ಲಿ ದಂಡಿಯ 'ಕಾವ್ಯಾದರ್ಶ' ದಿಂದ 230 ಪದ್ಯಗಳನ್ನು, ಭಾಮಹನ 'ಕಾವ್ಯಲಂಕಾರ ' ದಿಂದ 40 ಪದ್ಯಗಳನ್ನು ಒಟ್ಟು 270 ಪದ್ಯಗಳನ್ನು ಅನುವಾದ ಮಾಡಿಕೊಳ್ಳಲಾಗಿದೆ. ಉಳಿದಂತೆ ಇತರೆ ಪದ್ಯಗಳು ಸ್ವತಂತ್ರ ರಚನೆ ಆಗಿವೆ. ಆದರೆ ಈ ಕೃತಿಯು ಕನ್ನಡ ಸಾಹಿತ್ಯದ, ಕನ್ನಡ ದೇಶದ ಪ್ರಾಚೀನತೆ ಮತ್ತು ಮಹತ್ವವನ್ನು

ತಿಳಿಸುತ್ತದೆ. 'ಕಾವೇರಿಯಿಂದಮಾ ಗೋದಾವರಿ ವರ ನಿರ್ಪ ನಾಡದಾ ಕನ್ನಡದೊಳ್' ಎಂಬಲ್ಲಿ ಕನ್ನಡ ನಾಡಿನ ವಿಸ್ತಾರತೆಯನ್ನು ಹೇಳಲಾಗಿದೆ. 'ನಿಜದಿಂ ಕುರಿತೋದಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಕನ್ನಡ ನಾಡಿನ ಜನರಲ್ಲಿ ಇದ್ದಂತಹ ಸಾಹಿತ್ಯ ಪರಿಣತಿಯನ್ನು, ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುತ್ತದೆ. ಚತ್ತಾಣ, ಬೆಂದಡೆ ಎಂಬ ಪ್ರಾಚೀನ ಕಾವ್ಯ ಪ್ರಕಾರಗಳ ಬಗ್ಗೆ ತಿಳಿಸುತ್ತ ಪ್ರಾಚೀನ ಕನ್ನಡ ಸಾಹಿತ್ಯದ ಪ್ರಾಚೀನತೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. 'ಒವನಿಗೆ ಒನಕೆವಾಡು' ಎಂಬ ಜನಪದ ಕಾವ್ಯ ಪ್ರಕಾರಗಳನ್ನು ತಿಳಿಸುವುದರ ಮೂಲಕ ಜನಪದ ಸಾಹಿತ್ಯದ ಜನಪ್ರಿಯತೆಯ ಬಗ್ಗೆ ಅಥೈಸುತ್ತದೆ. ಹೀಗೆ ಪ್ರಾದೇಶಿಕ ಅಂಶಗಳನ್ನು ಒಳಗೊಂಡಿರುವ 'ಕವಿರಾಜಮಾರ್ಗ' ವು ಹಿಂದಿನ ಸಾಹಿತ್ಯದ ಬಗ್ಗೆ ತಿಳಿದುಕೊಳ್ಳಲು ಮಾರ್ಗವಾಗುವುದರ ಜೊತೆಗೆ, ಮುಂದಿನ ಕವಿಗಳಿಗೂ ಕೂಡ ರಾಜಮಾರ್ಗವಾಗಿ ತನ್ನ ಕಾರ್ಯವನ್ನು ನಿರ್ವಹಿಸಿದ ಕೀರ್ತಿಗೆ ಪಾತ್ರವಾಗಿದೆ. ಕನ್ನಡ ನಾಡು ನುಡಿಗಳ ಸ್ವರೂಪ, ಸಾಹಿತ್ಯದ ಸ್ಥಿತಿ ಹಾಗೂ ಕವಿಗಳಿಗೆ ರಾಜಮಾರ್ಗವನ್ನು ತೋರುವ ವಿಮರ್ಶಾತ್ಮಕ ವಿಚಾರ ಪ್ರಣಾಲಿ ಎಂಬಿವುಗಳಿಂದ ಸ್ವತಂತ್ರವಾದ ಕೃತಿಯಾಗಿದೆ. "ಈ ಕೃತಿಯಿಂದ ಕನ್ನಡ ಸಾಹಿತ್ಯೋದಯದ ಬಗ್ಗೆ ನಮ್ಮ ಅಜ್ಞಾನವು ಕಡಿಮೆಯಾಗಿದೆ, ಕತ್ತಲೆ ಇರುವಲ್ಲಿ ಕೆಲವು ಸ್ಪಷ್ಟವಾದ ಬೆಳಕಿನ ಪಟ್ಟಿಗಳು ಮೂಡಿವೆ. ಕನ್ನಡ ಸಾಹಿತ್ಯ ಅದರ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದಿನಿಂದಲೂ ಇದ್ದಿತೆಂಬುದನ್ನು ಅದರಲ್ಲಿಯ ಕೆಳಗಣ ಅವತರಣಗಳು ಸಾರುತ್ತವೆ." ಎಂದು ರಂ.ಶ್ರೀ.ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಅಭಿಪ್ರಾಯ ಪಟ್ಟಿರುವುದು ಸಾಹಿತ್ಯ ದೃಷ್ಟಿಯಿಂದ ಗಮನಾರ್ಹ ಅಂಶವಾಗಿದೆ.

ಕೃತಿಯಲ್ಲಿ "ಕನ್ನಡಗಬ್ಬಂಗಳೊಳ್" ಎಂದು ಗದ್ಯಪದ್ಯಯ ಸಂಮಿಶ್ರಿತವಾದ ಕೃತಿಯನ್ನು ಬರೆಯುತ್ತಿದ್ದ ಕೃತಿಕಾರರು ಇದ್ದರೆಂಬ ಉಲ್ಲೇಖಗಳು ಇವೆ. 'ಪುರಾಣಕವಿಗಳ್' , 'ಪೂರ್ವಾಚಾರ್ಯರ್' ಎಂಬ ಪ್ರಯೋಗಳಿವೆ. ಕನ್ನಡ ನಾಡನ್ನು ಕುರಿತು ಕನ್ನಡ ಜನತೆಯನ್ನು ಕುರಿತು ಕಾವೇರಿಯಿಂದ ಗೋದಾವರಿವರೆಗೆ ಇದ್ದ ನಾಡು ಕನ್ನಡನಾಡು ಎಂಬ ಉಲ್ಲೇಖವು ಕನ್ನಡ ನಾಡಿನ ವಿಸ್ತಾರತೆಯನ್ನು ತಿಳಿಸುತ್ತದೆ. ಹಾಗೆ 'ಕಾವ್ಯ ಪ್ರಯೋಗ ಪರಿಣತಿಮತಗಳ್' ನಾಟಕ ಪ್ರಯೋಗದಲ್ಲಿ 'ನಾಡವರ್ಗಳು ಚದುರರಾಗಿದ್ದರು' , 'ಕುರಿತೋದದೆಯು ಕಾವ್ಯರಚನೆ ಮಾಡಬಲ್ಲವರೆಂದು' ನಾಡಿನ ಬಗ್ಗೆ, ನಾಡಿನ ಜನತೆಯ ಬಗ್ಗೆ ಹೇಳುವಲ್ಲಿ ಕನ್ನಡ ಸಾಹಿತ್ಯದ ಚರಿತ್ರೆಯ ದೀರ್ಘವಾದ ಇತಿಹಾಸವನ್ನು ಊಹಿಸಲು ಸಹಾಯಕವಾಗುತ್ತವೆ. ಕನ್ನಡ ನಾಡಿನ ಸ್ಥಳೀಯತೆಯ ಮೇಲೆ ಬೆಳಕನ್ನು ಚೆಲ್ಲುವುದರ ಮೂಲಕ, ಕನ್ನಡ ಸಾಹಿತ್ಯ ಚರಿತ್ರೆಯ ಆರಂಭದ ಹೆಜ್ಜೆಗಳನ್ನು ತಿಳಿಸುವುದರಲ್ಲಿ ಕೃತಿಯ ಮಹತ್ವ ತಿಳಿಯುತ್ತದೆ. 'ಕವಿರಾಜಮಾರ್ಗ' ದ ಕರ್ತೃ ಬಗ್ಗೆ ಆರಂಭದ ಸಂಶೋಧನೆಗಳಲ್ಲಿ ಗೊಂದಲವಿತ್ತು. ಅಮೋಘವರ್ಷನಿಂದ ರಚನೆಯಾಯಿತೋ? ಅಥವಾ ಅವನ ಆಸ್ಥಾನದಲ್ಲಿದ್ದ ಶ್ರೀವಿಜಯನಿಂದ ರಚನೆಯಾಗಿರಬಹುದೋ? ಎಂಬುದು. ಆದರೆ ಮುಂದುವರೆದ ಸಂಶೋಧನೆಗಳಿಂದ ವಿದ್ವಾಂಸರು ಶ್ರೀವಿಜಯ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಕನ್ನಡ ಸಾಹಿತ್ಯದ ಆರಂಭಕ್ಕೆ ಹೆಬ್ಬಾಗಿಲಾಗಿ ಮುಂದಿನ ಕವಿಗಳಿಗೆ ರಾಜಮಾರ್ಗವಾಗುವುದರ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಅನುವಾದಕ್ಕೂ ಮಾರ್ಗವಾಗಿದೆ.

ಕವಿರಾಜಮಾರ್ಗ ಕೃತಿಯ ನಂತರ ಕನ್ನಡ ಸಾಹಿತ್ಯದಲ್ಲಿ ಸಿಗುವ ಕೃತಿ 'ವಡ್ಡಾರಾಧನೆ' . ಇದರ ಕಾಲ ಕ್ರಿ.ಶ 920 ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದೊಂದು ಕನ್ನಡ ಸಾಹಿತ್ಯದಲ್ಲಿ ಸಿಕ್ಕ ಮೊಟ್ಟಮೊದಲ ಗದ್ಯಯ ಕೃತಿ. ಇದು ಸಂಸ್ಕೃತದ ಹರಿಶೇಣನ 'ಬೃಹತ್ ಕಥಾಕೋಶ' ದ ಅನುವಾದ ಎಂದು ಅಭಿಪ್ರಾಯಪಡಲಾಗಿದೆ. ಆದರೇ ಪೂರ್ಣ ಪ್ರಮಾಣದ ಅನುವಾದವಲ್ಲವೆಂಬುದು ಗಮನಿಸಬೇಕಾದ ಅಂಶ. 'ವಡ್ಡಾರಾಧನೆ' ಯಲ್ಲಿಯ 19 ಕಥೆಗಳನ್ನು ಕ್ರಮದಲ್ಲಿಯ ಒಂದು ವ್ಯತ್ಯಾಸ ಬಿಟ್ಟರೆ ಹರಿಶೇಣನ ಕಥಾಕೋಶದಲ್ಲಿನ ಸಂಖ್ಯೆ 126-144 ಇವಕ್ಕೆ ಹೋಲುತ್ತದೆ. ಕೆಲವು ಸಂದರ್ಭಗಳಲ್ಲಿ 'ವಡ್ಡಾರಾಧನೆ' ಗೂ ಹರಿಶೇಷಣನ ಪದ್ಯಯಗಳಿಗೂ ದಟ್ಟವಾದ ಹೋಲಿಕೆ ಬರುತ್ತದೆ. ಕೃತಿಕಾರ 'ವಡ್ಡಾರಾಧನೆ' ಯನ್ನು ಅನುವಾದಿಸುವ ಸಂದರ್ಭದಲ್ಲಿ ಮೂಲದಲ್ಲಿರುವ ಪದ್ಯಯ ಕೃತಿಯನ್ನು ಕನ್ನಡದಲ್ಲಿ ಗದ್ಯ ಕೃತಿಯಾಗಿ

ಬದಲಾಯಿಸಿಕೊಂಡು ತನ್ನ ಅನುವಾದ ಸ್ವರೂಪವನ್ನು ಬದಲಾಯಿಸಿ ಪ್ರಯೋಗಿಸಿದ್ದಾನೆ. ಹರಿಶೇಣನ ಕಥಾಕೋಶವನ್ನು ಕಥಾನಕದ ಸ್ಥೂಲ ಸಾಮಗ್ರಿಯಲ್ಲಿ, ಅಲ್ಲಲ್ಲಿಯ ಭಾವ ಮತ್ತು ವಾಕ್ಯಗಳಲ್ಲಿ ನಿಕಟವಾಗಿ ಹೋಲುತ್ತದೆ. ಕಥಾವಿಸ್ತಾರಣೆಯಲ್ಲಿ, ವ್ಯತ್ಯಾಸದಲ್ಲಿ ಕೆಲವು ವಿವರಗಳಲ್ಲಿ ಬೇರೆತನವನ್ನು ತೋರಿದ ಶಿವಕೊಟ್ಯಾಚಾರ್ಯರು ಕತೆಗಾರಿಕೆಯ ಕಲೆಯಲ್ಲಿ ನುರಿತವನೆಂದೂ, ಮನುಷ್ಯ ಸ್ವಭಾವದ ಹಾಗೂ ನಡತೆಯ ಸೂಕ್ಷ್ಮ ಪರಿಚಯವುಳ್ಳವನೆಂದೂ ತಿಳಿಯಬಹುದು. 'ವಡ್ಡಾರಾಧನೆ' ಯ ಮೂಲ ಸಂಸ್ಕೃತದ 'ವೃದ್ಧಾರಾಧನೆ' ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಿನಲ್ಲಿ 'ವಡ್ಡಾರಾಧನೆ' ಕೃತಿಯು ಕನ್ನಡ ಸಾಹಿತ್ಯದಲ್ಲಿ ಅತ್ಯಅಮೂಲ್ಯವಾದ ಕೃತಿಯಾಗಿ ಕಂಡುಬರುತ್ತದೆ. 'ವಡ್ಡಾರಾಧನೆ' ಯ ಅನುವಾದವನ್ನು ನೇರಾನುವಾದ, ರೂಪಾಂತಾರ, ಭಾವಾನುವಾದ ಮುಂತಾದ ಅನುವಾದ ವಿಧಾನಗಳ ಮೂಲಕ ಕರೆದಿರುವುದು ಪ್ರಾಚೀನ ಕನ್ನಡ ಅನುವಾದ ಸ್ವರೂಪಕ್ಕೆ ಪ್ರಮುಖ ಉದಾಹರಣೆಯಾಗಿದೆ. ಉಪಾಧ್ಯೆ ಅವರು ವಡ್ಡಾರಾಧನೆಯನ್ನು ಕುರಿತು ವಡ್ಡಾರಾಧನೆ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡದಲ್ಲಿಯೂ ಹಲವು ಅವತರಣಿಕೆಗಳಿದ್ದವು. ಅವುಗಳಲ್ಲಿ ಕೆಲವನ್ನು ಮೂಲ ಪ್ರಾಕೃತ ಗ್ರಂಥದಿಂದ ಎತ್ತಿಕೊಂಡಿರಬಹುದು. ಕೆಲವನ್ನು ಗ್ರಂಥಕಾರನು ತಾನಾಗಿ ಸೇರಿಸಿರಬಹುದು. ಈ ಕೃತಿಯಲ್ಲಿ 'ಪ್ರವಚನಸಾರ' , 'ಭಗವತ ಆರಾಧನ' , 'ರತ್ನಕರಂಡಕ' , 'ಭರ್ತೃಹರಿ ಶತಕ' ಗಳು ಇತ್ಯಾದಿಯಿಂದ ಎತ್ತಿಕೊಂಡವಾಗಿದೆ. 7ನೇ ಶತಮಾನದ ಜಟಾಸಿಂಹನ 'ವರಾಂಗ ಚರಿತೆ' ಹಾಗೂ 9ನೇ ಶತಮಾನದ ಗುಣಭದ್ರನ 'ಉತ್ತರ ಪುರಾಣ' ಇವುಗಳಿಂದ ಆಯ್ದ ಅವತರಿಣಿಕೆಗಳು 'ವಡ್ಡಾರಾಧನೆ' ಕೃತಿಯಲ್ಲಿ ಸಿಗುತ್ತವೆಂದು ಹೇಳಿದ್ದಾರೆ. 'ವಡ್ಡಾರಾಧನೆ' ಕೃತಿಯು ಕನ್ನಡದಲ್ಲಿ ಸಿಗುವ ಮೊದಲ ಗದ್ಯಗ್ರಂಥ ಹಾಗೂ ಸಣ್ಣಕಥೆಗಳ ಸಂಗ್ರಹ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಕನ್ನಡ ಸಾಹಿತ್ಯದಲ್ಲಿ ಸಿಕ್ಕಿರುವ ಪೂರ್ಣ ಪ್ರಮಾಣದ 2ನೇ ಕೃತಿಯಾಗಿದೆ. ಕವಿರಾಜಮಾರ್ಗ ಕೃತಿಯು ಮೊಟ್ಟ ಮೊದಲ ಲಕ್ಷಣ ಗ್ರಂಥವಾದರೆ, ವಡ್ಡಾರಾಧನೆ ಮೊಟ್ಟ ಮೊದಲ ಗದ್ಯಯ ಗ್ರಂಥ. ಕಾವ್ಯದ ಸ್ಥಾನದಲ್ಲಿ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯಂ ಕೃತಿಗಳು ಮೊದಲಾಗುತ್ತವೆ.

ಪಂಪನ ಆದಿಕೃತಿಯಾದ 'ಆದಿಪುರಾಣ' ವನ್ನು ಪಂಪನು ಸಂಸ್ಕೃತದ ಜೀನಸೇನಚಾರ್ಯರ 'ಪೂರ್ವಪುರಾಣ' ವನ್ನು ಆಧರಿಸಿ ಬರೆದಿದ್ದಾನೆ. ಇದು ಮೊದಲ ತೀರ್ಥಂಕರನಾದ ವೃಷಭದೇವನ ಕಥೆಯನ್ನು ಹೇಳುವ ಜೈನ ಧಾರ್ಮಿಕ ಕಾವ್ಯ. ಲೌಕಿಕ, ಆಗಮಿಕ ಕಾವ್ಯ ಪರಂಪರೆಯನ್ನು ಹುಟ್ಟು ಹಾಕಿದ ಪಂಪ ಇದನ್ನು ಆಗಮಿಕ ಕಾವ್ಯವಾಗಿ ಅನುವಾದ ಮಾಡಿದ್ದಾನೆ. ಮತ ನಿಷ್ಠೆಯಿಂದ ತನ್ನ ಕೈಗಳನ್ನು ತಾನೇ ಕಟ್ಟಿಕೊಂಡು ಮೂಲ ಪಠ್ಯವನ್ನು ಯಥಾವತ್ತಾಗಿ ಅನುಕರಿಸಿದ್ದಾನೆ. ಆದರೆ ತನ್ನ ಅನುವಾದ ಸಂದರ್ಭದಲ್ಲಿ ಕಥನಕ್ರಮ, ಭಾವಸಂಪತ್ತಿ, ಮತೀಯ ತತ್ವಭೋಧನೆ ಎಲ್ಲದರಲ್ಲು ಅನುವಾದಿತ 'ಆದಿಪುರಾಣ' ವು 'ಪೂರ್ವಪುರಾಣ' ಕ್ಕೆ ಋಣಿಯಾಗಿದೆ. ಇಷ್ಟು ಪರತಂತ್ರವಾದರೂ ಗ್ರಥನ ಕೌಶಲ್ಯ, ನಿರೂಪಣೆ ಶೈಲಿಯಿಂದ ಅದು ಸ್ವತಂತ್ರ ಕಳೆಯನ್ನು ಪಡೆದು ಕನ್ನಡಾನುವಾದಿತ 'ಅದಿಪುರಾಣ' ಕೃತಿಯಾಗಿದೆ. ಈ ಎರಡು ಜೈನಪುರಾಣಗಳಲ್ಲಿಯು ಕಾವ್ಯಸತ್ವವಿದೆ. ಆದರೆ ಪೂರ್ವಪುರಾಣದಲ್ಲಿ ಕಾವ್ಯಕ್ಕಿಂತ ಪುರಾಣ ದೃಷ್ಟಿ ಹೆಚ್ಚಾಗಿ ಕಂಡುಬಂದರೆ, 'ಆದಿಪುರಾಣ' ದಲ್ಲಿ ಪುರಾಣಕ್ಕಿಂತ ಕಾವ್ಯ ದೃಷ್ಟಿ ಹೆಚ್ಚಾಗಿ ಫಲಿಸಿದಂತಿದೆ. 'ಪೂರ್ವಪುರಾಣ' ಸರಳವಾದ ಪದ್ಯಯಕಾವ್ಯ, ಆದಿಪುರಾಣ ಪ್ರೌಢವಾದ ಚಂಪೂಕಾವ್ಯ ಮೂಲದ ಅತಿವಿಸ್ತಾರ ಪಂಪನಲ್ಲಿ ಕಾಣುವುದಿಲ್ಲ ಆತ ಅದನ್ನು ಸಂಗ್ರಹ ದೃಷ್ಟಿಯಲ್ಲಿ ಅನುವಾದಿಸಿದ್ದಾನೆ. ಅನುವಾದಿತ ಆದಿಪುರಾಣದಲ್ಲಿ ಅನೇಕ ಭವ ಇಲ್ಲವೆ ಜನ್ಮಗಳ ಮೂಸೆಯಲ್ಲಿ ಅನುಭವ ಕುದಿಗೊಂಡು ಭೋಗದಿಂದ ತ್ಯಾಗಕ್ಕೆ ತೆರಳಿ ಕೊನೆಯ ಜನ್ಮದಲ್ಲಿ ವೈರಾಗ್ಯ ಪರಿಣತಿಯಿಂದ ತಪೋನಿರತನಾಗಿ ಮುಕ್ತಿಯನ್ನು, ಕೇವಲ ಜ್ಞಾನವನ್ನು ಪಡೆದ ಮೊದಲನೆಯ ತೀರ್ಥಂಕರ ಆದಿದೇವನಾದ ಮನುಜ ಜನ್ಮಯಾತ್ರೆಯ ಪರಮ ಸಿದ್ಧಿ ಕಥೆಯಿದೆ. ಇದರ ಭವ್ಯತೆಯನ್ನು ಸಮ್ಯಕ್ತವನ್ನು ಅರಿತು ಆತ್ಮೀಕರಿಸಿಕೊಂಡು ಕಾಲತ್ರಯವನ್ನು ನಿಲುಕುವ ಕಲ್ಪನೆಯ ಕುಂಚದಿಂದ ಪಂಪನು ಇದನ್ನು ಚಿತ್ರಿಸಿದ್ದಾನೆ. ಹೀಗೆ ಸಂಸ್ಕೃತದಿಂದ ಕನ್ನಡಕ್ಕೆ ಬಂದ 'ಆದಿಪುರಾಣ' ಕಾವ್ಯವನ್ನು ಪಂಪ ತನ್ನ ಪ್ರತಿಭೆಯಿಂದ ತನ್ನದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಇವನ ಇನ್ನೊಂದು ಕೃತಿಯಾದ 'ವಿಕ್ರಮಾರ್ಜುನ ವಿಜಯಂ'

ಕಾವ್ಯವೂ ಲೌಕಿಕ ಕಾವ್ಯವಾಗಿ ರಚನೆಯಾಗಿದೆ. ಇದರ ಮೂಲ ಸಂಸ್ಕೃತದ ವ್ಯಾಸನ 'ಮಹಾಭಾರತ' . ಈತ ಮಹಾಭಾರತವನ್ನು ಕನ್ನಡಿಸುವ ಸಂದರ್ಭದಲ್ಲಿ ತನ್ನ ಪರಿಸರಕ್ಕೆ ಹೊಂದುವ ಪುಲಿಗೆರೆ ತಿರುಳುಗನ್ನಡವನ್ನು ಕಾವ್ಯದ ಭಾಷೆಯನ್ನಾಗಿ ಮಾಡಿಕೊಂಡಿದ್ದಾನೆ. ಅಲ್ಲದೇ ತನ್ನ ಆಶ್ರಯದಾತ ಚಾಲುಕ್ಯ 2ನೇ ಆರಿಕೇಸರಿಯನ್ನು ಅರ್ಜುನನಿಗೆ ಸಮೀಕರಿಸಿ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡು ಪುರಾಣ ಇತಿಹಾಸವನ್ನು ಒಳಗೊಂಡ ಸಮಸ್ತ ಭಾರತವನ್ನು ಚಂಪೂ ಶೈಲಿಯಲ್ಲಿ ಅನುವಾದಿಸಿದ್ದಾನೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇ಼ದ ಕವೀಶ್ವರರಿಲ್ಲ' ಎಂಬ ಪಂಪನ ಮಾತು ಅವನೇ ಮೊದಲು ಸಮಸ್ತ ಭಾರತವನ್ನು ಕನ್ನಡದಲ್ಲಿ ಹೇಳಿದ್ದು ಎಂಬ ಅರ್ಥವನ್ನು ಸೂಚಿಸುತ್ತದೆ. "ವರ್ಣಕಂ ಕತೆಯೊಳೊಡಂಬಡಂಪಡೆಯೆ ಪೇ಼ಠೆವೊಡೆ ಪಂಪನೆ ಪೇ಼ಗುಂ" ಎಂಬ ಪಂಡಿತರ ಪ್ರಶಂಸೆಯು ಪಂಪನ ಸಾಹಿತ್ಯ ಪ್ರತಿಭೆಯನ್ನು ಸಾರುತ್ತದೆ. "ವ್ಯಾಸಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ ವ್ಯಾಸನೆಂಬ ಗರ್ವಮೆನಗಿಲ್ಲ" ಎಂಬಲ್ಲಿ ಮೂಲ ಕರ್ತೃವಿಗೆ ಸಲ್ಲಿಸಬೇಕಾದ ನೈಜ ನಮ್ರತೆಯ ಗೌರವವಿದೆ. ಪಂಪನು ವ್ಯಾಸಭಾರತವನ್ನು ಅನುವಾದಿಸುವಾಗ ಎಷ್ಟೋ ಭಾಗಗಳನ್ನು ಬಿಟ್ಟಿದ್ದಾನೆ, ಕೆಲವನ್ನು ಕಿರಿದುಗೊಳಿಸಿದ್ದಾನೆ, ಕೆಲವು ಮಾರ್ಪಾಡುಗಳನ್ನು ಕೂಡ ಮಾಡಿಕೊಂಡಿದ್ದಾನೆ. ಈ ಮಾರ್ಪಾಡು, ಬದಲಾವಣೆಗಳಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯಂ' ಕಾವ್ಯದ ಅನುವಾದ ಸ್ವರೂಪದ ಕಾಣುತ್ತದೆ. ತೀ.ನಂ.ಶ್ರೀ ಪ್ರಕಾರ "ವಿಕ್ರಮಾರ್ಜುನ ವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ. ಅಲ್ಲಿನ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ಥಳಿ ಅದು." ಎಂಬ ಮಾತು ಕನ್ನಡ ಸಾಹಿತ್ಯದಲ್ಲಿ 'ವಿಕ್ರಮಾರ್ಜುನ ವಿಜಯಂ' ಕೃತಿಯ ಮಹತ್ವವನ್ನು ಪ್ರತಿಪಾದಿಸುತ್ತದೆ.

ರತ್ನತ್ರಯರಲ್ಲಿ ದ್ವಿತೀಯನಾದ ಪೊನ್ನನಿಂದ(ಕ್ರಿ.ಶ.950) ರಚನೆಯಾದ 'ಶಾಂತಿಪುರಾಣ' ದ ವಸ್ತು ಸಂಸ್ಕೃತದ ಗುಣಭದ್ರಚಾರ್ಯರ 'ಉತ್ತರಪುರಾಣ' . 'ಶಾಂತಿಪುರಾಣ' ವು ಹದಿನಾರನೇ ತೀರ್ಥಂಕಾರನಾದ ಶಾಂತಿನಾಥನ ಚರಿತೆಯನ್ನು ಒಳಗೊಂಡ ಜೈನಪುರಾಣವಾಗಿದೆ. ಅಲ್ಲದೇ ಪೊನ್ನನ ಈ ಕಾವ್ಯದಲ್ಲಿ ಕಾಳಿದಾಸನ ಕೃತಿಯ ಪ್ರಭಾವವೂ ದಟ್ಟವಾಗಿ ಕಾಣುತ್ತದೆ. ಕಾಳಿದಾಸನ 'ರಘುವಂಶ' ದಲ್ಲಿಯ ಇಂದುಮತಿ ಸ್ವಯಂವರ ವರ್ಣನೆಯ ಹಲವು ಪದ್ಯಯಗಳನ್ನು ಮೂಲದಲ್ಲಿರುವಂತೆಯೇ ತನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾನೆ. ಹಾಗೆ ಕೆಲವೊಂದು ಪ್ರಸಂಗಗಳನ್ನು ಭಾವಾನುವಾದ ಮಾಡಿದ್ದಾನೆ. ಆದ್ದರಿಂದ 'ಶಾಂತಿ ಪುರಾಣ' ದ ಮೇಲೆ ಕಾಳಿದಾಸನ ಕೃತಿಯ ಪ್ರಭಾವ ಇರುವುದು ಸ್ಪಷ್ಟವಾಗುತ್ತದೆ. ಆದರೆ ಈತನ ಕೃತಿಯನ್ನು ಪೂರ್ಣ ಪ್ರಮಾಣದ ಅನುವಾದವೆಂದು ಕರೆಯಲು ಸಾಧ್ಯವಿಲ್ಲ. 'ಉತ್ತರಪುರಾಣ' ದ ವಸ್ತುವನ್ನು ಅಯ್ಕೆ ಮಾಡಿಕೊಂಡು ಇತರೆ ಕೃತಿಗಳ ಪ್ರಭಾವಕ್ಕೆ, ಪ್ರೇರಣೆಗೆ ಒಳಪಟ್ಟು ರಚಿಸಿದ್ದನೆಂದು ಒಪ್ಪಿಕೊಳ್ಳಬಹುದು.

ಕ್ರಿ.ಶ. 975ರಲ್ಲಿ ಚಾವುಂಡರಾಯನು 'ಚಾವುಂಡರಾಯ ಪುರಾಣ' ವೆಂಬ ಗದ್ಯಯ ಕೃತಿಯನ್ನು ರಚಿಸಿದನು. ಇದೊಂದು ಜೈನ ಧರ್ಮದ ತತ್ವ, ಆದರ್ಶಗಳನ್ನು ಸಾರುವ ಕೃತಿಯಾಗಿದೆ. 'ವಡ್ಡಾರಾಧನೆ' ಕೃತಿ ಸಿಗುವುದಕ್ಕಿಂತ ಮುಂಚೆ ಇದೆ ಕನ್ನಡದ ಮೊದಲ ಗದ್ಯ ಕೃತಿ ಎಂದು ಕರೆಯಲಾಗುತ್ತಿತ್ತು. 'ಚಾವುಂಡರಾಯ ಪುರಾಣ' ಕೃತಿಯ ಮೂಲ ಆಕರ ಸಂಸ್ಕೃತದ ಜೀನಸೇನ-ಗುಣಭದ್ರರ 'ಮಹಾಪುರಾಣ' . ಮೂಲ ಕೃತಿಯನ್ನು ಸಾಧ್ಯವಾದಷ್ಟು ಸುಲಭವಾಗಿ, ಸಂಕ್ಷಿಪ್ತವಾಗಿ ಗದ್ಯಯರೂಪದಲ್ಲಿ ಅನುವಾದಿಸಿದ್ದಾನೆ. 'ಮಹಾಪುರಾಣ' ವು ಜೈನ ಸಂಪ್ರದಾಯದಲ್ಲಿ ಪವಿತ್ರವಾದ ಧರ್ಮಗ್ರಂಥಗಳಲ್ಲೊಂದು ಇದನ್ನು ಮೂಲದಲ್ಲಿನ ವಿಸ್ತಾರವಾದ ಕಾವ್ಯಮಯವಾದ ವರ್ಣನೆಗಳನ್ನು ಮೆಚ್ಚಿದರು, ಅವುಗಳನ್ನು ದಾಟಿ ಗದ್ಯಯ ರೂಪದಲ್ಲಿ ಕನ್ನಡಿಸುವಲ್ಲಿ ಯಶಸ್ವಿಯಾಗಿದ್ದಾನೆ. ಇಂತಹ ಸಂಯಮ, ಸಂಯೋಜನಶೀಲತೆಗಳಿಂದ ಕಾವ್ಯಮಯವಾದ ಸಂಸ್ಕೃತ ಕೃತಿಯನ್ನು ಕನ್ನಡಕ್ಕೆ ತಂದು ಕೊಟ್ಟ ಕೀರ್ತಿ ಚಾವುಂಡರಾಯನಿಗೆ ಸಲ್ಲುತ್ತದೆ.

ಕ್ರಿ.ಶ 990ರಲ್ಲಿ ಬರುವ ಒಂದನೇ ನಾಗವರ್ಮನು ಕನ್ನಡದಲ್ಲಿ ಅನುವಾದಕ್ಕೆ ವಿಶೇಷ ಒತ್ತನ್ನು ನೀಡಿದನು. ಈತನ ಕೃತಿಗಳಾದ 'ಛಂದೋಬುಧಿ' ಕಮಲ ಮತ್ತು ಪಿಂಗಲರನ್ನು ಅನುಸರಿಸಿ ಬರೆದ ಕೃತಿಯಾಗಿದೆ. ಇದು ಕನ್ನಡದಲ್ಲಿ ಸಿಗುವ ಮೊದಲ ಛಂದಸ್ಸಿನ ಕೃತಿಯಾಗಿದ್ದು, ಕನ್ನಡದ ಮೊದಲುಗಳ ಸಾಲಿನಲ್ಲಿ ನಿಂತಿದೆ. ಈತನ ಇನ್ನೊಂದು ಕೃತಿ 'ಕರ್ನಾಟಕ ಕಾದಂಬರಿ' ಇದು ಸಂಸ್ಕೃತದಲ್ಲಿ ಬಾಣನಿಂದ ರಚನೆಗೊಂಡಿದ್ದ 'ಕಾದಂಬರಿ' ಎಂಬ ಗದ್ಯ ಕೃತಿಯ ಕನ್ನಡಾನುವಾದವಾಗಿದೆ. ಈ ಕೃತಿಯನ್ನು ಕುರಿತು ರಂ.ಶ್ರೀ.ಮುಗಳಿ ಅವರು 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಅನುಪಲಬ್ದವಾದ ಅಸಗನ 'ಕರ್ನಾಟ ಕುಮಾರಸಂಭವ' ಕಾವ್ಯವನ್ನು ಬಿಟ್ಟರೆ, ಇದೇ ಒಂದು ಪ್ರಾಚೀನ ಸಂಸ್ಕೃತ ಕಾವ್ಯದ ಪ್ರಥಮ ಕನ್ನಡಾನುವಾದ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸಂಸ್ಕೃತ ಸಾಹಿತ್ಯದಲ್ಲಿನ ಉತ್ತಮ ಸಾಹಿತ್ಯವನ್ನು ಕನ್ನಡಕ್ಕೆ ತರಬೇಕೆಂದರೆ ಅದನ್ನು ಅನುವಾದದ ಮೂಲಕ ಮಾತ್ರ ಸಾಧ್ಯವೆಂಬುದು ನಾಗವರ್ಮನ ನಿಲುವು ಆಗಿರಬಹುದು ಬೇಕು. ಆದ್ದರಿಂದ ಇಂತಹ ಉತ್ತಮ ಕಾವ್ಯ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಸಂಸ್ಕೃತದಲ್ಲಿ ಗದ್ಯದಲ್ಲಿರುವ 'ಕಾದಂಬರಿ' ಕೃತಿಯನ್ನು ಕನ್ನಡಕ್ಕೆ ಚಂಪೂ ಶೈಲಿಯಲ್ಲಿ ಕನ್ನಡಿಸುವುದು ನಾಗವರ್ಮನ ಅನುವಾದದ ನೈಪುಣ್ಯತೆಗೆ, ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಕಾವ್ಯದಲ್ಲಿ ನಾಗವರ್ಮ ಅಷ್ಟಾಗಿ ತನ್ನ ಕಾಲದ ಚಾರಿತ್ರಿಕ ಅಂಶಗಳನ್ನು ಪ್ರಸ್ತಾಪ ಮಾಡಲು ಪ್ರಯತ್ನಿಸಿಲ್ಲ, ಹಾಗಾಗಿ ಮೂಲವನ್ನು ಹೆಚ್ಚಾಗಿ ಬದಲಾವಣೆ ಮಾಡಲು ಪ್ರಯತ್ನಿಸಿಲ್ಲ. ಇದ್ದ ಮೂಲ ಕತೆಯನ್ನೇ ಹೇಳುವತ್ತ ಸಾಗಿದ್ದಾನೆ. ಬಾಣನ ಕಾದಂಬರಿ ಸಂಸ್ಕೃತ ಗದ್ಯವಾಙ್ಮಯದಲ್ಲಿ ಬೆರಗುಗೊಳಿಸುವ ಶಿಖರ. ಅದರಲ್ಲಿ ಭಾರತೀಯ ಸಂಸ್ಕೃತ ನಾಗರೀಕತೆಗಳ ಹಿನ್ನೆಲೆಯಲ್ಲಿ ಮಾಡಿದ ಉದಾತ್ತ ಶೃಂಗಾರದ ಉನ್ನತ ಪ್ರೇಮದ ಸ್ವಪ್ನದ ಚಿತ್ರವಿದೆ, ಜನ್ಮಾಂತರಗಳ ಜಟಿಲವಾದ ಕಥಾನಕ, ಶಬ್ದಾರ್ಥ ಚಮತ್ಕøತಿಗಳಿಂದ ಇಡಿ ಕಿರಿದ ವರ್ಣನೆ, ವಿವಿಧ ವಿಲಾಸದಿಂದ ಮುಗಿಯದೆ ಮುಂಬರಿಯುವ ಗದ್ಯಶೈಲಿ ಇರುವ ಕಾದಂಬರಿಯನ್ನು ಸಹನೆಯಿಂದ ಓದಿ ತಿಳಿಯುವುದೇ ಕಷ್ಟ. ಅದರ ಅನುವಾದಕನಿಗೆ ಇದೊಂದು ಸಾಹಸ. ಇಂತಹ ಸಾಹಸಕ್ಕೆ ವಿಶೇಷ ನೈಪುಣ್ಯತೆ, ಪಾಂಡಿತ್ಯ ಅಗತ್ಯ. ಈ ಎರಡನ್ನು ಬಹುಮಟ್ಟಿಗೆ ನಾಗವರ್ಮ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾನೆ. ಸಂಪೂರ್ಣ ಗದ್ಯದಲ್ಲಿದ್ದ ಕೃತಿಯನ್ನು ತನ್ನ ಕಾಲಘಟ್ಟದಲ್ಲಿ ಪ್ರಚಲಿತವಿದ್ದ ಗದ್ಯಪದ್ಯ ಸಂಮಿಶ್ರಿತವಾದ ಚಂಪು ರೂಪದಲ್ಲಿ ಅನುವಾದಿಸಿದ್ದಾನೆ. ಸಂಸ್ಕೃತದಲ್ಲಿನ ವಸ್ತುವನ್ನು ಸ್ವೀಕರಿಸಿ ಮೂಲದ ಕಥನಕ್ಕೆ, ಪಾತ್ರಗಳಿಗೆ, ವರ್ಣನೆಗಳ ಸ್ವಾರಸ್ಯಕ್ಕೆ ಕುಂದುಬಾರದಂತೆ ಮೂಲವನ್ನು ಮನಸ್ಸಿನಲ್ಲಿ ಜಾಗೃತವಾಗಿಟ್ಟುಕೊಂಡು ತಾನೇ ರಚಿಸಿದ ಸ್ವತಂತ್ರ ಕೃತಿಯಾಗಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ನಾಗವರ್ಮ ಒಬ್ಬ ಉತ್ತಮ ಅನುವಾದಕನಾಗಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಲು ಅವನ 'ಕರ್ನಾಟಕ ಕಾದಂಬರಿ' ಯೇ ಸ್ಪಷ್ಟ ನಿದರ್ಶನವಾಗಿದೆ.

ರತ್ನತ್ರಯರಲ್ಲಿ ಮೂರನೆಯವನಾದ ರನ್ನನ(ಕ್ರಿ.ಶ. 990) 'ಗದಾಯುದ್ದ' ಕಾವ್ಯದ ಮೇಲೆ ಅನುವಾದದ ಪ್ರಭಾವ ಇರುವುದು ಸ್ಪಷ್ಟ. ಪಂಪಭಾರತದ 11, 12ನೇ ಆಶ್ವಾಸ, ಸಂಸ್ಕೃತದ ಭಟ್ಟನಾರಾಯಣನ 'ವೇಣಿಸಂಹಾರ' ಹಾಗೂ ಭಾಸನ 'ಊರುಭಂಗ' ಈ ಮೂರು ಕೃತಿಗಳ ಪ್ರಭಾವ ಗದಾಯುದ್ದ ಕಾವ್ಯದ ಮೇಲೆ ದಟ್ಟವಾಗಿದೆ. ಪಂಪನು ಹಾಕಿಕೊಟ್ಟ ಚಂಪೂ, ಲೌಕಿಕ ಆಗಮಿಕ ಹಾಗೂ ವಸ್ತುಕ, ವರ್ಣಕ ಪರಿಕಲ್ಪನೆಯಲ್ಲಿಯೇ ಮುಂದುವರೆದಿದ್ದಾನೆ. 'ಗದಾಯುದ್ದ' ವನ್ನು ಸಿಂಹವಲೋಕನ ಕ್ರಮದಲ್ಲಿ ರಚನೆ ಮಾಡಿರುವುದು ಕನ್ನಡ ಸಾಹಿತ್ಯದಲ್ಲಿ ಒಂದು ಅದ್ಭುತವಾದ ಪ್ರಯೋಗ. ಪಂಪನು ತನ್ನ 'ವಿಕ್ರಮಾರ್ಜುನವಿಜಯ' ಕಾವ್ಯದಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಸಮೀಕರಿಸಿದ ರೀತಿಯಲ್ಲಿಯೇ, ರನ್ನನು ತನ್ನ ಗದಾಯುದ್ದ ಕಾವ್ಯದಲ್ಲಿ ಆಶ್ರಯದಾತನನ್ನು ಭೀಮನಿಗೆ ಸಮೀಕರಿಸಿ ಕಾವ್ಯವನ್ನು ರಚಿಸಿದ್ದಾನೆ. ಹೀಗೆ ರನ್ನನು ತನ್ನ ಕಾವ್ಯಕ್ಕೆ ತನ್ನ ಪೂರ್ವ ಕವಿಗಳ ಸಾಹಿತ್ಯದಿಂದ ಪ್ರಭಾವಿತನಾಗಿದ್ದರು ಕೂಡ ತನ್ನ ಕಾವ್ಯ ನಿರೂಪಣ ಶೈಲಿ, ಪ್ರತಿಭೆಯಿಂದ ಒಂದು ಅದ್ಭುತ ಕಾವ್ಯವನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾನೆ.

ದುರ್ಗಸಿಂಹ(ಕ್ರಿ.ಶ. 1030) ಜನಸಾಮಾನ್ಯರಲ್ಲಿ ತುಂಬಾ ಪ್ರಿಯವಾಗಿರುವ 'ಪಂಚತಂತ್ರ' ಕೃತಿಯನ್ನು ರಚಿಸಿದ್ದಾನೆ. ಗುಣಾಢ್ಯನು ಪೈಶಾಚೀ ಭಾಷೆಯಲ್ಲಿ 'ಬೃಹತ್ಕಥೆ' ಗಳನ್ನು ಹೇಳಿದ್ದನು. ಆ ಕಥೆಗಳಲ್ಲಿನ

ಪಂಚರತ್ನಗಳಾದ ಐದು ಕಥೆಗಳನ್ನು ಆಯ್ದುಕೊಂಡು ವಸುಭಾಗಭಟ್ಟನು 'ಪಂಚತಂತ್ರ' ವೆಂದು ಹೆಸರಿಟ್ಟು ಹೇಳಿದನು. ಈ ವಸುಭಾಗಭಟ್ಟನ ಕೃತಿಯನ್ನು ಕನ್ನಡದಲ್ಲಿ 'ಪೊಸತಾಗಿರೆ ವಿರಚಿಸುವೆಂ' ಎಂದು ದುರ್ಗಸಿಂಹ ಹೇಳಿದ್ದಾನೆ. ಸಂಸ್ಕೃತದಲ್ಲಿ ವಿಷ್ಣುಶರ್ಮನ 'ಪಂಚತಂತ್ರ' ವೊಂದು ಜನಪ್ರಿಯವಾಗಿದೆ. ವಸುಭಾಗಭಟ್ಟ ಪರಂಪರೆಯ ಪಂಚತಂತ್ರಗಳು ಮೂರು ಇದ್ದು ಅವುಗಳಲ್ಲಿ ಎರಡು ಪದ್ಯದಲ್ಲಿಯೂ, ಒಂದು ಗದ್ಯದಲ್ಲಿ ಇದೆ. ದುರ್ಗಸಿಂಹನದು ಮಾತ್ರ ಗದ್ಯಪದ್ಯಯ ಮಿಶ್ರಿತವಾಗಿದ್ದು ಪ್ರೌಢ ಚಂಪುವಿಗೆ ಹತ್ತಿರವಾಗಿದ್ದು, ಗದ್ಯದ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ. ಆದ್ದರಿಂದ ಕೃತಿ ಸರಳತೆಗಳಿಂದ ಕೂಡಿದೆ. ವಿಷ್ಣುಶರ್ಮನ ಪಂಚತಂತ್ರವು ಉಪಲಬ್ಧವಿದೆ, ವಸುಭಾಗಭಟ್ಟನದು ಉಪಲಬ್ಧವಿಲ್ಲ. ದುರ್ಗಸಿಂಹನು ವಸುಭಾಗಭಟ್ಟನ ಪಂಚತಂತ್ರವನ್ನು ಅನುವಾದಿಸಿರುವುದಾಗಿ ಹೇಳಿಕೊಂಡಿದ್ದಾನೆ. ವಿಷ್ಣುಶರ್ಮನ ಪಂಚತಂತ್ರದಲ್ಲಿ ಕಾಣದ ಕೆಲವು ಕಥೆಗಳು ದುರ್ಗಸಿಂಹನಲ್ಲಿವೆ. ಇವು ವಸುಭಾಗಭಟ್ಟನ ಕೃತಿಯಿಂದ ಎತ್ತಿಕೊಂಡಿರಬೇಕು. ಎರಡನೆಯ ಮಹತ್ವದ ಸಂಗತಿಯೆಂದರೆ ವಿಷ್ಣುಶರ್ಮನಲ್ಲಿ ಕಾಣದ ಜೈನಮತ ತತ್ವಗಳ ಪರಿಭಾಷಿಕ ಪದಗಳು ದುರ್ಗಸಿಂಹನಲ್ಲಿವೆ. ಅವನ ಅನುವಾದಕ್ಕೆ ವಸುಭಾಗಭಟ್ಟನ ಪಂಚತಂತ್ರವೊಂದೇ ಸಿಕ್ಕಿರಬಹುದು, ಏಕೆಂದರೆ ವಿಷ್ಣುಶರ್ಮನ ಹೆಸರನ್ನು ಅವನು ಉಲ್ಲೇಖ ಮಾಡಿಯೇ ಇಲ್ಲ. ಆದ್ದರಿಂದ ದುರ್ಗಸಿಂಹನ ಕೃತಿಗೆ ವಸುಭಾಗಭಟ್ಟನ ಪಂಚತಂತ್ರವೇ ಮೂಲ ಆಕರ ಎಂದು ಅಭಿಪ್ರಾಯಿಸಬಹುದು.

ದುರ್ಗಸಿಂಹನ ಕಾಲಘಟ್ಟದಲ್ಲಿ ಜೀವಿಸಿದ್ದ ಚಂದ್ರರಾಜ(ಕ್ರಿ.ಶ.1040) ಕನ್ನಡದಲ್ಲಿ 'ಮದನತಿಲಕ' ವೆಂಬ ಮೊಟ್ಟಮೊದಲ ಕಾಮಶಾಸ್ತ್ರ ಗ್ರಂಥವನ್ನು ಬರೆದನು. ಈ ಕೃತಿಯನ್ನು ಕಾಮಶಾಸ್ತ್ರಕ್ಕೆ ಸಂಬಂಧಿಸಿದ ವಾತ್ಸಾಯನ, ವೈಶಿಕ, ಚಾರರಾಯಣ, ಸ್ವರ್ಣನಾಭ ಮುಂತಾದವರ ಕೃತಿಗಳನ್ನು ಆಕರವಾಗಿಟ್ಟುಕೊಂಡು ಸಂಕಲನ ರೂಪದಲ್ಲಿ ಅನುವಾದಿಸಿದಂತಿದೆ. ಅದ್ದರಿಂದ "ಇದು ಅನುವಾದವೆನ್ನುವುದಕ್ಕಿಂತ ಸಂಕಲನ ಗ್ರಂಥವೆನ್ನಬಹುದು" (ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ.117) ಎಂಬ ರಂ.ಶ್ರೀ.ಮುಗಳಿ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದಾಗಿದೆ.

ಅನುವಾದ ಕ್ಷೇತ್ರದಲ್ಲಿ ಆಂತರಿಕ ಅನುವಾದವೆಂಬ ಅನುವಾದ ವಿಧಾನವನ್ನು ಗುರುತಿಸಿಕೊಳ್ಳಲಾಗಿದೆ. ಇದು ಒಂದೇ ಭಾಷೆಯ ಸಾಹಿತ್ಯದಲ್ಲಿ ಒಂದು ಕಾಲಘಟ್ಟದಲ್ಲಿ ರಚನೆಯಾದ ಕೃತಿಯನ್ನು ಇನ್ನೊಂದು ಕಾಲಘಟ್ಟದಲ್ಲಿ ಆ ಸಮಾಜಕ್ಕೆ ಅರ್ಥವಾಗುವ, ಸಂದರ್ಭಕ್ಕೆ ಹೊಂದುವ ರೀತಿ ಅನುವಾದಿಸುವುದು ಇದರ ಉದ್ದೇಶವಾಗಿದೆ. ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಈ ಆಂತರಿಕ ಅನುವಾದದ ನೆರಳನ್ನು ಗುರುತಿಸಬಹುದು. ಉದಾಹರಣೆಯಾಗಿ ಹನ್ನೊಂದನೆ ಶತಮಾನದಲ್ಲಿ ಕವಿ ಶಾಂತಿನಾಥನ(ಕ್ರಿ.ಶ.1070) 'ಸುಕುಮಾರಚರಿತೆ' ಎಂಬ ಕೃತಿ. ಈ ಕೃತಿಯನ್ನು ಜೈನಕಥಾಪರಂಪರೆಯಲ್ಲಿದ್ದ ಸುಕುಮಾರನ ಚರಿತ್ರೆ ಹಾಗೂ ವಡ್ಡಾರಾಧನೆಯ 'ಸುಕುಮಾರ ಸ್ವಾಮಿಯ ಕಥೆ' ಯನ್ನು ಆಕರವಾಗಿಟ್ಟುಕೊಂಡು ರಚಿಸಿದ್ದು, ಇದರ ಮೇಲೆ ವಡ್ಡಾರಾಧನೆಯ ದಟ್ಟ ಪ್ರಭಾವವಿದೆ.

ನಾಗಚಂದ್ರ ಕ್ರಿ.ಶ.1100ರಲ್ಲಿ ಜೀವಿಸಿದ್ದ ಕವಿ. ಇವನು ಜೈನಮತದಲ್ಲಿ ನಿಷ್ಠೆಯುಳ್ಳವನಾಗಿದ್ದನು. 'ಮಲ್ಲಿನಾಥಪುರಾಣ' , 'ರಾಮಚಂದ್ರಚರಿತಪುರಾಣ' ಅಥವಾ 'ಪಂಪರಾಮಾಯಣ' ಎಂಬ ಎರಡು ಕೃತಿಗಳನ್ನು ರಚಿಸಿದನು. ಮಲ್ಲಿನಾಥಪುರಾಣ 19ನೇ ತೀರ್ಥಂಕರನಾದ 'ಮಲ್ಲಿನಾಥನ ಚರಿತೆ' ಯನ್ನು ಒಳಗೊಂಡಿದೆ. ಈತನ ಇನ್ನೊಂದು ಕೃತಿಯಾದ 'ರಾಮಚಂದ್ರಚರಿತ ಪುರಾಣ' ಅಥವಾ 'ಪಂಪರಾಮಾಯಣ' ಕೃತಿಯನ್ನು ಪ್ರಾಕೃತದ ವಿಮಲಸೂರಿಯ 'ಪಉಮಚರಿಉ' ಹಾಗೂ ಸಂಸ್ಕೃತದ ರವಿಷೇಣ 'ಪದ್ಮಪುರಾಣ' ಕೃತಿಯನ್ನು ಆಕರವಾಗಿಸಿಕೊಂಡು ಕನ್ನಡದಲ್ಲಿ ರಚನೆಯಾಗಿದೆ. ಇದು ಕನ್ನಡದ ಉಪಲಬ್ಧವಾದ ಮೊದಲ ಜೈನ ರಾಮಾಯಣವಾಗಿದೆ.

ಹನ್ನೆರಡನೆ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿ ಸಮಾಜದಲ್ಲಿ ಸಮಾನತೆಯನ್ನು ಸಾರಿದ ವಚನ ಚಳುವಳಿಯು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಈ ಕಾಲಘಟ್ಟದಲ್ಲಿ ವಚನಕಾರರು ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಲು ಸೃಷ್ಟಿಸಿಕೊಂಡ ವಚನ ಪ್ರಕಾರದಲ್ಲಿ ಕೆಲವು ವಚನಗಳು ವೇದ, ಉಪನಿಷತ್‌ಗಳ ಸಾರವನ್ನು ಹೋಲುವುದನ್ನು ಗುರುತಿಸಬಹುದಾಗಿದೆ. ವಚನ ಚಳುವಳಿ ನಂತರ ಕ್ರಿ.ಶ. 1200ರಲ್ಲಿ ಬರುವ ಹರಿಹರನು(ಕ್ರಿ.ಶ.1200) ದೇಸಿ ಛಂದಸ್ಸುಗಳಿಗೆ ವಿಶೇಷ ಪ್ರಾಧಾನ್ಯತೆಯನ್ನು ನೀಡಿ ದೇಸಿಯತೆಗೆ ಬುನಾದಿಯನ್ನು ಹಾಕಿದ. ತನ್ನ ಸಾಹಿತ್ಯದ ಅಭಿವ್ಯಕ್ತಿ ಮಾಧ್ಯಮವಾಗಿ ದೇಸಿ ಛಂದಸ್ಸದ ರಗಳೆಯನ್ನು ಬಳಸಿದ. ಹರಿಹರ ರಗಳೆ ಕವಿಯಾದಂತೆ, ಯಶಸ್ವಿ ಚಂಪು ಕವಿಯು ಕೂಡ ಹೌದು. ಸಂಸ್ಕೃತದ ಕಾಳಿದಾಸನ 'ಕುಮಾರಸಂಭವ' ಕಾವ್ಯವನ್ನು ಕನ್ನಡದಲ್ಲಿ 'ಗಿರಿಜಾಕಲ್ಯಾಣ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದನು. "ಇದೊಂದು ವೈಶಿಷ್ಟ್ಯಯುತವಾದ ಕೃತಿ, ಕನ್ನಡ ಸಾಹಿತ್ಯಕ್ಕೆ ಮೊದಲನೆಯಾದಾದ ಹರಿಹರಮಾರ್ಗದ ಚಂಪೂಗ್ರಂಥ. ಶೈವಪುರಾಣ ಮತ್ತು ಸಂಸ್ಕೃತ ಕಾವ್ಯಗಳಲ್ಲಿ ವರ್ಣಿತವಾದ ಶಿವಪಾರ್ವತಿಯರ ಮದುವೆ ಮತ್ತು ಅದರ ಹಿನ್ನೆಲೆ ಇದು ಇದರ ವಿಷಯ. ಇದರಲ್ಲಿ ಪಾರ್ವತಿಯ ಜನನದಿಂದ ವಿವಾಹದವರೆಗೆ ನಡೆದಿರಬಹುದಾದ ಸಂಗತಿಗಳನ್ನು ನಿರೂಪಿಸುತ್ತ ಅವಳ ಪಾತ್ರವನ್ನು ತಾನು ಕಂಡಂತೆ ಬಿಡಿಬಿಡಿಸಿ ಚಿತ್ರಿಸುವುದರಲ್ಲಿ ಹರಿಹರ ತೊಡಗಿದ್ದಾನೆ. ಕಥಾನಾಯಕೆಯಾದ ಗಿರಿಜೆಯ ಮೇಲೆ ಅವನ ಲಕ್ಷ್ಯವು ನೆಟ್ಟ ಕಾರಣ 'ಗಿರಿಜಾಕಲ್ಯಾಣ' ವೆಂದು ಹೆಸರು ಇದಕ್ಕೆ ಸಾರ್ಥಕವಾಯಿತು" . (ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯಚರಿತ್ರೆ, ಪು-97). ಈತನ ಇನ್ನೊಂದು ಪ್ರಮುಖವಾದ ಕೃತಿಗುಚ್ಛ 'ಶಿವಗಣದ ರಗಳೆಗಳು' . ಇದು ತಮಿಳುನಾಡಿನಲ್ಲಿ ಹೆಸರಾದ 63 ಪುರಾತನರ ಚರಿತ್ರೆಯಿಂದ ಪ್ರಭಾವಿತಗೊಂಡು ರಚನೆಯಾದ ಕೃತಿಯಾಗಿದೆ. ಇದರಲ್ಲಿ 12ನೇ ಶತಮಾನದ ವಚನಕಾರರ ಜೀವನ ಚರಿತ್ರೆ, ಪವಾಡಗಳಿವೆ. ಶೈವ ಧರ್ಮದ ಉನ್ನತೀಕರಣಕ್ಕಾಗಿ ಹರಿಹರ ಜನಸಾಮಾನ್ಯರಿಗೆ ಹತ್ತಿರವಾದ ಅವರಿಗೆ ಸರಳವಾಗಿ ಅರ್ಥವಾಗುವ ರಗಳೆ ಮಾರ್ಗವನ್ನು ಅನುಸರಿಸಿ ಶೈವ ತತ್ವಗಳನ್ನು ತನ್ನ ಕೃತಿಗಳ ಮೂಲಕ ಪ್ರಚುರ ಪಡಿಸಿದ. ಹರಿಹರನ ಶೈವಧರ್ಮದ ಮಾರ್ಗದಲ್ಲಿ ಮುಂದುವರೆದ ಆತನÀ ಅಳಿಯ ರಾಘವಾಂಕ(ಕ್ರಿ.ಶ.1225) ತನ್ನ ಸಾಹಿತ್ಯ ಅಭಿವ್ಯಕ್ತಿಯಾಗಿ 'ಷಟ್ಪದಿ' ಮಾರ್ಗವನ್ನು ಅನುಸರಿಸಿ 'ಷಟ್ಪದಿಯ ಬ್ರಹ್ಮ' ನಾದ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ' (ವಾರ್ಧಕ ಷಟ್ಪದಿ)ದ ಮೂಲಕಥೆ ತೀರ ಹಳೆಯದು; ವೇದ, ಪುರಾಣ, ಕಾವ್ಯಗಳಲ್ಲಿ ಬೇರೆ ಬೇರೆ ರೂಪದಲ್ಲಿ ಬಂದಿದ್ದನ್ನು ಈತ ಒಟ್ಟಾಗಿ ಕಾವ್ಯವಾಗಿ ಚಿತ್ರಿಸಿದ್ದಾನೆ.

ನೇಮಿಚಂದ್ರ(ಕ್ರಿ.ಶ.1200) ಕವಿ ರಚಿಸಿರುವ 'ಲೀಲಾವತೀ ಪ್ರಬಂಧ' ಕಾವ್ಯವು ಶೃಂಗಾರ ರಸಪ್ರಧಾನವಾದ ಕಾವ್ಯ. ಇದರಲ್ಲಿ ಕನಸ್ಸಿನಲ್ಲಿ ಒಬ್ಬರೊಬ್ಬರನ್ನು ಕಂಡು ಒಲಿದ ನಲ್ಲನಲ್ಲೆಯರು ಕೂಡಿ ಅಗಲಿ ಮತ್ತೆ ಕೂಡಿದ್ದೇ ಇಲ್ಲಿಯ ಪ್ರಣಯಕಥೆ. ಸಂಸ್ಕೃತದ ಸುಬಂಧುವಿನ 'ವಾಸವದತ್ತೆ' ಎಂಬ ಗದ್ಯ ಕಾವ್ಯದಲ್ಲಿ ಈ ಕಥಾ ಪರಂಪರೆ ರೂಪತಾಳಿತು. ಅದರಿಂದ ಲೀಲಾವತೀ ಪ್ರಬಂಧಕ್ಕೆ ಸ್ಫೂರ್ತಿ ಸಿಕ್ಕಿದೆ. ರುದ್ರಭಟ್ಟನು ಬ್ರಾಹ್ಮಣ ಕವಿಯಾಗಿದ್ದು ಸಂಸ್ಕೃತದ 'ವಿಷ್ಣುಪುರಾಣ' ದ ಕಥೆಯನ್ನು ಕನ್ನಡಕ್ಕೆ 'ಜಗನ್ನಾಥ ವಿಜಯ' ಎಂಬ ಹೆಸರಿನಲ್ಲಿ ಅನುವಾದಿಸಿದನು. ಇದು ಕನ್ನಡದಲ್ಲಿ ರಚನೆಯಾದ ಮೊದಲ ವೈದಿಕ ಪುರಾಣ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಕೃತಿಯ ಪ್ರಾಮುಖ್ಯತೆ ತಿಳಿಸುತ್ತದೆ.

ಕವಿಚಕ್ರವರ್ತಿಗಳಲ್ಲಿ ಒಬ್ಬನಾದ ಜನ್ನ(ಕ್ರಿ.ಶ.1225) 13ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದ ಕವಿ. ಈತನ ಪ್ರಮುಖ ಕೃತಿಗಳು 'ಯಶೋಧರಚರಿತೆ' ಮತ್ತು 'ಅನಂತನಾಥಪುರಾಣ' . ವಾದಿರಾಜನಿಂದ ಸಂಸ್ಕೃತದಲ್ಲಿ ರಚನೆಯಾಗಿದ್ದ 'ಯಶೋಧರಚರಿತೆ' ಯನ್ನು ಆಕರವಾಗಿ ಮಾಡಿಕೊಂಡು ಕನ್ನಡದಲ್ಲಿ 'ಯಶೋಧರಚರಿತೆ' ಎಂಬ ಹೆಸರಿನಲ್ಲಿಯೇ ರಚಿಸಿದ. ಇದು ಸು-310 ಕಂದ ಪದ್ಯಗಳ ಸಣ್ಣಗಾತ್ರದ ಕಾವ್ಯವಾಗಿದೆ. ಸಮಕಾಲೀನ ಸಂದರ್ಭದಲ್ಲಿಯೂ ಹೆಚ್ಚಿನ ಚರ್ಚೆ, ವಿಮರ್ಶೆಗೆ ಒಳಪಡುತ್ತಿರುವ ಕೃತಿಗಳ ಸಾಲಿನಲ್ಲಿ 'ಯಶೋಧರ ಚರಿತೆ' ಮೊದಲ ಸಾಲಿನಲ್ಲಿದೆ ಎಂದರೆ ತಪ್ಪಾಗಲಾರದು. ಇದರ ವಸ್ತು ಸಮಕಾಲೀನತೆಗೆ ತುಂಬ ಹತ್ತಿರವಾಗಿರುವುದು ಇದಕ್ಕೆ ಕಾರಣ. 'ಅನಂತನಾಥಪುರಾಣ' ವನ್ನು "ಸಂಸ್ಕೃತದ ಉತ್ತರ ಪುರಾಣ ಕನ್ನಡದ

ಚಾವುಂಡರಾಯಪುರಾಣದ ತೀರ ಸ್ವಲ್ಪವಾದ ಆಕರಗಳಿಂದ ಸ್ಫೂರ್ತಿಹೊಂದಿ ವಿಸ್ತಾರವಾದ ಪುರಾಣವನ್ನು ಜನ್ನ ರಚಿಸಿದ್ದಾನೆ" (ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ.188). ಇದು ಹದಿನಾಲ್ಕನೇ ತೀರ್ಥಂಕರನಾದ ಅನಂತನಾಥನ ಕತೆಯನ್ನು ಹದಿನಾಲ್ಕು ಆಶ್ವಾಸಗಳಲ್ಲಿ ನಿರೂಪಿಸುವ ಚಂಪೂ ಕಾವ್ಯವಾಗಿದೆ.

ಚೌಂಡರಸನು(ಕ್ರಿ.ಶ.1300) ಸಂಸ್ಕೃತದಲ್ಲಿ ದಂಡಿಯಿಂದ ಗದ್ಯದಲ್ಲಿ ರಚನೆಗೊಂಡಿದ್ದ 'ದಶಕುಮಾರಚರಿತೆ' ಎಂಬ ಕೃತಿಯನ್ನು ಚಂಪುವಿನಲ್ಲಿ 'ಅಭಿನವದಶಕುಮಾರಚರಿತೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಪ್ರೌಢ ಮಾದರಿಯಲ್ಲಿ ಬರೆದಿದ್ದರು ಇದು ಸರಳಾನುವಾದವಾಗಿದೆ. ಈತನ ಇನ್ನೊಂದು ಕೃತಿ 'ನಳಚರಿತ್ರೆ' ಇದು ಸಾಂಪ್ರದಾಯಿಕ ಪ್ರೌಢಸರಣಿಯಲ್ಲಿ ಹೇಳಿದ ನಳದಮಯಂತಿ ಕಥೆಯನ್ನು ಒಳಗೊಂಡಿದೆ.

ಭೀಮಕವಿ ಹದಿನಾಲ್ಕನೇ ಶತಮಾನದ ಉತ್ತರಾರ್ಧ ಕವಿಯಾಗಿದ್ದಾನೆ. ಈತನ 'ಬಸವಪುರಾಣ' ಕೃತಿಯು ತೆಲುಗಿನಲ್ಲಿ ರಚಿತವಾಗಿದ್ದ, ಪಾಲ್ಕುರಿಕೆ ಸೋಮನಾಥನ 'ಬಸವಪುರಾಣ'ದ ಕನ್ನಡಾನುವಾದವಾಗಿದೆ.

ಕುಮಾರವ್ಯಾಸನ ಹೆಸರು ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯಾದ ಹೆಸರು. ಈತ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಕಾವ್ಯವು ಜನಮನದಲ್ಲಿ ಇಂದಿಗೂ ಅಚ್ಚಳಿಯದಂತೆ ಉಳಿದಿದೆ. ಈತನ ಕಾವ್ಯವು ಕುಮಾರವ್ಯಾಸ ಭಾರತವೆಂದು, ಭಾಷೆಯ ದೃಷ್ಟಿಯಿಂದ 'ಗದುಗಿನ ಭಾರತ'ವೆಂದು ಜನಪ್ರಿಯವಾಗಿದೆ. ಈ ಕೃತಿಯ ಮೊದಲ ಹತ್ತು ಪರ್ವವನ್ನು ಮಾತ್ರ ಕುಮಾರವ್ಯಾಸನಿಂದ ರಚನೆಯಾಗಿವೆ. ಉಳಿದ ಮುಂದಿನ ಕಾವ್ಯವನ್ನು ತಿಮ್ಮಣ್ಣ ಕವಿಯು 'ಕೃಷ್ಣರಾಜಭಾರತ'ವೆಂಬ ಹೆಸರಿನಲ್ಲಿ ಪೂರ್ಣಗೊಳಿಸಿದ್ದಾನೆ. ಕುಮಾರವ್ಯಾಸ ಭಾರತಕ್ಕೆ ಮೂಲ ಆಕರ ವ್ಯಾಸನ ಸಂಸ್ಕೃತದ 'ಮಹಾಭಾರತ'. ಆದರೇ ಕುಮಾರವ್ಯಾಸನು ತನ್ನ ಕಾವ್ಯ ರಚಿಸುವ ಪೂರ್ವದಲ್ಲಿ ಸಂಸ್ಕೃತದ ಮಹಾಭಾರತವನ್ನು ಒಳಗೊಂಡಂತೆ ಅವನ ಕಾಲಘಟ್ಟದವರೆಗೂ ರಚನೆಯಾಗಿದ್ದ ಎಲ್ಲ ಮಹಾಭಾರತಗಳನ್ನು ಓದಿಕೊಂಡಂತೆ ಇದೆ. ಆದ್ದರಿಂದ ಅವನು ತನ್ನ ಭಾರತವನ್ನು ಅಷ್ಟೊಂದು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾನೆ. ಕುಮಾರವ್ಯಾಸನು ಕನ್ನಡದಲ್ಲಿ ಭಾರತವನ್ನು ಮರುಸೃಷ್ಟಿಸುವಾಗ ಅನೇಕ ಮಾರ್ಪಡುಗಳನ್ನು ಮಾಡಿಕೊಂಡಿದ್ದಾನೆ. ಆತ ಕೃಷ್ಣನ ಆರಾಧ್ಯದೈವ, ಪರಮಭಕ್ತ. ಆದ್ದರಿಂದ ತನ್ನ ಕೃತಿಗೆ ಕೃಷ್ಣನನ್ನು ನಾಯಕನಾಗಿ ಮಾಡಿಕೊಂಡು ಭಾಮಿನೀ ಷಟ್ಪದಿಯಲ್ಲಿ ಕೃತಿ ಮಾಡಿದ್ದಾನೆ.

ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸಾದಿಗಳಿಂದ ಇಡಿದು ಅನೇಕರು ಮಹಾಭಾರತದ ವಸ್ತುವನ್ನು ಕೇಂದ್ರವಾಗಿಸಿಕೊಂಡು ಕೃತಿಗಳ ರಚಿಸಿದರು. ಆದರೆ ರಾಮಾಯಾಣದ ವಸ್ತುವನ್ನಿಟ್ಟುಕೊಂಡು ರಚನೆ ಮಾಡಿದ್ದು ವಿರಳ. ಅನುಪಲಬ್ಧವಾದ ಪೊನ್ನನ 'ಭುವನೈಕ ರಾಮಾಭ್ಯುದಯ' ಕೃತಿಯನ್ನು ಬಿಟ್ಟರೆ ರಾಮಾಯಾಣದ ವಸ್ತುವನ್ನು ಅದರಲ್ಲೂ ಎಲ್ಲಾ ಕಾಂಡಗಳನ್ನು ಕನ್ನಡಕ್ಕೆ ಅನುವಾದಿಸಿದ ಕೀರ್ತಿ ತೊರವೆ ನರಹರಿಗೆ ಸಲ್ಲುತ್ತದೆ. ಈತ ಮೊಟ್ಟ ಮೊದಲಬಾರಿಗೆ ವಾಲ್ಮೀಕಿ ರಾಮಾಯಾಣದ ಎಲ್ಲ ಕಾಂಡಗಳನ್ನು ಕನ್ನಡಕ್ಕೆ 'ತೊರವೆ ರಾಮಾಯಾಣ' ಎಂಬ ಹೆಸರಿನಲ್ಲಿ ಅನುವಾದಿಸಿದನು. ಮಹಾಭಾರತವನ್ನು 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಹೆಸರಿನಲ್ಲಿ ಅನುವಾದಿಸಿ ಜನಪ್ರಿಯತೆ ಪಡೆದು ನಾರಾಣಾಪ್ಪ 'ಕುಮಾರವ್ಯಾಸ' ಆದ ರೀತಿ ರಾಮಾಯಾಣವನ್ನು ಅನುವಾದಿಸಿ ಜನಪ್ರಿಯತೆ ಪಡೆದ ತೊರವೆ ನರಹರಿ 'ಕುಮಾರವಾಲ್ಮಿಕಿ' ಯಾದನು. ಇವನ ನಂತರ ಸಂಸ್ಕೃತದಲ್ಲಿ ವ್ಯಾಸಮುನಿಯ ಶಿಷ್ಯನಾಗಿದ್ದ ಜೈಮಿನಿ ಮುನಿ ಅಶ್ವಮೇಧ ಪರ್ವವನ್ನು ಕೇಂದ್ರವಾಗಿಸಿಕೊಂಡು ರಚಿಸಿದ್ದ ಆತನ ಕೃತಿಯನ್ನು ಲಕ್ಷ್ಮೀಶ ಕನ್ನಡಕ್ಕೆ ವಾರ್ಧಕ ಷಟ್ಪದಿಯಲ್ಲಿ 'ಜೈಮಿನಿ ಭಾರತ'ವೆಂದು ಅನುವಾದಿಸಿದನು. ಈ ಕೃತಿ ಭಾಗವತ ದೃಷ್ಟಿ ಅಂದರೇ ಕೃಷ್ಣನ ಮಹಿಮೆಯನ್ನು ಕೇಂದ್ರವಾಗಿಸಿಕೊಂಡು ರಚನೆಯಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಉದ್ದಕ್ಕೂ ಸಂಸ್ಕೃತ, ಪ್ರಾಕೃತದಂತಹ ದೇಶಿಯ ಭಾಷೆಗಳ ಪ್ರಭಾವ ಹೆಚ್ಚಾಗಿದ್ದು ಇವುಗಳ ನಡುವೆ ಕವಿಗಳು ತಮ್ಮ ಅನುವಾದ ಚಟುವಟಿಕೆಗಳನ್ನಿಟ್ಟು ಕೊಂಡಿದ್ದರು. ಆದರೆ ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯ ಸಾಹಿತ್ಯವನ್ನು ಮೊದಲು ಪರಿಚಯಿಸಿದ ಕೀರ್ತಿ ಬಸವಪ್ಪಶಾಸ್ತ್ರಿಗಳಿಗೆ ಸಲ್ಲುತ್ತದೆ. ಇವರು ಸಂಸ್ಕೃತದಿಂದ ಕಾಳಿದಾಸನ ಎಲ್ಲಾ ಕೃತಿಗಳನ್ನು ಅನುವಾದಿಸಿ 'ಅಭಿನವ ಕಾಳಿದಾಸ' ಎಂಬ ಬಿರುದನ್ನು ಪಡೆದಿದ್ದಾರೆ. ಇವರ ಪ್ರಮುಖ ಅನುವಾದ ಕೃತಿಗಳೆಂದರೆ ಸಂಸ್ಕೃತದಿಂದ 'ಶಾಕುಂತಲ' , 'ಚಂಡಕೌಶಿಕ' , 'ಉತ್ತರರಾಮ ಚರಿತ' ಹಾಗೂ ಇಂಗ್ಲಿಷ್‌ನಿಂದ ಶೇಕ್ಸಪಿಯರನ ಅಥೆಲ್ಲೋ ನಾಟಕ ರೂಪಾಂತರವಾದ 'ಶೂರಸೇನ ಚರಿತ್ರೆ' . ಬಸವಪ್ಪಶಾಸ್ತ್ರಿಗಳ ನಂತರ ಪ್ರಾಚೀನ(ಹಳಗನ್ನಡ) ಕನ್ನಡ ಸಾಹಿತ್ಯಕ್ಕೂ ಹಾಗೂ ಆಧುನಿಕ ಕನ್ನಡ ಸಾಹಿತ್ಯಕ್ಕೂ ಕೊಂಡಿಯಾಗಿ ಕಾಣುವ ಕವಿ ಮುದ್ದಣ್ಣ. ಇವನ ಮೂಲ ಹೆಸರು ನಂದಳಿಕೆ ಲಕ್ಷ್ಮೀ ನಾರಣಪ್ಪ. ಸಂಸ್ಕೃತದಲ್ಲಿ ಶಾಕ್ತಸಂಪ್ರದಾಯದ ರಾಮಾಯಣದ ಕಥೆಯನ್ನು ಹೊಂದಿರುವ 'ಅದ್ಭುತ ರಾಮಾಯಣ' ಕೃತಿಯನ್ನು ಕನ್ನಡಕ್ಕೆ ಮೂಲದಲ್ಲಿ ಇರುವಂತೆಯೇ ಗದ್ಯಕ್ಕೆ ಬದಲಾಯಿಸಿ ಅನುವಾದಿಸಿದ. ಹಾಗೇ ಸಂಸ್ಕೃತದ 'ಪದ್ಮಪುರಾಣ' ದಲ್ಲಿಯ 'ಶೇಷರಾಮಾಯಣ' ದ ಕಥಾನಕವನ್ನು ತೆಗೆದುಕೊಂಡು 'ರಾಮಾಶ್ವಮೇಧ' ಎಂಬ ಗದ್ಯ ಕೃತಿಯನ್ನು ರಚಿಸಿದನು. ಇದು ಆತನ ಕೊನೆಯ ಹಾಗೂ ಹೆಚ್ಚು ಪರಿಪಕ್ವ ಕೃತಿಯಾಗಿದೆ.

## ಉಪಸಂಹಾರ

ಇಷ್ಟೊಂದು ದೀರ್ಘವಾದ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನುವಾದದ ಕೊಡುಗೆ ಅಪಾರವಾದದ್ದೆಂದು ಸ್ಪಷ್ಟವಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯವು ತನ್ನ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಳ್ಳುವಲ್ಲಿ ಸಂಸ್ಕೃತ ಸಾಹಿತ್ಯದ ನೆರವನ್ನು ಆಧಿಕವಾಗಿ ಬಯಸಿತ್ತು. ಆದ್ದರಿಂದಲೇ ಭಾರತೀಯ ಇತರೆ ಭಾಷೆಯ ಸಾಹಿತ್ಯಗಳಂತೆ ಸಮೃದ್ಧವಾದ ಸಾಹಿತ್ಯವನ್ನು ಕಟ್ಟಿಕೊಳ್ಳುವಲ್ಲಿ ಯಶಸ್ವಿ ಕೂಡ ಆಯಿತು. ಅದೇ ರೀತಿ ಆಧುನಿಕ ಸಂದರ್ಭದಲ್ಲಿ ದೇಶ, ವಿದೇಶಗಳ ಸಾಹಿತ್ಯದ ಸಂಪರ್ಕವನ್ನು ಕನ್ನಡ ಸಾಹಿತ್ಯ ಹೊಂದಿದೆ. ಇತ್ತಿಚೀನ ದಿನಗಳಲ್ಲಿ ನ್ಯಾಷ್‌ನಲ್ ಬುಕ್ ಟ್ರಸ್ಟ್, ಕುವೆಂಪು ಭಾಷಾಭಾರತಿ ಪ್ರಾಧಿಕಾರದಂತಹ ಸರ್ಕಾರಿ ಅಕಾಡೆಮಿಗಳು, ಖಾಸಗಿ ಸಂಸ್ಥೆ, ಪ್ರಕಾಶನಗಳು ದೇಶಿಯ, ವಿದೇಶಿಯ ಅನೇಕ ಭಾಷೆಗಳ ಶ್ರೇಷ್ಟವಾದ ಕೃತಿಗಳನ್ನು ಅನುವಾದ ಮಾಡಿ ಸ್ಥಳೀಯ ಭಾಷೆಗೆ ನೀಡುತ್ತಿವೆ. ಅಲ್ಲದೇ ತಮ್ಮ ಸ್ಥಳಿಯ ಭಾಷೆಯ ಶ್ರೇಷ್ಟ ಸಾಹಿತ್ಯವನ್ನು ಸಹ ದೇಶಿಯ, ವಿದೇಶಿಯ ಅನೇಕ ಭಾಷೆಗಳಿಗೆ ಅನುವಾದ ಮಾಡುತ್ತಿದೆ. ಇಂತಹ ಅಕಾಡೆಮಿ, ಪ್ರಾಧಿಕಾರ, ಖಾಸಗಿ ಪ್ರಕಾಶನ ಹಾಗೂ ಸಂಘ ಸಂಸ್ಥೆಗಳಿಂದ ಭಾರತೀಯ ಭಾಷೆಗಳು ಹಾಗೂ ವಿದೇಶಿ ಭಾಷೆಗಳ ಸಂಪರ್ಕವನ್ನು ಕನ್ನಡ ಸಾಹಿತ್ಯ ಹೊಂದಲು ಸಹಾಯಕವಾಗಿದೆ. ಆದ್ದರಿಂದ ಇಂದು ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಕೊಡುಕೊಳ್ಳುವಿಕೆಯ ಅನುವಾದ ಸಂಬಂಧವನ್ನು ಹೊಂದಿದೆ. ಕನ್ನಡ ಸಾಹಿತ್ಯವನ್ನು ಮುಂದಿನ ದಿನಮಾನಗಳಲ್ಲಿ ಇನ್ನೂ ಹೆಚ್ಚಾಗಿ ಅಂತರರಾಷ್ಟ್ರಿಯ ನೆಲೆಯಲ್ಲಿ ಗುರುತಿಸುವಂತೆ ಮಾಡುವ ಜವಾಬ್ದಾರಿ ಅನುವಾದ ಸಾಹಿತ್ಯದ ಮೇಲಿದೆ. ಕನ್ನಡ ಸಾಹಿತ್ಯಕ್ಕೆ ಅನೇಕ ದೇಶ, ವಿದೇಶಗಳ ಶ್ರೇಷ್ಟ ಸಾಹಿತ್ಯವನ್ನು ಪರಿಚಯಿಸುವ ಕೆಲಸದಲ್ಲಿ ಆಧುನಿಕೋತ್ತರ ಅನುವಾದ ಸಾಹಿತ್ಯ ಹೆಚ್ಚಿನ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಅನುವಾದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರ, ವಿಶ್ವವಿದ್ಯಾಲಯ, ಸಂಘ ಸಂಸ್ಥೆ, ಪ್ರಾಧಿಕಾರ, ಅಕಾಡೆಮಿ ಹಾಗೂ ಖಾಸಗಿ ಪ್ರಕಾಶನ ಮುಂತಾದವುಗಳು

ನೀಡಬೇಕಾಗಿದೆ. ಜೊತೆಗೆ ಅನುವಾದವನ್ನು ಪ್ರೋತ್ಸಾಹಿಸುವಂತೆ ಅನುವಾದ ಸಾಹಿತ್ಯವನ್ನು ಕುರಿತ ಅಧ್ಯಯನಗಳನ್ನು ಸಹ ಪ್ರೋತ್ಸಾಹಿಸುವುದು ಕೂಡ ಮುಖ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


1. ಮೋಹನ್ ಕುಂಟಾರ್(ಸಂ), ಅನುವಾದ ಸಾಹಿತ್ಯ, 2015, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 560018.
2. ಉಷಾ. ಎಂ, ಭಾಷಾಂತರ ಪ್ರವೇಶಿಕೆ, 2014, ಕನ್ನಡ ವಿಶ್ವವಿದ್ಯಾಲಯ, ಹಂಪಿ -583276.
3. ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ, ಸಂಪುಟ – 2, ಭಾಗ -2, ಎಚ್.ಎಸ್. ರಾಘವೇಂದ್ರ ರಾವ್(ಸಂ), 2013, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – 560006.
4. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಕನ್ನಡ ಸಾಹಿತ್ಯ ಚರಿತ್ರೆ, 2014, ಅಂಕಿತ ಪುಸ್ತಕ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಬಸವನಗುಡಿ, ಬೆಂಗಳೂರು-560004.
5. ತ.ಸು. ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, 2010, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು-2
6. ರಂ,ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, 2015, ಗೀತಾ ಬುಕ್ ಹೌಸ್, ಮೈಸೂರು-57001.

Tumbe Group of International Journal
A Multidisciplinary Journal
ISSN: 2581-8511
Volume- 2
Issue-2
May-August: 2019

# ದೇಶದ ಮುಖ್ಯವಾಹಿನಿಯಲ್ಲಿ ಮಹಿಳಾ ಸಬಲೀಕರಣ

**Dr. ASHWAKHAHAMED B A**
Assistant Professor
Govt. First Grade College, Tumkur, Karnataka (INDIA)
ashwakhahamed65835@gmail.com

## ಪ್ರಸ್ತಾವನೆ

ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿ ಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯ ಯೋಜನೆಗಳ ಪ್ರಕ್ರಿಯೆಯನ್ನು ಮಹಿಳಾ ಸಬಲೀಕರಣ ಎನ್ನಬಹುದು.

ಮಹಿಳಾ ಸಬಲೀಕರಣವೆಂದರೆ ಸ್ತ್ರೀಯರಿಗೆ ತಮ್ಮ ಜೀವನವನ್ನು ನಿಯಂತ್ರಿಸುತ್ತಾ ಬಂದಿರುವ ಇತರರಿಂದ ಮುಕ್ತಿ ಪಡೆದುಕೊಳ್ಳಲು ಹಾಗೂ ತಮ್ಮ ಜೀವನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ತಾವೇ ನಿಯಂತ್ರಿಸಿಕೊಳ್ಳಲು ಸೂಕ್ತವಾದ ಶಕ್ತಿ ನೀಡುವುದೆಂದರ್ಥ.

## ಮಹಿಳಾ ಸಬಲೀಕರಣ ಪರಿಕಲ್ಪನೆಯ ಅರ್ಥ

ಸಿಮೋನ್‌ದ ಬೊವಾ ದಿ ಸೆಂಕೆಡ್ ಸೆಕ್ಸ್

1. "ಸ್ತ್ರೀಯು ಮೂಲತಃ ರೂಪಿತವಾದವಳು ಹೆಣ್ಣು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ ನಿರ್ಮಿತಳಾಗುತ್ತಾಳೆಯೆ ವಿನಃ ಹೆಣ್ಣಾಗೆಯೆ ಹುಟ್ಟುವುದಿಲ್ಲ"

2. ಸ್ತ್ರೀಯು ಕೇವಲ ಸ್ತ್ರೀಯಾತ್ಮಕ ಗುಣಗಳನ್ನು ಮೈಗೂಡಿಸಿಕೊಳ್ಳವಂತೆ ಸಮಾಜವು ನೈಜ ಮಹಿಳೆಯನ್ನು ಬಳಕೆಯ ವಸ್ತುವಿನಂತೆ ಸೃಜಿಸುತ್ತದೆ. ಸಹಜ ಸ್ವಾಭಾವಿಕ ಮಹಿಳೆಯಾಗದೆ ಅಸ್ವಾಭಾವಿಕ ಪ್ರಾಣಿಯಂತೆ ಸಮಾಜ ಆಕೆಯನ್ನು ರೂಪಿಸಿದೆ.

ಸ್ತ್ರೀಯರ ಸ್ಥಾನಮಾನಗಳನ್ನು ಅಭಿವೃದ್ಧಿಪಡಿಸಿದ ಹೊರತಾಗಿ ಪ್ರಪಂಚದ ಕಲ್ಯಾಣ ಸಾಧ್ಯವಿಲ್ಲ-ಸ್ವಾಮಿ ವಿವೇಕಾನಂದರು.

## ಮಹಿಳಾ ಸಬಲೀಕರಣ

ಸಬಲೀಕರಣ ಎಂದರೆ "ಅಧಿಕಾರವನ್ನು ನೀಡುವ ಪ್ರಮಾಣಿಕರಿಸುವ, ಅವಕಾಶಕೊಡುವ ಮುಂತಾದವುಗಳ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಲ್ಪಟ್ಟಿದೆ.

ಸಬಲೀಕರಣವು ಮಹಿಳೆಯರನ್ನು ಸಬಲಗೊಳಿಸಲು ಅಧಿಕಾರ ಕೊಡುವುದನ್ನು ಸೂಚಿಸುತ್ತದೆ. ಸಬಲೀಕರಣದಿಂದ ಕೆಳ ಸ್ಥಾನದಲ್ಲಿರುವವರಿಗೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಅವಕಾಶ ನೀಡುವುದಾಗಿದೆ. ಮಹಿಳೆಯರಿಗೆ ಕೆಲವು ಹಕ್ಕುಗಳನ್ನು ಸಮಾನ ಅವಕಾಶ, ಸೌಲಭ್ಯಗಳು ಮತ್ತು ಸ್ವತಂತ್ರವನ್ನು ನಿರಾಕರಿಲಾಗಿ ಹಲವು ಕ್ಷೇತ್ರಗಳಲ್ಲಿ ದ್ವಿತೀಯ ದರ್ಜೆ ಸ್ಥಾನಮಾನಗಳನ್ನು ಅನುಭವಿಸುತ್ತಿದ್ದಾರೆ.

**ಮಹಿಳಾ ಸಬಲೀಕರಣ ನಿರ್ಧರಿಸುವ ಅಂಶಗಳು**

1. ಹೆಣ್ಣಿಗೆ ಅಧಿಕಾರ ನೀಡುವ ಒಂದು ಹೊಸ ನಿಯಮಾವಳಿಯನ್ನು ಜಾರಿಗೊಳಿಸಲು/ಸ್ವೀಕರಿಸಲು ಸಮಾಜ ಸಿದ್ಧವಿದಯೇ?
2. ಅದರೊಂದಿಗೆ ಉಂಟಾಗಲಿರುವ ಸವಾಲುಗಳನ್ನು ಹಾಗೂ ಹೊಸ ಪಾತ್ರವನ್ನು ನಿರ್ವಹಿಸಿಲು ಸ್ತ್ರೀಯರು ಸಿದ್ಧರಿರುವರೆ?
3. ಸಬಲೀಕರಣ ತ್ವರಿತಗೊಳಿಸಲು ಕಾನೂನು ಹೇಗೆ ಸಹಕಾರಿಯಾಗಿದೆ?
4. ಸಬಲೀಕರಣ ಜಾರಿಗೊಳಿಸಲು ಬೇಕಾದ ರಚನಾತ್ಮಕ ಚೌಕಟ್ಟನ್ನು ತಿಳಿಯಪಡಿಸುವುದು.

ಭಾರತ ಸರ್ಕಾರವು 2001ನೇ ಇಸವಿಯನ್ನು ಮಹಿಳಾ ಸಬಲೀಕರಣ ವರ್ಷ ಎಂದು ಘೋಷಿಸಿದೆ.

**ಉದ್ದೇಶಗಳು:**

1. ಮಹಿಳಾ ಸಮಸ್ಯೆಗಳ ಜಾಗೃತಿ ಉಂಟುಮಾಡುವುದು.
2. ಸಂಪನ್ಮೂಲ ಪಡೆಯಲು ಸ್ಥಿತಿ ಸುಧಾರಣೆ ಮಾಡಿಕೊಳ್ಳುವಂತೆ ಮಾಡುವುದು
3. ದೇಶದ ಮುಖ್ಯವಾಹಿನಿಯಲ್ಲಿ ಸ್ಥಾನಮಾನ ಪಡೆಯಲು ಆತ್ಮವಿಶ್ವಾಸ ಬೆಳೆಸುವುದು

1975ನೇ ಇಸವಿಯನ್ನು ವಿಶ್ವಸಂಸ್ಥೆಯು ಅಂತರ ರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿತು. ಆ ವರ್ಷ ಸ್ತ್ರೀಯರು ಸಂಘಟನೆಯ ಕಾರ್ಯಗಳು ಬಲವಾಗಿ ನಡೆದವು. ಭಾರತದಲ್ಲೂ ಸ್ತ್ರೀ ವಿಮೋಚನೆ ಚಳುವಳಿಗೆ ಪ್ರೋತ್ಸಾಹ ದೊರೆಯಿತು.

**ಮಹಿಳಾ ಸಬಲೀಕರಣದ ಕಾರ್ಯತಂತ್ರಗಳು**

ಮಹಿಳಾ ಸಬಲೀಕರಣದ ಕಾರ್ಯತಂತ್ರಗಳನ್ನು ಕಾನೂನಾತ್ಮಕ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ಗಮನಿಸಬಹುದು.

**ಕಾಯಿದೆಗಳ ಪಾತ್ರ:**

ಭಾರತೀಯ ಸಮಾಜದ ಸ್ತ್ರೀಯರು ಸ್ಥಾನಮಾನಗಳ ಸುಧಾರಣೆಯಲ್ಲಿ ಹಲವು ಕಾಯಿದೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲಾಗಿದೆ. ಸರ್ಕಾರವೇ ಅಧಿಕೃತವಾಗಿ ರಚಿಸಿ ಜಾರಿಗೆ ತಂದಿರುವ ಈ ಕಾಯಿದೆಗಳು ಸ್ತ್ರೀಯರ ದುಸ್ಥಿತಿಯನ್ನು ದೂರಮಾಡಿ ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕಿ ಕಾನೂನಿನ ರಕ್ಷಣೆ ನೀಡಿ ಕಾಪಾಡುವ ಪ್ರಮುಖ ಉದ್ದೇಶವುಳ್ಳದಾಗಿದೆ. ಸಾಂಪ್ರದಾಯಿಕ ಹಿಂದೂ ಸಮಾಜದಲ್ಲಿ ಸ್ತ್ರೀಯರು ಶತಶತಮಾನಗಳವರೆಗೆ ಸತತವಾಗಿ ಅನುಭವಿಸುತ್ತಿದ್ದ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸಿ ಅವರು ಮುಕ್ತ ವಾತಾವರಣದಲ್ಲಿ ಬದುಕಲು ಅವಕಾಶವೀಯುವುದರಲ್ಲಿ ಸಾಮಾಜಿಕ ಕಾಯಿದೆಗಳು ಪ್ರಮುಖವಾಗಿವೆ.

**ಸ್ವತಂತ್ರ್ಯ ಪೂರ್ವದಲ್ಲಿಯ ಕಾಯಿದೆಗಳು**

1. ಹಿಂದೂ ವಿಧವಾ ಪುನರ್‌ವಿವಾಹ ಕಾಯಿದೆ-1856: ಈ ಶಾಸನವು ವಿಧವಾ ವಿವಾಹ ಮತ್ತ ಅಂತಹ ವಿವಾಹ ಮತ್ತು ಅಂತಹ ವಿವಾಹದಿಂದ ಹುಟ್ಟಿದ ಮಕ್ಕಳನ್ನು ಕಾನೂನು ಸಮ್ಮತವೆಂದು ಸಾರಿತು. ವಿಧವೆಯು ಪುನರ್ ವಿವಾಹವಾದರೆ, ತೀರಿಕೊಂದ ತನ್ನ ಪತಿಯ ಆಸ್ತಿಯ ಮೇಲಿ ಹಕ್ಕು

ಕಳೆದುಕೊಳ್ಳುತ್ತಾಳೆ. ಪುನರ್ ವಿವಾಹದ ನಂತರ ವಿಧವೆಯು ವಿವಾಹಿತ ಮಹಿಳೆಯರು ಅನುಭವಿಸುವ ಎಲ್ಲಾ ಹಕ್ಕುಗಳಿಗೆ ಅರ್ಹಳಾಗುತ್ತಾಳೆ. ವಿಧವೆ ಅಪ್ರಾಪ್ತ ವಯಸ್ಸಿನವಳಾಗಿದ್ದರೆ ಪುನರ್ ವಿವಾಹಕ್ಕೆ ತಂದೆ ತಾಯಿಗಳ ಅನುಮತಿ ಅವಶ್ಯಕವಾಗಿದೆ.

2. ವಿವಾಹ ವಿಶೇಷ ಕಾಯಿದೆ-1872: ಈ ಕಾಯಿದೆಯು ಜಾತಿಯ ವ್ಯವಸ್ಥೆಯ ಈ ಕಟ್ಟುಪಾಡುಗಳನ್ನು ಸಡಿಲಿಸಿ ಜಾತಿ-ಉಪಜಾತಿಗಳಲ್ಲಿ ವಿವಾಹಗಳು ಕಾನೂನು ಸಮ್ಮತವೆಂದು ಸಾರಿತು.
3. ಬಾಲ್ಯ ವಿವಾಹ ನಿಶೇಧ ಶಾಸನ-1929: ಈ ಶಾಸನದನ್ವಯ ಬಾಲ್ಯ ವಿವಾಹವು ಕಾನೂನು ಬಾಹಿರ ಚಟುವಟಿಕೆಯೆಂದೂ, ಶಿಕ್ಷಾರ್ಹ ಅಪರಾಧವೆಂದೂ ಸಾರಲಾಯಿತು. ಪುರುಷರ ವಿವಾಹ ಮಿತಿಯನ್ನು 18ಕ್ಕೆ ಮಹಿಳೆಯರ ವಯಸ್ಸು 15ಕ್ಕೆ ನಿಗದಿಪಡಿಸಲಾಯಿತು.
4. ಹಿಂದೂ ಸ್ತ್ರೀಯರ ಹಕ್ಕುಗಳ ಶಾಸನ-1937: ಈ ಶಾಸನದನ್ವಯ ಹಿಂದೂ ಸ್ತ್ರೀಯರ ಆಸ್ತಿಗಳ ಶಾಸನವು ಸತ್ತು ಹೋದ ಗಂಡನ ವಿಧವೆ ಪತ್ನಿಗೆ ಅವನ ಆಸ್ತಿಯ ಮೇಲಿನ ಹಕ್ಕನ್ನು ನೀಡಿತು. ಈ ಶಾಸನವು ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯದ ಅವಶ್ಯಕತೆಯನ್ನು ಸಾರಿ ಹೇಳಿತು.

## ಸ್ವತಂತ್ರ್ಯ ನಂತರದ ಕಾಯಿದೆಗಳು

ಭಾರತವು ಸ್ವತಂತ್ರ್ಯ ಪಡೆದ ನಂತರ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವ ಉದ್ದೇಶದಿಂದ ಹಲವಾರು ಶಾಸನಗಳನ್ನು ರೂಪಿಸಲಾಯಿತು. ಅವುಗಳೆಂದರೆ:

1. ಹಿಂದೂ ವಿವಾಹ ಕಾಯ್ದೆ-1955: 1955ರಲ್ಲಿ ಜಾರಿಗೆ ಬಂದ ಈ ಕಾಯ್ದೆ ಹಿಂದೂ ಎಂಬ ಪದದಲ್ಲಿ ಜೈನರು, ಬೌಧರು ಮತ್ತು ಸಿಖ್ಖರನ್ನು ಸೇರಿಸಲಾಯಿತು. ಈ ಕಾಯ್ದೆಯು ಸ್ತ್ರೀಯರಿಗೆ ಬಹುಪತ್ನಿತ್ವಕ್ಕೆ ವಿರೋಧವಾಗಿ ರಕ್ಷಣೆಯನ್ನು ಒದಗಿಸಿದ. ಸ್ತ್ರೀ ಪುರುಷರಿಗೆ ವಿವಾಹ ವಿಚ್ಛೇದನೆಗೆ ಸಮಾನ ಅವಕಾಶ ನೀಡಿದೆ. ತನ್ನ ಪತಿ ಮತಾಂತರ ಹೊಂದಿದರೆ, ಮೂರು ವರ್ಷಗಳ ಕಾಲ ಕೆಟ್ಟ ಕಾಯಿಲೆಯಿಂದ ನರಳುತ್ತಿದ್ದರೆ, ತನ್ನ ಪತ್ನಿಯ ಜೊತೆ ವಾಸವಾಗಿಲ್ಲದಿದ್ದರೆ, ಸ್ತ್ರೀ ವಿವಾಹ ವಿಚ್ಛೇದನೆ ಪಡೆಯಬಹುದಾಗಿದೆ. ಅನಂತರ ತಾನು ಇಚ್ಛಿಸುವುದಾದರೆ ಪುನರ್ವಿವಾಹ ಮಾಡಿಕೊಳ್ಳಬಹುದು.
2. ಹಿಂದೂ ಉತ್ತರಾಧಿಕಾರ ಕಾಯ್ದೆ-1956: 1956ರಲ್ಲಿ ಆಸ್ತಿಯ ಉತ್ತರಾಧಿಕಾರತ್ವದ ವಿಷಯದಲ್ಲಿ ಸ್ತ್ರೀಯರಿಗೆ ಪುರುಷರಿಗೆ ಸರಿಸಮಾನವಾದ ಹಕ್ಕುಗಳನ್ನು ನೀಡಿದೆ, ಇದು ಆಸ್ತಿಯನ್ನು ರಕ್ತಸಂಬಂಧದ ಆಧಾರದ ಮೇಲೆ ನಿರ್ಧರಿಸುತ್ತದೆ. ಈ ಕಾಯಿದೆಯು ಹೆಣ್ಣು ಮಕ್ಕಳಿಗೂ ತಮ್ಮ ತಂದೆಯ ಆಸ್ತಿಗೆ ಉತ್ತರಾಧಿಕಾರಿಯಾಗುವ ಅವಕಾಶ ಕಲ್ಪಿಸಿದೆ.
3. ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶದ ಕಾಯಿದೆ-1956: 1956ರ ಈ ಕಾಯ್ದೆಯು ದತ್ತು ಸ್ವೀಕರಿಸುವ ಮತ್ತು ಜೀವನಾಂಶ ಪಡೆಯುವ ವಿಷಯದಲ್ಲಿ ಸ್ತ್ರೀಯರಿಗೆ ಅಧಿಕಾರವನ್ನು ಕಲ್ಪಿಸುವ ವಿಷಯದಲ್ಲಿ ಸ್ತ್ರೀಯರಿಗೆ ಅಧಿಕಾರವನ್ನು ಕಲ್ಪಿಸಿವ ಉದ್ದೇಶದಿಂದ ಈ ಕಾಯಿದೆಯನ್ನು ರಚಿಸಲಾಗಿದೆ. ವಿವಾಹಿತ ಸ್ತ್ರೀಯರು, ವಿವಾಹ ವಿಚ್ಛೇದನೆ ಪಡೆದು ಸ್ತ್ರೀಯರು ಹಾಗೂ ವಿಧವೆಯರಿಗೆ ದತ್ತು ತೆಗೆದುಕೊಳ್ಳುವ ಅಧಿಕಾರವನ್ನು ನೀಡುತ್ತದೆ. ಪತಿಯು ಮರಣ ಹೊಂದಿದ್ದರೆ ಇಲ್ಲವೆ ಸನ್ಯಾಸ ಸ್ವೀಕರಿಸಿದರೆ ಪತ್ನಿಯು ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಕುಟುಂಬದ ಇತರೆ ಸದಸ್ಯರ ಒಪ್ಪಿಗೆಯ ಅವಶ್ಯಕತೆಯಿಲ್ಲ. ಹೆಣ್ಣು ಮಕ್ಕಳಿಗೆ ಮತ್ತು ವಿಧವೆಯರಿಗೆ ಜೀವನಾಂಶ ಪಡೆಯುವ ಅಧಿಕಾರ ನೀಡಿದೆ.
4. ವರದಕ್ಷಣಾ ನಿಷೇಧ ಶಾಸನ-1961: ಈ ಕಾಯಿದೆಯ ಪ್ರಕಾರ ವಿವಾಹಕ್ಕೆ ಮೊದಲು ಅಥವಾ ವಿವಾಹದ ನಂತರ ಸಂದರ್ಭದಲ್ಲಿ ವರದಕ್ಷಣೆಯನ್ನು ಕೊಡುವುದು ಇಲ್ಲವೆ ತೆಗೆದುಕೊಳ್ಳುವುದು ಅಪರಾಧವಾಗಿದೆ. ಆರು ತಿಂಗಳ ಸೆರೆವಾಸ, ಐದುನೂರು ರೂಪಾಯಿ ದಂಡ ಅಥವಾ ಎರಡನ್ನು ವಿಧಿಸಬಹುದಾಗಿದೆ.

1986ರಲ್ಲಿ ಇದಕ್ಕೆ ತಿದ್ದುಪಡಿ ತಂದು ಈ ಕಾಯಿದೆಯ ಉಲ್ಲಂಘನೆಗೆ 5 ವರ್ಷ ಸೆರೆವಾಸ ಹಾಗೂ 15,000ರೂ ದಂಡ ವಿಧಿಸಲು ಅವಕಾಶವಿದೆ.

5. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ-2005: ಈ ಶಾಸನವು ಮಹಿಳೆಯರಿಗೆ ನೆಡೆಯುವ ಕೌಟುಂಬಿಕ ದೌರ್ಜನ್ಯವನ್ನು ತಡೆಯಲು ಉದ್ದೇಶಿಸಲಾಗಿದೆ. ಭಾರತ ಸರ್ಕಾರವು 26-10-2005ರಂದು ಜಾರಿಗೊಳಿಸಿತು. ಕೌಟುಂಬಿಕ ದೌರ್ಜನ್ಯಗಳಿಗೆ ಹಲವು ಮಹಿಳೆಯರು ಬಲಿಯಾಗಿದ್ದಾರೆ, ಇಂದಿಗೂ ಬಲಿಯಾಗುತ್ತಿದ್ದಾರೆ. ಈ ಕಾಯಿದೆ ಹಲವು ಸ್ತ್ರೀಯರಿಗೆ ಅನುಕೂಲಕರವಾಯಿತು. ಹಲವು ಮಹಿಳೆಯರು ದೌರ್ಜನ್ಯದ ವಿರುದ್ದ ದೂರುಗಳನ್ನು ದಾಖಲಿಸಿದರು ಹಲವರು ನ್ಯಾಯ ಪಡೆದರು.

ಈ ಕಾಯಿದೆಯು ಮುಖ್ಯವಾಗಿ ಹೆಂಡತಿ ಅಥವಾ ಮಹಿಳೆಯನ್ನು ಗಂಡ ಅಥವಾ ಪುರುಷನಿಂದ ಅಥವಾ ಅವನ ಸಂಬಂಧಿಗಳಿಂದ ಉಂಟಾಗುವ ಕೌಟಂಬಿಕ ದೌರ್ಜನ್ಯ ತಡೆಯುವುದು.

ಇತ್ತೀಚನ ಮದರಾಸ್ ಹೈಕೋರ್ಟ್ ತೀರ್ಪಿನಂತೆ ಇದು ಕೇವಲ ಗಂಡ ಅಥವ ಪುರುಷನ ವಿರುದ್ದವೆ ಅಲ್ಲದೆ ಮನೆಯಲ್ಲಿರುವ ಮಹಿಳಾ ಸಂಬಂಧಿಗಳ ವಿರುದ್ದವು ದೂರು ದಾಖಲಿಸಬಹುದಾಗಿದೆ.

ಸ್ತ್ರೀಯರನ್ನು ನಿಂದಿಸುವುದು, ಬೈಯುವುದು, ಶಾರೀರಿಕವಾಗಿ, ಲೈಂಗಿಕವಾಗಿ, ಭಾವನಾತ್ಮಕವಾಗಿ ಮತ್ತು ಆರ್ಥಿಕವಾಗಿ ತೊಂದರೆ ಕೊಡುವುದು, ವರದಕ್ಷಣೆ ಕೇಳಿ ಹಿಂಸಿಸುವುದು ಶಿಕ್ಷಾರ್ಹವಾದುದಾಗಿದೆ.

ಈ ಅಪರಾಧ ಎಸಗಿದವರಿಗೆ ನಾನ್ ಬೇಲಬಲ್ ವಾರೆಂಟ್, ಒಂದು ವರ್ಷದವರೆಗೂ ನೀಡಬಹುದಾದ ಜೈಲು ಶಿಕ್ಷೆ ಅಥವಾ 20 ಸಾವಿರ ರೂ ದಂಡ ಅಥವಾ ಎರಡನ್ನು ವಿಧಿಸಬಹುದಾಗಿದೆ. ಹೀಗೆ ಕೌಟುಂಬಿಕ ದೌರ್ಜನ್ಯ ತಡೆಕಾಯಿದೆಯು ಕೇವಲ ಸ್ತ್ರೀಯನ್ನು ರಕ್ಷಿಸುವುದಲ್ಲದೆ ಮನೆಯಲ್ಲಿ ಬದುಕಲು ಮತ್ತು ಘನತೆಯಿಂದ ಬದುಕಲು ಅವಕಾಶ ನೀಡುತ್ತದೆ. ಇದು ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬರಿಗೂ ನೀಡಿರುವ ಹಕ್ಕು ಕೂಡ ಆಗಿದೆ.

**ಸಾಮಾಜಿಕ ತಂತ್ರಗಳು**

ಮಹಿಳಾ ಕಲ್ಯಾಣ ಕಾರ್ಯಕ್ರಮಗಳು

1. ಮಹಿಳೆಯರ ಕಲ್ಯಾಣಕ್ಕಾಗಿ ಉಚಿತ ಕಡ್ಡಾಯ ಶಿಕ್ಷಣ ನೀಡುವುದು
2. ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವುದು
3. ಹೆಣ್ಣು ಭ್ರೂಣ ಮತ್ತು ಶಿಶು ಹತ್ಯೆ ತಡೆಯುವುದು
4. ಗರ್ಭವತಿ ಸ್ತ್ರೀಯರ ಆರೈಕೆ
5. ಕಾರ್ಯ ಪರಿಸ್ಥಿತಿಯಲ್ಲಿ ಸ್ತ್ರೀಯರ ರಕ್ಷಣೆ
6. ಲೈಂಗಿಕ ದೌರ್ಜನ್ಯ ತಡೆಯುವುದು
7. ಕೌಟುಂಬಿಕ ದೌರ್ಜನ್ಯ ತಡೆ
8. ವರದಕ್ಷಣೆ ತಡೆ
9. ವಿಧವಾ ಮಾಶಾಸನ
10. ವೃದ್ದಾಪ್ಯ ವೇತನ
11. ಮರ್ಯಾದ ಹತ್ಯೆ ತಡೆ

**ಸಮೂಹ ಮಾಧ್ಯಮಗಳ ಮೂಲಕ ಮಹಿಳೆಯರಲ್ಲಿ ಕಾನೂನು ಅರಿವು**.

1. ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನೆರವು i) ವೈಯಕ್ತಿಕ ಮಟ್ಟ ii) ಸಾಮೂಹಿಕ ಮಟ್ಟ iii) ಶಾಸನಗಳನ್ನು ಬಳಸಿ.
2. ಶಿಕ್ಷಣ ಒದಗಿಸುವುದು i) ಉಚಿತ ಕಡ್ಡಾಯ ಶಿಕ್ಷಣ ii) ಉನ್ನತ ಶಿಕ್ಷಣಕ್ಕೆ ಪ್ರೊತ್ಸಾಹ.
3. ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಿ ಅನ್ಯಾಯದ ವಿರುದ್ಧ ಹೋರಾಡಲು ಶಕ್ತಿ ನೀಡುವುದು.
4. ಪ್ರಸ್ತುತ ಸನ್ನಿವೇಶದಲ್ಲಿ ಪುರುಷರ ಪಾತ್ರಗಳ ಅರಿವು ಮೂಡಿಸುವುದು ಕುಟುಂಬ ಜೀವನದಲ್ಲಿ ಅವರ ಕೊಡುಗೆಯ

**ಅರಿವು ಮೂಡಿಸುವುದು**.

ಆರ್ಥಿಕ ತಂತ್ರಗಳು

1. ಆರ್ಥಿಕವಾಗಿ ಸ್ವತಂತ್ರರಾಗಲು ಮತ್ತು ಉದ್ಯೋಗವಕಾಶಗಳನ್ನು ಪಡೆಯಲು ಸಮರ್ಥರಾಗುವಂತೆ ಶೈಕ್ಷಣಿಕ ಮತ್ತು
2. ವೃತ್ತಿ ತರಬೇತಿ ನೀಡುವುದು.
3. ದೈಹಿಕಶ್ರಮ ಕಡಿಮೆ ಮಾಡುವ ತಂತ್ರಜ್ಞಾನದ ಬಳಕೆಯಿಂದ ದಿನ ನಿತ್ಯದ ಕೆಲಸದ ಶ್ರಮ ಕಡಿಮೆ ಮಾಡುವುದು.
4. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ನೀಡುವುದು
5. ಸಣ್ಣಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಸ್ವ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಒದಗಿಸುವುದು
6. ವಿವಿಧ ಹಂತಗಳ ಪ್ರಮುಖ ಹುದ್ದೆಗಳಲ್ಲಿ ಉದ್ಯೋಗಗಳಿಗೆ ಮಹಿಳೆಯರಿಗೆ ಅವಕಾಶ ನೀಡುವುದು

**ರಾಷ್ಟ್ರೀಯ ಮಹಿಳಾ ಆಯೋಗ**

ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಗಟ್ಟಲು ಮತ್ತು ಮಹಿಳೆಯರಿಗೆ ಭಾರತ ಸರ್ಕಾರವು ರಾಷ್ಟ್ರೀಯ ಮಹಿಳಾ ಆಯೋಗ ಸ್ಥಾಪಿಸಿದೆ. ರಾಷ್ಟ್ರೀಯ ಮಹಿಳಾ ಆಯೋಗವು ಅಧ್ಯಕ್ಷರು, 5 ಸದಸ್ಯರು, ಕೇಂದ್ರ ಸರ್ಕಾರದಿಂದ ನೇಮಿತವಾದ ಕಾರ್ಯದರ್ಶಿ ಇರುತ್ತಾರೆ. ಶಾಸನಗಳ ಪುನರ್ ವಿಮರ್ಷೆ, ನಿರ್ದಿಷ್ಟ ದೌರ್ಜನ್ಯದ ಪ್ರಕರಣದ ಮಧ್ಯ ಪ್ರವೇಶ, ಮಹಿಳೆಯರಿಗೆ ನ್ಯಾಯ ಒದಗಿಸುವ ಕಾರ್ಯ ಮಾಡುತ್ತದೆ. ವೃತ್ತಿ ತರಬೇತಿ, ದುಡಿಯುವ ಮಹಿಳೆಗೆ ವಸತಿ ಗೃಹಗಳು ಮುಂತಾದವು.

**ಸ್ವಸಹಾಯ ಸಂಘಗಳ ಪಾತ್ರ**

ಸ್ವಂತ ಇಚ್ಛೆಯಿಂದ ನಿಯಮಿತವಾಗಿ ಸಣ್ಣ ಮೊತ್ತವನ್ನು ಉಳಿತಾಯ ಮಾಡಿ ಪರಸ್ಪರ ನೆರವಿನ ಮೂಲಕ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮಾನ್ಯ ಸಾಮಾಜಿಕ ಆರ್ಥಿಕ ಹಿನ್ನಲೆಯಿಂದ ಬಂದ ಸೂಕ್ಷ್ಮ ಉದ್ದಿಮಿದರನು ಒಳಗೊಂಡ ಸಮೂಹ ಸ್ವಸಹಾಯ ಸಂಘಗಳಾಗಿವೆ.

ತಾವೇ ಉಳಿಸಿದ ಹಣದಿಂದ ತಮ್ಮ ಅಗತ್ಯಗಳನ್ನು ಪೂರೈಸುತ್ತರೆ. ತಾವು ಪಡೆದ ಸಾಲವನ್ನು ಸಮರ್ಪಕವಾಗಿ ಬಳಸಲು ಮತ್ತು ಸಕಾಲಕ್ಕೆ ಪಾವತಿಸಲು ತಮ್ಮ ಸಮೂಹದ ನಿಯಮಗಳಿಗೆ ಬದ್ಧರಾಗಿರುತ್ತಾರೆ. ಸಾಲಕ್ಕೆ ಭದ್ರತೆ ಅವಶ್ಯಕತೆ ಇರುವುದಿಲ್ಲ, ಸ್ವಸಹಾಯ ಸಂಘಗಳಿಗೆ ಬಡತನ ನಿವಾರಣೆಯ ಸಾಮರ್ಥ್ಯವಿದ್ದು ಭಾರತದಲ್ಲಿ ಸಾಲ ಪಡೆದು ಜೀವನ ಉತ್ತಮಗೊಳಿಸಿಕೊಳ್ಳಲು ಅವಕಾಶಗಳಿವೆ.

ಸೂಕ್ಷ್ಮ ಹಣಕಾಸು

ಬಡ ಮತ್ತು ಕಡಿಮೆ ಆದಾಯವುಳ್ಳ ಕುಟುಂಬಗಳಿಗೆ ಉಳಿತಾಯ ಖಾತೆಗಳು, ಜೀವವಿಮಾ ನಿಧಿ ಮತ್ತು ಸಾಲ ಮುಂತಾದ ಆರ್ಥಿಕ ಸೇವೆ ನೀಡಿ ಅವರ ಆದಾಯ ಹೆಚ್ಚಿಸುವುದು. ಸೂಕ್ಷ್ಮ ಹಣಕಾಸು ಬ್ಯಾಂಕು ಅಥವಾ ಸಂಬಂಧಿತ ಸೇವೆಗಳ ಲಭ್ಯತೆ ಇಲ್ಲದಿರುವ ಸಣ್ಣ ಉದ್ದಿಮೆದಾರರು, ವ್ಯಾಪಾರಸ್ಥರಿಗೆ ಸೂಕ್ಷ್ಮ ಹಣಕಾಸು ಉಪಯುಕ್ತವಾಗಿದೆ. ಬಡವರಿಗೆ, ಸಾಲ ನೀಡಿಕೆ, ಉಳಿತಾಯ ವಿಮೆ, ಹಣಕಾಸು ವರ್ಗಾವಣೆ ಸೇವೆ ನೀಡುತ್ತದೆ.

**ಲಕ್ಷಣಗಳು:**

1. ಭದ್ರತೆ ಇಲ್ಲದ ಸಾಲ
2. ಬಡತನದ ರೇಖೆಗಿಂತ ಕೆಳಗಿರುವವರಿಗೆ ಸಾಲ ನೀಡುವುದು
3. ಸ್ವಸಹಾಯ ಸಂಘಗಳ ಸದಸ್ಯರೂ ಕೂಡ ಸೂಕ್ಷ್ಮ ಹಣಕಾಸು ಲಾಭ ಪಡೆಯಬಹುದು
4. ಗರಿಷ್ಟ ಸಾಲದ ಮೊತ್ತ ಕಡಿಮೆ ಪ್ರಮಾಣದ್ದಾಗಿರುತ್ತದೆ.
5. ಬಡವರಿಗೆ ನೀಡುವ ಸಾಲವನ್ನು ಸ್ವಸಹಾಯ ಸಂಘಗಳು ನಿರ್ಧರಿಸುತ್ತವೆ.

**ಸೂಕ್ಷ್ಮ ಹಣಕಾಸಿನ ಪ್ರಕಾರಗಳು**

1. ಅನೌಪಚಾರಿಕ ಹಣಕಾಸು ಸೇವೆ ನೀಡುವವರು ಖಾಸಗಿ ಲೇವಾದೇವಿಗಾರರು, ಗಿರವಿ ಅಂಗಡಿಯವರು, ಉಳಿತಾಯ ಹಣ ಸಂಗ್ರಹಕರು, ಚೀಟಿ ವ್ಯವಹಾರದರು, ಸೇವೆ ನೀಡುವವರು, ಇದು ತ್ವರಿತ ಅನುಕೂಲಕರವಾಗಿ ಸಿಗುವಂತದಾಗಿದೆ. ಆದರೆ ದುಬಾರಿಯಾಗಿರುತ್ತದೆ. ಜನರ ಹಣಕ್ಕೆ ಭದ್ರತೆ ಇರುವುದಿಲ್ಲ.
2. ಸದಸ್ಯರ ಮಾಲಿಕತ್ವದ ಸಂಘಗಳು, ಸ್ವಸಹಾಯ ಸಂಘಗಳು, ಸಹಕಾರಿ ಸಾಲ ಸಂಘಗಳು ಇದರ ವ್ಯಾಪ್ತಿಗೆ ಬರುತ್ತವೆ, ಇವು ಸ್ಥಳೀಯ ಮತ್ತು ಚಿಕ್ಕಗಾತ್ರದಲ್ಲಿರುವುದರಿಂದ ಉತ್ತಮವಗಿರುತ್ತದೆ. 1970ರಲ್ಲಿ ಮೊಹಮದ್ ಯೂನೆಸ್ ಪ್ರಾರಂಭಿಸಿದ ಗ್ರಾಮೀಣ ಬ್ಯಾಂಕ್‌ನ ರೂಪದಲ್ಲಿ ಬಾಂಗ್ಲ ದೇಶದಲ್ಲಿ ಸೂಕ್ಷ್ಮ ಹಣಕಾಸು ಪರಿಕಲ್ಪನೆ ಉತ್ತಮ ಉದಾಹರಣೆಯಾಗಿದೆ.
3. ಔಪಚಾರಿಕ ಆರ್ಥಿಕ ಸಂಸ್ಥೆ ವಾಣಿಜ್ಯ ಬ್ಯಾಂಕು,ಕೃಷಿ ಬ್ಯಾಂಕ್, ಉಳಿತಾಯ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಬ್ಯಾಂಕೇತರ ಹಣಕಾಸು ಸಂಸ್ಥೆ ಆರ್ಥಿಕ ಸಂಸ್ಥೆಗಳಿವೆ.

ಸರ್ಕಾರದ ನಿಯಂತ್ರಣದಲ್ಲಿದ್ದು ಕಾರ್ಯನಿರ್ವಹಣ ವೆಚ್ಚ ದುಬಾರಿಯಾಗಿರುತ್ತದೆ. ಬಡವರಿಗೆ, ಗ್ರಾಮೀಣರಿಗೆ ಸೇವೆ ಸಲ್ಲಿಸಲು ನರಾಸಕ್ತಿ ತೋರಿಸುತ್ತವೆ. ಸ್ವಸಹಾಯ ಸಂಘಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಗೆ ಜೋಡಣೆ ಮಾಡಲು ಯತ್ನಿಸಲಾತುತ್ತಿದೆ.

**ಸ್ತ್ರೀಶಕ್ತಿ ಯೋಜನೆ**

ಗ್ರಾಮೀನ ಮಹಿಳೆಯರನ್ನು ಸಬಲೀಕರಣ ಮತ್ತು ಸ್ವಾವಲಂಬಿಗಳನ್ನಾಗಿಸುವ ಉದ್ದೇಶದಿಂದ ಕರ್ನಾಟಕದಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು 2000-01ರಲ್ಲಿ ಜಾರಿಗೊಳಿಸಲಾಯಿತು. ಸ್ತ್ರೀಶಕ್ತಿಯ ಸದಸ್ಯರಲ್ಲಿ ಉಳಿತಾಯ ಮಾಡುವ ಮನೋಭಾವನೆ ಬೆಳೆಸಲು ಆರ್ಥಿಕವಾಗಿ ಸಬಲಗೊಳಿಸಲು ಯೋಜನೆ ಮಾಡಲಾಗಿದೆ. ಬಡತನದ ರೇಖೆಯ ಕೆಳಗಿರುವ ಕುಟುಂಬಗಳು, ಭೂ ರಹಿತ ಕೃಷಿಕಾರ್ಮಿಕರು ಮುಂತಾದವರು ಸೇರಿದ ಸುಮಾರು 15 ರಿಂದ 20 ಮಹಿಳೆಯರು ಸೇರಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ತಾಲ್ಲೂಕು ಒಕ್ಕೂಟಗಳ ಮಾರ್ಗದರ್ಶನದಿಂದ ನಡೆಯುತ್ತವೆ.

**ಉದ್ದೇಶಗಳು:**

1. ಗ್ರಾಮೀಣ ಮಹಿಳೆಯ ಆರ್ಥಿಕ ಅಭಿವೃದ್ಧಿ ಸಾಧಿಸುವುದು, ಸಾಮಾಜಿಕ ಬದಲಾವಣೆಗೆ ಅಗತ್ಯ ವಾತಾವರಣ ನಿರ್ಮಿಸುವುದು.
2. ಸಾಲನೀಡುವ ಮೂಲಕ ಮಹಿಳೆಯರು ಸ್ವಾವಲಂಬಿಗಳಾಗುವಂತೆ ಮಾಡುವುದು.
3. ಆದಾಯ ತರಬಲ್ಲ ಚಟುವಟಿಕೆಗಳಲ್ಲಿ ತೊಡಗಿಸಿ ಆರ್ಥಿಕ ಭದ್ರತೆಯನ್ನು ನೀಡುವ ಮೂಲಕ ಮಹಿಳೆಯ ಆದಾಯ ಹೆಚ್ಚಿಸುವುದು.
4. ಸದಸ್ಯರಿಗೆ ವಿವಿಧ ಇಲಾಖೆಗಳ ಲಾಭ ಮತ್ತು ಸಾಲ ಲಭಿಸುವಂತಹ ಅವಕಾಶ ಕಲ್ಪಿಸುವುದು.

ಮಹಿಳಾ ಸಬಲೀಕರಣದಲ್ಲಿ ಹಲವು ಸ್ವಯಂ ಸೇವಾ ಸಂಘಟನೆಗಳ ಪಾತ್ರ ಕಂಡುಬರುತ್ತದೆ. ಉದಾ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯು ಗ್ರಾಮೀಣ ಮಹಿಳೆಯರನ್ನು ಸಬಲರಾಗಿಸುತ್ತದೆ. ಕಿರುಸಾಲ ನೀಡುವುದು, ಮೂಲಭೂತ ಸೌಲಭ್ಯ ಒದಗಿಸುವ ಕಾರ್ಯ ಮಾಡುತ್ತಿದೆ. ಇದೇ ಅಲ್ಲದೆ ಲಿಜ್ಜತ್ ಪಾಪಡ್ ಇದು ಭಾರತದಾದ್ಯಂತ 67 ಶಾಖೆಗಳಿದ್ದು ಮುಂಬಯಲ್ಲಿ ಕೇಂದ್ರ ಕಛೇರಿ ಇದೆ.

**ಉಪಸಂಹಾರ**

ಮಹಿಳೆಯರು ನಿಜವಾಗಿ ಸಬಲೀಕರಣಗೊಳ್ಳ ಬೇಕಾದರೆ ಕುಟುಂಬದಿಂದಲೇ ಸ್ತ್ರೀ ಸಬಲೀಕರಣ ಆಗಬೇಕು, ತಾಯಿಯ ಪಾತ್ರ ಮುಖ್ಯ, ಮಹಿಳೆಯರ ಹಕ್ಕುಗಳನ್ನು ಗೌರವಿಸುವುದು, ಗಂಡು ಮಕ್ಕಳನ್ನು ಉತ್ತಮ ಸಾಮಾಜಿಕರಣದ ಮೂಲಕ ಬೆಳಸುವುದು, ಬಾಳಸಂಗಾತಿ ಆಯ್ಕೆಯಲ್ಲಿ ಸ್ವಾತಂತ್ರ್ಯ, ಮಕ್ಕಳನ್ನು ಪಡೆಯುವ ಬಗ್ಗೆ ಸ್ತ್ರೀಯರಿಗೆ ನಿರ್ಧಾರದ ಹಕ್ಕು ನೀಡುವುದು, ಶಿಕ್ಷಣ ಮತ್ತು ಉದ್ಯೋಗದ ಹಕ್ಕನ್ನು ಒದಗಿಸುವುದು, ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ರಾಜಕೀಯ ಸಹಭಾಗಿತ್ವ ಮುಂತಾದವುಗಳ ಮೂಲಕ ಸ್ತ್ರೀ ಸಬಲೀಕರಣ ಸಾಧ್ಯವಾಗುತ್ತದೆ. ಇಂದು ಭಾರತೀಯ ಸ್ತ್ರೀ ಪ್ರಮುಖ ಕ್ಷೇತ್ರಗಳಾದಂತಹ ರಾಜಕೀಯ, ಕ್ರೀಡೆ, ಸಾಹಿತ್ಯ, ಕಲೆ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರ ಮುಂತಾದವುಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವುದರೆಡೆಗೆ ತನ್ನ ಧೃಡವಾದ ಹೆಜ್ಜೆಗಳನ್ನು ಇಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಜನಸಾಮಾನ್ಯರಿಗಾಗಿ ಕಾನೂನು ಮಾಹಿತಿ- ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
2. ಭಾರತೀಯ ಸಮಾಜದ ಅಧ್ಯಯನ, ಪ್ರೊ. ರವೀಂದ್ರ ಕೊಪ್ಪರ್, ಸುರೇಶ್ ಪಬ್ಲಿಕೇಷನ್ಸ್, ಗದಗ
3. ಭಾರತೀಯ ಸಮಾಜ ರಚನೆ ಮತ್ತು ಬದಲಾವಣೆ- ಕೆ.ಎಸ್ ಭಾರತಿ, ಸರಸ್ವತಿ ಹೌಸ್ ಪ್ರವೇಟ್ ಲಿಮಿಟೆಡ್, ಬೆಂಗಳೂರು.
4. ಭಾರತೀಯ ಸಮಾಜ (ಸಂರಚನೆ ಮತ್ತು ಪರಿವರ್ತನೆ) ಚ.ನ. ಶಂಕರರವ್, ಜೈಭಾರತ್ ಪ್ರಕಾಶನ, ಮಂಗಳೂರು
5. ಸಮಾಜಶಾಸ್ತ್ರದ ಮೂಲತತ್ವಗಳು- ರಂಗಸ್ವಾಮಿ ಬೆಳಕವಾಡಿ, ಸುಭಾಷ್ ಸ್ಟೋರ್ಸ್, ಬೆಂಗಳೂರು
6. ಸಮಾಜಶಾಸ್ತ್ರದ ದರ್ಶನ ಭಾಗ-3, ಚ.ನ.ಶಂಕರರಾವ್, ಜೈಭಾರತ್ ಪ್ರಕಾಶನ, ಮಂಗಳೂರು

Tumbe Group of International Journal
A Multidisciplinary Journal
ISSN: 2581-8511
Volume- 2
Issue-2
May-August: 2019

# ಸಾಂಸ್ಕೃತಿಕ ಇತಿಹಾಸದ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಜನಪದ ಕಲೆಗಳು ಒಂದು ಅವಲೋಕನ

ಡಾ. ಲೋಕೇಶ
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ಧರ್ಜೆ ಕಾಲೇಜು, ತುಮಕೂರು

**ಪ್ರಸ್ತಾವನೆ**

ಜನಪದ ಕಲೆಗಳು ಸಂಸ್ಕೃತಿಯ ಒಂದು ಭಾಗ. ನಮ್ಮ ದಿನನಿತ್ಯದ ರೀತಿ-ನೀತಿ, ಆಚಾರ-ವಿಚಾರ, ಕಲೆ, ಸಾಹಿತ್ಯ, ಧರ್ಮ, ಮನರಂಜನೆ ಮುಂತಾದ ವಲಯಗಳಲ್ಲಿ ಸಂಸ್ಕೃತಿಯ ಸೆಲೆಯನ್ನು ಕಾಣಬಹುದು. ಜಾನಪದ ಕಲೆಗಳು ಮಾನವನ ಮೂಲ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. 'ಕವಿವಾಣಿ ಹೂ ಜನವಾಣಿ ಬೇರು' ಎಂಬಂತೆ ಮೂಲಬೇರು ಸಂಸ್ಕೃತಿಯ ನೆಲೆ ಇದ್ದಂತೆ. "ಆಡು ಮುಟ್ಟದ ಸೊಪ್ಪಿಲ್ಲದಂತೆ ಕಲೆ ಇಲ್ಲದ ಊರುಗಳಿಲ್ಲ ಹಾಗೆÀಯೇ ತುಮಕೂರು ಜಿಲ್ಲೆ ಕಲೆಗಳ ತೌರೂರು. ಇಂದಿಗೂ ಕಲೆಗಳ ಛಾಪು ಉಳಿಸಿಕೊಂಡು ಬಂದಿರುವ ಅದ್ಭುತ ಕಲೆಗಳು, ಜನಪದ ಮನರಂಜನೆ ಕಲೆಗಳು, ಮತ್ತು ದೈವೀ ಆರಾಧನಾ ಕಲೆಗಳನ್ನು ಒಳಗೊಂಡಿದೆ. ಈ ಕಲೆಗಳು ಮನುಷ್ಯನ ಭೌತಿಕ ಹಾಗೂ ಮಾನಸಿಕ ನಲಿವಿಗೂ ಮುಖ್ಯ

ಜಿಲ್ಲೆಯಲ್ಲಿ ತಮಟೆವಾದ್ಯ, ಕರಡಿಮೇಳ, ಡೋಲುವಾದನ, ಬ್ಯಾಂಡ್ ಸೆಟ್, ನಾಗಸ್ವರನಾದ, ಕಹಳೆ ವಾದನ, ತಂಬೂರಿ, ಬುರ್ರ, ವೀಣೆ, ಕಂಬೀವಾದ್ಯ, ಗುಳೇ ವಾದ್ಯ, ಕಾವಡಿ ಕುಣಿತ, ಹುಲಿವೇಷ, ಕೋಲಾಟ, ಭಾಗವತಿಕೆ ಮೇಳ, ತೊಗಲು ಬೊಂಬೆಯಾಟ, ಸೂತ್ರದ ಗೊಂಬೆಯಾಟ, ಹೆಳವರ ಕುಣಿತ, ಪಟದ ಕುಣಿತ, ದೊಂಬರ ಕುಣಿತ, ಸೋಮನ ಕುಣಿತ, ನಗಾರಿಮೇಳ, ವೀರಗಾಸೆ ಕುಣಿತ, ಸುಗ್ಗಿ ಕುಣಿತ, ಬಾಬಯ್ಯನಕುಣಿತ, ನಂದೀಧ್ವಜ ಕುಣಿತ, ಪಂಡರೀ ಭಜನೆ ಹೀಗೆ ಜನಪದ ಕಲೆಗಳ ಮಹಾಪೂರವೇ ಆಗುತ್ತದೆ. ಜಿಲ್ಲೆಯ ಕೆಲವು ಪ್ರಮುಖ ಕಲೆಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ.

**ವೀರಗಾಸೆ:**

ಇದು ಜಾನಪದ ಪರಂಪರೆಯಲ್ಲಿ ಒಂದು ರೋಚಕ ಹಾಗೂ ಆಕರ್ಷಕವಾದ ಕಲೆಯಾಗಿದ್ದು, ಈ ಕಲಾಕಾರರು ತಲೆಯ ಮೇಲೆ ಕೆಂಪು ವಸ್ತ್ರ, ಕಾವಿಯ ಅಂಗಿ, ಬಿಳಿಯ ಕಾಸಿಪಂಚೆ, ಹಣೆಗೆ ವಿಭೂತಿ, ಕೊರಳಲ್ಲಿ ಸುಲಭವಾಗಿ ಕಾಣಿಸುವಂತಹ ರುದ್ರಾಕ್ಷಿ ಹಾಗೂ ಮಣಿಗಳ ಸರಗಳಿಂದ ಅಲಂಕಾರ ಮಾಡಿಕೊಂಡು ಕೈಯಲ್ಲಿ ಖಡ್ಗವನ್ನು ಹಿಡಿದು ಕುಣಿಯುತ್ತಾರೆ. ಕುಣಿಯುವಾಗ ಆಗುವ ಸದ್ದು, ಆರ್ಭಟವು ವೀಕ್ಷಕರ ಎದೆ ಝುಲ್ಲೆನಿಸುತ್ತದೆ. ಈ ಕಲೆಯನ್ನು ಜಿಲ್ಲೆಯ ಸಿರಾ, ತಿಪಟೂರು ಮತ್ತು ಬೆಳ್ಳಾವಿ ಹಾಗೂ ತುಮಕೂರು ತಾಲ್ಲೂಕಿನಲ್ಲಿ ಕಾಣಬಹುದು. ಈ ಕಲೆಯು ಬಯಲು ಸೀಮೆಯ ಜಾನಪದ ನೃತ್ಯ ಕಲೆಯಲ್ಲಿ ಗಂಡು ಕಲೆ ಎಂದು ಪ್ರಸಿದ್ದವಾಗಿದೆ. ಹೆಚ್. ಎಸ್. ನೀಲಕಂಠಯ್ಯ ಶಿರಾದ ಚಿಕ್ಕವೀರಯ್ಯ, ಪಾವಗಡ ತಾಲ್ಲೂಕಿನ ಕೆ.ಎನ್. ವೆಂಕೋಬ, ಕುಣಿಗಲ್ ತಾಲ್ಲೂಕಿನ ಹೊಸಳಯ್ಯನವರು ಪ್ರಮುಖ ವೀರಗಾಸೆ ಕಲಾವಿದರಾಗಿದ್ದಾರೆ.

**ಗೊರವರ ಕುಣಿತ:**

ಇದು ಒಂದು ಆಕರ್ಷಣೀಯವಾದ ಕಲಾ ಪ್ರದರ್ಶನ. ಸಾಮಾನ್ಯವಾಗಿ ಮೈಲಾರಲಿಂಗನ ಒಕ್ಕಲಿನವರು ಈ ಕುಣಿತದ ಕಲಾವಿದರು. ಇವರನ್ನು ಗೊರವಯ್ಯ, ಗೊಗ್ಗಯ್ಯ, ಗೋರಪ್ಪ ಎಂಬ ಹೆಸರುಗಳಿಂದ ಕರೆಯುತ್ತಾರೆ. ಇವರು ಕೈಯಲ್ಲಿ ಡಮರುಗ, ಬಂಡಾರದ ಚೀಲ, ತ್ರಿಶೂಲ ಮತ್ತು ಕವಡೆ ಸರಗಳನ್ನು ಹಾಕಿಕೊಂಡು ತಲೆಯ ಮೇಲೆ ಕರಡಿ ಧರ್ಮದಿಂದ ಮಾಡಿದ ಟೋಪಿಯನ್ನು ಹೆಗಲ ಮೇಲೆ ಕಪ್ಪು ಬಣ್ಣದ ಕಂಬಳಿಯನ್ನು ಹಾಕಿ, ಹಣೆಯ ಮೇಲೆ ವಿಭುತಿ ಧರಿಸಿ, ಡಮರುಗ ಸದ್ದು ಮಾಡುತ್ತಾ ಕುಣಿಯುತ್ತಾರೆ. ಇದು ತಂಡ, ತಂಡಗಳಲ್ಲಿ ಕುಣಿದರೆ ಬಹಳ ಆಕರ್ಷಣೀಯವಾಗಿರುತ್ತದೆ. ಈ ಕಲೆಯು ಜಿಲ್ಲೆಯ ಸಿರಾ, ಗುಬ್ಬಿ, ಪಾವಗಡ, ಮಧುಗಿರಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ವ್ಯಾಪಕವಾಗಿತ್ತು. ಆದರೆ ಇಂದು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿದೆ.

**ಸೋಮನ ಕುಣಿತ:**

ಗ್ರಾಮೀಣ ಭಾಗದ ಪ್ರಸಿದ್ಧ ಕುಣಿತ ಸೋಮನ ಕುಣಿತ. ವೇಷಧಾರಿ ದೊಡ್ಡ ಹಾಗೂ ಭಯಂಕರ ಕಣ್ಣು, ಮೀಸೆ, ಮೂಗು, ಕಿವಿಗಳನ್ನು ಅಲಂಕರಿಸಿಕೊಂಡು ನೋಡಲು ಭಯಂಕವಾಗಿ ಕಾಣುತ್ತಾರೆ. ಬಣ್ಣಬಣ್ಣದ ಸೀರೆ ಅಥವಾ ಪಂಚೆಯನ್ನು ಉಟ್ಟು ಎರಡು ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ಆಭರಣಗಳನ್ನು ಕೈಕಡಗಗಳನ್ನು ಹಾಕಿಕೊಂಡು ಕೈಯಲ್ಲಿ ಚಾಟಿ ಅಥವಾ ಬೆತ್ತ ಹಿಡಿದು ಬಹಳ ಸೊಗಸಾಗಿ ಕುಣಿಯುತ್ತಾರೆ. ಬಹುಶಃ ಇದು ಗ್ರಾಮೀಣ ಪರಿಸರದಲ್ಲಿ ದೆವ್ವ, ಭೂತಗಳನ್ನು ಬಿಡುಸುವಾಗ ಈ ಸೋಮನ ಕುಣಿತ ಪ್ರಧಾನವಾಗಿದೆ. ಜೊತೆಗೆ ಗ್ರಾಮದೇವತೆಗಳ ಉತ್ಸವಗಳಲ್ಲಿ ಸೋಮನ ಕುಣಿತವನ್ನು ಕಾಣಬಹುದು. ಜಿಲ್ಲೆಯ ನಾಗಾಸಂದ್ರ, ಮಾದಾಪುರ, ಮಡೇನಹಳ್ಳಿ, ಹೆಬ್ಬೂರು, ತಿಪಟೂರು ತಾಲ್ಲೂಕಿನ ಬಿದರೆಗುಡಿ, ದಂಡಿನಶಿವರ, ಮಧುಗಿರಿ, ಬಡವನಹಳ್ಳಿಗಳಲ್ಲಿ ಈ ಕಲೆಯ ಕಲಾವಿದರಿದ್ದಾರೆ.

**ಕರಪಾಲ ಮೇಳ:**

ವೃತ್ತಿಗಾಯಕ ಪರಂಪರೆಯಲ್ಲಿ ಪ್ರಮುಖವಾದ ಕಲೆ. ಈ ಕಲೆಯ ಮೂರು ಜನರ ಪ್ರದರ್ಶನ ಕಲೆಯಾಗಿದ್ದು ಮುಮ್ಮೇಳ ಹಾಗೂ ಹಿಮ್ಮೇಳಗಳೊಂದಿಗೆ ಪ್ರದರ್ಶನವಾಗುತ್ತದೆ. ಈ ಕಲಾ ಪ್ರದರ್ಶಕರು ಕಾವಿಯ ನಿಲುವಂಗಿ, ಬಿಳಿಯ ಪಂಚೆ, ಕಿವಿಗಳಿಗೆ ದೊಡ್ಡ ದೊಡ್ಡ ಕುಂಡಲ ಮತ್ತು ಕಾಲಿಗೆ ಗೆಜ್ಜೆಗಳಿಂದ ಅಲಂಕರಿಸುತ್ತಾರೆ. ಕುಣಿತ, ಹಾಡು ಮತ್ತು ಸಂಭಾಷಣೆಗಳಿಂದ ಈ ಕಲೆಯು ರಂಜನೀಯವಾಗಿರುತ್ತದೆ. ಸಾಮಾನ್ಯವಾಗಿ ಪೌರಾಣಿಕವಾಗಿ, ಬಾಲನಾಗಮ್ಮ, ಲವ-ಕುಶ, ಕಾಡುಸಿದ್ದಮ್ಮನ ಕಥೆ ಮತ್ತು ಹರಿಶ್ಚಂದ್ರ ಕಥೆಗಳನ್ನು ಬಳಸಲಾಗುತ್ತದೆ. ಜಾತ್ರೆ ಮತ್ತು ಉತ್ಸವ ಸಂದರ್ಭಗಳಲ್ಲಿ ಈ ಕಲೆಯನ್ನು ಪ್ರದರ್ಶಿಸಲಾಗುತ್ತೆ. ಈ ಕಲೆಗೆ ತಿಪಟೂರು ಪ್ರಸಿದ್ಧಿಯಾಗಿದ್ದು ಕರಪಾಲ ಸಿದ್ದಯ್ಯ ತಿಪಟೂರಿನವರೆ ಆಗಿದ್ದಾರೆ.

**ಗಣೆವಾದಕರ ಕಲೆ:**

ಇದು ಕಾಡುಗೊಲ್ಲರ ಸಾಂಪ್ರದಾಯಿಕ ಕಲೆ, 'ಗಣಿಗೆ' ಜುಂಜಪ್ಪನ ಲಾಂಚನ. ವೃತ್ತಿಗಾಯಕರಾದ ಗಣೆಯವರು, ಉದ್ದವಾದ ಬಿದಿರು ಬೊಂಬಿಗೆ ಹಿತ್ತಾಳೆಯ ನಾಗರಹೆಡೆಯನ್ನು ಕಟ್ಟಿ ನವಿಲುಗೆರೆಗಳನ್ನು ಸಿಕ್ಕಿಸಿಕೊಂಡು ಅದನ್ನು ಹೆಗಲ ಮೇಲೆ ಹೊತ್ತು, ಗಣಿ ವಾದ್ಯವನ್ನು ಊದಿಕೊಂಡು ಕಣಿ ಹೇಳುವ ಸಂಪ್ರದಾಯ. ಕಾಡುಗೊಲ್ಲರ ಪುರಾಣ ಪುರಷ ಕಾಟ, ಜುಂಜಪ್ಪ ಮತ್ತು ಕಾಟಲಿಂಗ. ಸಾಂಸ್ಕೃತಿಕ ವೀರರ ಕಾವ್ಯ ಹಾಡುತ್ತಾ ಗಣಿ ನುಡಿಸುತ್ತಾರೆ. ಇವರು ಜುಂಜಪ್ಪನ ಪದಗಳನ್ನು ಬಹುಪ್ರಮುಖವಾಗಿ ಈ ಕಲೆಯನ್ನು ಸಿರಾ ತಾಲ್ಲೂಕಿನಲ್ಲಿ ಕಾಣಬಹುದು. ಸಿರಾ ತಾಲ್ಲೂಕಿನ ಬೇವಿನಹಳ್ಳಿ ನಾಗಣ್ಣ, ಬಡಗಿ ನಾಗಣ್ಣ, ನಂಜಪ್ಪ ಚಿಕ್ಕ ಪ್ರಮುಖ ಗಣೆವಶದಕ ಕಲೆಯ ಕಲಾವಿದರು.

**ಕಿನ್ನರ ಜೋಗಿ ಮೇಳ:**

ಕಿನ್ನರ ಜೋಗಿಗಳು ಉದ್ದನೆಯ ಬಿದಿರು ಕೋಲಿಗೆ ಮೂರು ಸೋರೆ ಬುರುಡೆಯನ್ನು ಹಾಕಿಕೊಂಡು ಸಣ್ಣ ತಂತಿಯನ್ನು ಬಿಗಿದು, ಹಾಳೆಯೊಂದರ ಮೇಲೆ ತಂತಿ ಹಾದು ಹೋಗುವಂತೆ ಕಟ್ಟಿರುತ್ತಾರೆ. ಇನ್ನೊಂದು ಭಾಗಕ್ಕೆ ಮೂರು ಸೋರೆ ಬುರುಡೆಯನ್ನು ರಂಧ್ರಮಾಡಿ ಕಟ್ಟಿರುತ್ತಾರೆ. ಇವರು ಸಾಮಾನ್ಯವಾಗಿ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮತ್ತು ಆದಿಚುಂಚನಗಿರಿ ಬೈರವನ ಭಕ್ತರು. ಇವರನ್ನು ಸಿರಾ ತಾಲ್ಲೂಕಿನ ಹುಲಿಕುಂಟೆ ಕರಿದಾಸರಹಳ್ಳಿಗಳಲ್ಲಿ ಕಾಣಬಹುದು.

**ತಮಟೆ ಕುಣಿತ:**

ತುಮಕೂರು ಜಿಲ್ಲೆಯಷ್ಟೆ ಅಲ್ಲದೆ ಕರ್ನಾಟಕದ ಪ್ರತಿ ಗ್ರಾಮಗಳಲ್ಲೂ ಸಾಮಾನ್ಯವಾಗಿ ಕಂಡು ಬರುವ ಕಲೆ. ತಮಟೆ ಇದು ಒಂದು ರಣವಾಧ್ಯ. ಶುಭ ಮತ್ತು ಅಶುಭ ಎರಡು ಕಾರ್ಯಕ್ರಮಗಳಲ್ಲೂ ತಮಟೆಯನ್ನು ಬಾರಿಸುವುದು ವಾಡಿಕೆಯಲ್ಲಿದೆ. ಇದು ಗ್ರಾಮಗಳಲ್ಲಿ ಮಾರಿ ಹಬ್ಬದ ಕುಣಿತ. ಏಕವ್ಯಕ್ತಿ ಅಥವಾ ಬಹುವ್ಯಕ್ತಿ ಕಲಾಪದ್ರುದರ್ಶನವಾಗಿದೆ. ತಮಟೆ ಶಬ್ದ ಒಂದೆಡೆ ಸೇರಿಸುವ ಗುಣವನ್ನು ಪಡೆದಿದೆ. ಸಿರಾ ತಾಲ್ಲೂಕು ಪಾವಗಡ ತಾಲ್ಲೂಕುಗಳಲ್ಲಿ ವ್ಯಾಪಕವಾಗಿ ಈ ಕುಣಿತವನ್ನು ಕಾಣಬಹುದು.

**ನಂದಿಧ್ವಜ ಕುಣಿತ:**

ಈ ಕುಣಿತ ವಿಶೇಷವಾದುದುಆಗಿದೆ. ಎತ್ತರದ ಒಂದು ಕಂಬಕ್ಕೆ, ಬಣ್ಣದ ಬಟ್ಟೆಯನ್ನು ಸುತ್ತಿ ತುದಿ ಭಾಗದಲ್ಲಿ ನಂದಿ ಅಥವಾ ಬಸವವಿಗ್ರಹವನ್ನು ಕಟ್ಟಿಕೊಂಡು, ಎರಡು ಭುಜಗಳ ಕೆಳಗೆ ನಂದಿ ಕೋಲನ್ನು ಇಟ್ಟುಕೊಂಡು ಕುಣಿಯುವ ಕಲೆ. ಜಾತ್ರೆ ಹಾಗೂ ಉತ್ಸವಗಳಲ್ಲಿ ಈ ಕಲೆಯನ್ನು ಕಾಣಬಹುದು. ಈ ಕಲೆ ಜಿಲ್ಲೆಯಲ್ಲಿ ಯಡಿಯೂರು ಜಾತ್ರೆ, ಗುಬ್ಬಿ, ತುರುವೇಕೆರೆ, ಸಿದ್ದಗಂಗಮಠ ರಥೋತ್ಸವ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಪ್ರದರ್ಶಿಸಲ್ಪಡುತ್ತದೆ.

**ಪಟಾ ಕುಣಿತ:**

ಒಂದು ಬೊಂಬಿಗೆ ಸಣ್ಣ ಸಣ್ಣ ಗೆಜ್ಜೆ ಕಟ್ಟಿ ಅದಕ್ಕೆ ಕಳಸದ ಆಕೃತಿಯಲ್ಲಿ ಹಿಡಿಯನ್ನು ಮಾಡಿ, ಬಣ್ಣ ಬಣ್ಣದ ಹಾಗೂ ಹೂಗಳಿಂದ ಅಲಂಕಾರ ಮಾಡಿ, ಪಟದ ಮಧ್ಯೆ ಪುಟ್ಟ ದೇವರ ವಿಗ್ರಹವನ್ನು ಇಡುತ್ತಾರೆ. ಆ ಪಟವನ್ನು ತಲೆಯ ಮೇಲೆ ಎತ್ತಿಕೊಂಡು, ವಾದ್ಯಗಳ ತಾಳಕ್ಕೆ ಲಯಬದ್ಧವಾಗಿ ಕುಣಿಯುತ್ತಾರೆ. ಗುಬ್ಬಿ ತಾಲ್ಲೂಕಿನ ಹೊಸಹಳ್ಳಿ ಶಿವಣ್ಣ ಮತ್ತು ನರಸಪ್ಪ ಎಂಬ ಕಲಾವಿದರು ಪಟಾ ಕುಣಿತದ ನುರಿತ ಕಲಾವಿದರಾಗಿದ್ದಾರೆ.

**ಲಂಬಾಣಿ ಕುಣಿತ:**

ಲಂಬಾಣಿ ಜನಾಂಗಗಳು ಬಣ್ಣ ಬಣ್ಣದ ಲಂಗ ಮತ್ತು ರವಿಕೆಗಳನ್ನು ಧರಿಸಿ, ಬೆಳ್ಳಿ ಅಥವಾ ಮಣಿ ಕವಾಚಗಳಿಂದ ಮಣಿ ಸರಗಳನ್ನು ಹಾಕಿಕೊಂಡು ವೃತ್ತಕಾರದಲ್ಲಿ ನಿಂತು ಪರಸ್ಪರ ಕೈಗಳಿಂದ ಬಡಿಯುತ್ತಾ, ಯೆಡಯೇ ಯೆಡಿಯೇ ....., ಎಂದು ಲಯಬದ್ದವಾಗಿ ಹಾಡುತ್ತಾ ಹೆಜ್ಜೆ ಹಾಕಿ ಕುಣಿಯುತ್ತಾರೆ. ವಿಶೇಷವಾಗಿ ಈ ಕುಣಿತವನ್ನು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕಾಣಬಹುದು. ಈ ಕಲೆಯು ಜಿಲ್ಲೆಯಲ್ಲಿ ಈ ಕುಣಿತವನ್ನು ಇವರ ರಕ್ಷಾದೇವತೆಯಾದ ಸೇವಾಲಾಲಾನನ್ನು ಹೊಗಳುತ್ತಾ ನೃತ್ಯ ಮಾಡುವ ದೃಶ್ಯ ಬಹಳ ಸೊಗಸಾಗಿರುತ್ತದೆ, ಇವರು ಕುಣಿತಕ್ಕೆ ವೃತ್ತಾತಕಾರದಲ್ಲಿ ನಿಲ್ಲುತ್ತಾರೆ. ಇವರ ಕುಣಿತದಲ್ಲಿ ಕೋಲಾಟವು ಸಹ ಒಂದು. ಹಬ್ಬ-ಹರಿದಿನ ಹಾಗೂ ಕಾಮನಹಬ್ಬಗಳಲ್ಲಿ ಇವರ ಕುಣಿತ ಬಹು ಆಕರ್ಷಕವಾಗಿರುತ್ತದೆ. ಚಿಕ್ಕನಾಯಕನಹಳ್ಳಿಯ ಹಂದನಕೆರೆ

ತಾಂಡ್ಯ, ಮಧುಗಿರಿ, ಸಿರಾ ತಾಲ್ಲೂಕಿನ ಕಿಲಾರದ ಹಳ್ಳಿ ತಾಂಡ, ತಾವರೆಕೆರೆಗಳಲ್ಲಿ ಲಂಬಾಣಿ ನೃತ್ಯ ಕಲಾವಿದರಿದ್ದು ಈ ಕಲೆಯನ್ನು ಪ್ರದರ್ಶಿಸುತ್ತಾರೆ.

**ಮಾರಮ್ಮನ ಕುಣಿತ:**

ಒಂದು ಮರದ ಪೆಟ್ಟಿಗೆಯಲ್ಲಿ, ಕಂಚಿನ ದೇವತೆಯ ವಿಗ್ರಹವನ್ನಿಟ್ಟು ಬೇವಿನ ಸೊಪ್ಪನ್ನು ಪೆಟ್ಟಿಗೆಯ ಎರಡು ಬದಿಯಲ್ಲಿ ಸಿಕ್ಕಿಸಿರುತ್ತಾರೆ. ಹೆಂಗಸರು ಮತ್ತು ಗಂಡಸರು ಜೊತೆಯಲ್ಲೇ ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಜೊತೆಗೆ ಮನೆ ಮನೆಗೂ ಬಂದು ಬಿಕ್ಷೆ ಬೇಡುವ ಕಲಾವಿದರು ಇದ್ದಾರೆ. ಇವರು ನಾಲಿಗೆಯನ್ನು ದಬ್ಬಳದಿಂದ ಚುಚ್ಚಿಕೊಳ್ಳುವ ಚಾಟಿಯಿಂದ ರಕ್ತ ಬರುವ ಹಾಗೆ ಬಡಿದುಕೊಳ್ಳುತ್ತಾರೆ. ಈ ರೀತಿಯ ಮಾರಿ ಕುಣಿತದಿಂದ ಊರಿನಲ್ಲಿ ಮಕ್ಕಳಿಗೆ ಸಿಡುಬು, ಕಾಲರಾ ಮೊದಲಾದ ಸಾಂಕ್ರಾಮಿಕ ರೋಗಗಳು ಬರುವುದಿಲ್ಲ ಎಂಬ ವಾಡಿಕೆ ಇದೆ.

**ಮೋಡಿಕಲೆ:**

ಇದು ಪ್ರಾಚೀನವಾದ ಮತ್ತು ಅಸಹಜವಾದುದನ್ನು ಸಹಜವಾಗಿ ಅದ್ಭುತವಾಗಿ ತೋರಿಸುವ ವಿಚಿತ್ರವಾದ ಕಲೆ. ಸಾಮಾನ್ಯವಾಗಿ ಇವರು ತೆಲುಗು ಭಾಷೆಯನ್ನು ಮಾತÀನಾಡುತ್ತಾರೆ. ಬಣ್ಣದ ಪೇಟಾ, ಕೋಟು ಧರಿಸಿಕೊಂಡು ಕಚ್ಚೆ ಪಂಚೆ ಉಟ್ಟಿರುತ್ತಾರೆ. ಈ ಜಿಲ್ಲೆಯ ಪಾವಗಡ, ಸಿರಾ, ಮಧುಗಿರಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮೋಡಿ ಕಲಾವಿದರು ಇದ್ದು ಈ ಕಲೆಯನ್ನು ಪ್ರದರ್ಶಿಸುತ್ತಾರೆ.

**ಸೂತ್ರದ ಗೊಂಬೆಯಾಟ:**

ಈ ಕಲೆ ಪ್ರಾಚೀನಚಾದ ಕಲೆ. ಇದನ್ನು ಸಿಳ್ಳೆಕ್ಯಾತ ಜನಾಂಗದವರು ಪ್ರದರ್ಶಿಸುತ್ತಾರೆ. ಈ ಕಲೆಗಲ್ಲಿ ರಾಮಾಯಣ, ಮಹಾಭಾರತ ಮತ್ತು ಬಾಲನಾಗಮ್ಮನಂತಹ ಕಥೆಗಳು ಕಥಾವಸ್ತುಗಳಾಗಿವೆ. ಇವು ಸತ್ಯ, ನಿತ್ಯ, ಧರ್ಮ ಸಾರುವ ಮಾಧ್ಯಮಗಳಾಗಿದ್ದವು. ಈ ಕಲೆ ಹೆಚ್ಚಾಗಿ ಪಾವಗಡ ತಾಲ್ಲೂಕು ಮತ್ತು ಮಧುಗಿರಿ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿತ್ತು. ಪ್ರಾಚೀನ ಕಾಲದ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ವೈಭವದ ಮನೋರಂಜನೆಯ ಆಟವಾಗಿತ್ತು.

**ಊಟ್ಲುಮರ ಕಲೆ:**

ಇದು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಪ್ರಚಲಿತದಲ್ಲಿರುವ ಕಲೆ. ಜಾರುವ ಮರವನ್ನು ನಿಲ್ಲಿಸಿ, ಅದರ ಸುತ್ತ ಕೆಸರು ಮಣ್ಣನ್ನು ಹಾಕಿ, ಜಾರುವ ಮರಕ್ಕೆ ಹರಳೆಣ್ಣೆ ಮತ್ತು ಲೋಳೆ ರಸವನ್ನು ಮರಕ್ಕೆ ಸವರುತ್ತಾರೆ. ಕಂಬದ ಮೇಲೆ ಏರಿ ಒಬ್ಬ ವ್ಯಕ್ತಿ ಕುಳಿತುಕೊಂಡಿರುತ್ತಾನೆ. ಕಂಬದ ಮೇಲೇರುವಾಗ ಕಂಬದ ಮೇಲೆ ಕುಳಿತಿರುವ ವ್ಯಕ್ತಿ ಕಂಬಕ್ಕೇರುವ ವ್ಯಕ್ತಿಗೆ ಮೇಲೇರದ ಹಾಗೆ ಮೇಲಿನಿಂದ ಲೋಳೆರಸ ಮತ್ತು ಎಣ್ಣೆಯಿಂದ ಮಾಡಿದ ದ್ರವವನ್ನು ಸುರಿಯುತ್ತಾನೆ. ಹೀಗೆ ಈ ಕ್ರೀಡೆ ನೋಡಲು ಬಹಳ ಮನೋರಂಜನದಾಯಕವಾಗಿರುತ್ತದೆ. ಇದು ಒಂದು ಸ್ಪರ್ಧೆಯಾಗಿದ್ದು, ಗ್ರಾಮೀಣ ಕಲೆಯಾಗಿದೆ.

**ಕೋಲಾಟ:**

ತುಮಕೂರು ಜಿಲ್ಲೆಯಲ್ಲಿ ಕೋಲಾಟದ ಕಲೆ ವ್ಯಾಪಕವಾಗಿದೆ. ಕೋಲಾಟ ಗುಂಪಿನ ಆಟವಾಗಿದ್ದು, ಕಲೆಯಲ್ಲಿ 10 ರಿಂದ 16 ಕಲಾವಿದರು ಭಾಗವಹಿಸುತ್ತಾರೆ. ಈ ಕೋಲಾಟದಲ್ಲಿ ಸುತ್ತುಕೋಲು, ದಾಟುಕೋಲು, ಬಿಚ್ಚುಕೋಲು, ಸಾಲುಕೋಲು ಮುಂತಾದ ರೀತಿಗಳಿವೆ. ಸಾಮಾನ್ಯವಾಗಿ ಹಬ್ಬ ಹರಿದಿನಗಳಲ್ಲಿ ಅಥವಾ ಜಾತ್ರೆ ಮುಂತಾದ ಸಾಮಾಜಿಕ ಸಮಾರಂಭದಲ್ಲಿ ಕೋಲಾಟ ಕಲೆಯನ್ನು ಪ್ರದರ್ಶಿಸಲಾಗುತ್ತದೆ. ಈ ಕೆಲೆಯನ್ನು

ಜಿಲ್ಲೆಯ ಪಾವಗಡ, ಕುಣಿಗಲ್ ಮತ್ತು ಸಿರಾ ತಾಲ್ಲೂಕುಗಳಲ್ಲಿ ಕಾಣಬಹುದು. ಈ ಕಲೆಯು ಹೆಚ್ಚಾಗಿ ಗೊಲ್ಲ ಜನಾಂಗದವರಲ್ಲಿ ಕಂಡುಬರುತ್ತದೆ.

**ಯಕ್ಷಗಾನ:**

ಇದು ಬಹು ಆಕರ್ಷಕ ಜನಪದ ಕಲೆ. ಜಿಲ್ಲೆಯಲ್ಲಿ ರಾಮಾಂಜನೇಯ ಯುದ್ಧ, ಪಾಂಡು ವಿಜಯ, ಗಂಗೆ-ಗೌರಿ, ದಕ್ಷಯಾಗ ಮೊದಲಾದ ಯಕ್ಷಗಾನ ಕಥಾ ಪ್ರಸಂಗ ಪ್ರದರ್ಶನಗಳನ್ನು ನೋಡಬಹುದು. ಯಕ್ಷಗಾನ ಕಲಾವಿದನು ನೋಡಲು ಭಯಾನಕವಾಗಿ ಅಲಂಕಾರ ಮಾಡಿಕೊಂಡು ಜನರ ಗಮನವನ್ನು ಸೆಳೆಯುತ್ತಾನೆ. ಜಿಲ್ಲೆಯಲ್ಲಿ ಯಕ್ಷಗಾನ ಮಾಡುವ ಮತ್ತು ನಿರ್ದೇಶಿಸುವ ಕಲಾವಿದರನ್ನು ಕಾಣಬಹುದು. ತಿಪಟೂರು ತಾಲ್ಲೂಕಿನ ಕೊನೆಹಳ್ಳಿಯ ನರಸಪ್ಪನವರಿಗೆ ಮೈಸೂರು ವಿಶ್ವವಿದ್ಯಾಲಯವು ಮೂಡಲಪಾಯ ಯಕ್ಷಗಾನ ಕೋಗಿಲೆ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರದಿಂದ ಕರ್ನಾಟಕ ಜನಪದ ಹಾಗೂ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ಲಭಿಸಿದೆ.

**ಬಯಲಾಟ:**

ಬಯಲಾಟವು ಜಿಲ್ಲೆಯ ಪ್ರಮುಖವಾದ ರಂಗಕಲೆಯಾಗಿದೆ. ರಾಕ್ಷಸ ಪಾತ್ರಗಳು, ಸ್ತ್ರೀ ಪಾತ್ರಗಳು ಮತ್ತು ರಾಜನ ಪಾತ್ರಗಳನ್ನು ವರ್ಣಮಯ ವೇಷಭೂಷಣಗಳಿಂದ ಸಿಂಗರಿಸಿಕೊಂಡು ರಾತ್ರಿಯ ಕಾಲದಲ್ಲಿ ಹೊಸಲೋಕವನ್ನೇ ಸೃಷ್ಟಿ ಮಾಡುವ ಈ ಕಲೆ ಪ್ರಮುಖವಾದ ಜಾನಪದ ಕಲೆಯಾಗಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಕರಿಭಂಟನ ಕಾಳಗ ಕಥೆಯನ್ನು ಹೆಚ್ಚಾಗಿ ಅಭಿನಯಿಸುತ್ತಾರೆ. ಕರಿಭಂಟನ ಕಾಳಗವಲ್ಲದೆ ದೇವಿ ಮಹಾತ್ಮೆ, ಸುಂದರಕಾಂಡ, ರಾಮಾಯಣ, ಕೀಚಕನ ವಧೆ, ಪಾಂಡು ವಿಜಯ, ಸೌರಂಗಧರನ ಕಥೆ ಮುಂತಾದ ಬಯಲಾಟ ರಂಗ ಕಲೆಗಳು ತುಮಕೂರು ಜಿಲ್ಲೆಯಲ್ಲಿ ಪ್ರಚಲಿತದಲ್ಲಿದೆ. ಜಿಲ್ಲೆಯಲ್ಲಿ ಕಂಡು ಬರುವ ಇತರೆ ಜನಪದ ಕಲೆಗಳೆಂದರೆ ಕೊರವಂಜಿ ಕುಣಿತ, ಹುಲಿವೇಷ, ಭಜನೆ ಮೇಳ.

**ಪರಾಮರ್ಶನ ಗ್ರಂಥಗಳು**

1. ಅಭಿಶಂಕರ (ಸಂ): ತುಮಕೂರು ಜಿಲ್ಲಾ ಗೆಝೆಟಿಯರ್-1969
2. ಡಾ. ಚಿಕ್ಕಣ್ಣಯಣ್ಣೆಕಟ್ಟೆ, ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ, ಪುಟ - 112
3. ಖಂಡೋಬ. ಪಿ.ಕೆ.:- ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, (ಗದಗ,-1990), ಪುಟ-18

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಜೀವಪರ ಚಿಂತನೆಯೇ ಧರ್ಮ ಎಂಬ ನಿಲುವಿನ ತಿರುಕ

(ತಿರುಕ ಅವರ ಜೀವಪರ ಚಿಂತನೆ)

**ಎನ್. ಮಮತ**
ಕನ್ನಡ ಉಪನ್ಯಾಸಕರು
ಬಾಪೂಜಿ ಪದವಿ ಪೂರ್ವ ಕಾಲೇಜು
ಭರಮಸಾಗರ, ಚಿತ್ರದುರ್ಗ ತಾಲ್ಲೂಕು
ಮೊ: 9483320070 Email: tnghhalli@gmail.com

## ಪ್ರಸ್ತಾವನೆ

ಹದಿಹರಿಯದಲ್ಲಿಯೇ ಆಧ್ಯಾತ್ಮದ ಕಡೆ ಮುಖ ಮಾಡಿದವರು ತಿರುಕ ಅವರು. ಇವರು ತಮ್ಮ ಗುರುಗಳಾದ ಶಿವಾನಂದತೀರ್ಥ ಸ್ವಾಮೀಜಿಯವರಿಂದ ದೈವೀ ಶಕ್ತಿಯನ್ನು ಪಡೆಯುತ್ತಾರೆ. ಬಾಬಾ ಲಕ್ಷ್ಮಣದಾಸರಿಂದ ಆಯುರ್ವೇದ ವಿದ್ಯೆ, ಸ್ವಾಮಿ ನಿತ್ಯಾನಂದರಲ್ಲಿ ಆತ್ಮವಿದ್ಯೆ, ಪಳನಿ ಮೂರ್ತಿ ಸ್ವಾಮಿಗಳಲ್ಲಿ ಅಂಗವಿದ್ಯೆ-ಯೋಗವಿದ್ಯೆ, ಬರೋಡದ ಪ್ರೊ.ಮಾಣಿಕರಾವ್ ಅವರಿಂದ ಯೋಗ ಅಂಗಸಾಧನೆಗಳನ್ನು ಕಲಿತರು. ಲೋಕಕಲ್ಯಾಣಕ್ಕಾಗಿ ಇವುಗಳನ್ನೆಲ್ಲ ವಿನಿಯೋಗಿಸಲು ಮಲ್ಲಾಡಿ ಹಳ್ಳಿಯು ತಿರುಕ ಅವರ ಕಾರ್ಯರಂಗವಾಯಿತು. 'ಆಧ್ಯಾತ್ಮದ ತಳಹದಿ: ಲೌಕಿಕದ ಜೀವನ ಸೌಧ' ಇದು ಅವರ ಜೀವನ ಸಿದ್ಧಾಂತವಾಯಿತು.

ಮನುಷ್ಯನ ಜೀವನವೆಂದರೆ ಅಪರಿಪೂರ್ಣತೆಯನ್ನು ತೊಡೆದು ಪರಿಪೂರ್ಣತೆಯ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ, ಅಪಕ್ವತೆಯಿಂದ ಪಕ್ವತೆ ಕಡೆಗೆ ಸಾಗುವ ಒಂದು ಮಹಾಯಾತ್ರೆ. ಜೀವನದಲ್ಲಿ ಸಂಪತ್ತು, ಅಧಿಕಾರ, ರೂಪ ಸಂಬಂಧ ಇವೆಲ್ಲ ಕ್ಷಣಿಕ. ಇವುಗಳಿಂದ ಬರುವ ಜ್ಞಾನ ಮಾನಗಳು ನೋಡು ನೋಡುತ್ತಲೇ ಕಣ್ಮರೆ ಆಗುತ್ತವೆ. ಆದಕಾರಣ ಭಾರತೀಯ ಸಂಸ್ಕøತಿ ಮತ್ತು ಪರಂಪರೆ ಮನುಷ್ಯನ ಇಂತಹ ಬಾಹ್ಯ ಉಪಾಧಿಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ. ಆದರೆ ಆಂತರಿಕ ಸಂಪತ್ತು ಮಾತ್ರ ನಿಜವಾದ ನಿಧಿಯಂತಿರುತ್ತದೆ. ವಿದ್ಯೆ, ವಿನಯ, ಉತ್ತಮ ಸಂಸ್ಕಾರಗಳಿಂದ ತುಂಬಿದ ಬದುಕು ಗೌರವಕ್ಕೆ ಪಾತ್ರವಾಗುತ್ತದೆ. ಬರಿದಾದುದೆಲ್ಲವೂ ಹಗುರವೇ ಎಂಬ ಮಾತು ಯಾವ ಕಾಲಕ್ಕೂ ಸತ್ಯವಾದುದು. ಅಂತಯೇ ತುಂಬಿದ ಕೊಡ ತುಳುಕುವುದೂ ಇಲ್ಲ. ಪೂರ್ಣತೆ ಎಂಬುದು ಒಂದೆರಡು ದಿನಗಳಲ್ಲಿ ಸಾಧಿಸುವುದಲ್ಲ. ಅನವರತ ಸಾಧನೆಯ ತಪಸ್ಸಿನ ಬೆಳಕಿನಲ್ಲಿ ಹೆಜ್ಜೆ ಇಟ್ಟ ಎಷ್ಟೋ ಜನರಲ್ಲಿ ಕ್ವಚಿತ್ತಾಗಿ ಮಾತ್ರ ಸಿದ್ದಿಸಬಹುದಾದ ಅಪರೂಪದ ಸ್ಥಿತಿಗತಿ ಈ ಪೂರ್ಣತೆ. ಈ ನೆಲೆಯಲ್ಲಿ ಬದುಕಿದ ತಿರುಕ ಅವರ ಬದುಕು ಪೂರ್ಣತೆಯಿಂದ ಕೂಡಿದುದು. ಅಷ್ಟೇ ಅಲ್ಲ ತನ್ನಂತೆ ಇತರರೂ ಪೂರ್ಣತೆಯ ಕಡೆಗೆ ಸಾಗಬೇಕೆಂಬ ಆಶಯ ಅವರದು. ಅವರು ಬದುಕಿದ ರೀತಿ ಇತರರಿಗೆ ಮಾರ್ಗಸೂಚಿ ಆಗಿದೆ. ಒಂದು ಕೃತಿಯಿಂದ ಬಂದುದಲ್ಲ ಈ ಪರಿಪೂರ್ಣತೆ, ಒಂದು ಕಾಯಕದಿಂದ ಬಂದುದಲ್ಲ, ಒಂದೆರಡು ವರ್ಷದ ತಾಳ್ಮೆ ಪರಿಶ್ರಮದ ಫಲವಲ್ಲ ಈ ಪೂರ್ಣತೆ, ಇವುಗಳೆಲ್ಲವನ್ನೂ ಮೀರಿದ ಒಂದು ಕಾಲಘಟ್ಟದ ಸಂಸ್ಕøತಿಯ ಪ್ರತಿನಿಧಿಯಂತೆ ಪೂರ್ಣ ಗೌರವವನ್ನು ತಂದು ಕೊಡುವ ಪೂರ್ಣದ್ರವ್ಯವೇ ಪಕ್ವತೆ ಮತ್ತು ಪರಿಪೂರ್ಣತೆ. ಇಂತಹ ಬದುಕೇ ಆಂತರಿಕ ಸಂಪನ್ನತೆ ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಇಂತಹ ಆಂತರಿಕ ಸಂಪನ್ನತೆಯನ್ನೇ ಒಂದರ್ಥದಲ್ಲಿ ಲೋಕಹಿತಕ್ಕಾಗಿ ಶ್ರಮಿಸುವಿಕೆ ಎನ್ನುವುದು. ಚಿಕ್ಕವರೊಂದಿಗೆ ಸ್ನೇಹ, ದೊಡ್ಡವರೊಂದಿಗೆ ಸತ್ಕಾರ, ಎಲ್ಲರೊಡನೆ ಪ್ರೀತಿ, ಸಫಲತೆಯ ಶ್ರೇಯಸ್ಸು ಎಲ್ಲರೊಡನೆ ಹಂಚಿಕೊಳ್ಳುವ ಸ್ವಭಾವ, ಯಾವಾಗಲೂ

ಪ್ರಸನ್ನತೆ ಮತ್ತು ಸಕಾರಾತ್ಮಕ ವಿಚಾರಗಳನ್ನು ಹೊಂದಿರುವ ವ್ಯಕ್ತಿಗಳು ಲೋಕಪ್ರಿಯತೆಯ ಶಿಖರವನ್ನು ತಲುಪುತ್ತಾರೆ. ಲೋಕಹಿತಕ್ಕಾಗಿ ಶ್ರಮಿಸಿದವರ ಅಗ್ರಪಂಕ್ತಿಯಲ್ಲಿ ನಿಲ್ಲಬಲ್ಲವರು ಮಲ್ಲಾಡಿಹಳ್ಳಿಯ ತಿರುಕ ಅವರು. ಕೇರಳದ ನಂಬೂದರಿಯ ಕುಟುಂಬದಲ್ಲಿ ಹುಟ್ಟಿದವರು. ರೋಗದೊಂದಿಗೆ ಹುಟ್ಟಿ, ರೋಗಪೀಡಿತರಾಗಿಯೇ ಬಾಲ್ಯವನ್ನು ಕಳೆದರೂ ಕೊನೆಗೆ ಆಯುರ್ವೇದ ವೈದ್ಯದ ಜೊತೆಗೆ ಭವರೋಗ ವೈದ್ಯರೂ ಆದರು. ತಿರುಕ ಅವರದು 20 ನೇ ಶತಮಾನ ಕಂಡ ಅಪರೂಪದ ವ್ಯಕ್ತಿತ್ವ. ವ್ರತ ಮತ್ತು ಪಥ ಒಂದೇ ಆಗಿರುವ ವ್ಯಕ್ತಿಗೆ ಜಗತ್ತೆಲ್ಲ ತನ್ನ ಮನೆಯಂತೆ ಗೋಚರಿಸುತ್ತದೆ ಎಂಬ ಮಾತಿದೆ. ತಿರುಕ ಅವರ ತಂದೆ ಕೇರಳದ ಅನಂತ ಪದ್ಮನಾಭ ನಂಬೂದರಿ. ಇವರು ಪ್ರಸಿದ್ಧ ಜ್ಯೋತಿಷ್ಯರು. ತಾಯಿ ಪದ್ಮಂಬಾಳ್. ಇವರ ಜನ್ಮಸ್ಥಳ ಕೇರಳದ ಯಾವುದೋ ಒಂದು ಊರು. ಜನ್ಮ ನಾಮ ಕುಮಾರಸ್ವಾಮಿ. 106 ವರ್ಷಗಳ ಕಾಲ ಬದುಕಿದ್ದ ತಿರುಕ ಅವರು ಹುಟ್ಟಿದ್ದು 1891. ಹುಟ್ಟುತ್ತಲೆ ಅನಾರೋಗ್ಯದ ಸಾಂಗತ್ಯ ಹೊಂದಿದ್ದರು. ತಂದೆ ತಾಯಿಯರು ಕೊಲ್ಲೂರು ಮೂಕಾಂಬಿಕೆಯ ದರ್ಶನಾರ್ಥವಾಗಿ ಕರ್ನಾಟಕಕ್ಕೆ ಬಂದಾಗ ಪರಿಚಯದವರಾದ ಬಾರಕೂರಿನ ರಾಮಚಂದ್ರಶಾಸ್ತ್ರಿಗಳ ಮನೆಗಳಲ್ಲಿ ಉಳಿದುಕೊಳ್ಳುತ್ತಾರೆ. ಹಾಗೆ ಬಂದವರು ಮರಳಿ ತನ್ನೂರಿಗೆ ತೆರಳದಾದರು. ಇದಕ್ಕೆ ಕಾರಣ ಮಗುವಿನ ತೀವ್ರ ಅನಾರೋಗ್ಯ. ಈ ಚಿಂತೆಯಲ್ಲಿಯೇ ತಾಯಿ ಪದ್ಮಂಬಾಳ್ ಕ್ಷಯರೋಗ ಪೀಡಿತೆಯಾಗುತ್ತಾರೆ. ಕೇರಳದ ಆಸ್ತಿಕ ಜನರೆಲ್ಲ ಕೊಲ್ಲೂರು ಮೂಕಾಂಬಿಕೆಯ ಭಕ್ತರು. ಕೇರಳದಿಂದ ಪ್ರತಿದಿನ ಒಂದೆರಡು ಮೈಲು ನಡೆದು ನಡೆದು ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿಗೆ ತಲುಪುತ್ತಾರೆ. ಇಲ್ಲಿ ಅವರಿಗೆ ಆಶ್ರಯ ನೀಡಿದವರು ನರಸಿಂಹಯ್ಯ ಮತ್ತು ಅವರ ಪತ್ನಿ ಪುತ್ಥಲೀ. ಅಲ್ಲಿಗೆ ಭಿರ್ತಿ ಎಂಬ ಗ್ರಾಮದ ರಾಮಚಂದ್ರಶಾಸ್ತ್ರಿ ಎಂಬುವರು ವೇದ ಪಾರಂಗತರೂ ಆದ ಮಹನೀಯರು ನಂಬೂದರಿಯವರನ್ನು ಕಾಣಲು ಆಗಾಗ ಬರುತ್ತಿದ್ದರು. ಮಂತ್ರಾಲಯ ರಾಘವೇಂದ್ರಸ್ವಾಮಿಗಳು ಭಂಡಾರಕೇರಿಯ ಮಠಕ್ಕೆ ಬಂದಿರುವಾಗ ಈ ಪ್ರಜ್ಞಾಹೀನ ಸ್ಥಿತಿಯ ಮಗುವಿಗೆ ಆಶೀರ್ವಾದ, ಅನುಗ್ರಹವಾದುದರಿಂದ ರಾಘವೇಂದ್ರನೆಂದು ಪುನರ್ನಾಮಕರಣ ಮಾಡಲಾಗುತ್ತದೆ. ನಂತರದಲ್ಲಿ ಇವರು ಕಲಾವಿದರಾಗಿ ನಾಟಕ ಯಕ್ಷಗಾನ ಕಲೆಗಳಲ್ಲಿ ಆಸಕ್ತಿ ಇದ್ದರೂ ಭಕ್ತಿ, ಧ್ಯಾನ, ಆರಾಧನೆಗಳಲ್ಲಿ ತೊಡಗುತ್ತಾರೆ.

ಹದಿಹರಿಯದಲ್ಲಿಯೇ ಆಧ್ಯಾತ್ಮದ ಕಡೆ ಮುಖ ಮಾಡಿದವರು ತಿರುಕ ಅವರು. ಇವರು ತಮ್ಮ ಗುರುಗಳಾದ ಶಿವಾನಂದತೀರ್ಥ ಸ್ವಾಮೀಜಿಯವರಿಂದ ದೈವೀ ಶಕ್ತಿಯನ್ನು ಪಡೆಯುತ್ತಾರೆ. ಬಾಬಾ ಲಕ್ಷ್ಮಣದಾಸರಿಂದ ಆಯುರ್ವೇದ ವಿದ್ಯೆ, ಸ್ವಾಮಿ ನಿತ್ಯಾನಂದರಲ್ಲಿ ಆತ್ಮವಿದ್ಯೆ, ಪಳನಿ ಮೂರ್ತಿ ಸ್ವಾಮಿಗಳಲ್ಲಿ ಅಂಗವಿದ್ಯೆ-ಯೋಗವಿದ್ಯೆ, ಬರೋಡದ ಪ್ರೊ.ಮಾಣಿಕರಾವ್ ಅವರಿಂದ ಯೋಗ ಅಂಗಸಾಧನೆಗಳನ್ನು ಕಲಿತರು. ಲೋಕಕಲ್ಯಾಣಕ್ಕಾಗಿ ಇವುಗಳನ್ನೆಲ್ಲ ವಿನಿಯೋಗಿಸಲು ಮಲ್ಲಾಡಿ ಹಳ್ಳಿಯು ತಿರುಕ ಅವರ ಕಾರ್ಯರಂಗವಾಯಿತು. 'ಆಧ್ಯಾತ್ಮದ ತಳಹದಿ: ಲೌಕಿಕದ ಜೀವನ ಸೌಧ' ಇದು ಅವರ ಜೀವನ ಸಿದ್ಧಾಂತವಾಯಿತು. ದೇವರನ್ನು ಕಂಡರೆ ಮಾತ್ರ ಸಾಕ್ಷಾತ್ಕಾರ ಸಾಧ್ಯವೆಂದುಕೊಂಡಿದ್ದ ಇವರ ಹಂಬಲಕ್ಕೆ ಶ್ರೀ ಶಿವಾನಂದರು ರಾಷ್ಟ್ರ ಪ್ರೇಮದ ಮಾತನಾಡುತ್ತಾ 'ಭಾರತಾಂಬೆಯ ಕೋಟಿ ಕೋಟಿ ಮಕ್ಕಳು ಹಸಿವು ಬಡತನದಿಂದ ನರಳುತ್ತಿದ್ದಾರೆ. ಅವರಿಗೆ ಉಡಲು ಅರಿವೆ ಇಲ್ಲ ತಿನ್ನಲು ರೊಟ್ಟಿ ಇಲ್ಲ ...ಇವರೆಲ್ಲ ಭಗವಂತನ ಪ್ರತಿರೂಪ. ಇವರಲ್ಲಿ ನೀನು ದೇವರನ್ನು ಕಾಣು . . . . .' ಎನ್ನುವ ಉಪದೇಶ ಮಾಡುತ್ತಾರೆ. ಇಂತಹ ಆಧ್ಯಾತ್ಮದ ತಳಹದಿ ಅವರ ಬದುಕಿನ ದಿಕ್ಕನ್ನು ಬದಲಿಸಿತು. ಈ ಉಪದೇಶದಿಂದ ತನ್ನದೇ ಆದ ಸಿದ್ಧಾಂತ ರೂಪಿಸಿಕೊಂಡರು. ತಿರುಕ ಅವರ ಈ ಸಿದ್ಧಾಂತದ ಅಕ್ಷರಶ: ನಿರೂಪಣೆ ಜನಸೇವೆ ಎಂಬ ಅತಿದೊಡ್ಡ ಚಿಂತನೆಯಾಯ್ತು. ಇವರು ನೂರು ವರ್ಷಗಳ ತುಂಬು ಬಾಳು ಬದುಕಿದವರು. ಬಾಳಿನುದ್ದಕ್ಕೂ ಸಾಧಿಸಿದುದು ಅನಂತ, ಅಪಾರ. ಹೊಟ್ಟೆಯ ಪಾಡಿಗಾಗಿ ಭಿಕ್ಷೆಯನ್ನೆಂದೂ ಬೇಡದ ಈ ತಿರುಕ ಕೋಟ್ಯಾಂತರ ರೂಪಾಯಿಗಳಷ್ಟು ತಿರುಪೆಯನ್ನೆತ್ತಿ ಅನಾಥ ಸೇವಾಶ್ರಮವನ್ನು ಸಾಕಾರಗೊಳಿಸಿದರು.

ಇವರು ಪೂಜೆ ಜಪ-ತಪಗಳೆಂದು ರುದ್ರಾಕ್ಷಿ ಮಾಲೆ ಹಿಡಿದು ಸಾಧು ಸನ್ಯಾಸಿಯಂತೆ ಕುಳಿತು ಸಮಯ ಹಾಳು ಮಾಡದೆ ಸಮಾಜವನ್ನು ಎಲ್ಲ ರೀತಿಯಲ್ಲಿಯೂ ಸನ್ಮಾರ್ಗದಲ್ಲಿ ನಡೆಸುವ ಮಹತ್ಕಾರ್ಯ ಮಾಡುತ್ತಾರೆ. ತಿರುಕ ಅವರು ಜಾತಿ ಭೇದವಿಲ್ಲದೆ ಅನಾಥ ಮಕ್ಕ ಳ, ಬಡಮಕ್ಕಳ ಬದುಕಿಗೆ ಬೆಳಕು ನೀಡುವ ಆಶಾ ಕಿರಣವೂ ಆಗುತ್ತಾರೆ. ಶರಣರ ತತ್ವಾದರ್ಶಗಳು, ಗಾಂಧೀಜಿ, ವಿನೋಬಾಭಾವೆಯವರ ಆದರ್ಶಗಳೊಂದಿಗೆ ಸಮಾಜಸೇವಾ ಕಾರ್ಯ ಮಾಡುತ್ತಾ ನಡೆಯುತ್ತಾರೆ. ಇವರ ಧಾರ್ಮಿಕ, ಆಧ್ಯಾತ್ಮಿಕವಾದ ನಡೆ ನುಡಿಗಳು ಆ ಕಾಲಕ್ಕೆ ಅತ್ಯಂತ ವೈಚಾರಿಕ ಚಿಂತನೆಗಳಿಂದ ಕೂಡಿದ್ದವು. ಹಸಿದವರಿಗೆ ಅನ್ನ ನೀಡುವುದೇ ನಿಜವಾದ ಧರ್ಮ ಎನ್ನುವುದು ತಿರುಕ ಅವರ ನಿಲುವು. “ಇಪ್ಪ ತುತ್ತಿನ ಬೋನ ಇಕ್ಕು ಹಸಿದೊಡಲಿಗೆ ಉಡುಗುತಿದೆ ಶ್ವಾಸವದು ಹಸುವಿನಿಂದ ಬೆಂದು ನೋಡು ಈ ಕರುಳ ಮೊರೆ ನೀಡು ಹಿಡಿ ಅನ್ನವನೆ” ಇದು ಅವರ ‘ಪೂಜೆ’ ಎಂಬ ಕವನ ಸಂಕಲನದಲ್ಲಿರುವ ಕವಿತೆಯ ಸಾಲು. ನಿಜವಾದ ಪೂಜೆ ಹೂ-ಪತ್ರೆ, ಜಪ-ತಪಗಳಲ್ಲಿ ಇಲ್ಲ. ಇತರರಿಗೆ ಸಹಾಯ ಮಾಡುವುದೇ ಆರಾಧನೆ ಎಂಬ ಅರ್ಥವನ್ನು ನೀಡುತ್ತದೆ. ಇದೇ ಕವನ ಮುಂದುವರಿದು

ತೆರೆದ ಮೈ ಮುಚ್ಚುವರೆ ಗಾಳಿ ಬೆಳಕೇ ರಕ್ಷೆ:

ಹರಿದ ಚಿಂದಿಯ ಅರಿವೆ ಹಾರುತಿದೆ ಸ್ವೇಚ್ಛೆ:

ಕರುಣೆಯೊಳು ನೀಡರಿವೆ ನೊಂದ ದೇಹವ ಮುಚ್ಚೆ

ಹಿರಿಯದೀ ಪೂಜೆಯದು ದೇವ ಮೆಚ್ಚೆ.

ಧರ್ಮ ಎಲ್ಲರಿಗೂ ನೆಮ್ಮದಿಯ ಬದುಕು ನೀಡುವಂತಿರಬೇಕು. ಅದಕ್ಕಾಗಿ ಇಲ್ಲದವರಿಗೆ ನೀಡುವ ಮನೋಭಾವ ಉಳ್ಳವರಿಗಿರಬೇಕು. ಅನಾಥರ ರಕ್ಷಣೆಯ ಕೆಲಸ ಯಾವುದೇ ಪೂಜೆಗಿಂತಲೂ ಮಿಗಿಲು ಎಂಬ ಜೀವ ಪರ ಚಿಂತನೆ ತಿರುಕ ಅವರದು. ಸಹಾಯ ಮನೋಭಾವವೇ ಧರ್ಮ. ಆತ್ಮನು ಧರ್ಮವನ್ನು ಮೀರಿದ ನಿಲುವನ್ನು ಹೊಂದುವುದೇ ಆಧ್ಯಾತ್ಮ ಎಂಬ ವಿಶಿಷ್ಟ ಚಿಂತನೆ ತಿರುಕ ಅವರದು. ಪ್ರಸ್ತುತ ದಿನಮಾನದಲ್ಲಿ ಸ್ವಾರ್ಥಕ್ಕಾಗಿ ಧರ್ಮ ಪಾಲನೆಯನ್ನು ಕೆಲವರು ಭಯದಿಂದ, ಕೆಲವರು ಸ್ವಾರ್ಥಕ್ಕಾಗಿ ಮಾಡುತ್ತಿರುವ ಈ ಹೊತ್ತಿನಲ್ಲಿ ಇಂತಹ ವಿಚಾರಪರ ಚಿಂತನೆಯ ಪ್ರಸ್ತುತತೆಯನ್ನು ಅರ್ಥಮಾಡಿಕೊಂಡು ಅನುಸರಿಸುವುದು ಉತ್ತಮವಾದುದು. ಆಗ ಮಾತ್ರ ಸಾಮಾನ್ಯ ಮಾನವ ಕೂಡ ಉತ್ತಮ ಗುಣಗಳನ್ನು ಹೊಂದಿ; ದೈವತ್ವದ ಸ್ಥಾನ ಪಡೆಯಬಹುದು. ಇಲ್ಲದಿದ್ದರೆ ಧರ್ಮದ ಆಚರಣೆ ಅಂದಾನುಕರಣೆಯಾಗಬಹುದು.

ತಪ್ಪುಗಳನೆಸಗುವುದು ಮಾನವನ ಸಹಜ ಗುಣ

ತಪ್ಪು ತಿದ್ದೀ ಬಾಳ ಹಸನಾಗಿ ಮಾಡುವುದು ದೈವತ್ವದಾ ನೆಲೆಯು

ತಪ್ಪಿನೊಳು ತಪ್ಪೆಸಗಿ ಮತ್ತೆ ಹೋರಾಡುವುದು

ಅಸುರೀ ಗುಣವೆಂಬ ಪರಮೇಶ ದಾಸ.

ತಿರುಕ ಅವರ ಈ ವಚನದಲ್ಲಿ ಅಂತರಂಗ ಶುದ್ಧಿಯು ಎಲ್ಲ ತತ್ವಕ್ಕಿಂತಲೂ ಮಿಗಿಲು. ಯಾರ ಅಂತರಂಗ ಶುದ್ಧಿಯಾಗಿರುವುದೋ ಅವರು ಯಾರೇ ಆಗಲಿ ಅವರ ಸಂಗ ಮಾಡಬಹುದು. ಹೊರಗೊಂದು ಒಳಗೊಂದು, ನಡೆಯೊಂದು ಪರಿ, ನುಡಿಯೊಂದು ಪರಿ ಇರುವ ಡಾಂಭಿಕರನ್ನು ದೂರ ಇಡುವುದೇ ಒಳ್ಳೆಯದು ಎನ್ನುವ ತಿರುಕ ಅವರ ಇಂಥ ನಿಲುವು ಯಾವ ಕಾಲಕ್ಕೂ ಸತ್ಯವಾದ ಮಾತು. ಮುಖವಾಡದ, ಡಾಂಭಿಕರ, ಬದುಕನ್ನು ಅರ್ಥಮಾಡಿಕೊಳ್ಳದವರ ನೆರಳೂ ತುಳಿಯಬಾರದು ಎಂಬುದು ಶುದ್ಧ ಭಕ್ತಿಯನ್ನು ಕುರಿತು ಹೇಳಿರುವ ಮಾತು.

ಹೊರಗೊಳ ಶುದ್ಧಿಯುಳ್ಳ ಹೊಲೆಯನು ಹೊಲೆಯನಲ್ಲ

ಹೂ ವೀಳೆಯದವನು . . . ಮಹಾಶರಣನು

ಕರೆದೂ ಅವನ ಸಂಗ ಮಾಡಬಹುದಣ್ಣಾ ಮಾಡಬಹುದು:

ಬೆರೆತೂ ಅವನೊಳು ಉಣ್ಣಬಹುದಣ್ಣಾ ಉಣ್ಣಬಹುದು:

ಹೊರಗೊಳ ಶುದ್ಧಿಯಿಂದ ಮರೆ ಮೋಸದ ಡಾಂಭಿಕನು

ನೀಚ ಹೊಲೆಯರವನು-

ಮರೆತೂ ಅವನ ಸಂಗ ಮಾಡಬಾರದಣ್ಣಾ ಮಾಡಬಾರದು

ತಿರುಗಿ ಅವರ ನೆಳಲೂ ತುಳಿಯಬಾರದಣ್ಣಾ ತುಳಿಯಬಾರದು

ಕಾಣಾ ಪರಮೇಶದಾಸ.

ಅವರ ಇನ್ನೊಂದು ವಚನದಲ್ಲಿ ಮಂಡೆ ಬೋಳಾಗಿ ಮನ ಬೋಳಾಗದ ಸನ್ಯಾಸಿಗಳನ್ನು ಖಂಡಿಸಿದ್ದಾರೆ. 'ಲಾಂಛನದ ಮರೆಯಲಿ ಮೆರವ ಪುಂಡ ಪೋಕರಿಗಳ ಯೋಗಿ ವಿರಾಗಿ ಎಂದು ಹೆಸರಿಸಿ ಮೆರೆಸುವುದು ಕಂಡು ನಗುತಿರ್ಪನಯ್ಯಾ ನಾ ಪರಮೇಶ ದಾಸ' ಎಂದು ಜರಿದಿದ್ದಾರೆ. ಕಾಗೆ, ಕತ್ತೆಗಳೆಂದೂ ಕೋಗಿಲೆ ಕುದುರೆಗಳಾಗರು ಎಂದಿದ್ದಾರೆ. ತಾವು ಶ್ರೇಷ್ಠರು ಎಂದುಕೊಂಡು ತಿರುಗಿದರೆ ಶ್ರೇಷ್ಠರಾಗುವುದಿಲ್ಲ. ವ್ಯಕ್ತಿತ್ವದಿಂದ ಶ್ರೇಷ್ಠತೆ ಸಾಧ್ಯ ಎನ್ನುವುದು ತಿರುಕ ಅವರ ನಿಲುವು.

ಸುರಿದ ಮಳೆ ಎಲ್ಲಿ ಬಿದ್ದರೂ ಕೊನೆಲಿ ಸೇರುವುದು

ಧರೆಯನಲ್ಲವೆ ಸ್ವಾಮಿ

ಹರಿದ ನದಿ ಎತ್ತ ಹೋದರು ಕಡೆಲಿ ಕೂಡುವುದು

ಶರಧಿಯಲಲ್ಲವೆ ದೇವ

ಮರವೆಯಿಂದಾನು ಜಗದಲ್ಲೆಲ್ಲು ಸುತ್ತಿದರು

ಪರಮೇಶ ದಾಸನಾ ಅಂತ್ಯ ನಿನ್ನಲ್ಲೇ . . . .

ಮಳೆ ಎಲ್ಲೇ ಬಿದ್ದರು ಅದು ಭೂಮಿಗೆ ತಲುಪುವ, ನದಿ ಯಾವ ದಿಕ್ಕಿನಲ್ಲಿ ಸಾಗಿದರೂ ಅದು ಕಡಲು ಸೇರುವ ನೈಜ ಸತ್ಯವನ್ನು ಬಿಚ್ಚಿಟ್ಟಿರುವ ಕವಿ ಮಾನವ ಲೋಕವನ್ನೆಲ್ಲ ಸುತ್ತಾಡಿದರೂ ಕೊನೆಗೊಮ್ಮೆ ಪರಶಿವನ ಪಾದ ಸೇರಿ ಸಾರ್ಥಕಗೊಳಿಸಿಕೊಳ್ಳುತ್ತಾನೆಂಬ ಪರಮ ಸತ್ಯವನ್ನು ಸಾರಿದ್ದಾರೆ.

ತಿರುಕ ಅವರ ಇಂತಹ ವಿಚಾರ ಧಾರೆಯ ಪ್ರಸ್ತುತತೆ ಎಂದಿಗೂ ಇರುವಂತದ್ದು. ವೈಚಾರಿಕತೆ ಮತ್ತು ಭಾರತೀಯ ಸಂಸ್ಕೃತಿಯ ತಳಹದಿಯ ಮೇಲೆ ತಿರುಕ ಅವರ ಚಿಂತನ ಕ್ರಮ ವಿಶಿಷ್ಟವೂ ಅನುಕರಣೀಯವೂ ಆಗಿದೆ. ಇಂತಹ ವಿಶಿಷ್ಟ ವ್ಯಕ್ತಿತ್ವದ ತಿರುಕ ಅವರು ಆದರ್ಶ ಹೇಳದೇ ಮಾಡಿತೋರಿದ ಸಾಧಕರು.

**ಪರಮಾರ್ಶನ ಗ್ರಂಥಗಳು:**

1) ಅಮರೇಶ ನುಗಡೋಣಿ, ಕನ್ನಡ ಸಂಶೋಧನೆಯ ವೈಧಾನಿಕತೆಗಳು, 2008,
    a. ಕನ್ನಡ ವಿಶ್ವವಿದ್ಯಾಲಯ, ಹಂಪಿ.
2) ಚಿದಾನಂದ ಮೂರ್ತಿ, ಸಂಶೋಧನೆ, 1962, ವಿ.ಕೆ.ಪ್ರಕಾಶನ
3) ತ.ಸು.ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, 1981, ತುಳುವಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು.
4) ಎಂ.ಎಂ. ಕಲಬುರ್ಗಿ, ಕನ್ನಡ ಸಂಶೋಧಶಾಸ್ತ್ರ, 1992, ಸ್ವಪ್ನ ಬುಕ್ ಹೌಸ್, ಬೆಂಗಳೂರು.
5) ಎಸ್. ಎಲ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ ಚರಿತ್ರೆ, 1999, ಅಂಕಿತ ಪುಸ್ತಕ, ಬೆಂಗಳೂರು.
6) ಬಿ.ವ್ಹಿ ಶಿರೂರ, ಸಂಶೋಧನೆ ಸ್ವರೂಪ, 2000, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.
7) ಬೆಳಗೆರೆ ಕೃಷ್ಣಶಾಸ್ತ್ರಿ, ಸಾಹಿತಿಗಳ ಸ್ಮೃತಿ, 1993, ಅಭಿನವ ಪ್ರಕಾಶನ, ಬೆಂಗಳೂರು.
8) ಸಿ. ಎನ್. ರಮಚಂದ್ರನ್, ಸಾಹಿತ್ಯ ವಿಮರ್ಶೆ, 1990, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
9) ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಇತಿಹಾಸ, 1962, ಸಾಹಿತ್ಯ ಅಕಾಡೆಮಿ, ನವದೆಹಲಿ.
10) ಕಾ.ಯ. ಧಾರವಾಡಕರ್, ಹೊಸಗನ್ನಡ ಸಾಹಿತ್ಯ
    a. ಉದಯಕಾಲ, 1975, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
11) ತ.ಸು.ಶಾಮರಾಯ (ಸಂ), ಧನ್ಯಜೀವಿ,
12) ಕನ್ನಡ ಸಾಹಿತ್ಯ ಅಧ್ಯಯನ, 1962, ಬೆಂಗಳೂರು ವಿಶ್ವವಿದ್ಯಾನಿಲಯ.
13) ಕೆ.ಮರುಳಸಿದ್ದಪ್ಪ, 1993, ಕನ್ನಡ ಸಾಹಿತ್ಯ ಅಧ್ಯಯನ.
14) ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, 1993, ಕನ್ನಡ ಸಾಹಿತ್ಯ ಅಕಾಡೆಮಿ.
15) ಜಿ.ಎಸ್. ಶಿವರುದ್ರಪ್ಪ (ಸಂ), ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ
16) ಕೆ. ಮರುಳಸಿದ್ದಪ್ಪ, 1993, ಆಧುನಿಕ ಕನ್ನಡ ನಾಟಕ.
17) ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್, ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿ, ಬೆಳಗುಶ್ರೀ ಪ್ರಕಾಶನ.
18) ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್, ಕನಕದಾಸರ ಲೋಕದೃಷ್ಟಿ
19) ಅಕ್ಷಯ ಶೆಟ್ಟಿ ಮತ್ತು ಇತರರು ಕನಕ ಚಿಂತನೆ 2010 (ಸಂ) ಕನಕದಾಸ ಸಂಶೋದನಾ ಕೇಂದ್ರ ಮಂಗಳೂರು, ವಿಶ್ವವಿದ್ಯಾನಿಲಯ
20) ಕುವೆಂಪು, ಶ್ರೀರಾಮಕೃಷ್ಣ ಪರಮಹಂಸ 1905 , ಮೈಸೂರು ವಿಶ್ವವಿದ್ಯಾನಿಲಯ .
21) ಸ್ವಾಮಿ ರಾಮದೇವ, ಜೀವನ ದರ್ಶನ, 2009
22) ಡಾ.ವ್ಹಿ.ಜಿ. ಪೂಜಾರ, ವಚನಗಳಲ್ಲಿ ಲೋಕವಿಡಂಬನೆ 2011
23) ಕನ್ನಡ ನಿಗಂಟು, ಕನ್ನಡ ಸಾಹಿತ್ಯ ಪರಿಷತ್ತು 1993
24) ಸಂಕ್ಷಿಪ್ತ ಕನ್ನಡ ನಿಗಂಟು, ಕನ್ನಡ ಸಾಹಿತ್ಯ ಪರಿಷತ್ತು 1975

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ಗ್ರಾಮಗಳ ಅಭಿವೃದ್ಧಿಯಲ್ಲಿ ಜೀವರಕ್ಷಕ ಕೆರೆಗಳ ಪಾತ್ರ : ಒಂದು ಅಧ್ಯಯನ

**ಅನಿತ ಟಿ**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು -56

**ನಾಗರತ್ನಮ್ಮ ಎಸ್**
ಮಾರ್ಗದರ್ಶಕರು
ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು -56

## ಪ್ರಸ್ತಾವನೆ

ಕೆರೆಗಳು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿ ಕಂಡು ಬಂದಿದ್ದು, ಗ್ರಾಮೀಣ ಪ್ರದೇಶಗಳ ಜನರ ಜೀವನಾಡಿಯಾಗಿರುವುದು ಸತ್ಯದ ಸಂಗತಿಯಾಗಿ ಪವಿತ್ರ ಜಲ ಎನಿಸಿ ವ್ಯವಸಾಯ ಹಾಗೂ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದು ಇಂದಿಗೂ ಕಾಣಬಹುದು. "ಜೀವ ಜಲ ಬತ್ತದಿರಲಿ, ಕೆರೆಗಳ ವೈಭವ ಮರುಕಳಿಸಲಿ" .. ಎಂಬ ಆಶಯದೊಂದಿಗೆ ಕೆರೆಗಳ ಅಭಿವೃದ್ಧಿಗೆ ಕೈ ಜೋಡಿಸೋಣ ಇಲ್ಲವೆ, ವಿನಾಶದ ಕರೆಗೆ ಸಿದ್ಧರಾಗೋಣ ಎಂಬ ಎಚ್ಚರಿಕೆಯ ಕಾಲ ಗಣನೆಯನ್ನು ಎದುರು ನೋಡುತ್ತಾ ಕೆರೆಗಳ ನೈಜ ಚಿತ್ರಣವನ್ನು ಮೆಲುಕು ಹಾಕಲು ಹಾಗೂ ಒಂದು ಕ್ಷಣ ಕೆರೆಗಳ ಬಗೆಗೆ ನಮ್ಮ ಋಣಾತ್ಮಕ ಯೋಚನಾ ಲಹರಿಯನ್ನು ಬದಲಾಯಿಸಲು ಸಾಧ್ಯವೇ? ಎಂದು ಕೇಳುವುದರೊಂದಿಗೆ ಕೆರೆಗಳ ಸ್ಥಿತಿಯನ್ನು ವಿವರಿಸುವಂತಹ ಒಂದು ಸಣ್ಣ ಪ್ರಯತ್ನ ಇದಾಗಿದೆ.

**ಕೀಲಿಪದ**: ಕೆರೆಗಳು, ಜೀವನಾಡಿ, ಜೀವ ಜಲ, ಗ್ರಾಮಗಳ ಅಭಿವೃದ್ಧಿ, ಜೀವರಕ್ಷಕ

## ಪೀಠಿಕೆ

ಕೆರೆಗಳು ನಮ್ಮ ದೈನಂದಿನ ಜೀವ ರಕ್ಷಕ ವಸ್ತುವಾಗಿದೆ. ಜೀವ ಸಂಕುಲದ ಸೃಷ್ಠಿ ಭೂಮಿಯ ಮೇಲೆ ಆದಾಗಿನಿಂದಲೂ ಸಹ ಜೀವ ಜಲ ಸೃಷ್ಠಿಯಾಗಿರಲೇಬೇಕು. ಮಾನವ ಆಹಾರವಿಲ್ಲದೆ ಜೀವಿಸಬಲ್ಲ ಆದರೆ ಜೀವಜಲವಿಲ್ಲದೆ ಬದುಕಲಾರ ಅಂತಹ ಜೀವರಕ್ಷಕ "ಜಲ" ಅಂದು ಪವಿತ್ರ ಸ್ಥಾನವನ್ನು ಪಡೆದಿತ್ತು ಆದರೆ ಇಂದು ನೆಲೆ ನಿಲ್ಲಲು ಪರದಾಡುವಂತಾಗಿದೆ ಅಂದರೆ ಜಲ ಸಂಗ್ರಹವಾದ ಕೆರೆಗಳ ಕಣ್ಮರೆಯ ರೋಚಕತೆ ನಮ್ಮೆದುರಿಗಿರುವುದೇ ಸಾಕ್ಷಿ. ಗ್ರಾಮೀಣ ಮತ್ತು ನಗರ ಪ್ರದೇಶ ಎನ್ನದೆ ಎಲ್ಲೆಡೆ ತನ್ನ ಸ್ಥಾನವನ್ನು ನಿರೂಪಿಸಿರುವ ನೀರಿಗೆ ಪ್ರಸ್ತುತದಲ್ಲಿ ಹಾಹಾಕಾರ ಎದುರಾಗುತ್ತಿದೆ.ನಮ್ಮ ಹಿರಿಯರು "ಜೀವಜಲ" ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸುತ್ತಿದ್ದರು.ಅಲ್ಲದೆ ಯಾವುದೇ ದುರುದ್ದೇಶವಿಲ್ಲದೆ ಪ್ರತಿ ಹಳ್ಳಿಗಳಲ್ಲೂ ಕೆರೆಗಳ ನಿರ್ಮಾಣದ ಹೊಣೆಯನ್ನು ಹೊರುತ್ತಿದ್ದರು ಇದಕ್ಕೆ ಶ್ರೀಸಾಮಾನ್ಯರಿಂದ ಹಿಡಿದು ರಾಜ ಮಹಾರಾಜರುಗಳ ಬೆಂಬಲವೂ ಪೂರ್ಣ ಪ್ರಮಾಣದಲ್ಲಿ ದೊರಕುತ್ತಿತ್ತು. ಜನ ಜಾನುವಾರುಗಳ ಕುಡಿಯುವ ನೀರಿಗಾಗಿಯೇ ಕಾಡುಗಳಲ್ಲಿ ಹಾಗೂ ದಿನ ಬಳಕೆಗಾಗಿ ಅಲ್ಲಲ್ಲಿ ಕೆರೆ, ಕಟ್ಟೆ ಹಾಗೂ ಕುಂಟೆಗಳು ನಿರ್ಮಾಣವಾಗಿದ್ದನ್ನು ಉದಾಹರಿಸಬಹುದು. ಈ ಕೆರೆಗಳ ನಿರ್ಮಾಣ ಅಂದು ಪವಿತ್ರ ಕಾರ್ಯವಾಗಿದ್ದು, ಪುಣ್ಯ ಪ್ರಾಪ್ತಿಗಾಗಿ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ

ಜನಸಾಮಾನ್ಯರು ಸಹ ಮುಂದೆ ಬರುತ್ತಿದ್ದರು. ಅಲ್ಲದೆ ವೇಶ್ಯಯರು ಸಹ ಬೃಹತ್ ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳೂ ಇಂದು ಜೀವಂತವಾಗಿರುವುದನ್ನು ಕಾಣಬಹುದು. ಅಲ್ಲದೆ ಸಂಗ್ರಹಿಸಲಾದ ನೀರನ್ನು ಯಾವುದೇ ಘರ್ಷಣೆಗೆ ಎಡೆಗೊಡದಂತೆ ಅವರವರ ಭೂಮಿಗೆ ಹರಿಸಿಕೊಳ್ಳುವ ಬಗ್ಗೆ ನಿಗಾ ವಹಿಸಲು ಹಳ್ಳಿಗಳಲ್ಲಿ 'ನೀರುಗಂಟಿ ' ಗಳನ್ನು ನೇಮಿಸಲಾಗುತ್ತಿತ್ತು. ಇದರಿಂದಾಗಿ ನೀರು ನಿರ್ವಹಣೆಯ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿಯದೇ ಜೀವ ಸುಗಮವಾಗಿ ಸಾಗಲು ಅನುಕೂಲವಾಗುತ್ತಿತ್ತು.

ಆದರೆ, ಕಾಲ ಆಧುನಿಕವಾದಂತೆಲ್ಲಾ ಸಣ್ಣ, ಮಧ್ಯಮ ಹಾಗೂ ಬೃಹತ್ ನೀರಾವರಿ ಯೋಜನೆಗಳು ಪ್ರಾರಂಭವಾದಂತೆಲ್ಲ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ಕೆರೆಗಳು ನಿರ್ಲಕ್ಷ್ಯಕ್ಕೆ ಒಳಗಾದವು. ಕೆಲವು ಕೆರೆಗಳು ಒಣಗಿ ಹೋದರೆ ಮತ್ತೆ ಕೆಲವು ಕೆರೆಗಳು ಹೇಳ ಹೆಸರಿಲ್ಲದಂತೆ ಮುಚ್ಚಿ ಹೋದವು. ನಗರ ಭಾಗಗಳಲ್ಲಂತೂ ಕೆರೆಗಳನ್ನು ಒಣಗಿಸಿ ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ. ಹೀಗಾಗಿ ಸಾಕಷ್ಟು ಪ್ರಮಾಣದಲ್ಲಿ ಇದ್ದಂತಹ ಕೆರೆಗಳು ಇಂದು ಎಣಿಕೆಗೆ ಸಿಗುವಂತಾಗಿರುವುದು ದುಃಖದ ಸಂಗತಿ. ಇದು ರೈತರ ಬದುಕಿನಲ್ಲಿ ಅಭದ್ರ ಸ್ಥಿತಿಯನ್ನು ಉಂಟುಮಾಡಿದೆ. ಇತ್ತೀಚ್ಚಿನ ದಿನಗಳಲ್ಲಿ ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಹಾಗೂ ಅವುಗಳ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನೀರನ್ನು ಉಪಯೋಗಿಸುವ ನಿಟ್ಟಿನಲ್ಲಿ ಸರ್ಕಾರ ಮನಸ್ಸು ಮಾಡಿದೆ. ನಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಉಳಿಸಿ-ಬೆಳೆಸಿಕೊಂಡು ಬಂದಂತಹ ಅನೇಕ ಕೆರೆಗಳ ಅಭಿವೃದ್ಧಿ ಕಾರ್ಯದತ್ತ ಗಮನ ಹರಿಸುವುದು ವರ್ತಮಾನದ ಒಂದು ಅನಿವಾರ್ಯತೆಯೂ ಆಗಿದೆ.

**ಕೆರೆಗಳ ಸ್ಥಾನ ಅಂದು :-**

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಮಂ

ಮಾಡಿಸಜ್ಜರೆಯೊಳ್ಸಿಲ್ಕಿದನಾತರಂ ಬಿಡಿಸು ಮಿತ್ರಗ್ರಿಂಬುಕೆಯ ನಂಬಿ

ದಗ್ರ್ರೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನ್ನುತ್ತಿಂತೆಲ್ಲವಂ ಪಿಂದೆತಾ

ಯೆರೆದಳ್ಪಾಲೆರೆಂದು ತೊಟ್ಟು ಕಿವಿಯೋಳ್ ಲಕ್ಷ್ಮೀಧರಾಮಾತ್ಯನಾ ||

ಈ ಗೀತೆಯನ್ನು ತಾಯಿ ತನ್ನ ಮಗುವಿಗೆ ಹಾಲುಣಿಸುವಾಗ ಆ ಮಗುವಿನ ಕಿವಿಯಲ್ಲಿ ಹಾಡುತ್ತಿದ್ದ ಈ ಸಾಲುಗಳು ಅಂದಿನ ಕೆರೆಯ ನಿರ್ಮಾಣದ ಮಹತ್ವವನ್ನು ತಿಳಿಸುತ್ತದೆ. ಕೆರೆಯ ನಿರ್ಮಾಣ ಎಂಬುದು ಕೇವಲ ಒಬ್ಬ ವ್ಯಕ್ತಿಯ ವೈಯುಕ್ತಿಕ ವಿಚಾರವಾಗಿರದೇ, ಇಡೀ ಒಂದು ಸಮುದಾಯದ ಏಳಿಗೆಯನ್ನು ಹಾಗೂ ಜನರ ಜೀವನೋಪಾಯವನ್ನು ಸುಧಾರಿಸಿ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸುವಲ್ಲಿ ಯಶಸ್ವಿಯಾಗಿದ್ದವು. ಕೆರೆಗಳ ನಿರ್ಮಾಣದಿಂದಾಗಿ ವಾತಾವರಣವನ್ನು ಸಮತೋಲನದಲ್ಲಿ ಕಾಯ್ದುಕೊಳ್ಳುವುದಲ್ಲದೆ ಸುತ್ತಲಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಿದ್ದವು. ಕೆರೆ ಕಟ್ಟೆಗಳ ನಿರ್ಮಾಣದಿಂದ ವ್ಯವಸಾಯ, ಮಾನವನ ದಿನನಿತ್ಯದ ಬಳಕೆ, ಪ್ರಾಣಿ-ಪಕ್ಷಿಗಳ ಹಾಗೂ ಜಲಚರಗಳಿಗೆ ಆಶ್ರಯ ತಾಣವಾಗಿದ್ದವು. ಅದೆಷ್ಟೋ ಪ್ರಾಣಿ-ಪಕ್ಷಿಗಳ ಸಂತಾನೋತ್ಪತ್ತಿಗೆ ಕೆರೆಗಳೆ ಆಧಾರವಾಗಿತ್ತೆಂದು ಹೇಳಿದರೆ ತಪ್ಪಾಗಲಾರದು. ಅಲ್ಲದೆ ಮೀನುಗಾರಿಕೆಯನ್ನು ಒಳಗೊಂಡಂತೆ ಕೃಷಿ ಚಟುವಟಿಕೆಗಳು ವರ್ಷ ಪೂರ್ತಿ ನಿರಂತರವಾಗಿ ನಡೆಯುವಂತೆ ನಮ್ಮ ಹಿರಿಯರು ಮುಂದಾಲೋಚನೆಯಿಂದ ನೀರನ್ನು ಬಳಸಿಕೊಳ್ಳುತ್ತಿದ್ದರು. ಜೀವ ರಕ್ಷಕ ಕೆರೆಗಳು ಜನರ ಧಾರ್ಮಿಕ ಮತ್ತು ಸಾಮಾಜಿಕ ಕೇಂದ್ರಗಳಾಗಿಯೂ ಮುಂದುವರೆದಿರುವುದನ್ನು ಕಾಣಬಹುದು. ಅಂದು ಕೆರೆಗಳನ್ನು ನಿರ್ಮಿಸುವುದು ಧಾರ್ಮಿಕ ಕಾರ್ಯವೆಂದು ಭಾವಿಸಿ, ದೇವಾಲಯಗಳ ನಿರ್ಮಾಣಕ್ಕೆ ನೀಡುವ ಪ್ರಾಶಸ್ತ್ಯವನ್ನೆ ಕೆರೆಗಳ ನಿರ್ಮಾಣಕ್ಕೂ ನೀಡುತ್ತಿದ್ದರು. ಇದು ಅವರಲ್ಲಿ ಇಹ ಮತ್ತು ಪರ ಲೋಕದ ಪಾಪ ಮತ್ತು ಪುಣ್ಯದ ಕಲ್ಪನೆಯ ಹಿನ್ನಲೆಯಲ್ಲಿನ ನಂಬಿಕೆಯಾಗಿತ್ತು.

ಆ ಧಾರ್ಮಿಕ ಭಾವನೆಗಳಿಂದಾಗಿ ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಮಹತ್ತರವಾದ ಬೆಳವಣಿಗೆ ಆಗಿರುವುದನ್ನು ಕಾಣಬಹುದು. ಕೆರೆಗಳನ್ನು ನಿರ್ಮಿಸುವುದರ ಜೊತೆಗೆ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಹ ಅಷ್ಟೇ ಅಚ್ಚು ಕಟ್ಟಾಗಿ ನಿರ್ವಹಿಸುತ್ತಿದ್ದರು. ಹಾಗಾಗಿ ಕೆರೆಗಳ ನಿರ್ಮಾಣದ ಕಾರ್ಯದಲ್ಲಿ ರಾಜರುಗಳು, ಸಾಮಂತರು, ವರ್ತಕರು, ಮೇಲ್ವರ್ಗದವರು, ಆರ್ಥಿಕ ಸ್ಥಿತಿವಂತರು ಹಾಗೂ ವೇಶ್ಯೆಯರೂ ಸಹ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದ್ದರು. ಮೌರ್ಯರ ಕಾಲದಿಂದ ಕೆರೆಗಳ ಬಗೆಗೆ ಮಾಹಿತಿಯನ್ನು ನೋಡಲು ಶಾಸನಗಳು ಉಪಯುಕ್ತವಾದ ದಾಖಲೆಗಳನ್ನು ಒದಗಿಸುತ್ತವೆ. ಮೌರ್ಯರ ಕಾಲಕ್ಕೆ ಸಂಬಂಧಿಸಿದಂತೆ "ಸೌರಾಷ್ಟ್ರದ ಜುನಾಗಡದ ಸುದರ್ಶನ ಕೆರೆ" ಯನ್ನು ಇಲ್ಲಿ ಸ್ಮರಿಸಬಹುದು. ಅಂತೆಯೇ, 'ವಿಜ್ಞಾನೇಶ್ವರನ ಮಿತಾಕ್ಷರ' ದಲ್ಲಿ ಕೆರೆಗಳು ಗ್ರಾಮೀಣ ಜೀವನದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಚಟುವಟಿಕೆಗಳ ಬದುಕಿನ ಸಂಕೇತ ಎಂಬುದಾಗಿದೆ. 12 ನೇ ಶತಮಾನದ ಶರಣರ ಚಳುವಳಿಯ ಸಂದರ್ಭದಲ್ಲಿ ರಚನೆಯಾದ ವಚನಗಳಲ್ಲಿ ಕೆರೆ, ಕಟ್ಟೆ, ಸರೋವರ, ತಟಾಕಗಳನ್ನು ನಿರ್ಮಿಸಿದ ಮಾಹಿತಿ ಇದೆ. ಮುಖ್ಯವಾಗಿ ಕೆರೆಗಳ ನಿರ್ಮಾಣದ ತಾಂತ್ರಿಕತೆಗೆ ನೀಡಿರುವಂತಹ ಪ್ರಮುಖ್ಯತೆಯನ್ನು ಇಲ್ಲಿ ಕಾಣಬಹುದು.

"ಕೆರೆಯೊಡೆದ ಬಳಿಕ ತೂಬು ಬಲ್ಲದೆ

ಕೆರೆಯನುಂಡು ತೊರೆಯ ಹೊಗಳುವುದೆ"

- ಅಲ್ಲಮ

ಎಂಬಂತಹ ಸಾಲುಗಳು ಕೆರೆಗಳ ನಿರ್ಮಾಣದ ತಾಂತ್ರಿಕತೆಗೆ ಸಾಕ್ಷಿಯಾಗುವಂತಿವೆ. ಅಲ್ಲದೆ ಶರಣರ ನಂತರದಲ್ಲಿ ದಾಸರು ಕೂಡ ತಮ್ಮ ಕೀರ್ತನೆಗಳಲ್ಲಿ ಕೆರೆಯನ್ನು ಉಲ್ಲೇಖಿಸಿರುವುದಕ್ಕೆ ಪುರಂದರದಾಸರ" ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬ ಸಾಲುಗಳು ಪುಷ್ಠಿ ನೀಡುತ್ತವೆ. ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಲು ಕೆರೆ, ಕಲ್ಯಾಣಿಗಳನ್ನು ನಿರ್ಮಿಸಿರುವುದರ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಇದನ್ನು ಗಮನಿಸಿದಾಗ ನಮ್ಮ ಹಿರಿಯರು ಕೆರೆಗಳಿಗೆ ದೈವತ್ವದ ಸ್ವರೂಪ ನೀಡಿ ಜಲದೇವತೆಯೆಂದು ಆರಾಧಿಸುತ್ತಿದ್ದ ಪರಿಪಾಠ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ನಂಬಿಕೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಕೆರೆಯಲ್ಲಿ ಪಂಚಕನ್ಯೆಯರು, ಅಪ್ಸರೆಯರು, ದೇವಗನ್ಯೆಯರು ಹಾಗೂ ಆದಿಶಕ್ತಿ ದೇವಾನುದೇವತೆಗಳು ವಾಸಿಸುತ್ತಾರೆ ಆದುದ್ದರಿಂದ ಕೆರೆಗಳು ಪವಿತ್ರವಾದ ದೇವರ ಸ್ವರೂಪ ಎಂದು ಭಾವಿಸಿ ಅನೇಕ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಿದ್ದುದನ್ನು ಗಮನಿಸಿದಾಗ ಕೆರೆಗಳ ಮೌಲ್ಯವನ್ನು ತಿಳಿಯಬಹುದು. ಹಾಗಾಗಿ ಕೆರೆಗಳ ನಿರ್ಮಾಣದಲ್ಲಿ ಶ್ರದ್ಧೆ ಭಕ್ತಿಯಿಂದ ಇರುತ್ತಿದ್ದರು ಇದಕ್ಕೆ ಸಾಕ್ಷಿಯಾಗಿ ಈಗಲೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ವರ್ಷಕ್ಕೊಮ್ಮೆ ಗಂಗಮ್ಮನ ಪೂಜೆ ಮಾಡುವ ಪದ್ಧತಿಯನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಹಿಂದೆ ಕೆರೆಯ ನಿರ್ಮಾಣದ ಸಂದರ್ಭದಲ್ಲಿ ಕೆರೆಯಲ್ಲಿ ನೀರು ಬಾರದಿದ್ದರೆ ಹೊತ್ತಿಗೆ ತೆಗೆಸಿ ಶಾಸ್ತ್ರ ಕೇಳಿ ತುಂಬಿದ ಗರ್ಭಿಣಿಯನ್ನು ಕೆರೆಗೆ ಹಾರವಾಗಿ ನೀಡುತ್ತಿದ್ದ ಪದ್ಧತಿ ಕೆರೆಯ ಸ್ಥಾನವನ್ನು ತಿಳಿಸುತ್ತದೆ. ಇಂದಿಗೂ ಸಹ ಜನಪದ ಹಿನ್ನಲೆಯಲ್ಲಿ ಅನೇಕ ಕೆರೆಗಳಿಗೆ ಬಲಿಯಾಗಿರುವ ವಿಚಾರಗಳನ್ನು ತಿಳಿದಾಗ ಕೆರೆಗಳ ಮಹತ್ವ ಅರಿವಾಗುತ್ತದೆ. ಕೆರೆಗಳ ನಿರ್ಮಾಣದಲ್ಲಿ ನಮ್ಮ ಪೂರ್ವಿಕರು ಅಳವಡಿಸಿಕೊಂಡಿರುವ ವಿಧಾನಗಳನ್ನು ಗಮನಿಸಿದಾಗ ಬೆರಗಾಗುತ್ತೇವೆ ಆದರೆ ಈ ಕೆರೆಗಳ ನಿರ್ಮಾಣದ ತಾಂತ್ರಿಕತೆಯನ್ನು ಕುರಿತಂತೆ ಯಾವುದೇ ಶಾಸನಗಳಲ್ಲಿ ನಿಖರವಾದ ಮಾಹಿತಿ ದೊರಕುವುದಿಲ್ಲ, ಆದರೆ ಅಲ್ಪ ಸ್ವಲ್ಪ ಈ ವಿಷಯವಾಗಿ ನಮಗೆ ಮಾಹಿತಿ ನೀಡುವುದೆಂದರೆ ಅದು "ಪೌರಮಾಮಿಲ ಶಾಸನ" ದಿಂದ ಮಾತ್ರ ಈ ಶಾಸನ ಇರುವುದು ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಒಡವೇಲು ತಾಲ್ಲೂಕಿನಲ್ಲಿ. ಅಲ್ಲಿನ ಕೆರೆಯ ಹೆಸರು ಅನಂತರಾಜ ಸಾಗರ ಇದನ್ನು ಕಟ್ಟಿದ್ದು 14 ನೇ ಶತಮಾನದಲ್ಲಿ ಆಳಿದ ವಿಜಯನಗರ ಅರಸರ ಕಾಲದಲ್ಲಿ ಎಂಬುದಾಗಿ ತಿಳಿದುಬರುತ್ತದೆ.

ಜನಪದ ಕಾವ್ಯಗಳಲ್ಲಿನ ಕೆರೆಗೆ ಹಾರವಾಗಿರುವುದನ್ನು ಗಮನಿಸಿದಾಗ ಕೆರೆಗೆ ನೀಡಿದ್ದ ಮಹತ್ವವನ್ನು ತಿಳಿಯಬಹುದು ಲೋಕ ಕಲ್ಯಾಣಕ್ಕಾಗಿ ಹೆಣ್ಣು ತಾನು ಎಂತಹ ತ್ಯಾಗಕ್ಕಾದರೂ ಸಿದ್ಧಳಾಗಿರುವುದನ್ನು ಗಮನಿಸಿದಾಗ ಕೆರೆಗಳು ಕೇವಲ ಮನುಷ್ಯನಿಗೆ ಮಾತ್ರವಲ್ಲದೆ ಸಕಲ ಜೀವ ರಾಶಿಗಳಿಗೆ ಜೀವ ರಕ್ಷಕವಾಗಿದ್ದು, ಕೆರೆಗಳಿಗೆ ಧಾರ್ಮಿಕತೆಯ ದೈವಿಕ ಭಾವನೆಯಿಂದ ಪೂಜಿಸುತ್ತಿದ್ದುದ್ದನ್ನು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಸಹ ಕಾಣತ್ತೇವೆ. ಅನೇಕ ಕೆರೆಗಳು ಪ್ರಸ್ತುತದಲ್ಲಿ ಕಣ್ಮರೆಯಾಗಿರಬಹುದು ಆದರೆ ಕೆರೆಗೆ ನಿರ್ಮಿಸಿದ ತೂಬುಗಳು ಮಾತ್ರ ಹಾಗೆಯೇ ಉಳಿದು ಬಂದಿರುವುದನ್ನು ನೋಡಿದಾಗ ತೂಬುಗಳನ್ನು ಭಕ್ತಿ ಭಾವದಿಂದ ನೋಡುತ್ತಿದ್ದುದ್ದು ಗೋಚರಿಸುತ್ತದೆ ಅಷ್ಟೇ ಅಲ್ಲದೆ ಈ ತೂಬುಗಳಿಂದಲೇ ಕೆರೆಗಳ ಅಸ್ತಿತ್ವ ಮತ್ತು ಕಾಲವನ್ನು ಗುರುತಿಸಲು ಸಾಧ್ಯವಾಗುತ್ತದೆ.

- ಕೆರೆಗಳ ಪುನರುದ್ಧಾರ ಮಾಡುವಲ್ಲಿ ಇತ್ತಿಚ್ಚಿನ ದಶಕಗಳಲ್ಲಿ ಹೆಚ್ಚು ಆಸಕ್ತಿ ತೋರುತ್ತಿದ್ದು, ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಕೆರೆಗಳ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಸರ್ಕಾರವು ಸಹ ಕೆರೆಗಳ ಉಳಿವಿಗಾಗಿ ಜನರ ಬೆಂಬಲವನ್ನು ಪಡೆಯುತ್ತಿರುವುದು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜನರಿಗೆ ಕೆಲಸ ದೊರಕುವಂತೆ ಮಾಡಿರುವುದು ಸಂತಸವಾಗಿದೆ.
- ಶ್ರೀ ಕುಮಾರ್ ಬಂಗಾರಪ್ಪನವರು ಸಣ್ಣ ನೀರಾವರಿ ಸಚಿವರಾಗಿದ್ದಾಗ ರಾಜ್ಯದಲ್ಲಿ ಕೆರೆಗಳ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡುವುದರ ಜೊತೆಗೆ, ವಿಶ್ವ ಬ್ಯಾಂಕ್ ನೆರವನ್ನು ಪಡೆದು ಗ್ರಾಮ ಪಂಚಾಯಿತಿಗಳನ್ನು ಈ ಕೆಲಸದಲ್ಲಿ ತೊಡಗಿಸಬೇಕೆಂದು ಹಾಗೂ ಆ ಕೆರೆಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಯನ್ನು ಸಂಸ್ಥೆಗಳಿಗೆ ವಹಿಸಬೇಕು ಎಂಬುದನ್ನು ತಿಳಿಸಿ, ನಗರ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವಲ್ಲಿ ಕೆರೆಗಳ ಪಾತ್ರ ಎಷ್ಟು ಎಂಬುದನ್ನು ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದರು.
- 2001 ರಲ್ಲಿ ಶ್ರೀ ಎ.ಎನ್ ಯಲ್ಲಪ್ಪ ರೆಡ್ಡಿ ಸಮಿತಿಯವರು ನೀರಾವರಿ ಯೋಜನೆಗಳ ಮೂಲಕ ಕೆರೆಯ ಜಾಲದುದ್ದಕ್ಕೂ ಮರಗಳನ್ನು ಬೆಳೆಸಬೇಕೆಂದು ಸಲಹೆ ನೀಡಿದ್ದಾರೆ ಹಾಗೂ ಕೆರೆಗಳಲ್ಲಿ ತುಂಬುವ ಹೂಳನ್ನು ಆಗಿಂದಾಗ್ಗೆ ತೆಗೆಸಬೇಕು ಹೂಳು ಶೇಕರಣೆಯಾಗುವುದನ್ನು ಕಡಿಮೆಗೊಳಿಸಬೇಕೆಂದು ತಿಳಿಸಿದ್ದಾರೆ. ಇದರಿಂದ ಪ್ರಾಣಿ,ಪಕ್ಷಿಗಳ ಸಂರಕ್ಷಣೆ, ಮೀನುಗಾರಿಕೆ, ಅಂತರ್ಜಲದ ಮಟ್ಟ ಹೆಚ್ಚಾಗುವುದರ ಜೊತೆಗೆ ಹವಾಮಾನದದಲ್ಲಿ ಸಮತೋಲನ ಕಾಯ್ದುಕೊಳ್ಳಬಹುದು ಎಂದು ವರದಿ ಮಾಡಿದ್ದಾರೆ.

ಹೀಗೆ ಕೆರೆಗಳ ಅಭಿವೃದ್ಧಿಗೆ ಅನೇಕ ಯೋಜನೆಗಳು ರೂಪುಗೊಂಡಿದ್ದರೂ ಪೂರ್ಣವಾಗಿ ಯಶಸ್ವಿಯಾಗದೆ ಮೂಲೆ ಗುಂಪಾಗಿವೆ. ಕಾರಣ ಯೋಜನೆಗಳು ಕೇವಲ ವರದಿಯಲ್ಲಿ ಮಾತ್ರ ಉಳಿದುಕೊಂಡಿದ್ದು, ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿರುವುದು. ಜನರಲ್ಲಿ ಮುಂದಿನ ಭವಿಷ್ಯದ ಬಗೆಗೆ ಕಾಳಜಿಯಿಲ್ಲದಿರುವುದು, ಭೂಮಿಯ ಮೇಲಿನ ವ್ಯಾಮೋಹ, ದುರಾಸೆ, ಕೆರೆಗಳ ಒತ್ತುವರಿ, ಸರ್ಕಾರದ ನಿರ್ಲಕ್ಷ್ಯ, ನಗರ ಪ್ರದೇಶದಿಂದ ಘನತ್ಯಾಜ್ಯ ವಸ್ತುಗಳನ್ನು ರಾಶಿ ಹಾಕಲು ಕೆರೆಯಂಗಳವನ್ನು ಬಳಸಿಕೊಳ್ಳುತ್ತಿರುವುದು, ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರೀಕರಣ, ಅರಣ್ಯಗಳ ನಾಶದಿಂದಾಗಿ ವಾತಾವರಣದಲ್ಲಿ ಏರುಪೇರು, ಬರಗಾಲದಿಂದ ತತ್ತರಿಸಿದ ಜನ ನಗರ ಪ್ರದೇಶದ ಕಡೆ ಮುಖ ಮಾಡಿರುವುದು ಹೀಗೆ ಹಲವಾರು ಕಾರಣಗಳನ್ನು ನೀಡಬಹುದು. ಇನ್ನು ಪ್ರಸ್ತುತದಲ್ಲಿ ಕೆರೆಗಳ ಸ್ಥಿತಿಯನ್ನು ನೋಡುವುದಾದರೆ,,

**ಕೆರೆಗಳ ಸ್ಥಿತಿ ಇಂದು ಮತ್ತು ಅವುಗಳ ಅಭಿವೃದ್ಧಿಯ ಮಾರ್ಗೋಪಾಯಗಳು:-**

ಕೆರೆಗಳು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿ ಕಂಡು ಬಂದಿದ್ದು, ಗ್ರಾಮೀಣ ಪ್ರದೇಶಗಳ ಜನರ ಜೀವನಾಡಿಯಾಗಿರುವುದು ಸತ್ಯದ ಸಂಗತಿಯಾಗಿ ಪವಿತ್ರ ಜಲ ಎನಿಸಿ ವ್ಯವಸಾಯ ಹಾಗೂ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದು ಇಂದಿಗೂ ಕಾಣಬಹುದು. ಇಲ್ಲಿನ ಜನರ ದುಡಿಮೆಗೆ ಕೆರೆಯು

ಪೂರಕವಾದ ವಾತಾವರಣವನ್ನು ನೀಡುತ್ತಾ ಬಂದಿರುವುದರಿಂದಲೇ ನಗರ ಪ್ರದೇಶಗಳಲ್ಲಿನ ಜನರಿಗೆ ಕನಿಷ್ಟ ಮಟ್ಟದಲ್ಲಾದರೂ ಆಹಾರ ಮತ್ತು ನೀರನ್ನು ಒದಗಿಸಲು ಸಾಧ್ಯವಾಗುತ್ತದೆ. ಬರಗಾಲ ಪೀಡಿತ ಪ್ರದೇಶಗಳನ್ನು ಹೊರತು ಪಡಿಸಿದರೇ, ಮಿಕ್ಕೆಲ್ಲಾ ಪ್ರದೇಶಗಳಲ್ಲಿನ ಹವಾಮಾನಕ್ಕೇ ತಕ್ಕಂತೆ ಕೆರೆಗಳು ಬದಲಾವಣೆ ಹೊಂದುತ್ತಾ ನೀರಿನ ಸೆಲೆಯು ಇಂಗಿ ಹೋಗದಂತೆ ಗ್ರಾಮೀಣ ಪ್ರದೇಶದ ಜನರು ಕೆರೆಗಳ ರಕ್ಷಣೆ ಮಾಡುತ್ತಿರುವುದು ಮುಂದಿನ ಭವಿಷ್ಯದ ಅರಿವನ್ನು ತಿಳಿದಿರುವಂತೆ ಗೋಚರವಾಗುತ್ತದೆ. ಆದರೂ ಸಹ ಕೆರೆಗಳ ಈಗಿನ ಸ್ಥಿತಿಯನ್ನು ವರ್ಣಿಸಲು ಅಸಾಧ್ಯವಾಗದಂತಾಗಿದೆ.

- ಕೆರೆಗಳು ಒತ್ತುವರಿಯ ಹೊಡೆತಕ್ಕೆ ನಲುಗಿ ಹೋಗುತ್ತಿವೆ ಹೀಗೆ ಮುಂದುವರೆದರೆ ಮುಂದೊಂದು ದಿನ ಕೆರೆಗಳನ್ನು ನೋಡಲು ಚಿತ್ರಗಳ ಮೋರೆ ಹೋಗಬೇಕಾಗುತ್ತದೆ, ಅಲ್ಲದೆ ಕುಡಿಯುವ ನೀರಿಗಾಗಿ ಈಗಾಗಲೇ ನಡೆಯುತ್ತಿರುವ ಕಾವೇರಿ, ಮಹದಾಯಿ ನೀರಿನ ಹಂಚಿಕೆಯಂತೆ ನಮ್ಮಲ್ಲೂ ಬೇರೆ ರಾಜ್ಯಗಳನ್ನೆ ಪೂರ್ಣವಾಗಿ ಅಳವಡಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ.
- ಪಟ್ಟಣಗಳು ಬೆಳೆಯುತ್ತಿರುವುದರಿಂದ ಅದರ ಸುತ್ತ ಮುತ್ತಲಿನ ಕೆರೆ ಪ್ರದೇಶಗಳು ಕಣ್ಮರೆಯಾಗುತ್ತಿವೆ.
- ಕೆರೆಗಳು ನಿರ್ಜನ ಪ್ರದೇಶವಾಗಿ ರೂಪುಗೊಂಡು ಅಲ್ಲಿ ಹೊಸ ನಿವೇಶನಗಳಾಗಿ ತಲೆ ಎತ್ತುತ್ತಿವೆ.
- ಹಿಂದೆ ಕೆರೆಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು ಆದರೆ, ಇಂದು ಆ ನಂಬಿಕೆ ಕಡಿಮೆಯಾಗಿ ಕೆರೆಗಳ ಬಗೆಗೆ ನಿರ್ಲಕ್ಷ್ಯ ಉಂಟಾಗಿದೆ.
- ನಗರ ಪ್ರದೇಶಗಳಲ್ಲಿನ ಕೆಲವೊಂದು ಕೆರೆಗಳ ಹೆಸರು ದಾಖಲೆಗಳಲ್ಲಿ ದಾಖಲಾಗಿದ್ದರೆ, ಮತ್ತೆ ಕೆಲವು ಕೆರೆಗಳು ಉದ್ಯಾನವನಗಳಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು. ಉದಾಹರಣೆಗೆ:- ಲಾಲ್ ಬಾಗ್ ಕೆರೆ, ಸ್ಯಾಂಕಿ ಕೆರೆ, ಹಲಸೂರು ಕೆರೆ, ಹಾಗೂ ತುಮಕೂರಿನ ಅಮಾನಿಕೆರೆ, ಮೈಸೂರಿನ ಕಾರಂಜಿಕೆರೆ ಹಾಗೂ ಕುಕ್ಕರಹಳ್ಳಿ ಕೆರೆ.
- ಇನ್ನು ಗ್ರಾಮಾಂತರ ಪ್ರದೇಶದ ಕೆರೆಗಳ ಸ್ಥಿತಿ ಜಲಾನಯನ ಪ್ರದೇಶ ಅಥವಾ ಕೆರೆಗೆ ನೀರು ಹರಿದು ಬರುವ ಪ್ರದೇಶವನ್ನು ಸರ್ಕಾರದವರು ತಮಗೆ ಸೇರಿದ್ದು ಎನ್ನುವಂತೆ ತಪ್ಪು ಕಲ್ಪನೆಯಿಂದ ಭೂ ರಹಿತ ಬಡವರಿಗೆ ದಾನ ಮಾಡುತ್ತಿದ್ದಾರೆ ಹಾಗೂ ಹಳ್ಳಿಗಳಲ್ಲಿ ಧನಿಕರು ಈ ಜಲಾನಯನ ಪ್ರದೇಶವನ್ನು ಆಕ್ರಮಿಸಿಕೊಳ್ಳುವಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದರಿಂದ ಕೆರೆಗಳು ಮೂಖ ರೋಧನೆ ಅನುಭವಿಸುತ್ತಿವೆ.
- “ಕೆರೆಗಳನ್ನು ಉಳಿಸಿದರಷ್ಟೆ ನೀರು” ಎಂಬ ವಿಷಯವನ್ನು ಮನದಟ್ಟು ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ ಹಗಾಗಿ ಕೆರೆಗಳನ್ನು ಸರಿಯಾದ ನಿರ್ವಹಣೆ ಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವೂ ಸಹ ಆಗಿದೆ ನೆಮ್ಮದಿಯ ಸಂಗತಿ ಎಂದರೆ ಈಗೀಗ ನೀರಿನ ಮಹತ್ವ ಅರಿತು ಇರುವ ಕೆರೆಗಳನ್ನು ಉಳಿಸಿಕೊಳ್ಳಲು ಅನೇಕ ಸಂಘ ಸಂಸ್ಥೆಗಳು ಮುಂದಾಗುತ್ತಿರುವುದು ಸಮಾಧಾನದ ಸಂಗತಿ. ಉದಾಹರಣೆಗೆ; ಧರ್ಮಸ್ಥಳದ ಸಂಸ್ಥೆ, ಯಶೋಮಾರ್ಗ ಸಂಸ್ಥೆ ಯನ್ನು ನೆನೆಯಬಹುದು.
- ಕೆರೆಗಳು ಕಾಯಕಲ್ಪಕ್ಕಾಗಿ ಎದುರು ನೋಡುತ್ತಿದ್ದರೆ ಸರ್ಕಾರ ಡಿನೋಟಿಫೈ ಮಾಡಲು ಹೊರಟ್ಟಿದ್ದು ನಿಜಕ್ಕೂ ವಿಪರ್ಯಾಸದ ಸಂಗತಿ, ಇದಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964 ರ ಕಾಲಂ 68 ಕ್ಕೆ ತಿದ್ದುಪಡಿ ತರುವ ತಯಾರಿಯನ್ನು ನಡೆಸಿತ್ತು ಇದು ಮೂರ್ಖತನದ ಪರಮಾವಧಿ ಎನಿಸಿತ್ತು. ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು ಡಿನೋಟಿಫೈ ಯನ್ನು ಕೈ ಬಿಟ್ಟಿದ್ದು ನೆಮ್ಮದಿಯ ಸಂಗತಿ.
- ಕೃಷಿ ವಿಜ್ಞಾನಿ ಡಾ. ಟಿ.ಎಸ್ ಚನ್ನೇಶ್ ರವರು ಕೆರೆ ಕಟ್ಟೆಗಳ ಮೌಲ್ಯಗಳನ್ನು ಅರಿಯಬೇಕು ಇಲ್ಲದಿದ್ದರೆ ಮುಂದೊಂದು ದಿನ ನೀರಿಗಾಗಿ ಯುದ್ದ ನಡೆಯುತ್ತದೆ ಎಂದು ಮುನ್ನೆಚ್ಚರಿಕೆ ನೀಡಿದ್ದಾರೆ ಅಲ್ಲದೆ ತಮಿಳುನಾಡು, ಆಂಧ್ರ ಪ್ರದೇಶ, ಕೇರಳ ಹಾಗೂ ಕರ್ನಾಟಕದಲ್ಲಿ ಪ್ರಸ್ತುತ ಇ.27 ಲಕ್ಷ ಕೆರೆಗಳು ಜೀವಂತವಾಗಿದ್ದು ಇವುಗಳನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದಿದ್ದಾರೆ. ಹಾಗೂ ನಮ್ಮ

ರಾಜ್ಯದಲ್ಲಿ 1991 ರವರೆಗೂ ಕೆರೆಗಳ ಸ್ಥಿತಿ ಚೆನ್ನಾಗಿಯೇ ಇತ್ತು ಆದರೆ, ಕಳೆದ 20 ವರ್ಷಗಳಲ್ಲಿ ರಾಜ್ಯದಲ್ಲಿನ 10 ಸಾವಿರ ಕೆರೆಗಳು ಕಣ್ಮರೆಯಾಗಿವೆ ಎಂಬ ಆತಂಕಕಾರಿ ವಿಚಾರವನ್ನು ತಿಳಿಸಿದ್ದಾರೆ.

- "ಭಿಕ್ಷಾಟನೆ ಮಾಡಿ ಕೆರೆಗಳ ಅಭಿವೃದ್ಧಿಗೆ" ಎಂಬ ಘೋಷ ವಾಕ್ಯದೊಂದಿಗೆ ಕೊರಟಗೆರೆ ತಾಲ್ಲೂಕಿನ ಸಿದ್ದರ ಬೆಟ್ಟ ಮಠವು ಧರ್ಮಸ್ಥಳ ಸಂಸ್ಥೆಯ ಯೋಜನೆಯ ಸಹಕಾರದೊಂದಿಗೆ ಮುಂದಾಗಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಧರ್ಮಸ್ಥಳ ಸಂಸ್ಥೆಯು "ನಮ್ಮೂರು ನಮ್ಮ ಕೆರೆ" ಎಂಬ ಯೋಜನೆಯ ಮೂಲಕ ಜಿಲ್ಲೆಯಲ್ಲಿ 94.25 ಲಕ್ಷ ವೆಚ್ಚದಲ್ಲಿ 10 ಕೆರೆಗಳನ್ನು ಅಭಿವೃದ್ಧಿ ಪಡಿಸಿದೆ.
- ಅವನತಿಯ ಅಂಚಿನಲ್ಲಿರುವ ಕೆರೆಗಳ ಸಂರಕ್ಷಣೆ ಯಾರ ಹೊಣೆ? ಎಂಬುದು ಪರಿಸರವಾದಿಗಳ ಪ್ರಶ್ನೆಯಾಗಿದ್ದು ಇದಕ್ಕೆ ನಿಖರವಾದ ಉತ್ತರ ನಾವುಗಳೇ ಎಂಬುದಾಗಿ ಹೇಳಿದ್ದಾರೆ. ಕಾರಣ ಪ್ರತಿಯೊಂದು ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಪರವಾನಗಿ ಪಡೆಯಲು ಕಾಯುತ್ತಿದ್ದರೆ ರೈತರು ತಮ್ಮ ಬದುಕಿನ ಅಂತ್ಯವನ್ನು ತಾವೇ ಕಂಡುಕೊಳ್ಳಬೇಕಾದ ಪರಿಸ್ಥಿತಿ ಈಗಾಗಲೇ ಮುಂದುವರೆದಿದ್ದು ಅದು ಇನ್ನೂ ತನ್ನ ಪ್ರಮಾಣವನ್ನು ಗರಿಷ್ಟಗೊಳಿಸಿಕೊಳ್ಳುವತ್ತಾ ಮುಖ ಮಾಡುತ್ತಾರೆ ಹಾಗಾಗಿ ಮುಂದಾದರೂ ಕೆರೆಗಳ ಸಂರಕ್ಷಣೆಯ ಹೊಣೆಯನ್ನು ನಾವುಗಳೇ ಕೈ ಜೋಡಿಸುವ ಜವಾಬ್ದಾರಿಯನ್ನು ಹೊರಲು ಮುಂದಾಗಬೇಕಿದೆ ಎಂದು ಹೇಳಿದ್ದಾರೆ.
- ಕರ್ನಾಟಕ ಸರ್ಕಾರ ಜಲಸಂಪನ್ಮೂಲ ಇಲಾಖೆಯೊಂದಿಗೆ ಕೈ ಜೋಡಿಸಿ ಕುಡಿಯುವ ನೀರಿಗಾಗಿ ಕೆರೆ ತುಂಬುವ ಯೋಜನೆಗಳು ಎಂಬ ಕಾರ್ಯ ಕ್ರಮವನ್ನು ಜಾರಿಗೊಳಿಸಿದ್ದು 10 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಯಶಸ್ವಿಗೊಳಿಸಲಾಗಿದೆ. ವಿಜಯಪುರ ಜಿಲ್ಲೆಯ ಮಮದಾಪುರ, ಬೇಗಂ ತಲಾಬ್, ಬೂತನಾಳ್, ಬಬಲೇಶ್ವರ, ಸಾರವಾಡ ಹಾಗೂ ತಿಡಗುಂದಿ ಹೀಗೆ 6 ಕೆರೆಗಳನ್ನು ಆಯ್ಕೆ ಮಾಡಿ ಸುಮಾರು 38.16 ಕೋಟಿ ಮೊತ್ತದ ಹಣವನ್ನು ಬಳಸಿ ಕೆರೆಗಳನ್ನು ತುಂಬಿಸಲಾಗಿದೆ ಇದು ವಿಜಯಪುರದ ಇತಿಹಾಸದಲ್ಲಿ ಸ್ವಾತಂತ್ರ್ಯ ನಂತರದಲ್ಲಿನ ಐತಿಹಾಸಿಕ ಮೈಲಿಗಲ್ಲಾಗಿದೆ.
- ಬಳ್ಳಾರಿ ಜಿಲ್ಲೆಯ 10 ಕೆರೆಗಳನ್ನು ಆಯ್ಕೆ ಮಾಡಿ ಸುಮಾರು 115 ಕೋಟಿ ರೂ. ಗಳ ಮೊತ್ತವನ್ನು ಕಾಮಗಾರಿಗಾಗಿ ಬಿಡುಗಡೆ ಮಾಡಿದೆ.
- ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ 18 ಕೆರೆಗಳು ಮತ್ತು ಚಿಕ್ಕೋಡಿ ತಾಲುಕಿನ 4 ಕೆರೆಗಳು ಸೇರಿದಂತೆ ಒಟ್ಟು 22 ಕೆರೆಗಳಿಗೆ ಈ ಯೋಜನೆಯಲ್ಲಿ 77 ಕೋಟಿ ರೂ ಮೋತ್ತದ ಹಣವನ್ನು ಖರ್ಚುಮಾಡಿದೆ.
- ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ ಬರುವ 2 ಕೆರೆಗಳಿಗೆ ನೀರು ತುಂಬಿಸುವ ಮತ್ತು ಸರಗೂರು ಗ್ರಾಮದ ಬಳಿಯ ಕಾವೇರಿ ನದಿಯಿಂದ ನೀರನ್ನುಯ ಎತ್ತಿ ಗುಂಡಾಲ್ ಜಲಾಶಯದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಯೋಜನೆಗೆ 129 ಕೋಟಿ ರೂಗಳನ್ನು ವಿನಿಯೋಗಿಸಿದೆ.
- ಹೀಗೆ ಮೈಸೂರು, ಮಂಡ್ಯ, ಕೊಡಗು, ತುಮಕೂರು, ಕಲ್ಬುರ್ಗಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಸಾವಿರ ಕೋಟಿ ಮೊತ್ತದ ಹಣವನ್ನು ಸರ್ಕಾರ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಕಿಕೊಂಡಿರುವುದು ಸ್ವಾಗತಾರ್ಹವಾಗಿದ್ದು ಕೆರೆಗಳಿಗೆ ಮರು ಜೀವ ಬಂದಂತಾಗಿದೆ.
- ಅಂದು ಕಟ್ಟಿದ ಕೆರೆಗೆ ನೀರು ಬರಲೆಂದು ಜೀವಂತ ಹೆಣ್ಣನ್ನು ಬಲಿ ನೀಡುತ್ತಿದ್ದರು ಆದರೆ ಇಂದು ಕೆರೆಗಳ ಜೀವವನ್ನೇ ತೆಗೆಯುತ್ತಿದ್ದಾರೆ, ಇದಕ್ಕೆ ವ್ಯತಿರಿಕ್ತ ಎಂಬಂತೆ "ಕುರಿ ಮರಿ ಕೆರೆ ಕಟ್ಟಿದ" ಕೆರೆಯಜ್ಜನ ಮಾನವೀಯ ಪಾಠ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ದಾಸನದೊಡ್ಡಿಯ ಕಾಮೇಗೌಡರು ಕೆರೆ ಕಟ್ಟುವ ಕಾಯಕವನ್ನು ರೂಢಿಸಿಕೊಂಡು ಸುಮಾರು 7 ಕೆರೆಗಳನ್ನು ಕಾಡಿನ ಜೀವಿಗಳಿಗಾಗಿ, ಸಾಕುಪ್ರಾಣಿಗಳಿಗಾಗಿ ಕಟ್ಟಿರುವ ಸಂಗತಿ ಆಶ್ಚರ್ಯಚಕಿತಗೊಳ್ಳುವಂತೆ ಮಾಡಿದೆ ಕಾರಣ, ಕೇವಲ ಸ್ವಾರ್ಥ ಸಾಧನೆಗಾಗಿ ಬದುಕುತ್ತಿರುವ ಇಂದಿನ ಕಾಲದಲ್ಲಿ ಕಾಮೇಗೌಡರು ನಿಸ್ವಾರ್ಥ ಸೇವೆಯಿಂದ ಕೆರೆ ಕಟ್ಟುವ ಕಾಯ ಕಲ್ಪವನ್ನು ಮುಂದುವರೆಸಿರುವುದು ಅಲ್ಲದೆ ಜನರ ಬೆಂಬಲ ದೊರೆತರೆ ಕೆರೆಗಳ ಸಂಖ್ಯೆಯನ್ನು 10 ಕ್ಕೆ ಏರಿಸುವ ಗುರಿಯನ್ನು ಹೊಂದಿರುವುದು. ಇದರಂತೆ ಮತ್ತೊಂದು

ನಿದರ್ಶನವೆಂದರೆ ಕಲ್ಬುರ್ಗಿಯ ಚಂದಮ್ಮ ಎಂಬಾಕೆಯೂ ಸಹ ಊರಿನವರ ಬೆಂಬಲ ಪಡೆದು ಕಲ್ಬುರ್ಗಿಯ ಕೆರೆಗೆ ಮರು ಜೀವ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಕೆರೆಗಳ ಉಳಿವು ನಮ್ಮೆಲ್ಲರ ಹೊಣೆಯಾಗಿದ್ದು ಮುಂದಿನ ಭವಿಷ್ಯದ ಚಿಂತನೆ ಮಾಡುತ್ತಾ ಕೆರೆಗಳ ಕಾಯ ಕಲ್ಪದಲ್ಲಿ ಎಲ್ಲರೂ ಭಾಗಿಯಾಗುವಂತೆ ಮಾಡಿ ಕೆರೆಗಳ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಸಾವಿರಾರು ವರ್ಷಗಳ ಇತಿಹಾಸವುಳ್ಳ ಹಲವಾರು ಕೆರೆಗಳಿಂದಾಗಿ ಇದುವರೆವಿಗೂ ಜನ-ಜಾನುವಾರುಗಳು, ಪಶು-ಪಕ್ಷಿಗಳು, ಜಲಚರಗಳಿಗೆ ಆಸರೆಯಾಗಿದ್ದ, ಮುಂದೆಯೂ ಕ್ರಿಯಾಶೀಲವಾಗಿರಬಲ್ಲ ಕೆರೆಗಳ ಬಗೆಗೆ ಗೌರವ ಭಾವನೆ ಹೊಂದಿ, ಜನರಿಗೆ ಕೆಲಸ ಕೊಟ್ಟು ಜೊತೆಗೆ ಆಧುನಿಕ ಯಂತ್ರೋಪಕರಣಗಳಿಂದ ಕೆರೆಗಳ ಹೂಳು ತೆಗಿಸಿ ಕೆರೆಗಳ ಸಹಜ ಸೌಂದರ್ಯವನ್ನು ಮರುಕಳಿಸುವಂತೆ ಮಾಡಬೇಕಾಗಿದೆ. ಹಾಗೂ ಕೆರೆಗಳನ್ನು ಕಣ್ಮರೆಯಾಗಿಸುವುದರಿಂದ ಉಂಟಾಗಬಹುದಾದ ಬರಗಾಲ, ಜಲಕ್ಷಾಮ, ಹವಾಮಾನ ವೈಪರಿತ್ಯ, ಶಾಶ್ವತ ಬೆಳೆಗಳ ನಾಶ, ಅಂತರ್ಜಲದ ಬಗ್ಗೆ ಯೋಚಿಸಬೇಕಾಗುತ್ತದೆ. ನಮ್ಮ ನಾಡಿನ ಸಂಸ್ಕøತಿ ಹಾಗೂ ಪರಂಪರೆಯ ಧ್ಯೋತಕವಾಗಿ ನಮ್ಮ ಹಿರಿಯರು ನಿರ್ಮಿಸಿದ ಕೆರೆಗಳ ಮೇಲೆ ಯಾವುದೇ ಸರ್ಕಾರದ ಕೆಟ್ಟ ದೃಷ್ಟಿ ಬೀಳದೆ ಕೆರೆಗಳನ್ನು ಸದಾ ಕಾಲ ಸಂರಕ್ಷಿಸಲು ಪಣ ತೊಡಬೇಕಾದುದು ಪ್ರಸ್ತುತ ದಿನಗಳಲ್ಲಿ ಅನಿವಾರ್ಯವಾಗಿದೆ. ಜೀವ ಜಲವಾಗಿದ್ದ ಕೆರೆಗಳು ಅಳಿವಿನ ಅಂಚಿನಲ್ಲಿರುವುದನ್ನು ಗಮನಿಸಿ ಅವುಗಳನ್ನು ಸಂರಕ್ಷಿಸಲು ಮುಂದಾಗದಿದ್ದರೆ ನಮ್ಮ ಮುಂದಿನ ಪೀಳಿಗೆಗೆ ಕೆರೆಗಳನ್ನು ಚಿತ್ರಪಟಗಳಲ್ಲಿ ತೋರಿಸುವಂತಹ ಕಾಲ ಬರಬಹುದು ಅದು ವಾಸ್ತವವಾಗುವುದು ಬೇಡ ಎಂದು ಹೇಳುತ್ತಾ... "ಜೀವ ಜಲ ಬತ್ತದಿರಲಿ, ಕೆರೆಗಳ ವೈಭವ ಮರುಕಳಿಸಲಿ" .. ಎಂಬ ಆಶಯದೊಂದಿಗೆ ಕೆರೆಗಳ ಅಭಿವೃದ್ಧಿಗೆ ಕೈ ಜೋಡಿಸೋಣ ಇಲ್ಲವೆ, ವಿನಾಶದ ಕರೆಗೆ ಸಿದ್ದರಾಗೋಣ ಎಂಬ ಎಚ್ಚರಿಕೆಯ ಕಾಲ ಗಣನೆಯನ್ನು ಎದುರು ನೋಡುತ್ತಾ ಕೆರೆಗಳ ನೈಜ ಚಿತ್ರಣವನ್ನು ಮೆಲುಕು ಹಾಕಲು ಹಾಗೂ ಒಂದು ಕ್ಷಣ ಕೆರೆಗಳ ಬಗೆಗೆ ನಮ್ಮ ಋಣಾತ್ಮಕ ಯೋಚನಾ ಲಹರಿಯನ್ನು ಬದಲಾಯಿಸಲು ಸಾಧ್ಯವೇ? ಎಂದು ಕೇಳುವುದರೊಂದಿಗೆ ಕೆರೆಗಳ ಸ್ಥಿತಿಯನ್ನು ವಿವರಿಸುವಂತಹ ಒಂದು ಸಣ್ಣ ಪ್ರಯತ್ನ ಇದಾಗಿದೆ.

**ಆಧಾರ ಗ್ರಂಥಗಳು**

[1] ಕೆ.ವಿ.ಪುಟ್ಟಪ್ಪ - ನೀರಾವರಿ

[2] ಕೆ.ವೈ. ನಾರಾಯಣಸ್ವಾಮಿ - ನೀರದೀವಿಗೆ

[3] ಸಿ.ಎಸ್. ವಾಸುದೇವನ್ - ಹಂಪಿ ಪರಿಸರದ ಕೆರೆಗಳು

[4] ಜೀ.ಶಂ.ಪರಮಶಿವಯ್ಯ - ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು

[5] ನೀಲತ್ತಳ್ಳಿ ಕಸ್ತೂರಿ - ಕರ್ನಾಟಕದಲ್ಲಿ ಕೆರೆ ನೀರಾವರಿ

[6] ರಾಜಾರಾಮ ಹೆಗಡೆ - ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ

[7] ಅನಂತರಾಮು ಟಿ. ಆರ್ – ಕೆರೆಗಳು ಬತ್ತಿದಾಗ ಜಲ ಸಮಸ್ಯೆ

[8] ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವರದಿಗಳು.

[9] ದಿನಪತ್ರಿಕೆಗಳು :- ಕನ್ನಡ ಪ್ರಭ, ಪ್ರಜಾವಾಣಿ, ವಿಜಯವಾಣಿ, ಪ್ರಜಾ ಪ್ರಗತಿ.

Tumbe Group of International Journal
A Multidisciplinary Journal
ISSN: 2581-8511
Volume- 2
Issue-2
May-August: 2019

# ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘ ಒಂದು ಐತಿಹಾಸಿಕ ವಿಶ್ಲೇಷಣೆ

**ಮಲ್ಲೇಶಪ್ಪ ಟಿ ಎಸ್**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು-572102
malleshappats1969@gmail.com

## ಪ್ರಸ್ತಾವನೆ

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಲಿಂಗಾಯತ ಸಮುದಾಯವು ತನ್ನದೆ ವಿಶಿಷ್ಟ ಪರಂಪರೆಯನ್ನು ತನ್ನದಾಗಿಸಿಕೊಂಡಿದೆ. ಸಂಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 12% ರಷ್ಟಿದ್ದರು ಆದರೆ ಸಂಸ್ಥಾನದ ಆಡಳಿತ, ಶಿಕ್ಷಣ ಕ್ಷೇತ್ರಗಳಲ್ಲಿ ಹಿನ್ನಡೆ ಸಾಧಿಸಿದ್ದರು. ಅಲ್ಪಸಂಖ್ಯಾತ ವರ್ಣ ಶ್ರೇಷ್ಟರಾಗಿ ಗುರುತಿಸಿಕೊಂಡಿದ್ದ ಬ್ರಾಹ್ಮಣ ವರ್ಗದವರಿಗೆ ಸರಿಸಾಟಿಯಾಗಿ ಸ್ಪರ್ಧಿಸುವ ಸಾಮರ್ಥ್ಯ ಹೊಂದಿರಲಿಲ್ಲ. ಕಾರಣ ಲಿಂಗಾಯತರಲ್ಲಿದ್ದ ಅನೈಕ್ಯತೆ, ಗ್ರಾಮೀಣ ಕುಲಕಸಬು, ಅನಕ್ಷರತೆ, ಆರ್ಥಿಕ ಅಸ್ಥಿರತೆಗಳಿಂದ ಸೊರಗಿದ್ದರು. ಲಿಂಗಾಯತ ಕೇಲವೆ ಪ್ರಜ್ಞಾವಂತ ಸೇವಾ ದುರೀಣರು ಮತ್ತು ಹರಗುರು ಚರಮೂರ್ತಿಗಳ ಕೃಪೆಯಿಂದ ನೊಂದ ಜೀವಿಗಳಿಗೆ ಚೈತನ್ಯ ಕಲ್ಪಿಸುವ ಪ್ರಯತ್ನ ನಡೆಸಿದರು. ಪರಿಣಾಮವಾಗಿ ತಮ್ಮಲ್ಲಿದ್ದ ಒಳಪಂಗಡಗಳನ್ನು ಬದಿಗಿಟ್ಟು ಸಂಘಟಿತರಾದರು. ಪಾಶ್ಚಿಮಾತ್ಯರ ಶಿಕ್ಷಣ, ನೀತಿ ನಿಯಮಗಳ ಪ್ರಭಾವದಿಂದ ಜಾಗೃತರಾದರು. ತಮ್ಮ ಸ್ಥಿತಿಗತಿಯನ್ನ ತಿಳಿದುಕೊಂಡರು. ಪ್ರಬಲ ವರ್ಗದ ಮಾರ್ಗದಲ್ಲಿ ತಮ್ಮನ್ನ ತೊಡಗಿಸಿಕೊಳ್ಳಲು ಚಿಂತಿಸಿದರು. ಲಿಂಗಾಯತ ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕಾದಲ್ಲಿ ಸಂಘಟಿತ ಪ್ರಯತ್ನವೊಂದೆ ಮುಖ್ಯ ಹೆದ್ದಾರಿ ಎಂಬುದನ್ನ ಅರ್ಥೈಸಿ ಕೊಂಡರು. ಭಾರತದ ವಿವಿಧ ಸ್ಥಳಗಳಲ್ಲಿ ನಡೆದ ಸಾಂಘಿಕ ಹೋರಾಟದ ಸ್ಪೂರ್ತಿ ಮತ್ತು ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುವ ಪ್ರಯತ್ನ ಮಾಡಿದರು. ತಮ್ಮ ಉದ್ದೇಶ ಸಾಧನೆಗಾಗಿ 1905 ಜೂನ್ 5 ರಂದು ಜಾರಿಗೆ ಬಂದ ಮೈಸೂರು ಸಹಕಾರಿ ಸಂಘ ಸಂಸ್ಥೆಗಳ ಕಾಯಿದೆ ಪ್ರಕಾರ 14-07-1905 ರಂದು ಸಂಸ್ಥಾನದಿ ದಿವಾನ್ ಪಿ.ಎನ್. ಕೃಷ್ಣಮೂರ್ತಿ ಮತ್ತು ರೆಸಿಡೆಂಟ್ ವಿಲಿಯಂ ಸನ್ ರವರ ಸಮಕ್ಷಣದಲ್ಲಿ ಸಂಘದ ಅಸ್ಥಿತ್ವ ಕಂಡುಕೊಂಡರು. ಮೈಸೂರು ಸಂಸ್ಥಾನದ ಲಿಂಗಾಯತ ಗ್ರಾಮೀಣ ಯುವ ಸಮುದಾಯದವರ ಸರ್ವತೋಮುಖ ಪ್ರಗತಿಗಾಗಿ ಕಾರ್ಯೋನ್ಮುಖರಾದರು. ಸಮಾಜದ ಸ್ಥಿತಿವಂತರು ಮುರುಘಾ ಶರಣರು, ಆಡಳಿತ ರೂಢ ಮಹಾರಾಜರು, ದಿವಾನರು, ಹಾಗೂ ನೌಕರ ಶಾಹಿಗಳಿಂದ ಸಹಾಯ ಸ್ವೀಕರಿಸಿದರು. ಸಮಾಜದವರಿಂದ ಪಡೆದ ಹಣದಲ್ಲಿ ಅರ್ಹ, ಪ್ರತಿಭಾವಂತ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಮುಂದೆ ಬಂದರು. ಸಂಸ್ಥಾನದ ದಿವಾನ ಹುದ್ದೆಗೆ ಸಮೀಪ ವ್ಯಕ್ತಿಯಾಗಿದ್ದ ಕೆ.ಪಿ. ಪುಟ್ಟಣ್ಣ ಚೆಟ್ಟಿರವರು ನಿಧಿ ಸಂಸ್ಥೆಯ ಅಧ್ಯಕ್ಷರಾಗಿ ಪ್ರಗತಿಯ ಹಾದಿ ಸುಗಮವಾಗಿಸಿದರು. ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯ ಮಹಾನಾಯಕರಲ್ಲಿ ಒಬ್ಬರಾದ ಎಂ.ಬಸವಯ್ಯನವರು ಸಂಘಕ್ಕೊಂದು ನಿವೇಶನವನ್ನು ಸರ್ಕಾರದಿಂದ ಮಂಜೂರು ಮಾಡಿಸಿದರು. ಸಂಘದ ಆಡಳಿತ ಸಿಬ್ಬಂದಿಯವರ ಪ್ರಾಮಾಣಿಕ ಸೇವೆಯಿಂದ ಬಡ ವಿದ್ಯಾರ್ಥಿಗಳಿಗೆ 5 ವಿದ್ಯಾರ್ಥಿನಿಲಯಗಳನ್ನ ಪ್ರಾರಂಬಿಸಿ ಪ್ರತಿವರ್ಷ 2000 ವಿದ್ಯಾರ್ಥಿಗಳಿಗೆ ಊಟ, ವಸತಿ ಸಹಿತ ಮಾನವೀಯ ನೆಲೆಯನ್ನ ಕಲ್ಪಿಸುತ್ತಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 30 ಲಕ್ಷ ಹಣವನ್ನ ಪ್ರತಿಭಾ ಪುರಸ್ಕಾರವಾಗಿ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸುತ್ತಿದೆ. ಸಂಘದ ವತಿಯಿಂದ ಸಮುದಾಯ ಭವನ, ವೃದ್ಧಾಶ್ರಮ, ಅನಾಥಾಲಯ, ಶಿಕ್ಷಣಸಂಸ್ಥೆಗಳು ವೈದ್ಯಕೀಯ ಪ್ರಯೋಗಾಲಯ ಹಾಗೂ ದೇವಾಲಯಗಳನ್ನು ನಿರ್ಮಿಸಿ ಆಶಾದಾಯಕವಾಗಿ ಪ್ರಗತಿ ಪಥದತ್ತ ಮುನ್ನಡೆಯುತ್ತಿದೆ.

ಸಂಘದ ಪ್ರತಿನಿಧಿಗಳಾಗಿ ಸರ್ಕಾರದ ಸಭಾ-ಸಮಿತಿ ನಿಗಮ-ಮಂಡಲಗಳಲ್ಲಿ ಸೇವಾ ಅವಕಾಶ ಪಡೆದು ಜವಾಬ್ದಾರಿಯುತವಾಗಿ ತಮ್ಮ ಸೇವೆಯಲ್ಲಿ ನ್ಯಾಯ, ನಿಷ್ಠೆಯಿಂದ ನಿಭಾಯಿಸಿದ್ದಾರೆ, ಸರ್ಕಾರದಿಂದ ಸಮುದಾಯದವರಿಗೆ ಹಲವು ಸೌಲಭ್ಯಗಳನ್ನು ಭರಿಸುವಲ್ಲಿ ಆಡಳಿತ ಮಂಡಲಿ ಮತ್ತು ಪ್ರತಿನಿಧಿಗಳ ಪರಿಶ್ರಮದಿಂದ ರಾಜ್ಯದಲ್ಲಿ ಬಹುದೊಡ್ಡ ಸಂಸ್ಥೆಯಾಗಿ ಬೆಳೆಯಲು ಸಾಧ್ಯವಾಗಿದೆ.

**ಕೀವರ್ಡ್ಸ್ :** ಮೈಸೂರು ಸಂಸ್ಥಾನ, ಜಾತಿ ಸಂಘ, ಪ್ರಜಾವರ್ಗ, ಶೈಕ್ಷಣಿಕ ಹಿತಾಸಕ್ತಿ, ಪಾಶ್ಚಿಮಾತ್ಯ, ವೀರೈವ ಲಿಂಗಾಯತ

**ಪಿಠೀಕೆ**

ಮನುಕುಲದ ವಿಕಾಸನದ ಐತಿಹ್ಯ ಅವಲೋಕನದಿಂದ ಕಂಡುಕೊಂಡ ಮಹ್ವತಪೂರ್ಣ ಅಂಶಗಳೆಂದರೆ ಭಾರತವು ಪ್ರಸಿದ್ಧ ಸಂಸ್ಕøತಿಯ ನೆಲೆಯಾಗಿದೆ. ಶಿಲಾಯುಗದ ಮಾನವನ ಜೀವನ ಶೈಲಿಗಳಿಂದ ಜಾಗತಿಕ ನಾಗರೀಕತೆಗಳ ಕಾಲಮಾನದಲ್ಲಿ ತನ್ನದೆ ವೈಶಿಷ್ಟ ಲಕ್ಷಣಗಳನ್ನು ಹೊಂದಿದೆ. ಪಾಶ್ಚಿಮಾತ್ಯ ಮತ್ತು ಪೌರತ್ಯ ರಾಷ್ಟ್ರಗಳಲ್ಲಿ ಶ್ರೇಷ್ಟ ಸಂಸ್ಕøತಿಯ ಲಕ್ಷಣಗಳನ್ನು ಭಾರತ ತನ್ನ ಮಾತೃ ಭಾಗದಲ್ಲಿ ಸಂರಕ್ಷಿಸಿಕೊಂಡಿದೆ.

ಮಾರ್ಕ್‌ಟ್ವೈನ್ ತಿಳಿಸುವಂತೆ ಭಾರತ ಮಾನವ ಜನಾಂಗದ ತೂಗು ತೊಟ್ಟಿಲು ನಡೆ ನುಡಿಯ ಜನ್ಮಭೂಮಿ, ಸಿರಿವಂತ ಸಂಸ್ಕøತಿಯ ಮಾತೃ ಪ್ರತಿಹ್ಯದ ಅಜ್ಜಿ, ಸಂಪ್ರದಾಯದ ಮುತ್ತಜ್ಜಿ ಎಂದರು.

ಮಾನವನ ವ್ಯಕ್ತಿತ್ವ ವಿಕಸನದಲ್ಲಿ ಧರ್ಮ ಮತ್ತು ರಾಜಕಾರಣ ತಮ್ಮದೆ ಪ್ರಭಾವ ಬೀರಿವೆ. ರಾಜಕಾರಣ ಮನುಷ್ಯನ ಬಾಹ್ಯ ವಿಕಸನಕ್ಕೆ ಆಧಾರವಾಗಿದ್ದೆ, ಧರ್ಮ ಎಂಬುದು ಅವನ ಆಂತರಿಕ ಆತ್ಮವಿಕಸನಕ್ಕೆ ಮಾತೃವಿನ ಮಡಿಲಾಗಿ ಮಮತೆ ತೊರಿದೆ ಮಾನವನ ಸರ್ವತೋಮುಖ ಪ್ರಗತಿಯಲ್ಲಿ ತಮ್ಮದೆ ಜವಾಬ್ದಾರಿಗಳನ್ನ ಮನವರಿಕೆ ಮಾಡಿಕೊಟ್ಟಿವೆ. ಭಾರತಾಂಬೆಯ ಸಿರಿವಂತ ಸಂಸ್ಕøತಿಯನ್ನು ಗರ್ಭೀಕರಿಸಿ ಕೂಡಿರುವುದು ಧರ್ಮ. ಧರ್ಮ ಎಂಬುದು ಕೇವಲ ಜಾತಿಯ ಸೂಚಕ ಎಂದು ಅರ್ಥೈಸಲಾಗುವುದಿಲ್ಲ. ಧರ್ಮ ಎಂಬುದು ಉತ್ಕøಷ್ಟ ಜೀವನ ವಿಧಾನ ಕರ್ತವ್ಯ ಪ್ರಜ್ಞೆ, ಪ್ರತಿಯೊಬ್ಬರು ತಮ್ಮ ಶಕ್ತಿ ಸಾಮರ್ಥ್ಯವನ್ನರಿತು ಪ್ರಾಮಾಣಿಕವಾಗಿ ಸೇವೆಸಲ್ಲಿಸಬೇಕೆಂಬ ಬದ್ದತೆಯ ಮಾರ್ಗ (ಅರಿವು) ಸೂಚಿಯಾಗಿದೆ. ಭಾರತ ಮಾತೆ ತನ್ನ ಮಡಿಲಲ್ಲಿ ಸರ್ವ ಧರ್ಮ ಸಮನ್ವಯತೆಯನ್ನು ಮೈದುಂಬಿಸಿಕೊಂಡಿದ್ದಾಳೆ. ಬೌದ್ಧ, ಜೈನ, ವೈದ್ದಿಕ ಧರ್ಮಗಳೊಡನೆ ಅತೀ ಪ್ರಾಚೀನ ಬದುಕಿನ ಶೈವ ಧರ್ಮವಿದೆ. ಋತುಗಳು ಬಳಲಿದರು ಸಪ್ತಶೈವಗಳ ಪಕ್ವತೆ ಶಿಲ್ಪಿಯ ಕೈಚಳಕಕ್ಕೆ ಸಿಲುಕಿ ಸುಂದರ ಸೊಗಸಾದ ಮೂರ್ತಿ ಮೂಡಿಬರುವಂತೆ ವೀರಶೈವ ಲಿಂಗಾಯಿತ ಮಾನವನ ಮನೋವಲಯದಲ್ಲಿ ಅಸ್ಮಿತ ಪಡೆದಿದೆ.

ಲಿಂಗಾಯಿತ ಧರ್ಮದಲ್ಲಿ ಭಕ್ತನ ಮನೋವಲಯದಲ್ಲಿ ಭಗವಂತ ನಿದ್ದಾನೆಯೇ ಹೊರತು ಮಿಕ್ಕೆಲ್ಲಾ ಧರ್ಮಗಳಂತೆ ಆಕಾಶದ ಕಡೆ ಮುಖಮಾಡಿ ತೋರಿಸಿ ದೇವರ ಮೇಲೆ ಇದ್ದಾನೆ ಎಂಬ ನಿಲುಕದ ಉಹೊಪೋಹಗಳ ವೈಚಾರಿಕ ರಹಿತ ಸಂದೇಶಗಳನ್ನು ಸಾರಾಸಗಟಾ ನಿರ್ಲಕ್ಷಿಸಿದೆ. ವೀರಶೈವ ಲಿಂಗಾಯಿತೇತರ ಧರ್ಮಗಳು ಆದ್ಯಾತ್ಮಿಕ ಅಲೌಕಿಕ ತತ್ವಗಳ ಶ್ರೇಷ್ಠತೆಯನ್ನು ಪ್ರತಿಪಾದಿಸಿದರೆ ವೀರಶೈವ ಲಿಂಗಾಯಿತ ಧರ್ಮದಲ್ಲಿ ಲೌಕಿಕ ಸಾಧನೆಗಳು ಸಿದ್ದಿಗಳನ್ನು ಮನುಕುಲದ ಮಾನವೀಯ ಮೌಲ್ಯಗಳನ್ನು ಶ್ರೇಷ್ಠ ಎಂದು ಉದ್ಘೋಷಿಸಿದೆ. ಸಾಂಸ್ಥೀಕರಣದ ಹಿನ್ನಲೆಯಲ್ಲಿ ಧರ್ಮವನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾವರ್ಗದವರಿಗೂ ಕೈಗಟುವುವಂತೆ ಸಾಕಾರ ಗೊಳಿಸಿದೆ ಮನುಕುಲದ ಜೀವಿಕೊಬ್ಬನು ಮಗೀಯ ವರ್ತನೆಯಿಂದ ಹೊರನಡೆದು, ನಿಜ ಮನುಷ್ಯನಾಗಿ ಉತ್ತಮ ಸಾಂಸ್ಕøತಿಕ ಚಾರಿತ್ರೆಯುಳ್ಳ ಮನುಷ್ಯನನ್ನಾಗಿ, ಮನುಷ್ಯರಾಗಿ ಬದುಕುವುದನ್ನು ಕಲಿಸಿದೆ ಭೂಮಂಡಲವನ್ನು ತಾನಿರುವ ಸ್ಥಳವನ್ನು ಸಾಧನಾ ಕ್ಷೇತ್ರವನ್ನಾಗಿ ಮಾಡಿಕೊಂಡಿದೆ. ಊಳ್ಳವರ ಡಾಂಬಿಕ ಬದುಕಿನಿ ಭವ್ಯ ದೇವಾಲಯಗಳ ಸಂಸ್ಕøತಿಯನ್ನು ತಿರಸ್ಕರಿಸಿದೆ

ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಅಭಲನೆನಸಿದ ದುರ್ಭಲರು ತಳಸಮುದಾಯದವರಿಗೂ ಸಾಧ್ಯವಾಗುವ ದೇಹವೆ ದೇವಾಲಯವನ್ನಾಗಿಸಿ ಅದರಲ್ಲಿ ಪ್ರತಿಷ್ಠಾಪಿತವಾಗಿರುವ ಆತ್ಮನೇ ಪೂಜ್ಯಪರಮಶ್ರೇಷ್ಠ ಶಿವನೆಂದು ಪೂಜಿಸುವ ಆಚಾರವನ್ನು ರೂಡಿಸಿಕೊಂಡಿದೆ ಪರಧರ್ಮದಲ್ಲಿ ದೇಹ ಎಂದರೆ ದಹನಕ್ಕೆ ಯೊಗ್ಯವಾದ ವಸ್ತು ಎಂಬುದನ್ನು ಅಲ್ಲಗಳೆದು ಶ್ರೇಷ್ಟ ಜನ್ಮದ ದೇಹವನ್ನು ಜಂಗಮ ಗುರುವಿನ ದೇವಾಲಯವನ್ನಾಗಿ ರೂಪಿಸಿಕೊಂಡಿದೆ. ವರ್ಣಶ್ರೇಷ್ಟ, ವರ್ಗಶ್ರೇಷ್ಟ ಲಿಂಗಶ್ರೇಷ್ಠರೆಂದು ಸಾವಿರಾರು ವರ್ಷಗಳಿಂದ ಪ್ರಭುತ್ವ ಸ್ಥಾಪಿಸಿದವರಿಂದ ಶೋಷಣೆಗೆ ದೌರ್ಜನ್ಯಕ್ಕೆ ತುತ್ತಾಗಿ ತಮ್ಮ ಇರುವಿಕೆಯಸ್ಥಿತಿಯನ್ನು ಕಳೆದುಕೊಂಡಿದ್ದ ದಲಿತರು ಅಸ್ಪøಶ್ಯರು ಮತ್ತು ಮಹಿಳೆಯರಿಗೆ ಮುಕ್ತವಾಗಿ ಪಾಲ್ಗೋಳ್ಳುವ ಸ್ಪರ್ಧಿಸುವ ತಮ್ಮದೆ ಹಕ್ಕು ಬಾದ್ಯತೆಗಳನ್ನು ಸಾಧಿಸಿ ಉತ್ತಮ ಜೀವನಕ್ಕೆ ಹೊಸ ಸಾಧನ ಸೃಷ್ಟಿಸಿದರು. ವೀರಶೈವ ಲಿಂಗಾಯಿತ ದರ್ಮದಲ್ಲಿ ಕಾಯಕ ಮತ್ತು ದಾಸೋಹಗಳ ಮೂಲಕ ಜನಸಾಮಾನ್ಯರಿಗೆ ಉದ್ಯೋಗ, ಆಹಾರ ಮತ್ತು ನೈತಿಕ ಆತ್ಮಬಲ ತುಂಬುವ ಮೂಲಕ ಸಮಾನತೆ ದೊರಕಿಸಿಕೊಟ್ಟಿತು.

ಪರಂಪರೆಯಿಂದ ಲಿಂಗತಾರತಮ್ಯದಿಂದ ಮೌಢ್ಯತೆಗಳಿಂದ ಅಪಮಾನಗಳಿಗೆ ಗುರಿಯಾಗಿದ್ದ ಮಹಿಳೆಂiÀರಿಗೂ ಪುರಷನಷ್ಟೆ ಸಮಾನತೆ ಪ್ರತಿಪಾದಿಸಿತು ಜಾತಿ ಮತ್ತು ವರ್ಗ ಲಿಂಗ ಭೇದವನ್ನು ಕಡೆಗಣಿಸಿ ಸಾಮಾಜಿಕ ಆರ್ಥಿಕ ಮತ್ತು ಧಾರ್ಮಿಕ ಸಮಾನತೆಯನ್ನು ದೊರಕಿಸಿ ಕೊಟ್ಟಿತು ಆಚಾರ, ವಿಚಾರ ಸಂಸ್ಕಾರ, ಶೀಲತೆ, ಕಾರ್ಯಕ್ಕೆ ವಿದ್ಯುತ್ ಸ್ಪರ್ಶನೀಡಿ ವೈಚಾರಿಕ ದೃಷ್ಟಿಕೊನಕ್ಕೆ ನಾಂದಿಯಾಡಿತು (ಭಾರತ) ವಿಶ್ವದಲ್ಲಿ ರೂಡಿಯಲ್ಲಿರುವ ಧರ್ಮಗಳ ನಡುವೆ ಸಾಮರಸ್ಯ ಸಹಿಷ್ಣುತೆಯ ಮಹತ್ವವನ್ನು ಮನವರಿಕೆ ಮಾಡಿಕೊಟ್ಟಿತು. ಮಾನವೀಯ ಮೌಲ್ಯಗಳ ಪ್ರಸ್ತುತತೆಯನ್ನು ಎತ್ತಿ ಹಿಡಿಯಿತು.

ಅನಾದಿಕಾಲದಿಂದಲೂ ಕನಿಷ್ಠ ಜೀವನದಲ್ಲಿ ತೊಡಗಿದ್ದ ವರ್ಗಗಳಿಗೆ ಮೂಲಸೌಕರ್ಯಗಳನ್ನು ಹೊದಗಿಸಲು ಕ್ರಾಂತಿಕಾರಕ ಹೆಜ್ಜೆಯಿಡಿತು. ಪ್ರಯೋಗ ನಡೆಸಲಾಯಿತು. ಉದರ ನಿಮಿತ್ತ ಸಮಾಜ ಘಾತುಕ ಚಟುವಟಿಕೆ ತೊಡಗಿದ್ದವರಿಗೆ ನೈತಿಕ, ಬೌದ್ಧಿಕ ಮಾನವೀಯ ಮೌಲ್ಯಗಳ ಪ್ರಸ್ತುತತೆಯನ್ನು ಸೈದ್ಧಾಂತಿಕವಾಗಿ ಮಾತ್ರ ಪ್ರತಿಪಾದಿಸದೆ ವಾಸ್ತವಿಕ ಸಂದಿಗ್ದಸ್ಥಿತಿಗೆ ಕಾರಣ ಕಂಡುಕೊಂಡು ಪರಿಹಾರ ಸೂಚಿಮಾರ್ಗದಲ್ಲಿ ಶಕ್ತಿಮೀರಿ ತಮ್ಮ ಅರ್ಪಿಸಿಕೊಂಡಿತು. ವೀರಶೈವ ಲಿಂಗಾಯಿತ ಪಂಥ ಜ್ಞಾನ ದಾಸೋಹದ ಮೂಲಕ ದುರ್ಬಲ ವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನ ನಡೆಸಿತು. ಶಿಕ್ಷಣದಿಂದ ತನ್ನ ಅಸ್ಥಿತ್ವ ಕಂಡುಕೊಳ್ಳುವ ಜ್ಞಾನ ಸಂಪಾದನೆ ಮತ್ತು ಉಚ್ಚವರ್ಗಗಳ ದೌರ್ಜನ್ಯದಿಂದ ವಿಮುಕ್ತರಾಗಲು ವೈಚಾರಿಕ ಶಿಕ್ಷಣದ ಮಹ್ವತವನ್ನರಿತ ಧಾರ್ಮಿಕ ಕರುಣಾಮಯಿಗಳು ಶೈಕ್ಷಣಿಕ ಸೇವಾ ಸೌಲಭ್ಯಗಳನ್ನು ನೀಡಲು ಧೃಡಸಂಕಲ್ಪ ಮಾಡಿದರು. ಶೈಕ್ಷಣಿಕ ಸಂಸ್ಥೆ ತೆರೆದರು ಪ್ರತಿಭಾನ್ವಿತರಿಗೆ ಉನ್ನತಶಿಕ್ಷಣ ಕೈಗೊಳ್ಳಲು ವಿದ್ಯಾರ್ಥಿ ವೇತನ ರೂಪದಲ್ಲಿ ಧನ ಆರ್ಥಿಕ ನೆರುವು ನೀಡಿದರು ಮಾನಸಿಕ ಸ್ಥೈರ್ಯ ಆತ್ಮವಿಶ್ವಾಸಕ್ಕೆ ಕುಂದುಭಾರದಂತೆ ಹಿತಕರ ವಾತಾವರಣ ಸ್ಥಾಪಿಸುವ ಪ್ರಯತ್ನ ನಡೆಯಿತು.

ವೀರಶೈವ ಲಿಂಗಾಯಿತ ಧರ್ಮವು ಜಾತ್ಯತೀತ ನೆಲೆಯಲ್ಲಿ ಅನಾಥರು ಅಥವಾ ನಿರ್ಗತಿಕರಿಗೆ ಬಡಸಮುದಾಯದವರಿಗೆ ಹಾಗೂ ಹಸಿವಿನಿಂದ ನರುಳುತ್ತುದ್ದ ಮನುಜಕುಲಕ್ಕೆ ಸಾಧ್ಯವಾದ ಮಟ್ಟಿಗೆ ದಾಸೋಹ ಪ್ರಕ್ರಿಯೆಗಳನ್ನು ಹಮ್ಮಿಕೊಂಡರು ಪ್ರಾರಂಭದಲ್ಲಿ ಮನೆಗಳಲ್ಲಿ ಮಠಗಳು ದೇವಾಲಯಗಳು ವಿದ್ಯಾರ್ಥಿನಿಲಯಗಳು ಆಶ್ರಮಗಳಲ್ಲಿ ತಮ್ಮ ದ್ವಾರಗಳನ್ನು ವಿವಿಧ ದೃಷ್ಠಕೊನದಡೆ ತೆರೆದವು ದಾಸೋಹ ಪ್ರಕ್ರಿಯೆಯು ತಳ ಸಮುದಾಯದವರ ಸಬಲೀಕರಣಕ್ಕೆ ತಮ್ಮನ್ನ ಅರ್ಪಿಸಿಕೊಂಡರು ವೀರಶೈವ ಲಿಂಗಾಯಿತ ದಾಸೋಹ ಪರಂಪರೆ ಅನ್ಯಧಾರ್ಮಿಕರರಿಗೆ ಆದರ್ಶ ಸ್ಥಾನದಲ್ಲಿ ಸೂಚಕವಾಗಿ ನಿಂತಿದೆ.

ವೀರಶೈವ ಲಿಂಗಾಯಿತ ಪಂಥದವರು ಮೈಸೂರು ಸಂಸ್ಥಾನದ ಸಮುದಾಯದವರಿಗೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಾನಮಾನಗಳಿಂದ ಸರಕಾರಿ ಸೇವಾ ಸೌಲಭ್ಯಗಳಿಲ್ಲದ ದಯನೀಯ ಕಂಡು ಕಷ್ಟದಲ್ಲಿದ್ದ ಕುಟುಂಬದವರಿಗೆ ಪರಿವಾರದವರಿಗೆ ಉತ್ತಮವಾದ

ಸ್ಥಾನಮಾನ ದೊರಕಿಸಿಕೊಡಲು ಹಲವಾರು ಭಕ್ತಾದಿಗಳು ಮೈಸೂರು ರಾಜಮನೆತನದವರು ಹರಗುರುಚರ ಮೂರ್ತಿಗಳು ಕಾರುಣ್ಯಮೂರ್ತಿ ಭಾಂದವರು ಅಭಿಮಾನಿ ನೌಕರ ಸಮೂಹದವರು ಬಹಳಷ್ಟು ತ್ಯಾಗಮಹಿಗಳ ಕೃಪೆ ಆಶೀರ್ವಾದ ನೆರವಿನಿಂದ ಹಿತಾಸಕ್ತಿ ಪೂರೈಸುವ ಸಲುವಾಗಿ ಕಲ್ಯಾಣಪ್ರದವಾದ ಶ್ರೇಯಾಭಿವೃದ್ಧಿ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡರು ಪ್ರತಿಫಲವಾಗಿ ವಿದ್ಯಾನಿಲಯಗಳು ಪ್ರತಿಭಾನ್ವಿತರಿಗೆ ವಿದ್ಯಾರ್ಥಿವೇತನಗಳು ಸಮಾಜಮುಖಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಂಸ್ಥಿಕ ಸ್ವರೂಪದಲ್ಲಿ ಸೇವಾ ಪ್ರಕ್ರಿಯೆಗಳನ್ನು ಕಂಡುಕೊಂಡರು.

ಸಂಘ ಸಂಸ್ಥೆಗಳ ಅಸ್ತಿತ್ವವು ಅವಿಸ್ಮರಣೀಯ ಸುತಿಯಾಗಿದೆ. ಪ್ರತಿಸಂಸ್ಥೆಗಳು ಮತ್ತು ಸದಸ್ಯರುಗಳು ತಮ್ಮದಿ ಹಿತಾಸಕ್ತಿಯೆಂದು ಸದಸ್ಯತ್ವ ಪಡೆದಿರುತ್ತಾರೆ. ಯಾವುದು ಸಂಸ್ಥೆಯು ಸಮುದಾಯದವರ ಹಿತಾಸಕ್ತಿಯಡಿ ಸ್ಥಾಪನೆಯಾಗಿರುತ್ತದೆ. ಪ್ರತಿಯೊಂದು ಸಂಸ್ಥೆಯು ತನ್ನ ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಪೂರೈಸುವಲ್ಲಿ ಬಹಳಷ್ಟು ಅಡ್ಡಿ ಆತಂಕಗಳನ್ನು ಸಂಘರ್ಷಗಳನ್ನು ನೈಜ ದಾರಿಯಲ್ಲಿ ಸಾಗುತ್ತಾ ನಿರ್ದಿಷ್ಟಗುರಿಗಳನ್ನು ಪೂರೈಸಿಕೊಳ್ಳುವುದು ಎಲ್ಲಾ ಸಂಘಟನೆಗಳ ಸಾಧನೆಯ ವೈಶಿಷ್ಟ ಪ್ರತಿ ಸಂಕಷ್ಟಗಳು ಪ್ರಖ್ಯಾತಿ ಲಾಭಾಂಶ ಸ್ವಾರ್ಥ ಹಿತಸಾಧನೆಗಿಂತ ಮಿಗಿಲಾಗಿ ತಮಗಮ ಸಮುದಾಯದವರ ಶ್ರೇಯಾಭಿವೃದ್ಧಿಗಾಗಿ ಧನಾತ್ಮಕವಾಗಿ ಗಿಟ್ಟಿಸಿಕೊಂಡ ಕೀರ್ತಿ ಸಮುದಾಯದವರ ಸಂತೋಷಕ್ಕಾಗಿ ಉತ್ತಮ ಜೀವನಾರ್ಥತೆಯ ಸಾಧನೆಗಾಗಿ ನಡೆಸುವ ಪ್ರಯತ್ನಗಳು ಉತ್ತಮ ಲಾಭಾಂಶಗಳಿಸುವಂತಾಗುತ್ತದೆ. ಸಂಘ ಸಂಸ್ಥೆಗಳು ತಮ್ಮದೆ ಸಮುದಾಯದವರ ಮತ್ತು ತಮಗೆ ಸಂಬಂಧಿಸಿದ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಕೋನದ ಹಿನ್ನಲೆಯಲ್ಲಿ ಅಸ್ತಿತ್ವಕ್ಕೆ ಬಂದಿವೆ.

**ಸಂಘ ಸ್ಥಾಪನೆಯ ಪ್ರಸುತ್ತತೆ**

1. ಮೈಸೂರು ಸಂಸ್ಥಾನದ ವೀರಶೈವ ಲಿಂಗಾಯಿತ ಸಮುದಾಯದಲ್ಲಿ ಅನಕ್ಷರತೆ ಗಾಡವಾಗಿತ್ತು. ಅನಕ್ಷರತೆಯಿಂದ ಸಮುದಾಯ ಮೌಢ್ಯದಲ್ಲಿತ್ತು. ಜನರನ್ನು ಮೌಢ್ಯಾಚರಣೆಗಳಿಂದ ವಿಮುಕ್ತರಾಗುವ ಬಗ್ಗೆ ಪರಾಮರ್ಷನ, ಪ್ರಜ್ಞೆ ಇಲ್ಲವಾಗಿದ್ದ ವೀರಶೈವ ಲಿಂಗಾಯಿತ ಸಮಾಜದಲ್ಲಿ ವಿದ್ಯಾಭಿವೃದ್ಧಿಯೊಂದರ ತಮ್ಮ ವೈಯಕ್ತಿನ ಜೀವನದ ಸುಧಾರಣೆಯ ಜೊತೆಗೆ ಸಮುದಾಯದ ನಾಡಿನ ಪ್ರಾತ್ಯಾ ಮತ್ತು ದೇಶ ವಿಧೇಶಗಳ ಹಂತದಲ್ಲಿ ಪ್ರಗತಿಪರ ಸಮಾಜಗಳಿಗೆ ಸರಿಸಮನಾಗಿ ಸ್ಪರ್ಧಿಸುವುದು ಸಾಧ್ಯವಾಗುತ್ತದೆ ಎಂದು ಚಿಂತಿಸಿದ ಹಿರಿಯ ಚೇತನರು ಸಮಾಜಭಿಮಾನಿಗಳೆ ಧನಿಕರು ಅಧಿಕಾರಿ ವರ್ಗದವರು ಅರಸು ಮನೆತನದವರು ಸೇರಿದಂತೆ ಧಾರ್ಮಿಕ ಮುಖಂಡರು ಚಿಂತಿಸಿ ಸಾಂಸ್ಥಿಕ ಪ್ರಯತ್ನದತ್ತ ಒಲವು ಸಾಧಿಸಿದರು.
2. ಗ್ರಾಮೀಣ ಭಾಗದಲ್ಲಿನ ಬಹುಸಂಖ್ಯಾತರು ಮೂಲಬೂತ ಸೌಲಭ್ಯಗಳಿಂದ ವಂಚಿತರಾಗಿದ್ದ ಬಡತನದ ಕಾರಣವಾಗಿ ಪ್ರತಿಭಾನ್ವಿತರಾಗಿದ್ದ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಅಸಾಧ್ಯವಾಗಿತ್ತು. ಗ್ರಾಮಗಳಿಂದ ನೂರಾರು ಮೈಲಿ ಅಂತರದಲ್ಲಿದ್ದ ನಗರದ ಶಿಕ್ಷಣ ಕೇಂದ್ರಗಳಿಗೆ ಕಳುಹಿಸಿ ವಸತಿ ಸೌಲಭ್ಯ ಶೈಕ್ಷಣಿಕ ಶುಲ್ಕ ಭಾರಿಸಿ ವಿದ್ಯಾಭ್ಯಾಸ ಮಾಡುವುದು ಸುಲಭ ಸಾಧ್ಯವಾಗಿರಲಿಲ್ಲ.
3. ಆತ್ಯಾಧುನಿಕ ಮಾದರಿಯ ಸಾರಿಗೆ-ಸಂಪರ್ಕಗಳ ಅಭಾವ ಮತ್ತು ಅವೈಜ್ಞಾನಿಕ ಸಂಪರ್ಕ ಮಾಧ್ಯಮಗಳಿಂದ ನಗರ ಕ್ರೇಂದ್ರಗಳಿಗೆ ಗ್ರಾಮದಿಂದ ಹೋಗಿಬರಲು ಸಾಧ್ಯಾವಾಗಲಿಲ್ಲ. ಆರ್ಥಿಕವಾಗಿಯೂ ಹೈನುಗಾರಿಕೆ ಸಣ್ಣ ಕುಲಕಸುಬುಗಳನ್ನು ನಂಬಿ ಜೀವಿಸುತ್ತಿದ್ದ ಪ್ರಜಾ ಸಮೂಹಕ್ಕೆ ಮಾನಸಿಕ ಸ್ಥೈರ್ಯ ತುಂಬಿ ಆಸರೆಯಾಗಿ ನಿಲ್ಲಬಲ್ಲ ನಾಯಕರುಗಳು ಅತ್ಯುತ್ಸಾಹದಿಂದ ಸಾಂಸ್ಥೇಕವಾಗಿ ಸೇವೆಗೈಯ್ಯಲು ಧೃಡಸಂಕಲ್ಪ ಮಾಡಿದರು.
4. ಗ್ರಾಮೀಣ ಭಾಗದ ದುರ್ಬಲ ಸಮುದಾಯದ ಕುಟುಂಬದ ವಿದ್ಯಾರ್ಥಿಗಳಿಗೆ ಪಾಶ್ಚಿಮಾತ್ಯ ಆಂಗ್ಲಭಾಷಾ ಮಾಧ್ಯಮದ ಶಿಕ್ಷಣ ಕಲಿಯುವುದು ಬಹಳ ಕಷ್ಟದಾಯಕವಾಗಿತ್ತು. ವರ್ಣ ಶ್ರೇಷ್ಠರಿಗೆ ಹೋಲಿಸಿದರೆ

ಲಿಂಗಾಯಿತ ಪಂಗಡದ ವಿದ್ಯಾರ್ಥಿಗಳಿಗೆ ಆಂಗ್ಲಾಭಾಷಾ ಮಾದ್ಯಮದಲ್ಲಿ ಕಲಿತ ವಿದ್ಯಾರ್ಥಿಗಳ ಪ್ರಮಾಣವು 0.3%ರಷ್ಟು ಅತ್ಯಾಲ್ಪವಾಗಿದ್ದರಿಂದ ಸಮುದಾಯದ ಆರ್ಥಿಕ ಸಧೃಡರು ಹರಗುರು ಚರಮೂರ್ತಿಗಳು ಮಹಾದಾನಿಗಳು ಸಮಾಜಾಭಿಮಾನಿಗಳು ಪಾಶ್ಚಿಮಾತ್ಯ ಶಿಕ್ಷಣ ಕಲ್ಪಿಸಿಕೊಡಲು ಸಾಂಘಿಕ ಸ್ವರೂಪದ ಪ್ರಯತ್ನ ನಡೆಸಿದರು.

5. ಶಿಕ್ಷಣವೆಂಬುದು ಉನ್ನತ ವರ್ಗದ ಮತ್ತು ಉಳ್ಳವರ ಪಾಲಾಗಿದ್ದ ಸನ್ನಿವೇಶವನ್ನು ಅರ್ಥಮಾಡಿಕೊಂಡ ಸಮುದಾಯದ ಪ್ರಜ್ಞಾವಂತರು ಎಲ್ಲರಿಗೂ ಪ್ರಜ್ಞಾವಂತ ವೈಜ್ಞಾನಿಕ ಶಿಕ್ಷಣ ದೊರಕಿಸಿ ಕೊಡುವ ಪ್ರಯತ್ನ ನಡೆಸಿದರು.
6. ಪುಸ್ತಕ ಬಂಡಾರ ಮತ್ತು ವಾಚನಾಲಯಗಳನ್ನು ಸ್ಥಾಪಿಸುವುದು.
7. ಮೈಸೂರು ಸಂಸ್ಥಾನದ ವೀರಶೈವ ಲಿಂಗಾಯತರಿಗೆ ಕಲೆ, ವಿಜ್ಞಾನ ಮತ್ತು ತಂತ್ರಜ್ಞಾನಾಧಾರಿತ ಶಿಕ್ಷಣ ಸಂಸ್ಥೆಗಳನ್ನ ಸ್ಥಾಪಿಸುವುದು. ವೀರಶೈವ ಲಿಂಗಾಯತ ಜನಾಂಗದವರನ್ನ ನೀತಿವಂತರು ಸುಸಂಸ್ಕøತನಾಗಿಸುವುದು.
8. ವೃತ್ತಿ ತರಬೇತಿ ಶಾಲೆ ಪ್ರಾರಂಬಿಸಿ ಉದ್ಯೋಗ ನೀಡುವುದು.
9. ವೀರಶೈವ ಲಿಂಗಾಯತ ಸಮುದಾಯದವರ ಸಾಂಸ್ಕøತಿಕ, ನೈತಿಕ ಮತ್ತು ಸಾಮಾಜಿಕ ಉನ್ನತಿಗೆ ಗಮನ ಹರಿಸುವುದು.
10. ಬಡ ವಿದ್ಯಾರ್ಥಿಗಳಿಗೆ ಉಚಿತ ಅಥವಾ ಶುಲ್ಕ ಪಾವತಿ ಮಾಡುವ ವಿದ್ಯಾರ್ಥಿನಿಲಯಗಳನ್ನು ನಡೆಸುವ ವಿದ್ಯಾರ್ಥಿ ನಿಲಯಗಳಿಗೆ ಸಾಧ್ಯವಾದಷ್ಟು ನೆರವು ನೀಡುವ ಉದ್ದೇಶವನ್ನ ಹೊಂದಿತ್ತು.
11. ದೂರದ ಪ್ರತಿಭಾನ್ವಿತರಿಗೆ ಧನಸಹಾಯ ಮತ್ತು ವಸತಿ ನಿಲಯ ಹಾಗೂ ಧಾರ್ಮಿಕ ಸಧೃಡತೆ ಕಲ್ಪಿಸಲು ಚಿಂತಿಸಿದ್ದರು.

**ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ (ನಡೆದು ಬಂದ) ಪ್ರಗತಿ ಪಥ**

ಯಾವುದೇ ಸಂಸ್ಥೆಯು ನಿರ್ದಿಷ್ಟ ಜನಾಂಗದ ಸಮಾನ ಮನಸ್ಕರ ಸಂಘಟನೆ:- ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘ ಅಸ್ತಿತ್ವಕ್ಕೆ ಸಹಾಯಕವಾದ ಅಂಶಗಳು ಎದುರಾದ ಆಂತಂಕಗಳು ಮತ್ತು ಸಂಘರ್ಷಗಳು ಹಲವಾರು ಕಾಲಗರ್ಭದಲ್ಲಿ ಹೊದಗಿಬಂದ ಸಂದಿಗ್ದತೆಗಳನ್ನು ಮೀರಿ ಸರ್ವರಿಂದ ಗುರುತಾಗುವಂತೆ ಸಾಧಿಸುವ ಮೆಟ್ಟಿಲುಗಳನ್ನೇರಿ ಸಾಧಿಸುವ ಛಲದಿಂದ ನಿರೀಕ್ಷೆಯನ್ನು ಮೀರಿ ತಲುಪವ ಶ್ರಮವು ನೈಜ ಸಾಧನೆಯ ವೈಶಿಷ್ಟ್ಯವೆ ಸರಿ. ಈ ಸಾಧನೆಯಲ್ಲಿ ಸಂಸ್ಥಾಪಕರ ಧ್ಯೇಯವು ವಿಭಿನ್ನವಾಗಿವೆ ಸಮುದಾಯದ ಕಣ್ಮಣಿಗಳು ಸ್ವಾರ್ಥಹಿತಾಸಕ್ತಿ ಖ್ಯಾತಿಲಾಭ ಧನಾತ್ಮಕವಾಗಿ ಗಳಿಸುವ ಕೀರ್ತಿ ಲಾಭಕ್ಕೆ ಬದಲಾಗಿ ಸಮುದಾಯದವರ ಶ್ರೇಯೋಭಿವೃದ್ದಿಗಾಗಿ ಸದ್ಬಾಳ್ವೆಗಾಗಿ ಸಂತೋಷಕ್ಕಾಗಿ ತಮ್ಮನ್ನ ಅರ್ಪಿಸಿಕೊಂಡಿರುವ ತ್ಯಾಗಮಯಿಗಳ ಪ್ರಯತ್ನದ ಫಲಶೃತಿವಾಗಿದೆ. ಸಾಂಸ್ಕøತಿಕ ಉನ್ನತಿಗಾಗಿ ಸಕ್ರಿಯವಾಗಿ ಪಾಲ್ಗೊಂಡಿರುವ ಶ್ರಮದ ಸಂತೃಪ್ತಿ ಸಮುದಾಯದವರ ಸೇವಾ ಮನೋಭಾವನೆಗಳಾದ್ದಾಗಿದೆ. ಪ್ರಮುಖ ನಾಯಕರುಗಳು ಸಕ್ರಿಯವಾಗಿ ಪಾಲ್ಗೋಳಲು ಹಿನ್ನಲೆ ಏನೆಂದರೆ, ಸಮಾಜದಲ್ಲಿರುವ ಪ್ರಜಾ ಸಮೂಹದ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಮೂಲಭೂತ ಸೇವಾ ಸೌಕರ್ಯಗಳಿಲ್ಲದೆ ಪರಂಪರೆಯಿಂದ ದಬ್ಬಾಳಿಕೆಗೆ ತುತ್ತಾಗಿದರು ಸಮುದಾಯದವರಿಗೆ ಶಿಕ್ಷಣ, ಉದ್ಯೋಗ, ಸಾಮಾಜಿಕ ಗೌರವ ಮಾನಸಿಕ ಹಿಂಜರಿಕೆಯ ಭಾವನೆಯಿಂದ ವಿಮುಖರಾಗಲು ಸೂಕ್ತ ಮಾರ್ಗದರ್ಶನದ ಪ್ರಸ್ತುತತೆ ನೈತಿಕ ಮಾನವೀಯ ಮೌಲ್ಯಗಳ ಮಹತ್ವದ ಅರಿವು ಮೂಡಿಸುವ ಅಗತ್ಯತೆಯನ್ನರಿತ ಸಮಾಜ ಪ್ರೇಮಿಗಳು ಉತ್ಸುಕರಾಗಿ ತಮ್ಮನ್ನ ತೊಡಗಿಸಿಕೊಂಡರೊ ಸ್ಪರ್ಧಾತ್ಮಕ ಸೇವಾಕಾಕ್ಷಿಗಳಿಗೆ ಸಮಾನವಾದ ಪ್ರಜ್ಞೆಮೂಡಿಸಲು ಹಾಗೂ ಉಚ್ಚಸ್ಥಾನದಲ್ಲಿದ್ದವರಿಗೆ ಸರಿಸಮಾನಾಗಿ ನಿಲ್ಲಲು ಅಗತ್ಯ ಅರ್ಹತೆಗಳನ್ನ ಪೂರೈಸಲು ಪ್ರಜ್ಞಾವಂತರು ಒಂದು ಕಡೆ ಸೇರಿ ಪರಾಮರ್ಷಿಸುವ ಪ್ರಯತ್ನ ನಡೆಸಿದರು. ಸಮುದಾಯದ ಹಿರಿಯ ಚೇತನರು ಶ್ರೀಮಂತ ವರ್ತಕರು ಜಮಿಸ್ದಾರರು, ಮಠಾಧೀಶ್ವರರು ಮಿಗಿಲಾಗಿ ಸಮಾಜದ

ದೀನ ದಲಿತರ ಪ್ರಗತಿಯಲ್ಲಿ ತಮ್ಮ ಸುಖ ಹಿತವನ್ನು ಕಾಣಬಯಸುವ ತ್ಯಾಗಮಹಿಗಳ ಕೃಪೆಯಿಂದ ಸಾಂಘಿಕ ಸ್ವರೂಪದಲ್ಲಿ ಹೋರಾಡಲು ಮುಂದೆ ಬಂದರು.

ದೇಶದಾದ್ಯಾಂತ ನಡೆಯುತ್ತಿದ ಹಿಂದುಳಿದ ವರ್ಗಗಳ ಚಳುವಳಿಯಿಂದ ಸ್ಪೂರ್ತಿ ಪಡೆದ ವಿಚಾರವಂತರು ಸಂಘಟಿತ ಹೋರಾಟಕ್ಕೆ ಪ್ರಥಮ ಮೆಟ್ಟಿಲನ್ನೇರಿದರು. ಮೈಸೂರು ಸಂಸ್ಥಾನ ಸೇರಿದಂತೆ ಕರ್ನಾಟಕದ ವೀರಶೈವ ಸಮಾಜದ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣದ ಪ್ರಸ್ತುತೆ ಅತಿ ಅಗತ್ಯವೆಂದು ಪರಿಭಾವಿಸಿದರು. ಪಾಶ್ಚತ್ಯ ಶಿಕ್ಷಣದ ಪ್ರಸ್ತುತೆ ಅತಿ ಅಗತ್ಯವೆಂದು ಪರಿಭಾವಿಸಿದರು. ಪ್ರಾಚೀನ ಶಿಕ್ಷಣ ಅಂತಿಮವೆಂದು ನಿರ್ಧರಿಸದೆ. ಪಾಶ್ಚಿಮಾತ್ಯ ಮಾದರಿಯ ಆತ್ಯಾಧುನಿಕ ತಾಂತ್ರಿಕ, ವೈದ್ಯಕೀಯ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಕಂಡುಕೊಂಡರು. ಸರಕಾರ ಮೆಕಾಲೆ ಅಯೋಗ ವರದಿ ವುಡ್ಸ್‌ವರದಿ, ಹಂಟರ್ ವರದಿಯ ನಂತರ ಖಾಸಗಿ ಕ್ಷೇತ್ರದಲ್ಲಿ ಶಿಕ್ಷಣ ಸೇವೆ ನೀಡುವ ಅವಕಾಶ ಕಲ್ಪಿತವಾದ್ದರಿಂದ ವಿವಿಧ ಸಂಸ್ಥೆಗಳು -ಸಂಘಗಳು ಸಮುದಾಯದವರು ಶೈಕ್ಷಣಿಕ ಹಿತಾಸಕ್ತಿಗಾಗಿ ಹಲವಾರು ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡರು ಸರಕಾರ ಮತ್ತು ಖಾಸಗಿಯವರ ಸಹಭಾಗಿತ್ವದಲ್ಲಿ ಸೇವಾಕಾರ್ಯಗಳು (ವಿಸ್ತøತ) ವಿಸ್ತರಿಸಿದವು ವೀರಶೈವ ಲಿಂಗಾಯಿತ ಸಮಾಜದ ವಿದ್ಯಾಭಿವೃದ್ಧಿಗಾಗಿ (ಉತ್ತರ ಕರ್ನಾಟಕ) ಮುಂಬೈ ಕರ್ನಾಟಕ ಭಾಗದಲ್ಲಿ ಲಿಂಗಾಯಿತರು ಹೆಚ್ಚಾಗಿತೊಡಗಿಸಿಕೊಂಡರು ಮುಂಬೈ ಪ್ರಾಂತ್ಯಾದಲ್ಲಿ ಪ್ರಾರಂಭವಾಗಿದ ಜ್ಯೋತಿ ಭಾ ಪೂಲೆ ಸಾವಿತ್ರಿ ಭಾ ಪೂಲೆ ರವರ ಶ್ರಮದ ಫಲ ಶ್ರುತಿಯಾಗಿ ಅಸ್ತಿತ್ವಕ್ಕೆ ಬಂದ ಶಿಕ್ಷಣ ಕೇಂದ್ರಗಳು ಮತ್ತು ಸಮಾಜ ಸುಧಾರಣಾ ಪ್ರಕ್ರಿಯೆಗಳು ಹೆಚ್ಚು ಪ್ರಭಾವ ಬೀರಿದವು. ಉತ್ತರ ಕರ್ನಾಟಕದರವರ ವಿದ್ಯಾಭಿವೃದ್ಧಿಗಾಗಿ ಲಿಂಗಾಯಿತ ಸಮಾಜದವರು 1883 ರಲ್ಲಿಲಿಂಗಾಯಿತ ವಿದ್ಯಾಭಿವೃದ್ಧಿಗಾಗಿ ಸಂಘವನ್ನು ಧಾರವಾಡದಲ್ಲಿ ಸ್ಥಾಪಿಸಿದರು ಬೆಳಗಾವಿ, ಬಾಗಲಕೋಟೆ, ಗದಗ, ಯಾದಗಿರಿ, ಬಾರ್ಸಿ, ಬಳ್ಳಾರಿ, ದಾವಣಗೆರೆ, ಬಿಜಾಪುರ ಸೇರಿದಂತೆ ಹಲವು ಸ್ಥಳಗಳಲ್ಲಿ ಲಿಂಗಾಯಿತ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು. ಹೀಗೆ ಅಸ್ತಿತ್ವ ಪಡೆದ ಸಂಘಗಳು ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ಹಲವಾರು ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡರು, ಪ್ರಮುಖವಾಗಿ ಶಿಕ್ಷಣ ಎಂಬುದು ಪ್ರಥಮ ಪ್ರಾಶಸ್ತ್ಯದ ಚೈತನ್ಯದ ಚಿಲುಮೆ ಚಿಕಿತ್ಸೆ ಎಂದು ಪರಿಗಣಿಸಿದರು.

ಶಿಕ್ಷಣ ಮಹತ್ವವನ್ನು ಮನವರಿಕೆ ಮಾಡುತ್ತಾ "ಶಿಕ್ಷಣ ವಿಲ್ಲದಿದ್ದರೆ ಬುದ್ಧಿನಾಶ, ಬುದ್ಧಿ ಇಲ್ಲದಿದ್ದರೆ ನೈತಿಕತೆಯ ನಾಶ, ನೈತಿಕತೆ ಇಲ್ಲವಾದರೆ ಸಂಪತ್ತು ನಾಶ, ಸಂಪತ್ತು ನಾಶ, ಸಂಪತ್ತು ಇಲ್ಲವಾದರೆ ರಾಜಕೀಯ ಸ್ಥಾನ ಅಧಿಕಾರ ವರ್ಚಸ್ಸು ನಾಶ, ರಾಜಕೀಯ ಸ್ಥಾನಮಾನಗಳಿಲ್ಲದಿದ್ದರೆ ಸರ್ವರ ಅವನತಿ ವಿನಾಶ ಸನಿಹ ಎಂಬ ನಿರ್ಧಾರ ತಾಳಿದರು, ಶೈಕ್ಷಣಿಕ ಸೌಲಭ್ಯಗಳಿಗಾಗಿ ಸರ್ವಪ್ರಯತ್ನವೇ ನಮ್ಮ ಕಾರ್ಯಕ್ಷೇತ್ರವನ್ನಾಗಿಸಿ ಕೊಂಡರು (ಮಧುಕೇಶವ್ ಜ್ಯೋತಿ ಬಾ ಪೂಲೆ ಏಸಿರಿ ಪ್ರಕಾಶನ ಬೆಳಗಾವಿ, ಪುಟ-51) ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡರಾದವರ ಸಿರಸಂಗಿಯ ಲಿಂಗರಾಜ ದೇಸಾಯಿರವರು (ಶ್ರೀ ಲಿಂಗಪ್ಪ ಜಯಪ್ಪ 1861-1909) ಸಮುದಾಯದವರ ವಿದ್ಯಾಭಿವೃದ್ಧಿಗಾಗಿ ವ್ಯಾಪಕ ಯೋಜನೆ ಹಮ್ಮಿಕೊಂಡರು ಕಲಿಕೆಯ ಮೂಲಕ ತಮ್ಮಗಳ ಪ್ರಗತಿಯ ಮಜಲುಗಳನ್ನು ದಾಟಿ ಗುರಿತಲುಪಬೇಕೆಂದು ತಿಳಿಸಿದರು. ವೀರಶೈವ ಲಿಂಗಾಯಿತರ ವಿದ್ಯಾಭ್ಯಾಸಕ್ಕಾಗಿ ನಮ್ಮೆಲ್ಲರ ಶ್ರಮ ಧನಸಹಾಯ ಸೇರಿದಂತೆ ಸ್ವಾರ್ಥ ರಹಿತ, ತ್ಯಾಗಮಾಯ ನೆರವು ಒದಗಬೇಕೆಂದು ಜವಾಬ್ದಾರಿ ಯುತ ಸಂದೇಶ ಪ್ರಸ್ತಾಪಿಸಿದರು. (ಸಿರಿಸಂಗಿ ಲಿಂಗರಾಜರ ಕಿರು ಪರಿಚಯ ಪ್ರತ್ಯೇಕವಾಗಿ ಪರಿಚಯಿಸಲಾಗಿದೆ, ಸಾಧಕರ ಕೈಪಿಡಿ) ಸಿರಸಂಗಿ ಲಿಂಗರಾಜರು ವೀರಶೈವ ವಿದ್ಯಾಯಾರ್ಜನೆಗಾಗಿ ಬೆಳಗಾವಿ, ಕಾಶಿ, ಪೂನಾ, ಮುಂಬೈ ಸೇರಿದಂತೆ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನದಲ್ಲಿ ತೊಡಗಿದ್ದ ಸಮುದಾಯದ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸದ ವಿವಿಧ ಕೋರ್ಸ್‌ಗಳ ಶ್ರೇಣಿಯನ್ನಾಧರಿಸಿದಂತೆ ಧನಸಹಾಯ ನೀಡಿದರು. ಧಾರವಾಡದಲ್ಲಿ ಬಡ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಪೂರಕ ನೆರವು ನೀಡುವ ಹಿನ್ನಲೆಯಲ್ಲಿ ಧಾರವಾಡದ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಘದ ನೆರವಿಗೆ 10,000 ಧನ ಸಹಾಯ ನೀಡಿದರು. ಅಮ್ಮಣಗಿ ಗ್ರಾಮದ ಜಮೀನನ್ನು ಕ್ರಯಕ್ಕೆ ಕೊಂಡು ಅದರ ಉತ್ಪನ್ನವನ್ನು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಗೆ ಪತ್ರಮುಖೇನ 1903 ರಲ್ಲಿ ಸಂಘದ ಜವಬ್ದಾರಿಗೆ ಬಿಟ್ಟುಕೊಟ್ಟರು.

1904ರಲ್ಲಿ ಸಿರಸಂಗಿ ಗ್ರಾಮದಲ್ಲಿ ದೊಡ್ಡ ವಾಚಾನಾಲಯವನ್ನು ಸ್ಥಾಪಿಸಿದರು. ಅಮ್ಮಣಗಿ ಗ್ರಾಮದ ಉತ್ಪನ್ನವನ್ನು ಸಂಘದ ಬೆಳವಣಿಗೆಗೆ ಸಹಕಾರಿಯಾಗಲೆಂದು ನೆರವು ನೀಡಿದರು. ಕನ್ನಡ, ಸಂಸ್ಕøತ, ಇಂಗ್ಲೀಷ್, ಮರಾಠಿ ಭಾಷೆಯ 1358ಕ್ಕೂ ಹೆಚ್ಚು ಗ್ರಂಥಗಳನ್ನು ಸಂಗ್ರಹಿಸಿ ವಿದ್ಯಾಸಕ್ತರಿಗೆ ಗ್ರಂಥಾಲಯ ತೆರೆದು ಗ್ರಂಥಗಳನ್ನೊದಗಿಸಿ ಜ್ಞಾನವೃದ್ಧಿಗೆ ನೆರವು ನೀಡಿದರು.

ಡಾ|| ವಿರೂಪಾಕ್ಷ ಬಡಿಗೇರ ಸಿರಸಂಗಿ ಸಂಸ್ಥಾನ ಒಂದು ಅಧ್ಯಯನ, 1988 ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಟಾರಾಧ್ಯ ಮಠ ಗದಗ ಪುಟ 70,80,82,151,156

ವೀರಶೈವ ಪಂಗಡದವರ ಹಿತಾಸಕ್ತಿಗಾಗಿ ಸಾಂಘಿಕ ಹೋರಾಟ ವ್ಯಾಖ್ಯಾನ ಹಾಗೂ ಅಭಿವೃದ್ಧಿಸಾಧಿಸುವ ಉದ್ದೇಶದಿಂದ ನಾಡಿನಾದ್ಯಂತ ಸಮುದಾಯದವರಲ್ಲಿ ಜಾಗೃತಿ ಮೂಡಿಸಲು ಚಿಂತಿಸಿದರು. ಅಖಿಲ ಭಾರತದಾದ್ಯಾಂತ ವೀರಶೈವ ಲಿಂಗಾಯಿತರನ್ನು ಸಂಘಟಿಸಲು ಸಮಾವೇಶ ನಡೆಸುವ ಸಲುವಾಗಿ ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು 1903ರಲ್ಲಿ ಕಾರ್ಯಾಸಕ್ತರಾದರು. ಹಾನಗಲ್ಲು ಸ್ವಾಮಿಗಳ ಪ್ರಯತ್ನಕ್ಕೆ ರಾವ್ ಬಹದ್ದೂರ್ ಅರಟಾಳ ರುದ್ರೇಗೌಡರು ಸಿರಸಾಗಿ ಸಂಸ್ಥಾನದ ಲಿಂಗರಾಜ ದೇಸಾಯಿಯವರು ರಾವ್ ಸಾಹೇಬ್ ಕಿತ್ತೂರ್ ರೇವಣಸಿದ್ದಯ್ಯ ಚನ್ನಪ್ಪಗೌಡ, ವೀರಪ್ಪಗೌಡ, ಕೊಂಗವಾಡ ವಾರದ ಮಲ್ಲಪ್ಪ ಡೆಪ್ಯೂಟಿ ಚನ್ನಬಸಪ್ಪ, ತೊಗರಿ ಮಲ್ಲಪ್ಪ, ಶಂಕರಣ್ಣ, ಕೌತನಹಳ್ಳಿ ಸಿದ್ದಲಿಂಗಯ್ಯ ಸೇರಿದಂತೆ ಪ್ರಮುಖ ವೀರಶೈವ ಮುಖಂಡರೊಡನೆ ಪರಾಮರ್ಷನ ನಡೆಸಿದರು. ಭಾರತದ ವಿವಿಧ ಸಂಸ್ಥಾನಗಳ ವೀರಶೈವ ಧರ್ಮದ ಅನುಯಾಯಿಗಳಿಗೆ ಪತ್ರ ಲೇಖನ ಸಂದೇಶ ರವಾನೆ ಮೂಲಕ ಸುದ್ದಿ ತಲುಪಿಸಿದರು. ಮೈಸೂರು ಸಂಸ್ಥಾನದ ಮಠಾಧಿಪತಿಗಳು ಪಂಚವೀರಾಧ್ಯಕ್ಷರು ವಿರಕ್ತ ಪರಂಪರೆಯ ಗುರು-ಲಿಂಗ ಜಂಗಮರು ಸಮುದಾಯದ ಮುಖ್ಯಸ್ಥರ ಸಮ್ಮತಿಯೊಂದಿಗೆ ಶ್ರೀ ಮದ್ವೀರಶೈವ ಸಭಾ ಎಂಬ ನಾಮಾಂಕಿತದಡಿ 1904ರಲ್ಲಿ ಸಂಘ ಸ್ಥಾಪಿಸಿಕೊಂಡರು. ಶ್ರೀ ಮದ್ವೀರಶೈವ ಸಭೆ ವೀರಶೈವ ಸಮುದಾಯದವರ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಔದ್ಯೋಗಿಕ ಸ್ಥಿತಿಗಳನ್ನು ತಿಳಿಯುವ ಘನ ಉದ್ದೇಶ ಹೊಂದಿತ್ತು. ವೀರಶೈವ ಸಮುದಾಯದಲ್ಲಿರುವ ಕುಂದು ಕೊರತೆಗಳನ್ನು ಸಾಧ್ಯಾವಾದ ಮಟ್ಟಿಗೆ ಪರಿಹರಿಸಲು ತಮ್ಮದೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು, ಹೆಚ್ಚಿನ ಸುಧಾರಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ಸಮಾಲೋಚನೆ ನಡೆಸುವ ಸಲುವಾಗಿ 1904 ಮೇ 13,14,15 ರ ಶುಕ್ರವಾರದಿಂದ ಭಾನುವಾರ 15 ರ ಅವಧಿಯಲ್ಲಿ ಅಧಿವೇಶನವನ್ನು ಕರೆದರು. ಸಿರಸಂಗಿ ಲಿಂಗರಾಜರ ಘನ ಅಧ್ಯಕ್ಷತೆಯಲ್ಲಿ ಜರುಗಿದ ಮೊದಲ ವೀರಶೈವ ಸಭೆಯಲ್ಲಿ ಭಾರತದ ವಿವಿಧ ಭಾಗಗಳಿಂದ ಗಣ್ಯರು ಮಠಾಧಿಪತಿಗಳು ಧಾರವಾಡಕ್ಕೆ ಆಗಮಿಸಿದರು. ಬೆಂಗಳೂರಿನ ದಿವಾನ ಬಹದ್ದೂರ್ ಕೆ.ಪಿ ಪುಟ್ಟಣ್ಣಶೆಟ್ಟರು ಮೈಸೂರಿನ ವಕೀಲರಾದ ವೇಣು.ಪಿ.ಮಹಾದೇವಯ್ಯನವರು ಕನ್ನಡ ವಿದ್ವಾಂಸರಾದ ಕರಿಬಸವಶಾಸ್ತ್ರಿಗಳು ಸೊಲ್ಲಾಪುರದ ವಾರ್‍ದ ಮಲ್ಲಪ್ಪನವರು ಸೇರಿದಂತೆ ವೀರಶೈವ ಸಮಾಜದ ಪ್ರಭಾವಿತ ವ್ಯಕ್ತಿಗಳು ಪಾಲ್ಗೊಂಡರು. ವೀರಶೈವ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿವರ್ಷವೂ ವೀರಶೈವ ಮಹಾಸಭೆ ನಡೆಸುವ ಮೂಲಕ ಧನಿಕರು ಸಮಾಜಭಿಮಾನಿಗಳು ಧರ್ಮಗುರುಗಳು ಉದಾರವಾಗಿ ದಾನ ದತ್ತಿಗಳನ್ನು ಸಂಗ್ರಹಿಸಬೇಕೆಂದು ನ್ಯಾಯಮೂರ್ತಿ ಪಿ.ಮಹಾದೇವಯ್ಯನವರು ಸಲಹೆ ನೀಡಿದರು. ಮಹಾದೇವಯ್ಯನವರ ಸಲಹೆಯಂತೆ ಲಿಂಗರಾಜ ದೇಸಾಯಿರವರು 5000 ವಾಗ್ದಾನ ಮಾಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ವೀರಶೈವ ಪ್ರಮುಖರು ದಾನಿಗಳಿಂದ 1545ರೂಗಳು ನಿಧಿ ಸಂಗ್ರಹವಾಯಿತು. ವೀರಶೈವ ಮಹಾಸಭೆಯ ನಿರ್ಣಯದಲ್ಲಿ ವೀರಶೈವ ಲಿಂಗಾಯಿತ ಸಮುದಾಯದ ಪುರೋಭಿವೃದ್ಧಿಗಾಗಿ ವಿವಿಧ ವಲಯಗಳಲ್ಲಿ ಪ್ರಗತಿ ಯೋಜನೆಗಳನ್ನು ರೂಪಿಸಿಕೊಂಡರು. ಸಮುದಾಯದವರ ಸ್ಥಿತಿಗತಿ ಲಿಂಗಾಯಿತರ ದಯನೀಯ ಸ್ಥಿತಿಗತಿಗೆ ಕಾರಣ ಮತ್ತು ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಬಗ್ಗೆ ಪರಾಮರ್ಷಿಸಲು ಮತ್ತೊಂದು ವಾರ್ಷಿಕ ಮದ್ವೀರಶೈವ ಸಭೆಯನ್ನು ಕರೆಯಲು ತೀಮಾನಿಸಿದರು. 1905ರಲ್ಲಿ ಬೆಂಗಳೂರಿನ ತೊಟದಪ್ಪ ಛತ್ರದಲ್ಲಿ ಸಭೆ ನಡೆಸಿ ಅಖಿಲ ಕರ್ನಾಟಕ ವ್ಯಾಪ್ತಿಯಲ್ಲಿ ಸೇವಾ ಕೈಂಕರ್ಯಗಳನ್ನು ರೂಪಿಸಲು

ಚಿಂತಿಸಿದರು. ಸಂಘವನ್ನು ಸ್ಥಾಪನೆ ಮಾಡಿ ಸಮುದಾಯದ ಪರಂಪರೆ ಮತ್ತು ವರ್ತಮಾನದ ಪರಿಸ್ಥಿತಿಯನ್ನು ಅಧ್ಯಯನಮಾಡಿ ಭವಿಷ್ಯದ ಬದುಕನ್ನು ಉಜ್ವಲಗೊಳಿಸುವ ಬಗ್ಗೆ ವಿವೇಚಿಸಲಾಯಿತು.

19 ನೇ ಶತಮಾನದಲ್ಲಿ ಜನಸಮುದಾಯದವರ ಧಯಧ್ಯೇಯ ಸ್ಥಿತಿಯಿಂದ ಮೇರಸ್ವರಕ್ಕೆ ಕೊಂಡೊಯ್ಯುವ ಹಿನ್ನಲೆಯಲ್ಲಿ ವೀರಶೈವ ಸ್ಥಿತಿಯಿಂದ ಮೇರಸ್ವರಕ್ಕೆ ಕೊಂಡೊಯ್ಯುವ ಹಿನ್ನಲೆಂiÀiಲ್ಲಿ ವೀರಶೈವ ಮಹಾಸಭೆಯನ್ನು 1904 ರಲ್ಲಿ ಧಾರವಾಡದಲ್ಲಿ ಆಯೋಜಿಸಲು ತೀರ್ಮಾನಿಸಿದರು. ಶ್ರೀ ಹಾನಗಲ್ಲು ಕುಮಾರ ಸ್ವಾಮಿರವರು ಅರಟಾಳ ರುದ್ರೇಗೌಡರು, ಸಿರಸಂಗಿ ಸಂಸ್ಥಾನದ ಲಿಂಗರಾಜರು ಮತ್ತು ಮೈಸೂರು ಸಂಸ್ಥಾನದ ಕೆ.ಪಿ.ಪುಟ್ಟಣ್ಣ ಶೆಟ್ಟರು, ಡಿ.ಆರ್. ಕರಿಬಸವ ಶಾಸ್ತ್ರೀಗಳು, ಪಿ ಮಹಾದೇವಯ್ಯನವರು ಹಾಗೂ ಧಾರವಾಡದ ಲಿಂಗಾಯಿತ ವಿದ್ಯಾವರ್ಧಕ ಸಂಘ ಮತ್ತು ವೀರಶೈವ ಮಹಾಸಭಾದ ಕಾರ್ಯನಿರ್ವಾಹಕ ಮಂಡಲಿಯ ಪದಾಧಿಕಾರಿಗಳು 2ನೇ ವೀರಶೈವ ಮಹಾಸಭೆಯನ್ನು 1905 ಜುಲೈ ತಿಂಗಳ 13,14,15 ಗುರುವಾರದಿಂದ ಶನಿವಾರದವರೆವಿಗೂ ನಡೆಸಬೇಕೆಂದು ನಿರ್ಣಯಿಸಿದರು.

ಎರಡನೇ ವೀರಶೈವ ಮಹಾಸಭೆ 1905 ಜುಲೈ 15 ಮೈಸೂರು ಸಂಸ್ಥಾನದಲ್ಲಿ ಸಮುದಾಯದವರ ಶೈಕ್ಷಣಿಕ ಔದ್ಯೋಗಿಕ ಮತ್ತು ರಾಜಕೀಯ ಹಿತಾಸಕ್ತಿಯ ಜೊತೆಗೆ ವ್ಯಕ್ತಿತ್ವ ವಿಕಾಸನ ಹೊಂದಿದಂತ ಯುವ ಜನಾಂಗದ ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಘನದ್ಯೇಯೋದೇಶದಡಿ ಅಯೋಜಿಸಲಾಯಿತು. 2ನೇ ಮಹಾಸಭೆಯ ಸ್ವಾಗತಾಧ್ಯಾಕ್ಷರಾದ ರಾಜಸಭಾ ಭೂಷಣ ಶ್ರೀ ಕೆ.ಪಿ. ಪುಟ್ಟಣ್ಣಶೆಟ್ಟರು, ಕಾರ್ಯದರ್ಶಿ ಡಾ|| ಟಿ, ನಂಜಪ್ಪನವರು, ಮಹಾಸಭೆಯ ಅಧ್ಯಕ್ಷತೆವಹಿಸಲು ವಂಟಮುರಿಯ ಶ್ರೀ ಯುತ ರಾಜ ಲಖಮಗೌಡರು ಸೊಲ್ಲಾಪುರದ ವಾರದ ಮಲ್ಲಪ್ಪನವರು ಮತ್ತು ಡಾ|| ಬಿ. ಅರಟಾಳ ರುದರೇಗೌಡರನ್ನು ವಿನಂತಿಸಿದರು. ಸಮಾರಂಭದ ಅಧ್ಯಕ್ಷತೆವಹಿಸಲು ಅವರಾರು ಸಮ್ಮತಿಸಲಿಲ್ಲವಾಗಿ ಸಿರಸಂಗಿ ಸಂಸ್ಥಾನದ ಲಿಂಗರಾಜರಲ್ಲಿ ವಿನಂತಿಸಿಕೊಂಡರು. ಸ್ವಾಗತ ಸಮಿತಿಯವರ ಪ್ರಾರ್ಥನೆಯನ್ನು (ಕೋರಿಕೆಯನ್ನು) ಅರ್ಥಮಾಡಿಕೊಂಡ ದಾನಶೂರ ಲಿಂಗರಾಜರು ಸಮಾರಂಭದ ಅಧ್ಯಕ್ಷಸ್ಥಾನವನ್ನಲಂಕರಿಸಲು ಒಪ್ಪಿದರು ವೀರಶೈವ ಲಿಂಗಾಯಿತ ಸಮಾಜದ ವಿದ್ಯಾಭಿವೃದ್ಧಿಗೆ ತಮ್ಮ ಸರ್ವಸ್ವತವನ್ನು ದಾನಮಾಡಿದ್ದ ಶ್ರೀ ಮಂತ ಲಿಂಗಪ್ಪ ದೇಸಾಯಿಯವರೆ ಸಮರ್ಥರೆಂದು ಎಲ್ಲರೂ ಸಂತೋಷದಿಂದ ಸಹಮತ ವ್ಯಕ್ತಪಡಿಸಿದರು.

ದ್ವಿತಿಯ ವೀರಶೈವ ಮಹಾಸಭೆಯು ಪೂರ್ವ ನಿಯೋಜನೆಯಂತೆ 13,14,15 ಜುಲೈ 1905ರಂದು ಬೆಂಗಳೂರಿನಲ್ಲಿ ನಡೆಯಿತು. ಮೈಸೂರು ಸಂಸ್ಥಾನದ ಪ್ರೆಸಿಡೆಂಟರಾದ ದಿವಾನ್ ಬಹದ್ದೂರ್ ಪೂರ್ಣಯ್ಯ ನರಸಿಂಹ ಕೃಷ್ಣಮೂರ್ತಿಯವರು ಸಂಸ್ಥಾನದ ಮುಖ್ಯನಾಯಾಧೀಶರಾz ಪಿ ಮಹದೇವಯ್ಯನವರು ಡಾ|| ಟಿ.ಎಸ್ ನಂಜಪ್ಪನವರು, ಮೈಸೂರು ಸ್ಟಾರ್ ಪತ್ರಿಯ ಪ್ರಧಾನ ಸಂಪಾದಕರಾದ ವೈ ವಿರೂಪಾಕ್ಷಯ್ಯನವರು ಪಾಲ್ಗೊಂಡಿದ್ದರರು. ಪ್ರಸುತ್ತ ಸಭೆಯಲ್ಲಿ ಸಂಸ್ಥಾನದ ಮತ್ತು ಸಮುದಾಯದವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ, ಕಲಾ ಕೌಶಲ್ಯಗಳ, ನೈಪುಣ್ಯತೆ ಮತ್ತು ಮಾನವೀಯ ಮೌಲ್ಯಗಲ ಸೇರಿದಂತೆ ಪ್ರಜಾಸಮೂಹದ ಸರ್ವತೋಮುಖ ಅಭಿವೃದ್ಧಿ ಸಾಧಿತ ವಿಷಯಗಳ ಬಗ್ಗೆ ಚರ್ಚೆ, ವಿಮರ್ಷೆ, ಉಪನ್ಯಾಸಕಗಳು ನಡೆಸಲಾಗಿತ್ತು. ದ್ವಿತೀಯ ವೀರಶೈವ ಮಹಾಸಭೆಯ ಅಧ್ಯಕ್ಷ ಪೀಠವನ್ನು ಸ್ವೀಕರಿಸಿದ ಶ್ರೀಮಂತ ಲಿಂಗಪ್ಪ, ಜಯಪ್ಪ ದೇಸಾಯಿರವರು. ಸರ್ವಬಾಗಿಗಳ ಸಮಕ್ಷಮದಲ್ಲಿ ಪೂರ್ವ ನಿರ್ಣಯದಂತೆ 14-07-1905 ರಂದು ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘ () ಎಂಬ ನಾಮಾಂಕಿತವನ್ನು ಹೊಂದಿದಂತೆ ಅಸ್ತಿತ್ವ ಪಡೆಯಿತು.

**ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಧ್ಯೇಯೋದ್ದೇಶಗಳು**

- ಮೈಸೂರು ಸಂಸ್ಥಾನದ ವೀರಶೈವ ಲಿಂಗಾಯಿತ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಾಧನೆ ಪ್ರಜಾಪ್ರಭುತ್ವದ ಇಂದಿನ ದಿನಮಾನಗಳಲ್ಲಿ ಪ್ರತಿ ಜನಮಾನದ ಪ್ರಜೆಗಳು ತಮ್ಮ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಏಳಿಗಾಗಿ ಸೇವಾ ಸೌಲಭ್ಯಗಳನ್ನು ನೀಡುವ ಮೂಲಕ

ಜಾಗೃತಿಯನ್ನು ಮೂಡಿಸಿ ತನ್ಮೂಲಕ ಸಮಾಜವನ್ನು ರಾಷ್ಟ್ರಮಟ್ಟದಲ್ಲಿ ಬೆಳೆದ ಪ್ರಜ್ಞಾವಂತ, ಸಿರಿವಂತ, ಸಮಾಜಗಳ ಪ್ರಭಾವಿತ ಮಟ್ಟದ (ಹಂತ)ವರೆಗೆ ಸಧೃಡಗೊಳಿಸಿ ವ್ಯಕ್ತಿ ನಿಲ್ಲಿಸುವುದೆ. ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಸ್ಥೆಯ ಮುಖ್ಯಧ್ಯೇಯವಾಗಿದೆ. ವೀರಶೈವ ವಿದ್ಯಾರ್ಥಿಗಳಿಗೆ ಸ್ವಾವಲಂಬಿಯಾಗಿ ಜೀವಿಸುವ ಹಿರಿಮೆ ಮತ್ತು ಶಕ್ತಿ ಸಾಮಥ್ರ್ಯ ತರಬೇತಿ ನೀಡುವುದು. ಮೈಸೂರು ರಾಜ ಸಂಸ್ಥಾನದ ಗ್ರಾಮೀಣ ಸಮುದಾಯದ ಪ್ರಜೆಗಳು ಪ್ರಜ್ಞಾವಂತ ವಿದ್ಯಾಸಕ್ತರಾಗಿದ್ದರೂ ಆರ್ಥಿಕ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳಿಂದ ವಿಮುಕ್ತರಾಗಿ ಶಿಕ್ಷಣ ಪಡೆಯಲು ಜ್ವಲಂತ ಸಮಸ್ಯೆಗಳು ಎದುರಾದವು ಹೆಣ್ಣುಮಕ್ಕಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಸದಾವಕಾಶಗಳಿರಲಿಲ್ಲ. ಸ್ತ್ರೀಯರು ಗೃಹಕೃತ್ಯಾಗಳಿಗೆ ಆದ್ಯತೆ ನೀಡಿ ಶಿಕ್ಷಣ ಧಾರ್ಮಿಕ ಮತ್ತು ಸಾಮಾಜಿಕ, ರಾಜಕೀಯ ವಲಯಗಳಿಂದ ಅಂತರಕಾಯ್ದಿರಿಸಿ ಕೊಂಡಿದ್ದರು. ಪ್ರಸುತ್ತ ಸ್ಪರ್ದಿ ಪ್ರಪಂಚದಲ್ಲಿ ಹೆಚ್ಚಿನ ಅವಕಾಶಗಳನ್ನುಗಿಟ್ಟಿಸಿ ಕೊಂಡಿದ್ದ ಮೇಲವರ್ಗದರ ಸಾಲಿನಲ್ಲಿ ಸಮಾನ ಸ್ಥಾನ ಪಡೆಯುವ ಪ್ರಯತ್ನ ಈ ಹಿಂದಿನಿಂದಲೂ ಮುಂದುವರಿದ್ದಿತ್ತು, ನೀರಿಕ್ಷಿತ ಮಟ್ಟದಲ್ಲಿ ಗುರಿತಲುಪಲು ಸಾಧ್ಯವಾಗಿರಲಿಲ್ಲ ಮುಂದುವರಿದ ವರ್ಗಗಳೊಂದಿಗೆ ಸ್ಪರ್ದಿಸಿ ಜಯಸಾಧಿಸಬೇಕಾದರೆ. ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಪ್ರಭಲ ಮಾರ್ಗೋಪಾಯ ಅಸ್ತ್ರ, ಎಂದರೆ ಶಿಕ್ಷಣವೆಂಬುದು ಬಹುಮುಖ್ಯವಾಗಿ ದಿವ್ಯ ಔಷದಿ ಎಂಬುದನ್ನರಿತ ಪ್ರಜ್ಞಾವಂತರು ಸಮುದಾಯದವರನ್ನು ಶೈಕ್ಷಣೀಕವಾಗಿ ಉತ್ತಮ ಹಂತಕ್ಕೇರಿಸಲು ಹಲವು ಕಾರ್ಯಕ್ರಮಗಳನ್ನು ರೂಡಿಸಿಕೊಂಡರು. ಸಮುದಾಯದ ಸೇವಾಭಿಮಾನಿಗಳು ಸಾಂಘಿಕ ಸ್ವರೂಪದಲ್ಲಿ ನಿಧಿ ಸಂಗ್ರಹಿಸಿ ಸೇವಾ ಕಾರ್ಯದಲ್ಲಿ (ತಮ್ಮನ್ನ ಅರ್ಪಿಸಿಕೊಂಡರು) ಕಾರ್ಯಚಟುವಟಿಕೆ ಯೋಚಿಸುವ ಮೈಸೂರು ಸಂಸ್ಥಾನ ಗ್ರಾಮೀಣ ಭಾಗದಿಂದ ಕೂಡಿರುವ ಪ್ರಬಲ ಸಂಸ್ಥಾನ ಧ್ಯೇಯವನ್ನು ಹೊಂದಿತ್ತು. ಗ್ರಾಮೀಣ ಸೊಗಡಿನ ಪ್ರಜಾಸಮೂಹಕ್ಕೆ ಕೃಷಿ, ಹೈನುಗಾರಿಕೆ, ಗೃಹ ಕೈಗಾರಿಕೆಗಳಂತಹ ವೃತ್ತಿಯಲ್ಲಿ ತಮ್ಮನ್ನು ತೊಡಿಸಿಕೊಂಡಿದ್ದರು. ಗ್ರಾಮೀಣ ಜನರ ಹೀನಸ್ಥಿತಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದು ಕೊಡಿಸುವುದು ಅಸಾಧ್ಯವಾಗಿತ್ತು. ಶಿಕ್ಷಣ ಕೇಂದ್ರಗಳಿರುವ ನಗರ ಕೇಂದ್ರಗಳಿಗೆ ವಿಶೇಷವಾಗಿ ಮೈಸೂರು, ಬೆಂಗಳೂರು ಪಟ್ಟಣಗಳಿಗೆ ದಾವಿಸಿ ವಿದ್ಯಾಭ್ಯಾಸ ಮಾಡಲು ಸೂಕ್ತವಾದ ಸಾರಿಗೆ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಪ್ರಮುಖ ನಗರಗಳಲ್ಲಿ ನೆಲೆನಿಂತು ವಸತಿ, ಆಹಾರ, ಶೈಕ್ಷಣಿಕ ಸಾಮಾಗ್ರಿಗಳ ವೆಚ್ಚವನ್ನು ಭರಿಸುವಷ್ಟು ಶಕ್ತಿವಂತರಾಗಿರಲಿಲ್ಲ. ಗರಾಮೀಣ ಬುಡಕಟ್ಟದ್ವಾರೆ ಜನರಿಗೆ ಅಕ್ಷರಾಭ್ಯಾಸದಿಂದ ಪಾಂಡಿತ್ಯ ಸಂಪಾದಿಸುವ ಸೂಕ್ತ ವಾತಾವರಣ ಮನಸ್ಥಿತಿ ನಿರ್ಮಾuವಾಗಿರಲಿಲ್ಲ. ಪಾಶ್ಚಿಮಾತ್ಯರ ಆಂಗ್ಲಭಾಷಾ ಶಿಕ್ಷಣ ಕಲಿಯುವ ನೆರೆಹೊರೆಯ ಸ್ನೇಹಿತರು, ಬಂಧುಗಳು ಊರಿನಲ್ಲಿ ಇರಲಿಲ್ಲ. ಶಿಕ್ಷಣ ಎಂಬುದು ಶ್ರೀಮಂತರು, ಪ್ರಬಲ ವರ್ಗದವರು, ನಗರವಾಸಿಗಳು, ಕೆಲವೇ ಬುದ್ಧಿಜೀವಿಗಳ ಕುಟುಂಬ ವರ್ಗದವರಿಗೆ ಮೀಸಲಾಗಿತ್ತು. ಉನ್ನತ ತಾಂತ್ರಿಕ, ವೈದ್ಯಕೀಯ ಶಿಕ್ಷಣ, ಗ್ರಾಮೀಣ ಯುವ ಸಮುದಾಯದವರಿಗೆ (ಮರೀಚಿಕೆ) ಕನಸಿನ ಮೌನವಾಗಿತ್ತು. ಗ್ರಾಮೀಣ ಜನರ ಧಯನೀತಿ ಸ್ಥಿತಿಯನ್ನರಿತ ಸಮುದಾಯದ ಸೇವಾ ಕಾಂಕ್ಷಿಗಳು ಸಂಘಟಿತರಾಗಿ ಅಧಿಕಾರರೊಡರಲ್ಲಿ ಮನವಿಸಲ್ಲಿಸಿ ಸೇವಾಸೌಲಭ್ಯಗಳನ್ನು ಪಡೆಯುವ ಉದ್ದೇಶ ಹೊಂದಿದ್ದರು.

- ಗ್ರಾಮೀಣ ಸಮುದಾಯದ ಯುವಕರಿಗೆ ವಿದ್ಯಾಭ್ಯಾಸಕ್ಕೆ ವಸತಿಯ ಮಹತ್ವವನ್ನೇರಿತ ಸಂಘದ ಹಿರಿಯ ಚಿಂತಕರು. ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಶೈಕ್ಷಣಿಕ ನಡೆಸಿಕೊಂಡುಹೋಗುವುದು. ಬೆಳವಣಿಗೆಗೆ ಸಹಾಯ ನೀಡುವ ಉದ್ದೇಶದಡಿ ಸೂಕ್ತ ಸ್ಥಾಪಿಸಿಕೊಂಡರು ಆ ಮೂಲಕ ವಸತಿ ಸಮುಚ್ಛಯ ನಿಮಾಶಣಕ್ಕೆ ವೀರಶೈವ ಸಮುದಾಯದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಹಾಗೂ ಸಾಲರೂಪದಲ್ಲಿ ವಿದ್ಯಾರ್ಥಿ ವೇತನ ನೀಡಲು ಚಿಂತಿಸಿದರು. ವೀರಶೈವ ಲಿಂಗಾಯಿತ ಲಿಂಗರಾಜ ದೇಸಾಯಿಯವರು , ಮಠಾಧಿಶ್ವರರು, ಸರಾಫ ಶಾಮಣ್ಣ, ಬೀರೂರು ಪತ್ರ ರುದ್ರಪ್ಪನವರ ವಂಶಸ್ಥರು ಕಂಚಿ ಸಿದ್ದರಾಮಣ್ಣರಂತಹ ಬಹಳಷ್ಟು ಸಮಾಜಮುಖಿ ಸೇವಾಕಾಂಕ್ಷಿಗಳು ಪ್ರಯತ್ನಿಸಿದರು. ಕೊಡುಗೆದಾನಿಗಳಿಂದ ನಿಧಿ ಸಂಗ್ರಹಿಸಿ ಅದರ ಹುಟ್ಟುವಳಿ ಸಹಾಯದಿಂದ ವಿದ್ಯಾರ್ಥಿ ವೇತನವನ್ನು

ದೇಶ ವಿದೇಶಗಳಲ್ಲಿ ವಿದ್ಯಾರ್ಜನೆಯಲ್ಲಿ ತೊಡಗಿರುವ ಪ್ರತಿಭಾವಂತರಿಗೆ ಬಡವರಿಗೆ ಆರ್ಥಿಕ ಸಹಾಯ ನೀಡುವ ಘನ ಉದ್ದೇಶದಡಿಯಲ್ಲಿ ಸ್ಥಾಪನೆಗೊಂಡು ಕಾರ್ಯತತ್ಪಗಿದೆ.

- ವೀರಶೈವ ಲಿಂಗಾಯಿತ ಪಂಗಡಗಳ ಪಕ್ಷ ಬೇಡಗು ಭೇದಗಳನ್ನು ಪರಿಗಣಿಸದೆ. ಆರ್ಥಿಕವಾಗಿ ಕಷ್ಟದಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಹಾಯ ನೀಡುವ ಘನ ಉದ್ದೇಶವನ್ನು ಹೊಂದಿದೆ.
- ವೀರಶೈವ ಲಿಂಗಾಯಿತ ಬಡ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಮಾಜದಲ್ಲಿನ ಸ್ತ್ರೀ ಪುರುಷರಿಗೂ ನೈತಿಕ ಮಾನವೀಯ ಹಾಗೂ ಪಾರಮಾರ್ತಿಕ ಕ್ಷೇತ್ರಗಳಲ್ಲಿ ಜಾಗೃತಿ ಮೂಡಿಸುವುದು ಮತ್ತು ಯುವ ಸಮುದಾಯದವರಲ್ಲಿ ಮಾನವೀಯ ಮೌಲ್ಯಗಳ ಮಹತ್ವವನ್ನು ತಿಳಿಸಿದರು. ವೀರಶೈವ ಲಿಂಗಾಯಿತ.
- ವೀರಶೈವ ಲಿಂಗಾಯಿತ ಸಮಾಜದ ಪ್ರಜಾವರ್ಗದಲ್ಲಿ ಸಾಮಾಜಿಕ ಜವಾಬ್ದಾರಿ ಯುವ ಸಮುದಾಯದವರಿಗೆ ನೈತಿಕಬದುಕಿನ ಜೊತೆಗೆ ಸಮಾಜ ಘಾತುಕ ವೈರುದ್ಯಗಳಿಂದ ಅಂತರದಲ್ಲಿದ್ದು ಸದ್ಗುಣ ಸಂಪನ್ನರು, ಪರೋಪಕಾರಿಗಳು ಸಮಾಜದ ಶ್ರೇಯಸ್ಸನ್ನ ಬಯಸುವ ಮನ ಸ್ಥಿತಿಯನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದೆ. (ಸ್ಥಾಪಿತಗೊಂಡಿದೆ) ಸಾಮಾಜಿಕ ಪುರೋಭಿವೃದ್ಧಿಗೆ ಹಮನ ಕೊಡುವುದು. ವೀರಶೈವ ಸಮಾಜದ ಯುವ ಕಣ್ಮಣಿಗಳನ್ನು ವೈಯ್ಯಕ್ತಿಕ ಏಳಿಗೆಗೆ ಮಾತ್ರ ಕಾರ್ಯ ತತ್ಪರರಾಗ ಬೇಕೆಂಬ ಸ್ವಾರ್ಥ ಮನೋಭಾವನೆಯನ್ನು ಬೆಳೆಸದೆ ನಾಡು, ನುಡಿ, ದೇಶದ ಏಳಿಗೆಗೆ ಪೂರಕವಾದ (ವಾತಾವರಣ) ಮನಃ ಸ್ಥಿತಿಯನ್ನ ಮೂಡಿಸಿ ದೇಶದ ಹಿತಕಾಯುವ ಕಾವಲುಗಾರನಂತೆ ಸೇವಾ ಭಾವನೆಯನ್ನು ಸೃಜಿಸುವ ಘನ ಉದ್ದೇಶವನ್ನು ಹೊಂದಿದಂತೆ ಕಾರ್ಯತತ್ವರವಾಗಿದೆ.
- ವೀರಶೈವ ಲಿಂಗಾಯಿತ ಸಮಾಜದ ವಯೋವೃದ್ದರ ಹಿತಚಿಂತನೆಯ ಪ್ರಸ್ತುತತೆಯ ಸನ್ನಿವೇಶಗಳನ್ನು ತಿಳಿದುಕೊಂಡ ಸಮಾಜದ ಸೇವಾಕಾಂಕ್ಷಿಗಳು ಅಧಿಕಾರಿಗಳು ವೃದ್ದಾಶ್ರಮವನ್ನು ಆರಂಭಿಸಿ ಹಿರಿಯ ಜೀವಿಗಳಿಗೆ ಸೇವೆ ನೀಡಿ ಪಾವನಗೊಳಿಸುವ ಉದ್ದೇಶವನ್ನು ಹೊಂದಿದ್ದು ಆ ಮೂಲಕ ಕಾರ್ಯ ತತ್ವರವಾಗಿದೆ.
- ವೀರಶೈವ ಲಿಂಗಾಯಿತ ಸಮಾಜದ ಶೈಕ್ಷಣಿಕ ಸಾಮಾಜಿಕ, ಆರ್ಥಿಕ, ಔದ್ಯೋಗಿಕ, ಧಾರ್ಮಿಕ, ನೈತಿಕ, ಬೌದ್ಧಿಕ, ತಾಂತ್ರಿಕ, ವೈಜ್ಞಾನಿಕ (ವೈದ್ಯಕೀಯ) ಕ್ಷೇತ್ರಗಳ ಉನ್ನತಿಯೊಂದಿಗೆ ವ್ಯಕ್ತಿ ಸಮಾಜದ ಸಮುದಾಯದವರ ಸರ್ವತೋಮುಖ ಬೆಳವಣಿಗೆ ಸೂಕ್ತ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳುವ ಘನ ಉದ್ದೇಶ ಹೊಂದಿದಂತೆ ಸೇವಾಕಾರ್ಯದಲ್ಲಿ ಚಲನ ಶೀಲವಾಗಿದೆ.
- ವೀರಶೈವ ವಿದ್ಯಾರ್ಥಿಗಳಲ್ಲಿ ಮೈಸೂರು ಭಾಗದ ವಿದ್ಯಾಭ್ಯಾಸದ ಅಭಿಲಾಷೆ ಮೂಡಿಸುವುದು.
- 1913 ಜುಲೈ ನಿಂದ ಸರಕಾರದ ಪ್ರಜಾಪತಿನಿಧಿ ಸಭೆಗೆ ತಮ್ಮ ಸಂಘದ ವತಿಯಿಂದ ಸದಸ್ಯರುಗಳನ್ನು ಚುನಾಯಿಸಿ ಕಳುಹಿಸಿಲು ಆಜ್ಞೆ ನೀಡಿದರು.
- ಸರಕಾರದ ನಿಯಮಗಳಿಗೂ ಬೆಂಗಳೂರು ಜಿಲ್ಲಾ ಬೋರ್ಡಿಗೂ ಸದಸ್ಯರನ್ನ ಚುನಾಯಿಸಿ ಕಳುಹಿಸುವ ಅವಕಾಶ ದೊರೆಯಿತು. ಸರಕಾರದ ಮೇಲೆ ಪ್ರಭಾವ ಬೀರಿ ಅನುಕೂಲ ಪಡೆದು ಕೊಳ್ಳುವ ಉದ್ದೇಶವನ್ನು ಹೊಂದಿತ್ತು.
- ದುರ್ಬಲ ವರ್ಗದವರಿಗೆ ವೈದ್ಯಕೀಯ ನೆರವು ನೀಡುವ ಯೋಜನೆ ಹೊಂದಿದೆ. ಡಾ. ಸಿ ಅಶ್ವಥ್ ಅವರು ಸಮಾಜದ ದುರ್ಬಲರಿಗೆ ವೈದ್ಯಕೀಯ ನೆರವು ನೀಡಲು "ವೀರಶೈವ ದುರ್ಬಲರ ನೆರವು ನಿಧಿ ಧನ ಸಹಾಯ ನೀಡಿದರು ಅಶ್ವಥ್‌ರವರ ಹಾದಿಯಲ್ಲಿ ಸಮಾಜದ ಕೆಲವು ಸದಸ್ಯರು ದೇಣಿಗೆ ನೀಡಿದರು.
- ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘವು ತಮ್ಮ ನಿಧಿಯ ಹುಟ್ಟುವಳಿಯಿಂದ ವಾರ್ಷಿಕವಾಗಿ 10,000ರಕ್ಕೂ ಹೆಚ್ಚು ಹಣವನ್ನು ಕೊಡುಗೆ.

**ಸಂಸ್ಥೆಯ ಮುಂದಿರುವ ಪ್ರಮುಖ ದ್ಯೇಯಗಳಂದರೆ**

- ಶ್ರೀ ಮಂತ ಕುಟುಂಬದ ವಿದ್ಯಾರ್ಥಿಗಳಿಗೆ ಸುಸಜ್ಜಿತ ಶುಲ್ಕಪಾವತಿಯ ವಿದ್ಯಾರ್ಥಿ ನಿಲಯ ಸ್ಥಾಪನೆ

- ಉನ್ನತ ವ್ಯಾಸಂಗಕ್ಕೆ ಬೆಂಗಳೂರಿಗೆ ಬಡ ಹೆಣ್ಣು ಮಕ್ಕಳು ಹಾಗೂ ನೌಕರರಿಗೆ ಬರುವ ಸ್ತ್ರೀ ಯರಿಗೆ ಶುಲ್ಕ ಪಾವತಿಯ ವಿದ್ಯಾರ್ಥಿ ನಿಲಯ ಸ್ಥಾಪನೆ
- ಗ್ರಾಮಾಂತರ ಪ್ರದೇಶಗಳಿಂದ ಆರೋಗ್ಯವನ್ನರಸಿ ಬರುವ ಬಡ ಕುಟುಂಬದ ಹೃದರೋಗಿಗಳಿಗೆ ಕಡಿಮೆ ದರದಲ್ಲಿ ವೈದಕೀಯ ಸೇವಾ ಸೌಲಭ್ಯಗಳನ್ನು ಒದಗಿಸಲು ಸುಸಜ್ಜಿತ ಆಸ್ಪತ್ರೆ ನಿರ್ಮಿಸುವುದು.
- ಪೂರ್ವ ಪ್ರಾಥಮಿಕ ಪ್ರೌಢ ಶಿಕ್ಷಣದ ವಿದ್ಯಾರ್ಥಿಗಳಿಗೆ ರೆಸಿಡೆನ್ಸಿಯಲ್ ವಸತಿ ಸಹಿತ ಮಾದರಿಯ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ನಗರದ ಹೊರವಲಯದಲ್ಲಿ ಸ್ಥಾಪಿಸುವುದು.
- ಜ್ಞಾನಭಾರತಿ ನಾಗ ದೇವನ ಹಣ ವಿಭಾಗದ ನಿವಾಳನ 3/ಎ ರಲ್ಲಿ ಶ್ರೀ ಮತಿ ಪಾರ್ವತಮ್ಮ ಮತ್ತು ಶ್ರೀ ಹೆಚ್. ಪುಟ್ಟಸ್ವಾಮಿ ರವರ ಸ್ಮರಾಣಾರ್ಥ ಸಾಮೂಹಿಕ ಸಭಾಭವನವನ್ನು ನಿರ್ಮಿಸುವುದು.
- ಪ್ರಾಚೀನ ಸಾಹಿತ್ಯ ಪ್ರಕಟಣೆಗೆ ನೆರವು ನೀಡುವ ಉದ್ದೇಶ ಮೈಸೂರು ಲಿಂಗಾಯಿತ ವಿದ್ಯಾರ್ಥಿ ಸಂಘದ ಬೆಳವಣಿಗೆಯ ಮೈಲುಗಳಲ್ಲಿಗಳು.
- ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಮನ್ನಡೆ ಕುತೂಹಲ ಕಾರಿಯಾಗಿದೆ. ಪ್ರಸುತ್ತತ ಸಂಘದ ಬೆಳವಣಿಗೆಗೆ ಸಮಾಜದ ಹರ ಗುರು ಚರಮೂರ್ತಿಗಳು ಸಮಾಜ ಸೇವಾಕಾಂಕ್ಷಿಗಳು ವಿವಿಧ ಮೂಲಗಳಿಂದ ಸಂಪನ್ಮೂಲಗಳನ್ನ ಸಂಗ್ರಹಿಸಿ ಸೇವಾಪಹದತ್ತ ತಮ್ಮನ್ನ ತೊಡಗಿಸಿಕೊಂಡರು.
- ವೀರಶೈವ ಲಿಂಗಾಯತ ಅನಾಥ ಮಕ್ಕಳನ್ನ ಸಮಾಜದ ಉತ್ತಮ ನಾಗರೀಕರನ್ನಾಗಿಸುವ ಹಿನ್ನಲೆಯಲ್ಲಿ ಆಧುನಿಕ ಸೌಲಭ್ಯಗಳಿಂದ ಕೂಡಿದ ಅನಾಥ ಮಕ್ಕಳ ಆಶ್ರಮ ಪ್ರಾರಂಭಿಸುವುದು.
- ಸಮಾಜದ ಪ್ರತಿಭ್ವಾನಿತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನ ಎದುರಿಸಲು ಪೂರ್ವ ಸಿದ್ದತೆ ತರಬೇತಿ ಕೇಂದ್ರುಗಳನ್ನು ಮಾಡಿ ಉನ್ನತ ಹುದ್ದೆಗಳಲ್ಲಿ ಸಮಾಜ ಬಾಂಧ್ಯವರಿಗೆ ಕಲ್ಪಿಸಿ ಕೊಡುವುದು.
- ಸಮಾಜದ ಹಿರಿಯ ಜೀವಿಗಳ ಬರುವ (ಆತ್ಯಾಧುನಿಕ) ಜೀವನ ನಿರ್ವಹಣೆಗೆ ವೃದ್ದಾಶ್ರಮ ಸ್ಥಾಪಿಸಿ ಸಮೃದ್ಧಿ ಬದುಕಿಗೆ ಸೌಲಭ್ಯ ನೆರವು ನೀಡುವುದು.
- ಬಡ ವಿದ್ಯಾರ್ಥಿಗಳಿಗೆ ವಿನಾಯತಿ ದರದಲ್ಲಿ ಶಿಕ್ಷಣ ದೊರಕಿಸಿ ಕೊಡಲು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದು.
- ವೀರಶೈವ ಲಿಂಗಾಯಿತ ಯುವ ಸಮುದಾಯದವರಿಗೆ ಸಾಮಾಜಿಕ ಮೌಲ್ಯ ಮತ್ತು ಆಧ್ಯಾತ್ಮ ತತ್ವ ಭೋದನೆಗೆ ಪ್ರಾರ್ಥನಾ ಮಂದಿರ.
- ವೀರಶೈವ ಲಿಂಗಾಯಿತ ಸಂಸ್ಕøತಿಯ ಸಂರಕ್ಷಣೆಗಾಗಿ ಸಾಂಸ್ಕøತಿಕ ವೇದಿಕೆ ಪ್ರಾರಂಭಿಸಿ ಜನರನ್ನ ನೈತಿಕರನ್ನಾಗಿಸುವುದು.
- ವಸತಿ ಸಹಿತ ಸನಿವಾಸ ಶಾಲೆಗಳನ್ನು ವಿದ್ಯೆ ಪೂರಕ ವಿದ್ಯಾ ಕೇಂದ್ರುಗಳನ್ನು ಪ್ರಾರಂಭಿಸುವುದು.

1905 ರಲ್ಲಿ ನಡೆದ 2ನೇ ವೀರಶೈವ ಮಹಾಸಭಾದ ಅವನೀಯ ಸ್ಥಾಪನೆಯಾದ ಈ ಸಂಘ ಸಮುದಾಯದವರ ಏಳಿಗೆಗೆ ಹಣ ಸಂಗ್ರಹಕ್ಕಾಗಿ ಅಧಿವೇಶನದಲ್ಲಿ 55 ರೂ ಗಳ ವಾಗ್ದಾನವಾಯಿತು. 30-06-1908 ಮೈಸೂರು ವೀರಶೈವ ವಿದ್ಯಾವರ್ಧಕ ನಿಧಿ ಸಂಘವು ಉದ್ಭವಿಸಿತು. ಸ್ಥಾಪನೆಯೊಂದಿಗೆ ಸಂದಾಯವಾದ ಒಟ್ಟು ಹಣ 15 ರೂಗಳು ಮಾತ್ರ ಮೈಸೂರು ಸಂಸ್ಥಾನದ ಪ್ರಥಮ ಸಂಸ್ಥೆಯಾಗಿದೆ. ಸಂಘದ ಸ್ಥಾಪನೆಯ ಪ್ರಾರಂಭದ ದಿನಗಳಲ್ಲಿ ಅತ್ತಿಬೆಲೆ ಸಾಹುಕಾರ ಸಿಡ್ಲಬಸಪ್ಪನವರು ಸಂಘದ ವತಿಯಿಂದ ವಿದ್ಯಾರ್ಥಿನಿಲಯದ ಸ್ಥಾಪನೆಗೆ 10,000ರೂಗಳನ್ನು ನೀಡಿದರು. ಚಿತ್ರದುರ್ಗದ ಮುರಾಘಶರಣರು 30,000 ನೀಡಿದರು. ಸೂಲಬೆಲೆ ನಂಜಪ್ಪ ಉರುಫ್ ಶಾಮಣ್ಣನವರು ಮೂಲಕ ಸಂಘದ ನಿಧಿಗೆ ದಾನ ಮಾಡಿದರು ಅತ್ತಿಬೆಲೆ ಸಿಡ್ಲಬಸಪ್ಪ ಮತ್ತು ಸೂಲಿಬೆಲೆ ಶಾಮಣ್ಣನವರ ತ್ಯಾಗಮಯ-ಮಹತ್ವಾಕಾಂಕ್ಷೆ, ಸಾಮಾಜಿಕ ಕಳಕಳಿಯು ವೀರಶೈವ ಲಿಂಗಾಯಿತ ಸಮಾಜದ ಉಳ್ಳವರ ಸಮವೇದನೆಗೆ ದಾರಿದೀಪ (ಮಾದರಿ)ವಾಗಿತ್ತು. ಸಿರಸಂಗಿ ಲಿಂಗರಾಜ ದೇಸಾಯಿರವರ ಲಿಂಗಾಯಿತ ಸಮಾಜದ ಏಳಿಗೆಗೆ ತಮ್ಮ ಸರ್ವಸ್ವವನ್ನು ಅರ್ಪಿಸಿದ್ದರು. ಸೂಲಿಬೆಲೆ ಶಾಮಣ್ಣನವರ ಚರ-ಸ್ಥಿರ ಆಸತಿಗಳ ವಿಕ್ರಯದಿಂದ 65,000 ರೂಗಳು ಸಂಘದ ನಿಧಿಗೆ ಹೊಂದಿಸಲಾಯಿತು. ಸಂಘದ ಮೂಲ ಧನಕ್ಕೆ ಒದಗಿದ ಬಡ್ಡಿ,

ಕಟ್ಟಡಗಳು ಭೂಮಿಗಳನ್ನು ದಾನ ಮಾಡುವ ತ್ಯಾಗಿಗಳು ದಿನದಿಂದ ದಿನಕ್ಕೆ ಬೆಳೆಯಿತು. ಸಂಘದ ನಿಧಿ ಹಾಗೂ ಅದರ ಹುಟ್ಟುವಳಿಯಾದ ಬಡ್ಡಿಯಿಂದಲೇ ತನ್ನ ಕೆಲಸಗಳನ್ನ ನಡೆಸಿಕೊಮಡು ಬರುತ್ತಿದೆ.

1905 ರಲ್ಲಿಯೇ ಏರ್ಪಟ್ಟ ನಿಧಿ ಹಾಗೂ ಅದರ ಹುಟ್ಟುವಳಿಯಾದ ಬಡ್ಡಿಯಿಂದಲೇ ಸಂಘ ತನ್ನ ಕೆಲಸಗಳನ್ನು ನಡೆಸಿಕೊಂಡು ಬರುತ್ತಿದೆ. ಪ್ರಗತಿಪರ ಯೋಜನೆ ಹಮ್ಮಿಕೊಂಡಿತು.

ವೀರಶೈವ ಲಿಂಗಾಯಿತ ಸಮಾಜದ ಅಭಿವೃದ್ದಿಗಾಗಿ ಸಮಾಜದ ಶ್ರೀ ಮಂತ ಧನಿಕರು ತಮ್ಮ ತನು ಮನ ಧನ ಸರ್ವಸ್ವವನ್ನು ಅರ್ಪಿಸಿದರು. ಸಮುದಾಯದ ಸಾಮಾನ್ಯ ಕುಟುಂಬದ ಪ್ರಗತಿಗಾಗಿ ಏಳಿಗೆಗಾಗಿ ಶಿಕ್ಷಣ, ಉದ್ಯೋಗ, ರಾಜಕೀಯ ಸ್ಥಾನಮಾನ ಸಾಂಸ್ಕøತಿಕ ಹಿರಿಮೆಯ ಬೆಳವಣಿಗೆಯ ಹಿನ್ನಲೆಯಲ್ಲಿ ಮಾನವೀಯತೆ ಮೆರೆದರು. ಹರಗುರು ಚರಮೂರ್ತಿಗಳು ಔದರ್ಯ, ತ್ಯಾಗಮಯ, ಸಮಾಜಾಭಿಮಾನಿ ಸೇವಾ ಕಣ್ಮಣಿಗಳಿಂದ ನೆರವನ್ನು ಸಾದ್ಯವಾದ ಎಲ್ಲಾ ಮಾರ್ಗೋಪಾಯಗಳಿಂದ ಚರ ಸ್ಥಿರ ಆಸ್ತಿಗಳನ್ನು ಪಡೆದು ಸಂಗ್ರಹಿಸಿ ನಿಧಿಯನ್ನ ವೃದ್ದಿಸಿ ಬಡ ವಿದ್ಯಾರ್ಥಿಗಳಿಗೆ ಸೇವಾ ಸೌಕರ್ಯಗಳನ್ನು ನೀಡುವ ಧ್ಯೇಯ ಹೊಂದಿ ಕಾರ್ಯ ಯೋಜನೆ ರೂಪಿಸಿಕೊಂಡಿತು.

ಮೈಸೂರು ಲಿಂಗಾಯಿತ ವಿದ್ಯಾಭಿವೃದ್ದಿ ನಿಧಿ ಸಂಸ್ಥೆಯ ಧ್ಯೇಯೋದ್ದೇಶಗಳು ಪ್ರತಿನಿಧಿ ಭೂತ ಗುಣ ಲಕ್ಷಣಗಳನ್ನು ಮತ್ತು ಕಾರ್ಯವೈಖರಿಯನ್ನ ಪರಿಗಣಿಸಿದ ಮೈಸೂರು ಸಂಸ್ಥಾನದ ಸರಕಾರವು ದಿವಾನ್ ವಿ.ಪಿ.ಮಾದವರಾಯರು ಮತ್ತು ಮಹಾರಾಜ ನಾಲ್ವಡಿಕೃಷ್ಣರಾಜ ಒಡೆಯರ್‍ರವರು 1909 ರಲ್ಲಿ ಸಂಗ್ರಹಿತ ನಿಧಿಯನ್ನ ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಡಲು ಅನುಮತಿ ನೀಡಿತು. ಮೈಸೂರು ಲಿಂಗಾಯಿತ ವಿದ್ಯಾನಿಧಿಯಿಂದ 1ಲಕ್ಷ ರೂ ಠೇವಣಿ ಮಾಡಿದ್ದರಿಂದ ಸರಕಾರದಿಂದ ಒಂದು ಲಕ್ಷ ಸಹಾಯಧನವನ್ನ (ಕ್ರೂಢೀಕರಿಸಿ) ಜಮಾ ಮಾಡಿ ಮಾಡಿತು. ಸರಕಾರವು ಠೇವಣಿ ಹಣಕ್ಕೆ ಬಡ್ಡಿ ನೀಡುವ ಷರತ್ತಿನಲ್ಲಿ ಲಿಂಗಾಯತ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ರಾಜರು ಮತ್ತು ದಿವಾನರಿಂದ ಸಮ್ಮತಿ ಮೂಡಿತು. 30/06/1909 ರಲ್ಲಿ ಮೈಸೂರಿನ 1904 ನೇಯ 3ನೇ ರೆಗ್ಯುಲೇಷನ್ () ಪ್ರಕಾರ (ಕ್ರಮಸಂಖ್ಯೆ:11/1909-10)ರ ಕಾನೂನಿನಂತೆ ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘ ಎಂಬ ನಾಮಾಂಕಿತದಲ್ಲಿ ಸರಕಾರದ ಸಹಕಾರ ಇಲಾಖೆಯಲ್ಲಿ ನೋಂದಣಿಯಾಯಿತು.

ಸಂಘದ ಪದಾದಿಕಾರಿಗಳು ನಿರ್ದಿಷ್ಟ ಸ್ಥಳದಲ್ಲಿ ಕಾರ್ಯ ನಿರ್ವಹಣೆಗೆ ಸ್ವಂತ ನಿವೇಷನವಾಗಲಿ ಕಟ್ಟಡವಾಗಲಿ ಇಲ್ಲದ ಕಾರಣ ಗುಬ್ಬಿ ತೋಟದಪ್ಪನವರ ಧರ್ಮ ಛತ್ರದಲ್ಲಿ ಹಾಗೂ ಸಮುದಾಯದವರ ಕಟ್ಟಡಗಳಲ್ಲಿ ಸಭೆಸೇರಿ ಸಂಘದ ಕಾರ್ಯ ಚಟುವಟಿಕೆಗಳು ಪ್ರಗತಿ ಪರಿಶೀಲನೆಯನ್ನ ಕುರಿತು ಚರ್ಚಿಸುವ ಮೂಲಕ ಸೂಕ್ತ ಕಟ್ಟಡ, ವಿದ್ಯಾರ್ಥಿ ನಿಲಯಗಳನ್ನ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಸಾಲರೂಪದ ವಿದ್ಯಾರ್ಥಿವೇತನ ನೀಡುವ ಪ್ರಗತಿ ಪರ ಯೋಜನೆಗಳನ್ನ ರೂಪಿಸಿಕೊಂಡರು.

1910 ರ ವೇಳೆಗೆ ಸಮುದಾಯದ ಅಭಿಮಾನಿಗಳು ಬಡ ವಿದ್ಯಾರ್ಥಿಗಳಿಗೆ ಮನೇಯಲ್ಲಿಯೇ ಊಟದ ವ್ಯವಸ್ಥೆ ಏರ್ಪಡಿಸಿದರು ಗುಬ್ಬಿ ತೋಟದಪ್ಪ ಕಂಬಿ ಸಿದ್ದರಾಮಣ್ಣ ಮರಿಸ್ವಾಮಿ ಶೈವ ಮಠಗಳಲ್ಲಿ ಗ್ರಾಮೀಣ ದೂರದ ಸ್ಥಳಗಳಿಂದ ವಿದ್ಯಾಸಕ್ತರಾಗಿ ಬಂದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಿಕೊಟ್ಟರು.

**ಹಣಕಾಸು**

ಸಂಘದ ಜೀವನಾಡಿಯಾಗಿರುವ ಹಣವು ಅದರ ಚಾಲನೆಗೆ ಹಾಗೂ ಬಡ ವೀರಶೈವ ವಿದ್ಯಾರ್ಥಿಗಳಿಗೆ ಅಗತ್ಯವಾದ ಕಾರ್ಯಗಳನ್ನು ನಿರ್ವಹಿಸಲು ಹಣವನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲಾಗುತಿತ್ತು. ಅವುಗಳೆಂದರೆ ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘಕ್ಕೆ ವಸೂಲಾದ ಹಣವನ್ನು ಈ ಕೆಳಕಂಡ 5 ಬಾಬ್ತುಗಳಾಗಿ ವರ್ಗಿಕರಿಸಿ ಅವುಗಳ ವಿವರ ತಿಳಿಯಬಹುದು.

1. ಸದಸ್ಯತ್ವದ ಚಂದಾಹಣ
2. ವಿವಿಧ ರೀತಿಯ ಕೊಡುಗೆಗಳು
3. ವಿನಿಯೋಗಿಸಲ್ಪಟ್ಟ ಬಂಡವಾಳ ನಿಧಿಗಳ ಮೇಲಿನ ವರಮಾನ
4. ವಿವಾಹ ಹಾಗೂ ಇತರ ಸಂದರ್ಭಗಳಲ್ಲಿ ಬರುವ ಕೊಡುಗೆಗಳು
5. ವಿದ್ಯಾರ್ಥಿ ವೇತನಗಳ ಮರುಪಾವತಿ

**ಇತರ ಮೂಲಗಳಿಂದ ದೊರೆಯುವ ಧನ ಸಹಾಯ**

ಈ ಮೇಲ್ಕಂಡ ನಿಯಮಾವಳಿಗಳ ಆಧಾರದ ಮೇಲೆ ಹಣವನ್ನು ಸಂಗ್ರಹಿಸಿ ವರ್ಷದಿಂದ ವರ್ಷಕ್ಕೆ ನಿಧಿ ಸಂಗ್ರಹಣೆಯಾಗಿ ಅ ಮುಖಾಂತರ ಅಭಿವೃದ್ಧಿ ಕಾರ್ಯ ಮಾಡುತ್ತಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ನಿಲಯ ಮತ್ತು ವೇತನದ ಸೌಕರ್ಯವನ್ನು ನೀಡುತ್ತಿದೆ.

ಸಂಘದ ಕಾರ್ಯನಿರ್ವಹಣೆಗೆ ಅಗತ್ಯವಾದ ಹಣವನ್ನು ಸಂಗ್ರಹಿಸಲು 1905 ರಲ್ಲಿ ನಡೆದ ಅಖಿಲ ಭಾರತ ದ್ವಿತೀಯ ವೀರಶೈವ ಮಹಾಸಮ್ಮೇಳನದಲ್ಲಿ ಸುಮಾರು 55 ಸಾವಿರ ಸಂಗ್ರಹಣೆಯಾಯಿತು. 19-04-1916 ರಲ್ಲಿ ಸೂಲಿ ಬೇಲೆ ನಂಜಪ್ಪ ಉರುವೆ ಶಾಮಣ್ಣನವರು ತಮ್ಮ ಸರ್ವಸ್ವವನ್ನು ಮರಣ ಶಾಸನದ ಮೂಲಕ ಈ ನಿಧಿಗೆ ದಾನ ಮಾಡಿದರು. ಅವರ ಚರ ಮತ್ತು ಸ್ಥಿರ ಆಸ್ತಿಗಳ ವಿಕ್ರಯದಿಂದ 65 ಸಾವಿರ ರೂ ಶೇಖರವಾಗಲಾಗಿ ನಿಧಿಯ ಮೂಲಧನ 1928 ರ ವೇಳೆಗೆ 1,04,125 ರೂಗಳಷ್ಟಾಯಿತು. ಇತ್ತೀಚೆಗೆ ಸಂಘವು ಮೈಸೂರು ಸೀಮೇಯ ಜನರಿಂದ ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸಿದ ಪರಿಣಾಮವಾಗಿ 1947ರ ವೇಳೆಗೆ ಸಂಘದ ಆಸ್ತಿಯು 2,33,500 ರೂಪಾಯಿಗಳಷ್ಟಾಗಿತ್ತು.

ಸಂಘದ ನಿಧಿಯಿಂದ ಮತ್ತು ಸರ್ಕಾರದಿಂದ ದೊರೆತ ಅನುದಾನದಿಂದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರು. ಉದಾಹರಣೆಗೆ 1925 ರಲ್ಲಿ ನಡೆಸಿದ ತನಿಖಾ ವರದಿಯಲ್ಲಿ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಮೇಲ್ವಿಚಾರಕರು ಬೇಟಿನೀಡಿ ಸಿದ್ದಪಡಿಸಿದ ವರದಿಯ ಮಾಹಿತಿಯಂತೆ ಹಿಂದಿನ ವರ್ಷದ ದಾಖಲೆಗಳನ್ನ ಪರಿಶೀಲಿಸಿ ಹಣಕಾಸಿನ ವಿವರವನ್ನು ಕುರಿತು ಸೂಕ್ತ ನಿರ್ದೇಶನ ನೀಡುತ್ತಿದ್ದರು. ವಿದ್ಯಾ ಇಲಾಖೆಯ ಇನ್ಸ್ ಸ್ಪೆಕ್ಟರ್ ಜನರಲ್ ನಿರ್ದೇಶನದಂತೆ 6072 ರೂ 5 ಆಣೆ 8 ಪೈಸೆ ಹಣದಲ್ಲಿ 603 ರೂಪಾಯಿಗಳನ್ನ ಸರ್ಕಾರ ಬಿಡುಗಡೆ ಮಾಡಿತು. ಉಳಿಕೆಯಾದ 4403 ರೂಗಳನ್ನು 11.2 ರೂ ಹಣದಂತೆ ವಿದ್ಯಾರ್ಥಿ ನಿಲಯದಲ್ಲಿದ್ದ ವಿದ್ಯಾರ್ಥಿಗಳಿಗೆ ಸರಾಸರಿಯಾಗಿ ವಿಭಾಗಿಸಿ ವಿನಿಯೋಗಿಸಲಾಗುತಿತ್ತು. ವಿದ್ಯಾರ್ಥಿ ನಿಲಯದ ಲೆಕ್ಕ ಪತ್ರಗಳನ್ನ ಮೈಸೂರು ಬ್ಯಾಂಕಿನ ನೌಕರ ಸಿಬ್ಬಂಧಿಗಳು ಪರಿಶೀಲನೆ ಮಾಡುತ್ತಿದ್ದರು.

ನಿಲಯದ ನೌಕರರಲ್ಲಿ ಮೇಲ್ವಿಚಾರಕರಿಗೆ ತಿಗಂಳೊಂದಕ್ಕೆ 25 ರೂಪಾಯಿ, ಶಿಕ್ಷಕರಿಗೆ-20 ರೂಪಾಯಿ, ಗುಮಾಸ್ತರು 3 ಮಂದಿ- 11,10, ಮತ್ತು 9 ರೂಪಾಯಿಗಳನ್ನು, ನೀರುಗಂಟೆಗೆ-7 ರೂಪಾಯಿಗಳನ್ನ ನೀಡುತ್ತಿದ್ದರು. ಸಾದಿಲ್ವಾರು (ವೆಚ್ಚಕ್ಕನುಗುಣವಾಗಿ) ಕೊಳ್ಳಲು ಹಣ ವಿನಿಯೋಗಿಸಲಾಗುತಿತ್ತು. ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಾಚನಾಲಯ ವ್ಯವಸ್ಥೆ ಮಾಡಿ ದಿನವೊಂದಕ್ಕೆ 2 ವಾರ್ತಾ ಪತ್ರಿಕೆಗಳು ಲಭ್ಯವಾಗುತ್ತಿದ್ದವು. ವಿದ್ಯಾರ್ಥಿ ನಿಲಯದಲ್ಲಿ ದಿನಕ್ಕೆ 2 ಬಾರಿ ಪ್ರಾರ್ಥನೆ, ಪ್ರಸಾದ ಅಂತರ ವಿದ್ಯಾರ್ಥಿನಿಲಯಗಳ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಪ್ರತಿ ವಾರ್ಷಿಕೋತ್ಸವದಲ್ಲಿ ಗಣ್ಯರನ್ನು ಆಹ್ವಾನಿಸಿ ವಿಜೇತರಿಗೆ ಬಹುಮಾನ ವಿತರಣೆ ಅನುಭವಗಳಿಂದ ಹಿತನುಡಿ, ಉಪನ್ಯಾಸ ಕೇಳುವ ಅವಕಾಶ ಕಲ್ಪಿಸಿದರು. ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಹಿತಕರ ವಾತಾವರಣದಲ್ಲಿ ಅಧ್ಯಯನ ಮಾಡಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಯಿತು.

1947 ನಂತರದ ವಿದ್ಯಾರ್ಥಿ ನಿಲಯಗಳ ಸಂಕ್ಷಿಪ್ತ ವಿವರ. 1897 ರಲ್ಲಿ ಶೇಕಡಾ 39 ಬಾಲಕರು ಶೇಕಡಾ 3% ಬಾಲಕಿಯರು ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. (ಪ್ರೋಸಿಡಿಂಗ್ ಆಫ್ ದಿ ಗೌರ್‌ಮೆಂಟ್ ಆಫ್ ಮೈಸೂರು ದಿನಾಂಕ 08-10-1897)

1905 ರಿಂದ 1947ರ ವರೆಗೆ ಸಂಘದ ಆಸ್ತಿಯ ವೃದ್ಧಿ ವಿವಿದ ಮೂಲಗಳಿಂದ ಸೇರಿದಂತೆ ತೋರುವ ತಖ್ತೆ:-

ಈ ಸಂಘವನ್ನು ಸ್ಥಾಪಿಸಿ ಸುಮಾರು 42 ವರ್ಷಗಳುರುಳಿದರು ನಿಧಿ ಸಂಸ್ಥೆಯ ಮೂಲಧನವು 1947ರ ವೇಳೆಗೆ ನಿರೀಕ್ಷಿ ಸಿದಷ್ಟು ವೃದ್ಧಿಯಾಗಿರಲಿಲ್ಲ. ವಿದ್ಯಾರ್ಥಿ ವೇತನಗಳಿಗಾಗಿ ಬಹಳಷ್ಟು ಹಣವನ್ನು ಕೊಟ್ಟಿದೆ. ಆದರೆ ವಸೂಲಾಗಿರುವುದು ಕೇವಲ 19.179.33 ಅಣೆ 3 ಪೈಸೆ ಮಾತ್ರ. ಅಲ್ಲದೆ ಸಂಘದ ಮೂಲಬಂಡವಾಳದಿಂದಲೂ ಸಹ ಅಪಾರ ಮೊತ್ತದ ನಿಧಿ ಸಂಗ್ರಹಣೆಯಾಗುತ್ತಿಲ್ಲ. ವಿವಾಹ ಶುಭ ಕಾರ್ಯಗಳಲ್ಲೂ ಅಲ್ಪ ಪ್ರಮಾಣದ ಅಂದರೆ ಕೇವಲ 16.049.46.7 ಪೈಸೆ ಬಂದಿದ್ದು ಚಂದಾ ಹಣವು ಸ್ಪಷ್ಟವಾಗಿ ಸಂಗ್ರಹಣೆಯಾಗದೆ ನಿಧಿ ಸಂಸ್ಥೆ ಆರ್ಥಿಕ ದೃಷ್ಠಿಯಿಂದ ಸಮಸ್ಯಾತ್ಮಕವಾಗಿತ್ತು. ಈ ಮೇಲ್ಕಂಡ ರೀತಿಯಲ್ಲಿ ಆದಾಯವನ್ನು ಸಂಗ್ರಹಣೆ ಮಾಡಿದರೂ ಸಹ ವೆಚ್ಚದ ಬಾಬ್ತುಗಳು ಅಧಿಕವಾಗಿದ್ದು ವಿದ್ಯಾರ್ಥಿನಿಲಯಗಳ ನಿರ್ವಹಣೆ, ಆಡಳಿತ ಕಛೇರಿ ನೌಕರರ ವೇತನ, ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ, ಗ್ರಂಥಾಲಯ ಸೌಲಭ್ಯ ಇತ್ಯಾದಿಗಳಿಗಾಗಿ ಖರ್ಚುನ ಬಾಬ್ತು ಅಧಿಕವಾಗಿದ್ದಿತು.

ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘವು ಪ್ರತಿ ವರ್ಷ ನಡೆಸುತ್ತಿದ್ದ ಹಣಕಾಸಿನ ವ್ಯವಹಾರಗಳ ರೀತಿ ನೀತಿಗಳನ್ನು ಒಂದು ವರ್ಷದಲ್ಲೆ ನಡೆದಂತಹ ಹಣಕಾಸಿನ ಚಾಲನೆಯನ್ನು ಉದಾಹರಣೆಯ ಮೂಲಕ ತಿಳಿದುಕೊಳ್ಳಬಹುದು. ಹಣಕಾಸಿನ ವ್ಯವಹಾರಕ್ಕೆ ಸಂಬಂಧಸಿದ ಅತ್ಯುತ್ತಮ ಉದಾಹರಣೆ ಎಂದರೆ 1933-34 ನೇ ಸಾಲಿನ ಬ್ಯಾಲೆನ್ಸ್‌ಕೀಟ್.

## ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘದ ಸಾಧನೆಗಳು

1905 ರಲ್ಲಿ ಅಸ್ಥಿತ್ವ ಪಡೆದ ಸಂಘವು ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾದಂತೆ ಶಿಕ್ಷಣ, ವಸತಿ, ಆರೋಗ್ಯ, ಧಾರ್ಮಿಕ ಒಲವು, ರಾಜಕೀಯ ಅವಕಾಶ, ಸರಕಾರಿ ಸೇವೆಯಲ್ಲಿ ಉದ್ಯೋಗವಕಾಶ ಮತ್ತು ಮಾನವೀಯ ನೈತಿಕ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಿ ದೇಶದ ಸತ್ಪ್ರಜೆಗಳನ್ನಾಗಿ ರೂಪಿಸುವ ಹೆಮ್ಮೆಯ ಸಂಸ್ಥೆಯಾಗಿದೆ.

ವೀರಶೈವ ಲಿಂಗಾಯಿತ ಪಂಗಡದವರು ತಮ್ಮ ಸಮುದಾಯದ ವಿದ್ಯಾರ್ಥಿಗಳಿಗೆ ದೇಶ-ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಭಾವಂತ ಬಡವರಿಗೆ ಸೇವಾ-ಸೌಲಭ್ಯಗಳನ್ನ ದೊರಕಿಸಿಕೊಡಲು ನಡೆಸಿದ ಪ್ರಯತ್ನದ ಫಲವಾಗಿ ಮೈಸೂರು ಲಿಂಗಾಯತ ವಿದ್ಯಾ ನಿಧಿ ಸಂಸ್ಥೆ ಮೂರ್ತಿಭವಿಸಿದೆ. ಮೈಸೂರು ಸಂಸ್ಥಾನದಲ್ಲಿ ಈ ಉದ್ದೇಶಗಳಿಂದ ಸ್ಥಾಪಿಸಲ್ಪಟ್ಟ ಪ್ರಪ್ರಥಮ ಸಂಸ್ಥೆಯಾಗಿದೆ.

## ವಿದ್ಯಾರ್ಥಿ ನಿಲಯಗಳ ಸ್ಥಾಪನೆ

ಆಧುನಿಕ ಯುಗದಲ್ಲಿ ವಿದ್ಯಾರ್ಥಿ ನಿಲಯಗಳ ಅವಶ್ಯಕತೆಯನ್ನು ಹೆಚ್ಚು ವಿಸ್ತರಿಸಿ ಹೇಳುವ ಅಗತ್ಯವಿಲ್ಲ. ಆದರೆ ಮಧ್ಯಯುಗದಲ್ಲಿ ಈ ರೀತಿಯಲ್ಲಿ ವಿದ್ಯಾರ್ಥಿ ನಿಲಯಗಳನ್ನು ಅಪೇಕ್ಷಿಸುವ ವಿದ್ಯಾರ್ಥಿಗಳ ಸಂಖ್ಯೆ ಅತಿ ವಿರಳ. ಅಲ್ಲದೆ ಇಂದಿನ ಸ್ಪರ್ಧಾತ್ಮಕ ಸ್ಥಿತಿ ಅಂದು ಇರಲಿಲ್ಲ. ಇದಕ್ಕೆ ಕಾರಣ ಶಿಕ್ಷಣವೆಂಬುದು ಧಾರ್ಮಿಕವಾಗಿತ್ತಲ್ಲದೆ. ಸ್ಥಳೀಯ ಮಟ್ಟದಲ್ಲಿಯೇ ಪೂರೈಕೆಯಾಗುತಿತ್ತು. ಪಾಶ್ಚಿಮಾತ್ಯರ ಆಗಮನದಿಂದ ಜೀವನದ ಪ್ರತಿರಂಗದಲ್ಲಿ ಸ್ಪೂರ್ತಿದಾಯಕವಾದ ಬದಲಾವಣೆ ಪ್ರಾರಂಭವಾಯಿತು. ಶಿಕ್ಷಣ ವಲಯದಲ್ಲಾದ ಕ್ರಾಂತಿಯುತವಾದ ಬೆಳವಣಿಗೆಯಿಂದ ಹೊಸ ಶಿಕ್ಷಣ ಕೇಂದ್ರಗಳು ವಿಶ್ವವಿದ್ಯಾನಿಲಯಗಳು ವೈಜ್ಞಾನಿಕವಾಗಿ

ಸುವ್ಯವಸ್ಥಿತವಾಗಿ ಪ್ರಾರಂಭವಾದವು. ಪಾಶ್ಚಿಮಾತ್ಯ ಶಿಕ್ಷಣ ನಿಡುವ ವಿದ್ಯಾಲಯಗಳು ಸ್ಥಾಪನೆಯಾದುದು ನಗರ ಕೇಂದ್ರಗಳಲ್ಲಿ ಮಾತ್ರ ಇವೆ. ಭಾರತ ಬಹುಸಂಖ್ಯಾತ ಗ್ರಾಮೀಣ ಜನರಿಂದ ಕೂಡಿದ ದೇಶ ನಗರದ ವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳಿಗೆ ವಸತಿ ಸಮಸ್ಯೆ ಎದುರಾಯಿತು. ಕರ್ನಾಟಕ ಪ್ರಮುಖ ನಗರಗಳಾದ ಮೈಸೂರು, ಬೆಂಗಳೂರು, ಧಾರವಾಡ, ಮಂಗಳೂರು ಮುಂತಾದ ನಗರಗಳಲ್ಲಿ ಉನ್ನತ ಶಿಕ್ಷಣ ನೀಡುವ ವಿದ್ಯಾಲಯಗಳು ಪ್ರಾರಂಭವಾದ್ದರಿಂದ ವೀರಶೈವ ಸಮುದಾಯದ ಜನರು ಕೃಷಿ ಪ್ರಧಾನ ಗ್ರಾಮಗಳಲ್ಲಿ ಜೀವಿಸುತ್ತಿದ್ದು ಆರ್ಥಿಕವಾಗಿ ಹಿಂದುಳಿದಿದ್ದರಿಂದ ಉನ್ನತ ಶಿಕ್ಷಣವನ್ನು ಅಪೇಕ್ಷಿಸುವ ಪ್ರತಿಭಾವಂತರಿಗೆ ವಸತಿ ನಿಲಯಗಳ ಸಮಸ್ಯೆ ಎದುರಾಯಿತು.

ವೀರಶೈವ ವಿದ್ಯಾರ್ಥಿಗಳ ವಸತಿ ಸಮಸ್ಯೆಯನ್ನರಿತ ತೊಟದಪ್ಪ, ಸಿಡ್ಲುಬಸಪ್ಪ ಸಿರಸಂಗೆ ದೇಸಾಯಿ, ಪುಟ್ಟಣ್ಣಶೆಟ್ಟಿ, ಮುರುಘಾ ರಾಜೇಂದ್ರ ಮಠದ ಸ್ವಾಮಿಗಳು, ಕಂಬಿ ಸಿದ್ದರಾಮಣ್ಣ, ಮರಿಯಪ್ಪ, ಸರ್ಪಭೂಷಣ ಸ್ವಾಮಿಗಳಂತಹ ಶರಣರ ಔದಾರ್ಯತೆಯಿಂದ ಬೀರೂರು ಪತ್ರೆ ಮನೆತನದವರ 14171 ರೂ ಉದಾರ ದಾನಗಳಿಂದ ವಿದ್ಯಾರ್ಥಿನಿಲಯಗಳ ಸ್ಥಾಪನೆ ಅನಿವಾರ್ಯವಾಗಿ ಬೆಳೆದು ಬಂದವು.

ವೀರಶೈವ ಲಿಂಗಾಯತ ಮಠಾಧಿಪತಿಗಳು ನಾಡಿನ ವಿವಿಧ ಭಾಗಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಮತ್ತು ವಿದ್ಯಾಕೇಂದ್ರಗಳನ್ನು ಪ್ರಾರಂಬಿಸಿದರು. ಸರಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಸ್ಪರ್ಧೆ ದಿನದಿಂದ ದಿನಕ್ಕೆ ದ್ವಿಗುಣಗೊಂಡ ಪರಿಣಾಮವಾಗಿ ಪ್ರೌಢ ವಿದ್ಯಾಭ್ಯಾಸ ಪಡೆಯಲು ನಗರಗಳಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಮಸ್ಯೆ ಎದುರಾಯಿತು. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ವೀರಶೈವ ವಿದ್ಯಾರ್ಥಿಗಳ ಭೋಜನಾಧಿಗಳಿಗೆ ತಕ್ಕ ಸೌಲಭ್ಯಗಳರಿಲಿಲ್ಲ. ಪ್ರೌಢ ವಾಸಂಗಕ್ಕಾಗಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಏರ್ಪಡಿಸಿರುವ ಸೌಕರ್ಯಗಳ ಸಂಪೂರ್ಣ ಪ್ರಯೋಜನವನ್ನು ನಮ್ಮ ಸಮುದಾಯದ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳುವಲ್ಲಿ ಅಸಮರ್ಥರಾಗಿರುತ್ತಾರೆ. ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬರುವ ಕೆಲವು ವಿದ್ಯಾರ್ಥಿಗಳು ಅನಾರೋಗ್ಯಕರವಾದ ಮತ್ತು ಅನುಪಯುಕ್ತವಾದ ಅವ್ಯವಸ್ಥೆಗಳಿಗೆ ಗುರಿಯಾಗಿದ್ದಾರೆ. ಇವರಿಗೊಸ್ಕರ ಒಂದು ಅನುಕೂಲಕರವಾದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲು ಈ ಹಿಂದಿನಿಂದಲೂ ಚಿಂತಿಸಲಾಗುತ್ತಿದೆ. ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು ಖಾಲಿ ನಿವೇಶನಕ್ಕಾಗಿ 1908 ರಿಂದಲೂ ಸರ್ಕಾರದಲ್ಲಿ ಪತ್ರವ್ಯವಹರಿಸಿದರು ನಿವೇಶನ ದೊರೆಯಲಿಲ್ಲ. ನಿವೇಶನ ದೊರೆಯುವವರೆವಿಗೂ ಹೊಸ ಕಟ್ಟಡ ನಿರ್ಮಾಣವಾಗುವವರೆವಿಗೂ ಬೇರೆಯಾವುದಾದರು ಏರ್ಪಾಟನ್ನು ಮಾಡಬೇಕೆಂದು ಉದ್ದೇಶಿಸಿ 14-06-1912 ರಲ್ಲಿ 30 ಮಂದಿ ಬಾಲಕರಿಗೊಸ್ಕರ ವಿದ್ಯಾರ್ಥಿನಿಲಯವನ್ನು ವೀರಶೈವಾಶ್ರಮ ಎಂಬ ಹೆಸರಿನಲ್ಲಿ ಗಾಂಧಿನಗರದ ಒಂದು ಬಾಡಿಗೆ ಕಟ್ಟಡದಲ್ಲಿ ಪ್ರಾರಂಬಿಸಲಾಯಿತು. ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಗೆ ಸೂಕ್ತ ಸೌಲಭ್ಯ ಬಾಡಿಗೆ ಕಟ್ಟಡದಲ್ಲಿ ಲಭ್ಯವಿಲ್ಲದ ಕಾರಣ ಮತ್ತು 1909 ರಿಂದ ವಿದ್ಯಾಭ್ಯಾಸವನ್ನರಿಸಿ ಬೆಂಗಳೂರಿಗೆ ಬಂದು ವಿದ್ಯಾಕೇಂದ್ರಗಳಲ್ಲಿ ಪ್ರವೇಶ ಪಡೆದು ವಿದ್ಯಾರ್ಥಿ ನಿಲಯಕ್ಕಾಗಿ ಅರ್ಜಿಗಳನ್ನು ಹಾಕುವ ಮೂಲಕ ಏಕರೀತಿಯಲ್ಲಿ ಬೇಡಿಕೆಗಳ ಸಂಖ್ಯೆ ಹೆಚ್ಚುತ್ತಾ ಬಂದಿತು. ಅಲ್ಲದೆ ವರ್ಷದಿಂದ ವರ್ಷಕ್ಕೆ 50 ರಿಂದ 60 ಅರ್ಜಿಗಳು ಬಂದವು ಸ್ಥಳಾವಕಾಶಕ್ಕಾಗಿ ಬೇಡಿಕೆ ಹೆಚ್ಚಾಯಿತು. 1915-16 ರ ವೇಳೆಗೆ 197 ವಿದ್ಯಾರ್ಥಿಗಳಿಂದ ಬೇಡಿಕೆ ಬಂದಿತು. ವಿದ್ಯಾರ್ಥಿಗಳ ಕೋರಿಕೆಯನ್ನು ಗಮನಿಸಿದ ಸಂಘದ ಪದಾಧಿಕಾರಿಗಳು ವೆಸ್ಲಿಯನ್ ಮಿಷನ್ ಅಧಿಕಾರಿಗಳಲ್ಲಿ ತಮ್ಮ ಸಮಸ್ಯೆ ತಿಳಿಸಿದಾಗ ವೀರಶೈವ ವಿದ್ಯಾರ್ಥಿಗಳಿಗೆ (ಕಲಿಜಯೇಟ್ ವಿದ್ಯಾರ್ಥಿಲಯಗಳಲ್ಲಿ ಪ್ರವೇಶ ಪಡೆದಿರುವವ) ಪ್ರತ್ಯೇಕವಾದ ಮತ್ತು ಅನುಕೂಲಕರವಾದ ಏರ್ಪಾಟುಗಳನ್ನ ಮಾಡಿದರು. 1916 ರ ವೇಳೆಗೆ ವಿದ್ಯಾರ್ಥಿಗಳು ಮತ್ತಷ್ಟು ಹೆಚ್ಚಿದ್ದರಿಂದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಲಿಂಗಾಯತ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂದು ಮತ್ತು ಅವರ ಭೋಜನಕ್ಕೂ ಸೌಲಭ್ಯಗಳನ್ನ ಕಲ್ಪಿಸಿಕೊಡಬೇಕೆಂದು ಮ್ಯಾನೇಜರ್ ಟೇಟೆರವರ ಮೂಲಕ ಮ್ಯಾನೆಜಿಂಗ್ ಕಮಿಟಿಯವರಲ್ಲಿ ವಿಜ್ಞಾಪಿಸಿಕೊಂಡರು. ಸಂಘದ ಸ್ವಂತ ಹಣದಿಂದಲೇ ಒಂದು ಅಡುಗೆಯ ಮನೆಯನ್ನ ಕಟ್ಟಿಸಿ ವೀರಶೈವ ವಿದ್ಯಾರ್ಥಿಗಳಿಗೆ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ಸೌಲಭ್ಯ ದೊರಕಿಸಿ ಕೊಡಲಾಯಿತು. ಸಂಘದವರು ಕೊಡಲು ಶಕ್ತರಾಗಿರುವ

ಧನಸಹಾಯವು ಅತ್ಯಲ್ಪವಾಗಿದೆ. ಸ್ಪೆಷಲ್ ಗೌರ್ನಮೆಂಟ್ ಗ್ರ್ಯಾಂಟ್ ನಡಿ ವಿದ್ಯಾರ್ಥಿ ವೇತನಗಳನ್ನು ಪಡೆಯದಿರುವಂತಹವರ ಪೋಷಣೆಯ ವೆಚ್ಚ ಹೆಚ್ಚಾಗುತ್ತಾ ಇದೆ. ಸರ್ಕಾರಿ ಸೆಕೆಂಡರಿ ಶಾಲೆ ಮತ್ತು ತಾಂತ್ರಿಕ ವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುವ ಬಾಲಕರಿಗೆ ವಿದ್ಯಾರ್ಥಿ ನಿಲಯಗಳಿಲ್ಲ. ವರ್ಷದಿಂದ ವರ್ಷಕ್ಕೆ ವಿದ್ಯಾಭ್ಯಾಸವನ್ನರಸಿ ಪಟ್ಟಣಗಳಿಗೆ ದಾವಿಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಅಭಾವವಿದೆ. ವಸತಿಗಾಗಿ ಅನುಕೂಲಕರವಾದ ಮತ್ತು ವಿಶಾಲವಾದ ನಿವೇಶನ ಮತ್ತು ಕಟ್ಟಡದ ಅವಶ್ಯಕತೆಯನ್ನರಿತು ನಿವೇಶನ ಪಡೆಯಲು ಕಾಳಜಿ ವಹಿಸಿದರು.

## ವಿದ್ಯಾರ್ಥಿ ವೇತನಗಳು

ಮೈಸೂರು ಸಂಸ್ಥಾನದ ವೀರಶೈವ ಲಿಂಗಾಯಿತ ಬಡ ವಿದ್ಯಾರ್ಥಿಗಳಿಗೆ ಹಣಕಾಸಿನ ಸಂಕಷ್ಟವನ್ನು ಸಾಧ್ಯವಾದ ಮಟ್ಟಿಗೆ ಸುಧಾರಿಸುವ ಮೂಲಕ ಉನ್ನತ ವಿದ್ಯಾಭ್ಯಾಸ ಮಾಡಲು ಅಗತ್ಯವಾದ ಪುಸ್ತಕಕೊಳ್ಳಲು, ಭೋದನ ಶುಲ್ಕ, ಗ್ರಂಥಾಲಯ, ಪ್ರವೇಶ ಶುಲ್ಕ, ಕ್ರೀಡೆ, ಸಾಂಸ್ಕøತಿಕ ಶುಲ್ಕ, ಸೇರಿದಂತೆ ಪರೀಕ್ಷಾ ಶುಲ್ಕ ಬರಿಸಲು ಸಾಧ್ಯಾವಾಗದೆ ಶಿಕ್ಷಣದಿಂದ ವಂಚಿತರಾಗುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನ ಪರಿಗಣಿಸಿದ ಸಮುದಾಯದ ಕರುಣಾಮಯಿಗಳು, ಆರ್ಥಿಕ ಸಹಾಯಕ್ಕೆ ತೀರ್ಮಾನ ಮಾಡಿದರು. ಆರ್ಥಿಕವಾಗಿ ದುರ್ಬಲರು, ಪ್ರತಿಭಾವಂತರು ಹಾಗೂ ಅಧ್ಯಯನ ಮಾಡುವ ವಿವಿಧ ವರ್ಗಗನ್ನಾಧರಿಸಿದಂತೆ ವಿದ್ಯಾರ್ಥಿ ವೇತನ ನೀಡಲು ಸಂಘದವರು ಸಭೆ ನಡೆಸಿದರು. ಬಡತನದ ವಿಷವರ್ತುಲದಲ್ಲಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಈ ವೇತನವೇ ಹೊಸ ಭರವಸೆಯ ವರದಾನವಾಯಿತು. ಮೈಸೂರು ಸಂಸ್ಥಾನದ ವಿವಿಧ ಭಾಗಗಳಿಂದ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು, ಮೈಸೂರು, ಮದ್ರಾಸ್, ಬೊಂಬಾಯಿ, ಕಲ್ಕತ್ತ, ಮುಂತಾದ ಸ್ಥಳಗಳಿಗೂ ಹಾಗೂ ಉನ್ನತ ವ್ಯಾಸಂಗಕ್ಕಾಗಿ ದೇಶ-ವಿದೇಶಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಕಳೆದ 40 ವರ್ಷಗಳಿಂದ (1908 ರಿಂದ 1947 ರವರೆಗೆ) ಸಾಧ್ಯವಾದಷ್ಟು ಪ್ರತಿ ವರ್ಷವೂ ವೇತನ ನೀಡುತ್ತಾ ಬಂದಿದ್ದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲ ಕಲ್ಪಿಸಲಾಗಿದೆ. ವಿದ್ಯಾರ್ಥಿ ವೇತನಗಳನ್ನು ಮಂಜೂರು ಮಾಡುವುದಕ್ಕಾಗಿ ಮತ್ತು ನಿರ್ದಿಷ್ಟ ಉದ್ದೇಶಗಳಿಗಾಗಿ ನೀಡಿದ ಯಾವುದೆ ಒಂದು ಕೊಡುಗೆಯನ್ನು ಸಂಸ್ಥೆಯು ಅಂಗೀಕರಿಸಿ. ಕೊಡುಗೈ ದಾನಿಗಳಿಂದ ಆಗಿಂದ್ದಾಗ್ಗೆ ಸಂದಾಯವಾದ ಮೊಬಲಗಿನಿಂದಲೂ, ಸಂಸ್ಥಾನದಲ್ಲಿನ ಸಂಘದ ಸದಸ್ಯತ್ವದ ಚಂದಾಹಣ, ಇತರೆ ವಿವಾಹ, ಶುಭ ಸಮಾರಂಭಗಳಲ್ಲಿ ಸಂಗ್ರಹಣೆಯಾದ ಹಣದ ಹುಟ್ಟುವಳಿಗಳಿಂದ ದೊರೆತ ಹಣದಿಂದ ವಿದ್ಯಾರ್ಥಿ ವೇತನಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗುತ್ತಿದೆ. 1947 ರ ವೇಳೆಗೆ ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘವು ನಿಧಿಯಲ್ಲಿ ಕೂಡಿಟ್ಟಿದ ಹಣದಲ್ಲಿ 95,091,4,8 ಪೈಸೆ ವೇತನವನ್ನು (ಇಂದು 40 ಲಕ್ಷ ರೂಗಳನ್ನು) ಸುಮಾರು 2564 ವಿದ್ಯಾರ್ಥಿಗಳಿಗೆ ವಿತರಣೆ ಮಾಡುವ ಮೂಲಕ ಪ್ರತಿಭಾವಂತ ಬಡವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಬಾರದಂತೆ ಧನ ಸಹಾಯ ನೀಡಿ ಅವರ ಉಜ್ವಲ ಭವಿಷ್ಯಕ್ಕೆ ಮತ್ತು ಸಧೃಡವಾದ ಶೈಕ್ಷಣಿಕ ವಿಕಸನಕ್ಕೆ ಭದ್ರ ಬುನಾದಿ ಹಾಕಿದ್ದಾರೆ.

ವೀರಶೈವ ಲಿಂಗಾಯತ ಆಸಕ್ತಿಯುತ ವಿದ್ಯಾರ್ಥಿಗಳು ಅಂತರರಾಷ್ಟ್ರಿಯ ಹಂತದಲ್ಲಿ ಕಲಿಯಲು ತೆರಳಿದ 15 ಮಂದಿ ವಿದ್ಯಾರ್ಥಿಗಳಿಗೆ ವೇತನ ಕಲ್ಪಿಸಿತು. ವಿದ್ಯಾರ್ಥಿ ವೇತನಗಳನ್ನು ವೀರಶೈವ ಲಿಂಗಾಯತ ಸಮುದಾಯದವರಿಗೆ ಮಾತ್ರ ಅವರ ಆರ್ಥಿಕ ಸ್ಥಿತಿಗತಿ, ಹಿಂದುಳಿದಿರುವ ಸ್ಥಿತಿಯನ್ನು ಮತ್ತು ವಿದ್ಯಾಭ್ಯಾಸದಲ್ಲಿ ಅವನ ಗರಿಷ್ಠ ಸಾಧನೆಗಳನ್ನ ಪರಿಗಣಿಸಿ ವಿದ್ಯಾರ್ಥಿ ವೇತನ ಮಂಜೂರು ಮಾಡಬೇಕೆಂಬ ನಿಯಮ ರೂಡಿಸಿ ಕೊಂಡಿದ್ದರು. ದಾನಿಗಳಿಂದ ಪಡೆದ ಕೊಡುಗೆಗಳನ್ನು ಸಂಸ್ಥೆಯಿಂದ ವಿಧಾಯಕ ಮಾಡಲ್ಪಟ್ಟ ನಿಯಮಗಳನ್ನು ಪಾಲಿಸಿ ವಿದ್ಯಾರ್ಥಿವೇತನ ಕಲ್ಪಿಸಲಾಯಿತು.

**ವಿದ್ಯಾರ್ಥಿ ವೇತನಗಳನ್ನು ವಸೂಲಿ ಮಾಡುವುದು**

ಸಂಘದಿಂದ ವಿದ್ಯಾಭ್ಯಾಸಕ್ಕಾಗಿ ಸ್ವೀಕರಿಸಿದ ವೇತನಗಳನ್ನು ಬಡ್ಡಿಯಿಲ್ಲದೆ ಒಂದೆ ಮೊತ್ತದಲ್ಲಿ ಮರುಪಾವತಿಗೆ ಅವಕಾಶ ನೀಡಲಾಗಿತ್ತು ಅಥವಾ ತಿಂಗಳ ವರಮಾನ 500 ರೂಗಳ ಮೇಲ್ಪಟ್ಟು ಪಡೆಯುತ್ತಿದ್ದವರೂ ಶೇಕಾಡ 10 ರಷ್ಟನ್ನು ಮಾಸಿಕ ಕಂತುಗಳ ರೂಪದಲ್ಲಿ ಮರುಪಾವತಿ ಮಾಡಬಹುದಿತ್ತು.

ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿದ ಒಂದು ವರ್ಷದ ನಂತರ ಪಡೆದ ವೇತನವನ್ನು ಮರುಪಾವತಿ ಮಾಡಲು ಆರಂಭಿಸಬೇಕು. ಸಂಘದ ಸಹಾಯ ಪಡೆದ ವಿದ್ಯಾರ್ಥಿ ಯಾವ ಉದ್ಯೋಗದಲ್ಲಿ ಇಲ್ಲವಾದರೆ ಅವನ ತಂದೆ (ಪೋಷಕರು) ಮರುಪಾವತಿ ಮಾಡಬೇಕಿತ್ತು. ಪ್ರತಿ ವರ್ಷ ವಿದ್ಯಾರ್ಥಿ ವೇತನ ನೀಡಲು ಜುಲೈನಲ್ಲಿ ಪತ್ರಿಕಾ ಪ್ರಕಟಣೆಯ ಮೂಲಕ ಸೂಚನೆ ನೀಡಿ ಅರ್ಜಿ ಪಡೆಯುತ್ತಿದ್ದರು ಕಾರ್ಯದರ್ಶಿಗಳು ಕಾರ್ಯನಿರ್ವಹಣಾ ಸಮಿತಿಯವರೊಡನೆ ಚರ್ಚಿಸಿ ವಿತರಣಾ ಪಟ್ಟಿಗೆ ಸಹಿ ಮಾಡಿ ಮಂಜೂರು ಮಾಡುತ್ತಿದ್ದರು ಪ್ರತಿವರ್ಷ ವಿವಿಧ(16) ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚವನ್ನು ಪರಿಗಣಿಸಿ ಪ್ರಾರಂಭದಲ್ಲಿ 10 ವಿದ್ಯಾರ್ಥಿಗಳಿಂದ 300 ವಿದ್ಯಾರ್ಥಿಗಳಿಗೆ ವೇತನ ನೀಡುತಿತ್ತು.

**ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಇತರೆ ಸಾಧನೆಗಳು:-**

- 1945 ರಲ್ಲಿ ಮೈಸೂರು ಸರಕಾರದ ಉಚ್ಚನ್ಯಾಯಾಲಯವು ವಿದ್ಯಾರ್ಥಿ ನಿಲಯಗಳ ಆಡಳಿತವನ್ನು ಕಾನೂನು ಬದ್ದವಾಗಿ ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಮೈ.ಲಿ.ವಿ.ನಿ.ಅ (ಒಐಇಈಂ) ಗೆ ಒಂದು ಅಂಗರಚನೆಯನ್ನು ಸಿದ್ದಪಡಿಸಿ ಕೊಟ್ಟಿರುವ ಆಧಾರದ ಮೇಲೆ ನಡೆಸಿಕೊಂಡು ಬರುತ್ತಿರುವ ಹಾದಿ ಪ್ರಗತಿ ಪತದತ್ತ ಚಲನ ಶೀಲವಾಗಿದೆ.
- ಪಕ್ಷ ಪಂಗಡ ಭೇದವಣಿಸದೆ ಬಡವರು, ಅರ್ಹರು, ರಿಕ್ತರು ಆದ ಮೈಸೂರು ಸಂಸ್ಥಾನದ 3500 ಕ್ಕೂ ಮಿಕ್ಕ ಆಂಗ್ಲ ಭಾಷೆ ಮತ್ತು ಸಂಸ್ಕøತ ವಿದ್ಯಾರ್ಥಿಗಳಿಗೆ ನೆರವು ನೀಡಿದೆ. ಹೀಗೆ ನೆರವು ಪಡೆದವರಲ್ಲಿ ಮಂತ್ರಿಗಳು, ಹೈಕೋರ್ಟ್, ನ್ಯಾಯಧೀಶರು, ವಿಧಾನ ಸಭಾ ಸದಸ್ಯರು, ಜಿಲ್ಲಾಧಿಕಾರಿಗಳು, ಇಲಾಖೆಯ ಮುಖ್ಯಾಧಿಕಾರಿಗಳು ವಿಶ್ವವಿದ್ಯಾಲಯಗಳ ಪ್ರವಾಚಕರು, ಪ್ರಾಂಶುಪಾಲರು, ಪ್ರಾಧ್ಯಾಪಕರು, ನ್ಯಾಯಧೀಶರು, ಆಸ್ಥಾನ ವಿದ್ವಾಂಸರು, ಗಣ್ಯವರ್ತಕರು, ಉದ್ಯಮಿಗಳು, ಗೆಜೆಟೆಡ್ ಅಧಿಕಾರಿಗಳು, ಉತ್ತಮ ವೈದ್ಯರು, ಇಂಜಿನಿಯರ್‌ಗಳು ಇತರ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಈ ಸಂಸ್ಥೆಯಿಂದ ಸಹಾಯ ಪಡೆದು ಉತ್ತಮ ಸ್ಥಾನಮಾನ, ಗೌರವಕ್ಕೆ ಪಾತ್ರರಾಗಿ, ನಾಡು ನುಡಿ, ದೇಶ ಸಮುದಾಯದ ಸೇವೆಯಲ್ಲಿ ನಿಷ್ಠಾವಂತರನ್ನಾಗಿ ರೂಪಿಸಿದ ಸಂಸ್ಥೆಯ ಸಾಧನೆ ಹೆಮ್ಮೆ ಪಡುವ ಸಂಗತಿಯಾಗಿದೆ.
- 1905 ಕ್ಕೂ ಪೂರ್ವದಲ್ಲಿ ವಿದ್ಯಾವಂತರು ಸರಕಾರದಲ್ಲಿ ಜವಾಬ್ದಾರಿಯುತ ಹುದ್ದೆ ಹೊಂದಿದ್ದವರು ಬೆರಳೆಣಿಕೆಯಷ್ಟಿದ್ದರು. ನಿಧಿ ಸಂಸ್ಥೆ ಸ್ಥಾಪನೆಯಾದ ನಂತರ ವಿದ್ಯಾ ಪ್ರಗತಿ ಹೆಚ್ಚುತ್ತಾ ಬಂದಿದೆ. ರಾಜಕೀಯವಾಗಿ ಮತ್ತು ಸರಕಾರಿ ಸೇವೆಯಲ್ಲಿ ಹೆಚ್ಚಿನ ಅವಕಾಶಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಸಂಸ್ಥೆಯ ನೆರವು ಅಪಾರವಾಗಿದೆ.
- ಸಂಘದ ಮೂಲಧನದಿಂದ ವಾರ್ಷಿಕವಾಗಿ ಬರುತ್ತಿದ್ದ ವರಮಾನ ಸುಮಾರು 12 ಸಾವಿರ ರೂ ಮಾತ್ರವಿತ್ತು ಬಡ ವಿದ್ಯಾರ್ಥಿಗಳು ನೆರವು ಕೋರಿ ನೂರಕ್ಕೂ ಹೆಚ್ಚು ಅರ್ಜಿಗಳು ಪ್ರಾರಂಭದ ದಿನಗಳಲ್ಲಿಯೇ ಬರುತ್ತಿದ್ದವು. ನಿಧಿ ಸಂಸ್ಥೆಯು ದೇಶ ವಿದೇಶಗಳಲ್ಲಿ ಕಲಿಯಲು ಅರ್ಹರಾದ ವಿದ್ಯಾರ್ಥಿಗಳಿಗೆ ಸಹಾಯ ನೀಡುತ್ತಾ ಇಂದಿನವರೆವಿಗೂ ಸೇವೆ ಮುಂದುವರಿಸಿಕೊಂಡು ಬರುತ್ತಿದೆ. ನಿಧಿ ಸಂಸ್ಥೆಯ ಪದಾಧಿಕಾರಿಗಳ ಕಾರ್ಯ ವೈಖರಿಯಿಂದ ಸಂಸ್ಥೆ ಯಶಸ್ವಿನ ಹಾದಿಯಲ್ಲಿ ಚಲುಸುತ್ತಿದೆ. 1947 ರ ವೇಳೆಗೆ ಸಂಸ್ಥೆಯ ಅಧ್ಯಕ್ಷರಾದ ಶಾಂತವೀರಪ್ಪ ಮತ್ತು ತೊಬಗೆರೆ ನಂಜಪ್ಪನವರ ವಿಶೇಷ ಪರಿಶ್ರಮ

ಪ್ರಯತ್ನದಿಂದಾಗಿ ವೇತನ ಮರುಪಾವತಿಯ ಪ್ರಮಾಣ ಹೆಚ್ಚಾಗಿದ್ದು ಮೂಲನಿಧಿ ಸಂಗ್ರಹಣೆ ಹೆಚ್ಚಾದ್ದರಿಂದ ಮತ್ತಷ್ಟು ವಿದ್ಯಾರ್ಥಿಗಳಿಗೆ ವೇತನ ಸೇರಿದಂತೆ ಹಲವು ಸೇವಾ ಸೌಲಭ್ಯಗಳನ್ನು ಕಲ್ಪಿಸುತ್ತಿದೆ.

- ಸಂಘದ ಪ್ರಯತ್ನದಿಂದ ಸಂಸ್ಕøತಿ ವಿದ್ಯಾಕೇಂದ್ರಗಳಲ್ಲಿ ಶಕ್ತಿ ವಿಶಿಷ್ಠಾದ್ವೈತ ಸಿದ್ದಾಂತ ಅಧ್ಯಯನಕ್ಕೆ ಅವಕಾಶ ಲಭ್ಯವಾಯಿತು. ಮೈಸೂರು ಸಿದ್ದಲಿಂಗಯ್ಯ ಮತ್ತು ಬೆಂಗಳೂರಿನ ವೀರಭದ್ರಪ್ಪನವರ ಸಂಸ್ಕøತ ಪಾಠಶಾಲೆಗಳು ಸ್ಥಾಪನೆಗೆ ಸಂಘದ ಪ್ರೇರಣೆ ಮತ್ತು ಸಹಾಯವು ಗಮನಾರ್ಹ ಸಂಘತಿಯಾಗಿದೆ.
- ಹೈದರಾಬಾದ್ ಸಂಸ್ಥನಾದ ಪರಳಿ ಜ್ಯೋತಿರ್ಲಿಂಗಕ್ಕೆ ವೀರಶೈವರು ರುದ್ರಾಭಿಷೇಕ ಮಾಡುವ ಹಕ್ಕಿಗೆ ಚ್ಯುತಿ ಬಂದಾಗ ಹಾನಗಲ್ಲು ಕುಮಾರಸ್ವಾಮಿಗಳು 1925 ರಲ್ಲಿ ಕರ್ನಾಟಕ ಭಾಷಾರತ್ನ ಕರಿಬಸವಶಾಸ್ತ್ರಿಗಳು, ವಿರೂಪಕ್ಷ ಒಡೆಯರು ಸಂಘದ ಪ್ರತಿನಿಧಿ ಚಂದ್ರಶೇಖರ ಶಾಸ್ತ್ರಿಗಳು ಪರಾಮರ್ಷನ ಸಭೆ ಮತ್ತು ವಾದದಲ್ಲಿ ಭಾಗವಹಿಸಿ ಹೈದರಾಬಾದಿನ ನಿಜಾಮರಲ್ಲಿ ಒತ್ತಡ ತಂದರು ನಿಜಾಮರಿಮದ ರುದ್ರಾಭಿಷೇಕದ ಹಕ್ಕು ಮಾನ್ಯವಾಯಿತು. ಜೊತೆಗೆ ವೀರಶೈವರಿಗಾಗಿದ್ದ ಸಾಂಸ್ಕøತಿಕ ಅನ್ಯಾಯದ ವಿರುದ್ದ ಪ್ರತಿಭಟಿಸಲು ಚಂದ್ರಶೇಖರ ಶಾಸ್ತ್ರಿಗಳನ್ನು ಕಳುಹಿಸಿ ನ್ಯಾಯಯುತವಾದ ಹಕ್ಕುಗಳನ್ನು ಪಡೆದರು.
- ನಿಧಿ ಸಂಸ್ಥೆ ಅಸ್ಥಿತ್ವ ಪಡೆದಿಂದನಿಂದಲೂ ಮೈಸೂರು ಸ್ಟಾರ್ ಪತ್ರಿಕೆಯ ಸಂಪಾದಕ ಮಾಲೀಕ ವೈ.ವಿರೂಪಾಕ್ಷಯ್ಯನವರು ಸಂಘದ ಕಾರ್ಯಕಲಾಪಗಳನ್ನು, ಬಡವಿದ್ಯಾರ್ಥಿಗಳಿಗೆ ನೀಡಿದ ನೆರವನ್ನ ತಮ್ಮ ಪತ್ರಿಕೆಯಲ್ಲಿ ಉಚಿತವಾಗಿ ಪ್ರಕಟಿಸಿ ಪ್ರಚಾರ ನೀಡಿ ಸಂಘದ ಬೆಳವಣಿಗೆಗೆ ಸಹಾಯಕರಾದರು. ಆಸ್ಥಾನ ವಿದ್ವಾಂಸ ಎನ್.ಆರ್.ಕರಿಬಸವ ಶಾಸ್ತ್ರಿಗಳು ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ನಿಧಿ ಸಂಸ್ಥೆಯ ಪರವಾದ ಹಲವು ಲೇಖನಗಳನ್ನು ಬರೆದು ವೀರಶೈವರಲ್ಲಿ ತಮ್ಮ ಜವಾಬ್ದಾರಿಯುತವಾದ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ ಜನಾಂಗದ ಹಿರಿಮೆಯನ್ನ ಹೆಚ್ಚುವಂತೆ ಮಾಡಿದರು. ಉದಾ:- 26-10-1919 ರಲ್ಲಿ ಜಯದೇವ ವಿದ್ಯಾರ್ಥಿ ನಿಲಯ ಶಂಕುಸ್ಥಾಪನೆ ಮಹೋತ್ಸವ ವಿವರಗಳನ್ನು ವಸ್ತುನಿಷ್ಠ ಮತ್ತು ಸ್ವಾರಸ್ಯಕರವಾಗಿ ಪ್ರಕಟಿಸಿದರು.
- 1908 ರಿಂದ ಸಂಘದ ನಿಧಿ ಸಂಗ್ರಹಕ್ಕಾಗಿ ಹೆಜ್ಜೆಯಿಟ್ಟ ಪದಧಿಕಾರಿಗಳು ವಿವಹಾದ ಶುಭಾ ಕಾರ್ಯಗಳಲ್ಲಿ ಸಮುದಾಯದವರ ಶೈಕ್ಷಣಿಕ ಹಿತಾಸಕ್ತಿಗಾಗಿ ಶುಭ ದ್ರವ್ಯ ಸಂಗ್ರಹಿಸಿದರು ಸುಮಾರು 22,000 ರೂಗಳನ್ನ ಸಂಘದ ನಿಧಿಗೆ ಸೇರಿಸಿ ಮತ್ತಷ್ಟು ಹೆಚ್ಚಾಗಿ ಸಂಗ್ರಹಿಸಲು ಕಾರ್ಯ ಯೋಜನೆಗೆ ಮುಂದಾದರು.
- 1913 ರಲ್ಲಿ ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘದ ವತಿಯಿಂದ ಮೈಸೂರು ಸರ್ಕಾರದ ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಯನ್ನು ಕಳುಹಿಸುವ ಅವಕಾಶಲಭ್ಯವಾಯಿತು. (Pಡಿoಛಿeeಜiಟಿgs oಜಿ ಣhe govಣ oಜಿ mಥಿsoಡಿe. ಉovಣ ಔಡಿಜeಡಿ 166.74-ಉಖ-9-12-4,520-8-ಉಖ ಆಚಿಣeಜ 07-02-1913) ಪ್ರಖ್ಯಾತ ವಕೀಲ, ಸಮುದಾಯದ ಹಿತೈಷಿ ಎಂ.ಬಸವಯ್ಯನವರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗೆ ಆಯ್ಕೆಯಾಗಿ ಸಂಘ ಮತ್ತು ಸಮುದಾಯದ ಪರವಾಗಿ ಸರಕಾರದ ಶಾಸನ ಸಭೆಗಳಲ್ಲಿ ವಾದ ಮಂಡಿಸಿದರು. ಮಿಲ್ಲರ್ ಸಮಿತಿ ರಚನೆಗೆ ಮತ್ತು ಸಮುದಾಯದವರೂ ಸೇರಿದಂತೆ ಹಿಂದುಳಿದ ವರ್ಗದವರ ಶಿಕ್ಷಣ ಉದ್ಯೋಗ ಮತ್ತು ರಾಜಕೀಯ ಸ್ಥಾನಮಾನ ಪಡೆಯಲು ಸೂಕ್ತ ವೇದಿಕೆ ಲಭ್ಯವಾಯಿತು. ಮಿಲ್ಲರ್ ಸಮಿತಿ ಸದಸ್ಯರಾಗಿದ್ದ ಬಸವಯ್ಯನವರು ಶಿಕ್ಷಣ ಮತ್ತು ಸರ್ಕಾರಿ ಸೇವಾ ಸೌಲಭ್ಯಗಳಿಗಾಗಿ ಪರಾಮರ್ಷಿಸಿ ಹಿಂದುಳಿದವರ ಪರವಾಗಿ ಉತ್ತಮ ಸಲಹೆ ನೀಡಿದರು.
- 1918 ರ ಜೂನ್ ನಲ್ಲಿ ಸ್ಥಾಪಿತವಾದ ಪ್ರಜಾಮಿತ್ರ ಮಂಡಲಿ ಪಕ್ಷದಲ್ಲಿ ಕಾರ್ಯದರ್ಶಿಗಳಾಗಿ ಹಿಂದುಳಿದವರ ಪರವಾಗಿ ಹೋರಾಡಲು ಸ್ಪೂರ್ತಿ ಮತ್ತು ಬೆಂಬಲಿತ ಸಂಸ್ಥೆ ಎಂದರೆ ಮೈಸೂರು ಲಿಂಗಾಯಿತ ವಿದ್ಯಾನಿಧಿಸಂಸ್ಥೆ. ಈ ಸಂಘದ ಆಸ್ತಿ 1.33 ಎಕರೆ ನಿವೇಶನ, ಬೆಂಗಳೂರು ಜಿಲ್ಲಾಧಿಕಾರಿಗಳ ದ್ವಿಮುಖ ನೀತಿಯಿಂದ ಕೈಚೆಲ್ಲಿ ಹೊಗುತಿತ್ತು. ಮೈಸೂರು ಸರಕಾರದಲ್ಲಿ ಶಾಸನ ಸಭೆ ಮತ್ತು ಪ್ರಜಾಮಿತ್ರ ಮಂಡಲಿಯಲ್ಲಿ ಪ್ರಭಾವಿತ ವ್ಯಕ್ತಿ ಎಂದು ಗುರುತಿಸಿಕೊಂಡಿದ್ದ ಎಂ.ಬಸವಯ್ಯನವರು ದಿವಾನ್

ಬ್ಯಾನರ್ಜಿರವರಲ್ಲಿ ಮಾತುಕತೆ ನಡೆಸಿದರು. ಸಂಘದ ನಿವೇಶನವನ್ನ ಜಿಲ್ಲಾಧಿಕಾರಿಗಳಿಂದ ಮರು ಮಂಜೂರಾತಿ ಪತ್ರವನ್ನ ಪಡೆದು ಸಂಘಕ್ಕೊಂದು ನಿರ್ದಿಷ್ಟ ನೆಲೆ ಲಭ್ಯವಾದದ್ದೆ ಎಂ.ಬಸವಯ್ಯನವರ ಪರಿಶ್ರಮ ಮತ್ತು ಸಂಘದ ಪ್ರಾತಿನಿಧ್ಯದ ಸೂಕ್ತ ಅವಕಾಶ ಎಂದರೆ ತಪ್ಪಗಲಾರದು.

- 1920 ರ ನಂತರ ಜಿಲ್ಲೆ – ತಾಲ್ಲೂಕು ಬೋರ್ಡಗಳಿಗೆ, ನಿಗಮಗಳಿಗೆ ಪ್ರತಿನಿಧಿಗಳನ್ನ ಕಳುಹಿಸಲು ಅವಕಾಶ ಲಭ್ಯವಾಯಿತು. ಲಿಂಗಾಯತ ಸಂಘದ ವತಿಯಿಂದ ಸರಕಾರದ ವಿವಿಧ ವಲಯಗಳಲ್ಲಿ ಮೀಸಲಾಯಿತಿ ದೊರೆಯಿತು. ಸಂಘ ಮತ್ತು ಸಮುದಾಯದ ಪ್ರೋತ್ಸಾಹದಿಂದ ಹೆಚ್ಚು ಸೇವಾವಕಾಶಗಳು ಲಭ್ಯವಾದವು.
- ಸಂಘ ಸಂಸ್ಥೆಯ ಅಧ್ಯಕ್ಷರಾದ ಕೆ.ಪಿ.ಪುಟ್ಟಣ್ಣ ಶೆಟ್ಟರು ವೀರಶೈವ ಫ್ರೀ ಬೋರ್ಡಿಂಗ್ ಹೋಮ್‌ಗಾಗಿ 50ಸಾವಿರ ರೂ ಮೌಲ್ಯದ ಕಟ್ಟಡ ದಾನಮಾಡಿದ್ದಾರೆ ಸಾವಿರಾರು ರೂಗಳನ್ನ ಸಂಘಕ್ಕೆ ನಗದು ರೂಪದಲ್ಲಿ ದಾನ ಮಾಡಿದ್ದಾರೆ. ಸಂಘದ ಬೆಳವಣಿಗೆಗೆ ಜವಾಬ್ದಾರಿಯುತವಾಗಿ ಅಧ್ಯಕ್ಷರ ಕರ್ತವ್ಯಕ್ಕೆ ಲೋಪ ಬಾರದಂತೆ ಕೆಲಸ ನಿರ್ವಹಿಸಿದ್ದಾರೆ.
- ಕಂಬಿ ಸಿದ್ದರಾಮಣ್ಣ ಮತ್ತು ಕೆ.ಎಸ್ ಗಂಗಮ್ಮನವರು ಸಂಘದ ಮೂಲನಿಧಿಗೆ 10.275 ರೂಗಳನ್ನು ನೀಡಿ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನೆರವು ನೀಡಿದ್ದಾರೆ.
- ಮೈಸೂರು ಹೈಕೋರ್ಟಿನ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ಜಿ. ಪರಮಶಿವಯ್ಯನವರು ಸಂಘದ ಕಾರ್ಯದರ್ಶಿಗಳಾಗಿದ್ದಾಗ ಷರಾಪ್ ಶಾಮಣ್ಣನವರು ದಾನಮಾಡಿದ್ದ ಚರ ಸ್ಥಿರ ಆಸ್ತಿಗಳನ್ನು ಸಂಗ್ರಹಿಸಿ ವಿಕ್ರಯಿಸಲು ಅಧ್ಯಕ್ಷರಿಂದ ಪವರ್ ಆಪ್ ಅಟಾರ್ನಿ ಪಡೆದು ಬಹು ಶ್ರದ್ದೆಯಿಂದ ಅದಕ್ಕೂ ಸಂಬಂಧ ಪಟ್ಟ ಕೋರ್ಟ್ ವ್ಯವಹಾರದಲ್ಲಿ ಪ್ರತಿಫಲಾಪೆಕ್ಷೆ ಮಾಡದೆ 5 ವರ್ಷಗಳ ಕಾಲ ಅವಿಶ್ರಾಂತವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸಿ 65 ಸಾವಿರ ರೂಗಳನ್ನು ಸಂಘದ ಮೂಲ ನಿಧಿಗೆ ಠೇವಣಿ ಮಾಡುವ ಮೂಲಕ ಸಂಘದ ಮೂಲಧನ ವೃದ್ದಿಸಿ ಸಮಾಜಸೇವೆಗೆ ಶಕ್ತಿ ಮತ್ತು ನೈತಿಕಸ್ಥೈರ್ಯ ತುಂಬಿದರು.
- ಮೈಸೂರು ಸಂಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ 1901 ರಲ್ಲಿ ಲಿಂಗಾಯತರ ಪ್ರಮಾಣ 100 ಕ್ಕೆ 12.0% ರಷ್ಟಿದ್ದರು ಅಂದರೆ 6,71,266 ಜನರು ಲಿಂಗಾಯತರಿದ್ದರು ಅಕ್ಷರಸ್ಥರ ಪ್ರಮಾಣ 9.12 ಮಾತ್ರ ವಿದ್ದತು. ಸರಕಾರಿ ಸೇವೆಯಲ್ಲಿ ಕೆಳಸ್ಥರದ ಹುದ್ದೆಯಲ್ಲಿ ಶೇ 3.5 ರಷ್ಟನ್ನ, ಗೆಜೆಟ್ ಹುದ್ದೆಗಳಲ್ಲಿ ಶೇ 1.00 ರಷ್ಟು ಮಾತ್ರ ಪಡೆದಿದ್ದರು. ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘದ ನೆರವು ಮತ್ತು ಸಂಸ್ಥಾನದಾದ್ಯಂತ ಸಮಾಜ ಸೇವಾ ದುರೀಣರು, ಮಠಾದೀಶ್ವರರು ಸರಕಾರಲದಲ್ಲಿ ಸಮಾಜದ ಪರವಾಗಿ ಸೇವೆಸಲ್ಲಿಸುತ್ತಿರುವವರ ಎಲ್ಲಾರ ಪ್ರಯತ್ನದ ಫಲವಾಗಿ 1945 ರ ವೇಳೆಗೆ ಶೇ 36.3% ರಷ್ಟು ಅಕ್ಷರಸ್ಥರಾದರು ಮತ್ತು 1947 ರ ವೇಳೆಗೆ ಶೇ 12.6 ರಷ್ಟು ಕೆಳಸ್ಥರದ ಹುದ್ದೆಗಳನ್ನು ಮತ್ತು 9.65% ಗೆಜೆಟ್ ಹುದ್ದೆಗಳಲ್ಲಿ ಸೇವಾ ಅವಕಾಶ ಗಿಟ್ಟಿಸಿಕೊಂಡರು. (ಲೀಲಾ ಡಸ್ಕಾನ್ ದಿ ನಾನ್ ಬ್ರಾಹ್ಮಿನ್ ಮೂಮೆಂಟ್ ಇನ್ ಫ್ರಿನ್ಸ್ಲಿ ಮೈಸೂರು ಯೂನಿವರ್ಸಟಿ ಆಫ್ ಫೆನ್ಸಿಪ್ವೇನಿಯಾ 1974) (ಜೇಮ್ಸ್ ಮ್ಯಾನರ್ ಪೂರ್ವೋಕ್ತ ಪುಟ-32 ರಿಪೋರ್ಟ್ ಆಫ್.ದಿ.ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇನ್ ದಿ ಮೈಸೂರು ಫಾರ್, ರೆಸ್ಪೆಕ್ಟೀವ್ ಇಯರ್ಸ್ ಅಪೆಂಡಿಕ್ಸ್ ರಿವ್ಯೂ 1909 ರಿಂದ 1941 ಒಪಿಸಿಐಟಿ, ಪುಟ ನಂ-37)
- ಸಾಮಾಜಿಕ ಮೌಲ್ಯಗಳನ್ನ ವೃದ್ದಿಸುವಲ್ಲಿ ಮಹತ್ವ ಪೂರ್ಣವಾದ ಹೆಜ್ಜೆಯನ್ನಿಡಲಾಗಿದೆ. ವಿಶ್ವದ ಎಲ್ಲಾ ಧರ್ಮಗಳು ತಮ್ಮ ಸಮುದಾಯದವರಿಗೆ ಬಾಲ್ಯದಿಂದಲೇ ಸೈದ್ದಾಂತಿಕ ಮೂಲ ತತ್ವಗಳನ್ನ ಭೋದಿಸುತ್ತಾ ಅವರ ಹೃದಯದಲ್ಲಿ ಸ್ಥಿರಗೊಳಿಸುತ್ತಾರೆ. ವೀರಶೈವ ಲಿಂಗಾಯತ ಧರ್ಮವು ಜಗತ್ತಿನ 30 ಧರ್ಮಗಳಲ್ಲೊಂದಾಗಿದ್ದು ಸಮುದಾಯದವರಲ್ಲಿ ಸ್ವಧರ್ಮ ನಿಷ್ಠೆ, ಪ್ರಜ್ಞೆ, ಸಂಸ್ಕøತಿ, ಸದ್ವಿಚಾರಗಳು, ರಾಷ್ಟ್ರಭಕ್ತಿ, ಕ್ರೀಯಾಶೀಲ ಜೀವನ, ಪರಧರ್ಮ ಸಹಿಷ್ನುತೆಯ ಪ್ರಸುತತೆಯ ಪ್ರಾಮುಖ್ಯತೆಯನ್ನು ಮನಗಂಡ ಸಂಘದವರು ವಿದ್ಯಾರ್ಥಿ ನಿಲಯದಲ್ಲಿ ಪ್ರತಿ ತಿಂಗಳಿಗೊಮ್ಮೆಯಾದರು ಧಾರ್ಮಿಕ ಮತ್ತು ಸಾಮುದಾಯಿಕ ಉಪನ್ಯಾಸವನ್ನು ಆಯೋಜಿಸುವ ಪ್ರತೀತಿ ರೂಡಿಸಿ ಕೊಂಡಿದ್ದಾರೆ. ವಿಚಾರವಂತರು, ಮಠಾದೀಶರು, ವಿದ್ವಾಂಸರುಗಳನ್ನು ಆಹ್ವಾನಿಸಿ, ಧರ್ಮ, ಸಂಸ್ಕøತಿ, ಆಚಾರ, ವಿಚಾರ, ಆಧ್ಯಾತ್ಮ,

ತತ್ವದರ್ಶನ ಚಿಂತನೆಗಳ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾ ವಿದ್ಯಾರ್ಥಿಗಳಲ್ಲಿ ಪಾರಮಾರ್ಥಿಕ ಮತ್ತು ಸಾಮಾಜಿಕ ಮೌಲ್ಯಗಳ ಮಹತ್ವವನ್ನು ತಿಳಿಸುವ ಪ್ರಯತ್ನ ಮಾಡಲಾಗುತ್ತಿದೆ. ವಿದ್ಯಾಲಯಗಳಲ್ಲಿ ಕೊರತೆಯಾಗುತ್ತಿರುವ ಜ್ಞಾನಾನುಭವ, ಜೀವನಾನುಭವಗಳನ್ನು ಕಲಿಸಿ ಕೊಡಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಧಾರ್ಮಿಕ ದೀಕ್ಷೆ, ಮಂತ್ರೋಪದೇಶವನ್ನು ಗುರುಗಳಿಂದ ಕೊಡಿಸಿ ಇಷ್ಟಲಿಂಗದ ದೀಕ್ಷೆಯ ಮೇಲೆ ನಿಷ್ಠೆ ಬೆಳೆಸುವ ಕಾರ್ಯವನ್ನು ನೆರವೇರಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ವ್ಯಕಿತ್ವ ವಿಕಸನ ರೂಪಿಸಿಕೊಳ್ಳಲು ಸೂಕ್ತ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಸಂಯಮ ಸಹಕಾರ ಮನೋಭಾವವನ್ನು ರೂಡಿಸಿಕೊಳ್ಳಲು ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಸಮುದಾಯದವರಿಗೆ ಹೆಗ್ಗಳಿಕೆಯ ವಿಷಯವಾಗಿದೆ.

## ಉಪಸಂಹಾರ

ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘವು ಬಹುಶಿಸ್ತೀಯ ಸೇವಾ ದೃಷ್ಟಿಕೋನಗಳನ್ನು ತನ್ನ ಮಡಿಲಿನಲ್ಲಿ ಹೊಂದಿರುವಂತೆ ಮೈತಳೆದಿದ್ದ ಗ್ರಾಮೀಣ ಭಾಗದ ಕುಟುಂಬಸ್ಥ ಅಕ್ಷರದಾಹಿಗಳಿಗೆ ಉಚಿತ ಊಟ ವಸತಿ ಸೌಲಭ್ಯ ಕಲ್ಪಿಸುತ್ತಿದೆ. ಅರ್ಹ ಪ್ರತಿಭಾನ್ವಿತ ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಅವಶ್ಯಕ ಜ್ಞಾನಬಂಡಾರವನ್ನ ವೃದ್ದಿಸಲು ತರಬೇತಿ ನೀಡುತ್ತದೆ. ಪ್ರೌಢ, ತಾಂತ್ರಿಕ, ವೈದ್ಯ ಸಂಶೋಧನಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಮತ್ತು ವಿದ್ಯಾರ್ಥಿ ವೇತನಗಳನ್ನು ವ್ಯಾಸಂಗದ ವೆಚ್ಚಗಳನ್ನು ಗಮನಿಸಿ ಮಂಜೂರು ಮಾಡಲಾಗುತ್ತಿದೆ. ವಿದೇಶಗಳಲ್ಲಿ ವ್ಯಾಸಂಗ ಮಾಡುವ ಅರ್ಹ ಬಡಕುಟುಂಬದಿಂದ ಕಲಿಯಲು ಸಾಧ್ಯವಾಗದ ಯುವ ಪೀಳಿಗೆಯವರಿಗೆ ಧನ ಸಹಾಯ ನೀಡಿ ಪ್ರೋತ್ಸಾಹಿಸುತ್ತಿದೆ. ಸಂಘವು ಸಮುದಾಯದ ಕೊಡುಗೈದಾನಿಗಳಿಂದ ಹಣ, ಆಸ್ತಿ, ಬೌದ್ಧಿಕ ನೆರವು ಸ್ವೀಕರಿಸಿ ಪ್ರಜ್ಞಾವಂತ ಸಮಾಜವನ್ನು ನಾಡು, ನುಡಿ, ದೇಶ ಸೇವೆಗೆ ಪೂರೈಸುವ ಸದುದ್ದೇಶದಿಂದ ಕಾರ್ಯೋನ್ಮುಖವಾಗಿದೆ.

ಮೈಸೂರು ಲಿಂಗಾಯತ ವಿದ್ಯಾ ನಿಧಿ ಸಂಘವು ಬೆಂಗಳೂರು, ಮೈಸೂರು, ಚಿಕ್ಕಮಂಗಳೂರು, ಚಾಮರಾಜನಗರ ಮುಂತಾದ ಸ್ಥಳಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸಿದೆ. ಆ ಭಾಗದ ಜನರ ಕೊಡುಗೆಗಳನ್ನು ಸ್ವೀಕರಿಸಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವು ನೀಡುತ್ತದೆ. ಸಮುದಾಯ ಭವನಗಳನ್ನು ನಿರ್ಮಿಸಿ ವೀರಶೈವ - ಲಿಂಗಾಯತ ಸಮಾಜದ ಬಂಧುಗಳಿಗೆ ಮಿತವೆಚ್ಚದಲ್ಲಿ ಶುಭ ಸಮಾರಂಭ ಏರ್ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಮೈಸೂರು ಸಂಸ್ಥಾನದಲ್ಲಿ ಈ ವಿಧವಾದ ಸಂಸ್ಥೆಗಳು ಇಲ್ಲವಾಗಿದ್ದರೆ ಸಮಾಜದ ಐಕ್ಯತೆ ಮತ್ತು ಬಡ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪುಗೊಳ್ಳುತ್ತಿರಲಿಲ್ಲ.

## ಗ್ರಂಥವಲೋಕನ

## ಟಿಪ್ಪಣಿಗಳು

[1] ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಸುವರ್ಣ ಮಹೋತ್ಸವ ಮತ್ತು ವಜ್ರ ವಜ್ರ ಮಹೋತ್ಸವ ಸಂಚಿಕೆಗಳು (1956 ಮತ್ತು 1971) ಪುಟ್ಟ ಸಂಖ್ಯೆ 2-5

[2] ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘಕ್ಕೆ ಸಂಬಂಧಿಸಿದ ಕಡತಗಳು 1 ರಲ್ಲಿನ ಪತ್ರ- ಸಂಘದ ಅಧ್ಯಕ್ಷರು ಶ್ರೀ ಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರೆ ಬಹದ್ದೂರ್ ಜಿ.ಸಿ.ಐ.ಇ ರವರ ಸನ್ನಿದಾನಕ್ಕೆ ಬರೆದಿದ್ದು:- ತಾ: 20-10-1919

[3] ಡಿಕ್ರೀ ಆಫ್ ಅಫೀಲ್ ಕೋರ್ಟ್ ಇನ ದ ಹೈಕೋರ್ಟ್ ಆಫ್ ಮೈಸೂರು ಬೆಂಗಳೂರು ಮುಖ್ಯ ನ್ಯಾಯಧೀಶ ವೆಂಕಟರಾವ ಒ-41, ಆರ-35 ಹೆಚ್.ಸಿ.ನಂ 32 1944-29-3-1945 ಪುಟ ಸಂಖ್ಯೆ 5 ರಿಂದ 25

[4] ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಅಂಗ ರಚನಾ ಒತ್ತಿಗೆಯ ಪುಟ ಸಂಖ್ಯೆ 2-3

[5] ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದಲ್ಲಿನ 4 ಜನವರಿ 1936 ರಿಂದ 7 ನವೆಂಬರ್ 1936 ವರಗಿನ ಸದಸ್ಯತ್ವದ ರಿಜಿಸ್ಟರ ಬುಕ್
[6] ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಸದಸ್ಯತ್ವದ ರಿಜಿಸ್ಟರ್ 19-8-1917 ಪುಟ ಸಂಖ್ಯೆ -74

**ಕ್ಯಾಶ್ ಬುಕ್‌ಗಳು**

ಸಂಖ್ಯೆ (ಎ1-19-8-1917 ರಿಂದ 12-3-22 ರವರೆಗೆ, ಪುಟಸಂಖ್ಯೆ 1-272)
ಸಂಖ್ಯೆ (111,04-08-1922 ರಿಂದ 19-03-1924 ರವರೆಗೆ ಪುಟಸಂಖ್ಯೆ 1-274)
ಸಂಖ್ಯೆ (ಎ2, 04-7-1924 ರಿಂದ 13-3-1927 ರವರೆಗೆ ಪು 1-272)
ಸಂಖ್ಯೆ (5, 05-3-1927 ರಿಂದ 6-11-1932 ರವರೆಗೆ)
ಸ್ಕಾಲರ್ ಶಿಪ್ ಲೆಡ್ಜರ್ ಸಂಖ್ಯೆ 3,29-6-1935 ರಿಂದ 30-6-1936 ರವರೆಗೆ ಪುಟ 80 ರಿಂದ 175
2. ಮೈಸೂರು ಲಿಂಗಾಯಿತ ವಿದ್ಯಾನಿಧಿ ಸಂಘದ ಸುವರ್ಣ ಮಹೋತ್ಸವ ಸಂಚಿಕೆ
ದಿನಾಂಕ 25-1-1956, ಪುಟಸಂಖ್ಯೆ-14
3. 1951-52 ರ ವಾರ್ಷಿಕ ವರದಿ ಪುರವಣಿ-08
4. ಕ್ಯಾಶ್ ಬುಕ್ಕ್-ಸಂಖ್ಯೆ-7 ಪುಟ ಸಂಖ್ಯೆ-1
5. ಪ್ರೋ ಸೀಡಿಂಗೆ ಲೆಡ್ಜರ ಬುಕ್ ವಾಲ್ಯುವತಿ-3
6. 1951-52 ರ ವಾರ್ಷಿಕ ವರದಿ- ಪುರವಣಿ-14 ಪುಟಸಂಖ್ಯೆ-23
7. 1933-34 ನೇ ಸಾಲಿನ ಬ್ಯಾಲೆನ್ಸ ಕ್ಷೀಟಿ ಕ್ಯಾಶ್ ಬುಕ್ ಸಂಖ್ಯೆ-6 ಪುಟ ಸಂಖ್ಯೆ-172

**ಸಂಘದ ಈ ಆಸ್ತಿಯ ಮೂಲ ದಾಖಲೆಗಳು**

[1] ಸ್ಕಾಲರ್ ಶಿಪ್ ಲೆಡ್ಜರ್ ಬುಕ್ ಸಂಖ್ಯೆ -3 ದಿನಾಂಕ:- 29-006-1919 ರಿಂದ 30-06-1926 ರ ವರೆಗೆ ಪುಟ ಸಂಖ್ಯೆ 1 ರಿಂದ 464 ರವರೆಗೆ.
[2] ಕ್ಯಾಶ್ ಬುಕ್ ನಂ- 4 ಪುಟ ಸಂಖ್ಯೆ- 80 ರಿಂದ 175 ಕಾಲಾವಧಿ 1-8-1927 ರಿಂದ 1932
[3] ಸ್ಕಾಲರ್ ಶಿಪ್ ಲೆಡ್ಜರ್ ಬುಕ್ ಸಂಖ್ಯೆ- 4 ಮತ್ತು 5 1934 ರಿಂದ 1936 ರವರೆಗೆ ಪುಟ 37 ರಿಂದ 157
[4] ಸ್ಕಾಲರ್ ಶಿಪ್ ಲೆಡ್ಜರ್ ಬುಕ್ ಸಂಖ್ಯೆ- 6 ಮತ್ತು 7 1937 ರಿಂದ 1938
[5] ಸ್ಕಾಲರ್ ಶಿಫ್ ಡಿಸ್ಟ್ರಿಬ್ಯೂಸ್ಟರ್ ರಿಜಿಸ್ಟರ್ ಸಂಖ್ಯೆ 8 1938 ರಿಂದ 1939 ಪುಟ 1 ರಿಂದ 145
[6] ಸ್ಕಾಲರ್ ಶಿಫ್ ಡಿಸ್ಟ್ರಿಬ್ಯೂಸ್ಟರ್ ರಿಜಿಸ್ಟರ್ ಸಂಖ್ಯೆ 9 ಮತ್ತು 10 1940 ರಿಂದ 1947 ರವರೆಗೆ.
[7] ಮೈ.ಲಿಂ.ವಿ.ನಿ.ಸಂಘದ ಕಛೇರಿಯ ಕಡತಗಳು 1908 ರಿಂದ 1947 ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ.
[8] Order no. 12223-6 Edn.65-18-68 dated 23-06-1919 issued by govt of maharaja mysore state.
[9] order no. 2470.3 Edn.19-19-49 dated 6.9.1920
[10] Order dated 19-19-1989 of divisional director Bangalore issued regarding ownership of the above land.

**ಆಕರಗಳು:- `ಮೈ.ಲಿ.ವಿ.ನಿ. ಸಂಘದ ಕಡತಗಳು.**

[1] ಮೈ.ಲಿ.ವಿ.ನಿ. ಸಂಘದ ಸುವರ್ಣ ಮಹೋತ್ಸವ ಕೈಪಿಡಿ.
[2] 1956 ವಿದ್ಯಾನಿಧಿ. ಶತಮಾನೋತ್ಸವ ಸಂಪುಟ ಕೆ.ವಿ.ವಿ.ನಿ. ಸಂಸ್ಥೆ ಬೆಂಗಳೂರು 2005
[3] The new Indian express, Bangalore 15-07-2018
[4] Times of India Pay tribute to diwan sir K.P.Puttannachetty. 15-07-2018.
[5] Mysore Gazetteer – p 3156
[6] Q.J.M.S of the Mythic Society.
[7] Sir K.P.Puttannachetty, Rao Bhadur – C.Hayavadhana Rao. Vol – 83 April – June 2018.
[8] Reprinted Siliver Jubely Suvenior of the Bank of Mysore. Published – 1938.

ISSN: 2581-8511
Tumbe Group of International Journal
A Multidisciplinary Journal
Volume- 2
Issue-2
May-August: 2019

# ತರಗತಿಯ ಅಂತರ್ಕ್ರಿಯೆ ಹಾಗೂ ಅದರ ಪ್ರಾಮುಖ್ಯತೆ

**ಡಾ. ಯೋಗೀಶ್ ಎನ್**
ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ತುಮಕೂರು, ಕರ್ನಾಟಕ, ಭಾರತ
yogeesh.r@gmail.com

## ಪ್ರಸ್ತಾವನೆ

ಈ ಲೇಖನವನ್ನು ತರಗತಿಯ ಅಂತರ್ಕ್ರಿಯೆ ಅದರ ಪ್ರಾಮುಖ್ಯತೆ ಹಾಗೂ ಸಮೂಹದಲ್ಲಿ ಕಲಿಯುವವರನ್ನು ಮನದಲ್ಲಿಟ್ಟುಕೊಂಡು ಶೈಕ್ಷಣಿಕ ಪ್ರಗತಿಗಾಗಿ ಶೈಕ್ಷಣಿಕ ಮನೋವಿಜ್ಞಾನದ ತಳಹದಿಯಲ್ಲಿ ರಚಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯ ಬಹುತೇಕ ಅವಧಿಯನ್ನು ಸಮೂಹದಲ್ಲಿ ಕಳೆಯುತ್ತಾರೆ. ಈ ಸಂಧರ್ಭದಲ್ಲಿ, ಅವರು ಅನೇಕ ಸನ್ನಿವೇಶಗಳಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಆದಕಾರಣ ಈ ಎಲ್ಲಾ ಸನ್ನಿವೇಶಗಳನ್ನು ನಿಭಾಹಿಸಲು ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಸಮೂಹದಲ್ಲಿ ಕಲಿಯುವವರ ವರ್ತನೆಗಳ ಬಗ್ಗೆ, ಹಾಗೂ ತರಗತಿಯ ಅಂತರ್ಕ್ರಿಯೆ, ಅದರ ಪ್ರಾಮುಖ್ಯತೆ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಹಾಗಾಗಿ ಈ ಲೇಖನದಲ್ಲಿ ಸಮೂಹದಲ್ಲಿ ಕಲಿಯುವವರ ವರ್ತನೆ ಹಾಗೂ ತರಗತಿಯ ಅಂತರ್ಕ್ರಿಯೆಗಳನ್ನು ಅರಿಯಲು ತುಂಬಾ ಉಪಯುಕ್ತವಾಗಿದೆ.

**ಕೀ ವರ್ಡ್:** ತರಗತಿಯ ಅಂತರ್ಕ್ರಿಯೆ, ಶೈಕ್ಷಣಿಕ ಮನೋವಿಜ್ಞಾನ, ಸಮೂಹದಲ್ಲಿ ಕಲಿಯುವವ,

## ಪೀಠಿಕೆ

ಮನುಷ್ಯರು ಗುಂಪುಗುಂಪಾಗಿ ವಾಸಿಸುವುದರಿಂದ ಮಾನವನು ಸಮಾಜ ಜೀವಿಯಾಗಿ ಅನಾದಿ ಕಾಲದಿಂದಲೂ ಅವನು ಹಲವಾರು ಚಿಕ್ಕ, ದೊಡ್ಡ, ಸಾಧಾರಣ, ಔಪಚಾರಿಕ, ಅನೌಪಚಾರಿಕ ಸಮೂಹ ಅಥವಾ ಗುಂಪುಗಳನ್ನು ಸ್ಥಾಪಿಸಿಕೊಂಡಿದ್ದಾನೆ. ಇಲ್ಲಿ ಅನೇಕ ಪ್ರಯೋಜನವನ್ನು ಕಾಣಬಹುದು. ಸಮೂಹವು ಒಬ್ಬ ವ್ಯಕ್ತಿ ತನ್ನ ಪ್ರಾಥಮಿಕ ಹಾಗೂ ಮನೋವೈಜ್ಞಾನಿಕ ಅವಶ್ಯಕತೆಗಳೆಲ್ಲವನ್ನು ಪೂರೈಸಿಕೊಳ್ಳಲು ಸಹಾಯ ಮಾಡುತ್ತದೆ. ಸಮೂಹ ಪ್ರಯತ್ನ ಹಾಗೂ ಅಲ್ಲಿನ ಪ್ರಕ್ರಿಯೆಗಳಿಂದಲೇ ಸಮಾಜವು ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದಿದೆ. ಸಹಜವಾಗಿಯೇ ಚಿಕ್ಕ ಮಕ್ಕಳೂ ಸಹ ಆಟದ ಗುಂಪುಗಳಾಗಿ ತಮ್ಮ ತಮ್ಮ ಸಮೂಹವನ್ನು ರಚಿಸಿಕೊಳ್ಳುತ್ತಾರೆ.

ಸಮೂಹದ ಗುರಿಸಾಧಿಸಲು ಅಥವಾ ಕೆಲಸ ನಿರ್ವಹಿಸಲು ಅಲ್ಲಿನ ಸದಸ್ಯರು ಪರಸ್ಪರರೊಂದಿಗೆ ಸಂಬಂಧ ಬೆಳೆಸಿಕೊಂಡು ಕಾರ್ಯನಿರ್ವಹಿಸುತ್ತಾರೆ. ಇದ್ದನ್ನು ನಾವು ಅಂತರ್ಕ್ರಿಯೆಗಳು ಎನ್ನುತ್ತೇವೆ. ಸಮೂಹದ ಸದಸ್ಯರು ಒಟ್ಟಾಗಿಯೇ ಇರುವಂತಾಗಲು ಮಹತ್ವದ ಪಾತ್ರವಹಿಸುವಂತೆ ಮಾಡುವುದು ಸಂವಹನ ಮತ್ತು ಸಮೂಹದ ಅಂತರ್ಕ್ರಿಯೆಗಳು. ತರಗತಿಸಮೂಹದಲ್ಲಿ ಪ್ರತಿ ವಿದ್ಯಾರ್ಥಿಯೂ ತನ್ನ ವೈಯಕ್ತಿಕ ವಿಕಾಸಕ್ಕಾಗಿ ಮತ್ತು ಇಡೀ ಸಮೂಹದ ಸಫಲತೆಗಾಗಿ ತನ್ನದೇ ಪಾತ್ರ ನಿರ್ವಹಿಸಿ ತನ್ನ ಕೊಡುಗೆ ನೀಡಬೇಕಾಗುತ್ತದೆ.

ಸಮೂಹವು ಯಾವಾಗಲೂ ಗತಿಶೀಲವಾಗಿರುವುದೇ ವಿನಃ ನಿಶ್ಚಲ ಸ್ಥಿತಿಯಲ್ಲಿರುವುದಿಲ್ಲ. ಅಲ್ಲಿ ಸದಸ್ಯರ ನಡುವೆ ನಿರಂತರ ಸಂವಹನ ಮತ್ತು ಅಂತರ್ ಕ್ರಿಯೆಗಳು ನಡೆಯುತ್ತಿರುವುದಲ್ಲದೆ. ಗತಿಶೀಲ ಸಮೂಹ ಸನ್ನಿವೇಶದಲ್ಲಿ ಕಲಿವನ್ನು ಉತ್ತಮವಾಗಿ ಉತ್ತೇಜಿಸಬಹುದು.

*ನೆಡ್ ಫ್ಲಾಂಡರ್ಸ್* ಎಂಬ ಅಮೇರಿಕಾದ ಶಿಕ್ಷಣತಜ್ಞರು ತರಗತಿಯಲ್ಲಿ ನಡೆಯುವ ಅಂತರ್ಕ್ರಿಯೆಯನ್ನು ಅಧ್ಯಯನ ಮಾಡಿ ವಿಶ್ಲೇಷಿಸಿದ್ದಾರೆ. ಆ ಅದ್ಯಯನವು ತರಗತಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುವ ಅಂತರ್ಕ್ರಿಯೆಯನ್ನೇ ತಿಳಿಯಬಹುದು. ತರಗತಿ ಸಮೂಹದಲ್ಲಿ ಕಲಿವಿನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಾಗ ವಿದ್ಯಾರ್ಥಿಗಳು ಪರಸ್ಪರರಲ್ಲಿ ಮುಕ್ತವಾಗಿ ಅಂತರ್ಕ್ರಿಯೆಯಲ್ಲಿ ತೊಡಗುತ್ತಾರೆ. ಇಂತಹ ಅಂತರ್‌ವ್ಯಕ್ತಿ ಅಂತರ್ಕ್ರಿಯೆ ನಡೆಯಲು ಸಂವಹನ ಅತ್ಯವಶ್ಯ ಪರಿಣಾಮಕಾರಿ ಅಂತರ್ಕ್ರಿಯೆ ನಡೆಯಬೇಕಾದರೆ ವಿದ್ಯಾರ್ಥಿಗಳು ಸಂವಹನದ ವಿವಿಧ ಪ್ರಕಾರಗಳನ್ನು ಕೌಶಲಗಳನ್ನು ಗಳಿಸಬೇಕು. ಇಂದಿನ ತರಗತಿಗಳಲ್ಲಿ ಪ್ರತಿ ವಿದ್ಯಾರ್ಥಿಯೂ ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಒತ್ತು ನೀಡಲಾಗುತ್ತದೆ. ವಿದ್ಯಾರ್ಥಿಗಳು ಸುಮ್ಮನೆ ಕಲಿತು ಕೇಳುವವರಾಗಿರಬಾರದೆಂದು ನಿರೀಕ್ಷಿಸಲಾಗುತ್ತದೆ. ಶಿಕ್ಷಕರು ವಿದ್ಯಾರ್ಥಿಗಳ ನಡುವೆ ಸಕ್ರಿಯ ಅಂತರ್ ಕ್ರಿಯೆಯನ್ನು ಉತ್ತೇಜಿಸಬೇಕು.

ಫ್ಲಾಂಡರ್ಸ್‌ರವರ ಅಂತರ್ಕ್ರಿಯೆ ವಿಶ್ಲೇಷಣಾ ಪದ್ಧತಿಯು ತರಗತಿಯಲ್ಲಿ ಏನು ನಡೆಯುವುದೆಂಬುದನ್ನು ತಿಳಿಯಲು ಸಹಾಯಕವಾಗಿದೆ. ಹಾಗೆಯೆ ತರಗತಿಯಲ್ಲಿನ ಅಂತರ್ಕ್ರಿಯೆಯ ಸ್ವರೂಪದಿಂದ ತರಗತಿಯ ವಾತಾವರಣದೊಂದಿಗೆ ವಿದ್ಯಾರ್ಥಿಗಳ ಕಲಿಕೆ ಪರಿಣಾಮಕಾರಿಯಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಬಹುದು. ವಿದ್ಯಾರ್ಥಿಗಳ ಅನಿಸಿಕೆ. ಅಭಿಪ್ರಾಯಗಳನ್ನು ಉತ್ತೇಜಿಸಿ ಒಪ್ಪಿಕೊಂಡಾಗ ಹಾಗೂ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿದಾಗ ಕಲಿಕೆ ಉತ್ತಮ ಮಟ್ಟದ್ದಾಗಿರುವುದೆಂದೆ ಹಲವು ಪ್ರಮುಖ ಅದ್ಯಯನಗಳು ತಿಳಿಸುತ್ತವೆ.

**ತರಗತಿ ಸಮೂಹದ ಏಕತೆಯ ಅವಶ್ಯಕತೆ ಹಾಗೂ ಘಟಕಗಳು**

**ಅಥವಾ ತರಗತಿ ಸಮೂಹದ ಸಂಲಗ್ನತೆಯ ಅವಶ್ಯಕತೆ**

ಒಂದು ಸಮೂಹದ ಸದಸ್ಯರ ನಡುವೆ ನಿರಂತರ ಅಂತರ್ಕ್ರಿಯೆಯ ಅನುಬಂಧ ಬೆಳೆದು ಒಟ್ಟಾಗಿಯೇ ಇರುವಂತೆ ಮತ್ತು ಸಾಮರಸ್ಯದಿಂದ ಬಾಳ್ವೆ ನಡೆಸುವಂತೆ ಮಾಡುತ್ತದೆ. ಹೀಗೆ ಸದಾ ಒಟ್ಟಾಗಿ ಅಥವಾ ಏಕತೆಯಿಂದ ಇದ್ದು ಸಾಮರಸ್ಯದೊಡನೆ ಕೆಲಸಮಾಡಿ ಬಾಳ್ವೆ ನಡೆಸುವಂತೆ ಮಾಡುವ ಪ್ರವೃತ್ತಿಯೇ ಸಂಲಗ್ನತೆ.

ಒಂದು ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಲಗ್ನತೆಯು ಕಲಿವಿನ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಅತಿ ಪ್ರಮುಖ ಪಾತ್ರವಹಿಸುತ್ತದೆ. ಈ ರೀತಿಯ ಸಂಲಗ್ನತೆಯ ಕೊರತೆಯಿಂದ ಸ್ಪರ್ಧೆ, ದ್ವೇಷಭಾವನೆಗಳುಂಟಾಗಿ ಗುರಿ ಸಾಧನೆಗೆ ಅಡ್ಡಿಯುಂಟಾಗುತ್ತದೆ.

ಉತ್ತಮ ಸಂವಹನ ಮತ್ತು ಅಂತರ್ಕ್ರಿಯೆಯು ಸಮೂಹ ಒಟ್ಟಾಗಿರುವುದಕ್ಕೆ ಪೂರಕವಾಗಿದೆ. ಯಾವ ತರಗತಿಯಲ್ಲಿ ವಿದ್ಯಾರ್ಥಿಗಳು ಮುಕ್ತವಾಗಿ ಪರಸ್ಪರರೊಂದಿಗೆ ಸಂವಹನ ಮಾಡುತ್ತಾರೆಯೋ ಅಲ್ಲಿ ಸಂಲಗ್ನತೆ ಹಾಗೂ ಮಿತ್ರತ್ವ ಬೆಳೆಸುವುದು ಸುಲಭ. ಸಂವಹನ ಇಲ್ಲದ ಸಮೂಹದಲ್ಲಿ ಸಂಲಗ್ನತೆ ಸಾಧ್ಯವಿಲ್ಲ.

**ಘಟಕಗಳು ಅಥವಾ ಸಂಲಗ್ನತೆಯ ಮೇಲೆ ಪ್ರಭಾವ ಬೀರುವ ಅಂಶಗಳು**

ಸಮೂಹವಾಗಿ ತರಗತಿಯಲ್ಲಿ ಸಂಲಗ್ನತೆಯು ಕೆಲವು ಮುಖ್ಯ ಅಂಶಗಳು ಅಥವಾ ಘಟಕಗಳನ್ನು ಅವಲಂಬಿಸಿರುತ್ತದೆ.

1. **ಹೊಂದಾವಣಿಕೆ / ಹಿತಾಸಕ್ತಿ / ಸಹಬಾಳ್ವೆ**

ತರಗತಿ ಸಮೂಹದಲ್ಲಿನ ಮಕ್ಕಳು ತಮ್ಮ ವೈಯಕ್ತಿಕ ಲಾಭಗಳಿಗಿಂತ ಸಮೂಹದ ಒಳಿತೇ ಹೆಚ್ಚೆಂದು ಭಾವಿಸಿದಾಗ ಸಂಲಗ್ನತೆ ನಿಶ್ಚಿತವಾಗಿರುತ್ತದೆ. ಹೇಗೆಂದರೆ, ಸ್ವಯಂಕೇಂದ್ರಿತ ಮನೋಭಾವ ಸಮೂಹದ ಸಂಲಗ್ನತೆಗೆ ಅನುಕೂಲಕರವಲ್ಲ ಎಂದರ್ಥ. ಮಕ್ಕಳು ಬೆಳೆದಂತೆಲ್ಲ ಸಾಮಾಜಿಕ ಅಥವಾ ಸಾಮೂಹಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಅವರು ತಮ್ಮ ಸ್ವ-ಆಸಕ್ತಿಗಿಂತ ಗುಂಪಿನ ಹಿತಾಸಕ್ತಿ ಹೆಚ್ಚು ಮುಖ್ಯವೆಂದು ಸಹಬಾಳ್ವೆಯಿಂದ ಹೊಂದಿಕೊಳ್ಳುವುದನ್ನು ಅರಿಯುವರು.

2. **ಸಹಕಾರ**

ಯಾವುದೇ ಸಮೂಹವು ಕ್ರಿಯಾಶೀಲವಾದಿದೆ ಎಂದರೆ ಅಲ್ಲಿ ಸ್ಪರ್ಧೆಗಿಂತಲೂ ಸಹಕಾರವು ಸಂಲಗ್ನತೆಯನ್ನು ಹೆಚ್ಚಿಸಿರುತ್ತದೆ. ಸಮೂಹದ ಗುರಿಸಾಧನೆ ಅಥವಾ ಉತ್ಪಾದಕತೆಗೆ ಸಹಕಾರ ಚಟುವಟಿಕೆ ಸ್ಪರ್ಧೆಗಿಂತ ಹೆಚ್ಚು ಸಹಾಯಕವೆಂಬುದನ್ನು ಹಲವು ಅಧ್ಯಯನಗಳು ತೋರಿಸಿವೆ. ಸ್ಪರ್ಧೆಯ ಅಂಶ ಪ್ರವೇಶಿಸಿದಾಗ ಒಬ್ಬ ವಿದ್ಯಾರ್ಥಿಯು ಇತರರನ್ನು ಹಿಮ್ಮೆಟ್ಟಿ ತಾನು ಗುರಿಸಾಧಿಸಲು ಪ್ರಯತ್ನಿಸುತ್ತಾನೆ. ಇದರಿಂದಾಗಿ ದ್ವೇಷಭಾವನೆ ಉಂಟಾಗುವುದು. ಹೀಗಾಗಿ ಸಹಕಾರವು ಸಂಲಗ್ನತೆಯನ್ನು ನಿಶ್ಚಯಿಸುವುದು ಮಾತ್ರವಲ್ಲದೆ ಸ್ನೇಹವನ್ನು ಉತ್ತೇಜಿಸುತ್ತದೆ.

3. **ಅವಶ್ಯಕತೆ**

ಸಮೂಹದ ಸಂಲಗ್ನತೆಯು ಒಬ್ಬ ಸದಸ್ಯನು ಸಮೂಹದಿಂದ ಪಡೆಯುವ ಅವಶ್ಯಕತೆ ಪೂರೈಕೆಯ ಪ್ರಮಾಣ ಮತ್ತು ಗುಣಮಟ್ಟಗಳನ್ನು ಅವಲಂಬಿಸಿದೆ. ಪ್ರತಿ ವಿದ್ಯಾರ್ಥಿಗೂ ತನ್ನದೇ ಆದ ಅವಶ್ಯಕತೆಗಳಿರುತ್ತವೆ. ಮತ್ತು ತನ್ನ ಸಮೂಹದಲ್ಲಿ ಕೆಲಸ ಮಾಡುವುದರ ಮೂಲಕ ಈ ಅವಶ್ಯಕತೆಗಳನು ಸಾಮೂಹಿಕ ಚಟುವಟಿಕೆಗಳ ಮೂಲಕ ಪೂರೈಸಿಕೊಳ್ಳುವುದು ಸಾಧ್ಯವಾದರೆ ತನ್ನನ್ನು ತಾನು ಸಮೂಹದೊಂದಿಗೆ ಗುರ್ತಿಸಿಕೊಂಡು ಸಹಕರಿಸುತ್ತಾನೆ. ಇಲ್ಲದಿದ್ದರೆ ಸಮೂಹದಿಂದ ದೂರವಿರಲು ಬಯಸಬಹುದು.

ಹೀಗೆಯೇ ಶಿಕ್ಷಕರ ಮನೋಭಾವ, ತರಗತಿ ಪರಿಸರ ಮತ್ತಿತರ ಕೆಲವು ಅಂಶಗಳು ಸಮೂಹದ ಸದಸ್ಯರ ಸಂಲಗ್ನತೆಯ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಪರೋಕ್ಷ ಪ್ರಭಾವ ಬೀರಬೇಕು ಮತ್ತು ಕಲಿಕೆ ಶಿಶುಕೇಂದ್ರಿತವಾಗಿ ನೆರವಾಗಬೇಕು.

**ತರಗತಿಯಲ್ಲಿ ಧನಾತ್ಮಕ ಸಮೂಹ ವಾತಾವರಣದ ಅಗತ್ಯ**

ಒಂದು ಸಮೂಹವು ಕ್ರಿಯಾಶೀಲವಾಗಿದೆ ಎಂದರೆ ಅದರಲ್ಲಿನ ಸದಸ್ಯರು ನಿರಂತರ ಅಂತರ್ ಕ್ರಿಯೆಯಲ್ಲಿ ತೊಡಗಿದ್ದು ಮತ್ತು ಸದಾ ಒಟ್ಟಾಗಿಯೇ ಇದ್ದು ಸಾಮರಸ್ಯದೊಡನೆ ಕೆಲಸ ಮಾಡಿ ಬಾಳ್ವೆ ನಡೆಸುತ್ತಿರುತ್ತಾರೆ. ಆ ಸಮೂಹ ತರಗತಿ ಧನಾತ್ಮಕವಾದ ವಾತಾವರಣದಿಂದ ಕೂಡಿರುತ್ತದೆ.

ಹೀಗಾಗಿ ತರಗತಿಯಲ್ಲಿ ಧನಾತ್ಮಕ ಸಮೂಹ ವಾತಾವರಣದ ಅಗತ್ಯ ಈ ಕೆಳಗಿನ ಅಂಶಗಳ ಮೇಲೆ ನೆಲೆಗೊಂಡಿದೆ.

1. ವಿದ್ಯಾರ್ಥಿಗಳು ತಮ್ಮ ಸಮೂಹದಲ್ಲಿ ಸೃಜನಶೀಲ ಮತ್ತು ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡು ನೆರವೇರಿಸುವಲ್ಲಿ ಯಶಸ್ವಿಯಾಗುತ್ತಾರೆ.
2. ಉತ್ತಮ ಸ್ಪರ್ಧಾತ್ಮಕ ಮನೋಭಾವನೆ ಬೆಳಸಲು, ಚರ್ಚಾಕೂಟ, ವಿಚಾರಗೋಷ್ಠಿ ಉಪನ್ಯಾಸಗಳನ್ನು ಏರ್ಪಡಿಸುವಲ್ಲಿ ಉಪಯುಕ್ತವಾಗಿದೆ.

3. ಗುಂಪು ಕೆಲಸಗಳಿಂದ ಶ್ರಮದಿಂದ, ಪ್ರವಾಸ ಕಾರ್ಯಗಳು, ಪಂದ್ಯಾಟಗಳನ್ನು ಹಮ್ಮಿಕೊಳ್ಳಲು ಸಹಾಯವಾಗಿದೆ.
4. ಅಭಿವೃದ್ಧಿ ಕಾರ್ಯಗಳು ಪ್ರಗತಿಪಥದಲ್ಲಿ ಸಾಗಿಸಲು ಮತ್ತು ನೈತಿಕ ಮೌಲ್ಯ ಉಳಿಸಿಕೊಳ್ಳಲು
5. ಶಿಕ್ಷಕ ವಿದ್ಯಾರ್ಥಿಯ ಬಾಂಧವ್ಯ ಬೆಳೆಸಲು, ಉತ್ತಮ ಚಟುವಟಿಕೆಗಳನ್ನು ಆಯೋಜಿಸಲು.
6. ಜಾತಿ-ಬೇಧ ಭಾವ ಮೇಲು ಕೀಳು, ಮನೋಭಾವ ಹೋಗಲಾಡಿಸಲು.
7. ವೈಜ್ಞಾನಿಕ ಮನೋಭಾವ ಮೂಡಿಸಲು ಪ್ರಯೋಗಾತ್ಮಕ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ.
8. ಸಮಾಜದ, ಹಿತದೃಷ್ಟಿಯಲ್ಲಿ ಸಮೂಹದ ಗುರಿ ಸಾಧಿಸಲು.
9. ಶಿಸ್ತು, ನಿಷ್ಠೆ, ದಕ್ಷತೆ, ಗೌರವ, ಜವಾಬ್ದಾರಿ, ಧೈರ್ಯ, ಸಹಕಾರ, ಧನಾತ್ಮಕ ಸ್ಪರ್ಧೆ ಇತ್ಯಾದಿಗಳನ್ನು ಉತ್ತೇಜಿಸಲು.
10. ತನ್ನ ಜೀವಿತದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಾನವನ ಸಮೂಹ ಸಂಘಟನೆ ಮಾಡಿಕೊಳ್ಳುತ್ತಾನೆ.

## ಉಪಸಂಹಾರ

ಯಾವುದೇ ಸಮೂಹವು ಕ್ರಿಯಾಶೀಲವಾಗಿದೆ ಮತ್ತು ಉತ್ತಮ ಸಮೂಹ ಸಂಲಗ್ನತೆ ಹೊಂದಿದೆ ಎಂದರೆ ಆ ಸಮೂಹದಲ್ಲಿ ಅಂತರ್‌ವ್ಯಕ್ತಿಗಳ ಸಂಬಂದ ಉತ್ತಮವಾಗಿರುತ್ತದೆ. ಇದೇ ರೀತಿ ತರಗತಿ ಸಮೂಹಕ್ಕೂ ಅನ್ವಯಿಸುತ್ತದೆ. ಈ ರೀತಿ ಒಂದು ಸಮೂಹದ ಅಸ್ತಿತ್ವವು ಅಂತರ್‌ವ್ಯಕ್ತಿಗಳ ಮೇಲೆ ನಿಂತಿರುತ್ತದೆ. ಈ ವ್ಯಕ್ತಿಗಳು ಮತ್ತು ಸಮೂಹದ ವಿವಿಧ ಕಾರ್ಯಗಳು ಮತ್ತು ವ್ಯಕ್ತಿಗಳನ್ನು ಅಧ್ಯಯನ ಮಾಡಲು ಕೆಲವು ತಂತ್ರಗಳನ್ನು ಬಳಸಿ ಸಮೂಹ ಮತ್ತು ವ್ಯಕ್ತಿಗಳ ಬಗ್ಗೆ ತಿಳಿಯಬಹುದು ಈ ಅಧ್ಯೆಯನವನ್ನು ಸಮೂಹ ವಿನ್ಯಾಸಗಳ ಅಧ್ಯಯನ ಎನ್ನುತ್ತೇವೆ.

ಸಮೂಹವಾಗಿ ತರಗತಿಯನ್ನು ತೆಗೆದುಕೊಂಡರೆ ತರಗತಿ ಸನ್ನಿವೇಶದಲ್ಲಿ ಕಲಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು ಅನೇಕ ಇವು ಒಂದನ್ನೊಂದು ಪ್ರತಿವರ್ತಿಸಿ ವಿಶಿಷ್ಟ ವಾತಾವರಣವನ್ನು ಸೃಷ್ಟಿಸುತ್ತವೆ. ಸಮೂಹದ ಸದಸ್ಯರ ಪರಸ್ಪರ ಅನ್ಯೋನ್ಯ ಕ್ರಿಯೆಯ ಪರಿಣಾಮವಾಗಿ ಸಂವೇಗಾತ್ಮಕ ಘಟಕಗಳನ್ನು ಒಳಗೊಂಡ ವಾತಾವರಣವು ನಿರ್ಮಾಣವಗುತ್ತದೆ. ಇದನ್ನು ಸಾಮಾಜಿಕ ವಾತಾವರಣ ಎನ್ನುವರು. ಕೆಲವು ಸಮೂಹಗಳಲ್ಲಿ ಸದಸ್ಯರು ಉತ್ಸಾಹದಿಂದ ಸಹಕರಿಸುತ್ತಾ ಚಟುವಟಿಕೆಗಳಲ್ಲಿ ಮಗ್ನರಾಗಿರುವುದನ್ನು ನೋಡುತ್ತೇವೆ. ಆದರೆ ಕೆಲವು ಸಮೂಹಗಳಲ್ಲಿ ಇದಕ್ಕೆ ತದ್ವಿರುದ್ದವಾಗಿರುವುದನ್ನು ಕಾಣಬಹುದು. ಇದಕ್ಕೆ ಕಾರಣವಾಗಿರುವ ಅಂತರ್ ವ್ಯಕ್ತಿ ಸಂಬಂಧವನ್ನು ಮತ್ತು ಸಮೂಹದ ವಿನ್ಯಾಸವನ್ನು ಅದ್ಯಯನ ಮಾಡಬೇಕಾಗುತ್ತದೆ.

## ಪರಾಮರ್ಶನ ಗಂಥಗಳು

[1]. Skinner, B. F. (1988). The selection of behavior: The operant behaviorism of B. F. Skinner. New York: Cambridge University Press.
[2]. Tharp, R. & Gallimore, R. (1991). Rousing minds to life: Teaching, learning, and schooling in social context. Cambridge, UK: Cambridge University Press.
[3]. Alberto, P. & Troutman, A. (2005). Applied behavior analysis for teachers, 7th edition. Upper Saddle River, NJ: Prentice Hall.
[4]. Bruner, J. (1996). The culture of education. Cambridge, MA: Harvard University Press.
[5]. Gardner, H. (2006). The development and education of the mind. New York: Routledge.
[6]. Israel, S. (Ed.). (2005). Metacognition in literacy learning. Mahwah, NJ: Erlbaum.
[7]. Skinner, B. F. (1938). The behavior of organisms. New York: Appleton-Century-Crofts.

# Tumbe

## Group of International Journals

*A Multidisciplinary Journal*

VOLUME-2






ISSUE-2

**Graph -1: Effect of cytokinins on regeneration frequency of shoot tip and nodal of explants of *Mentha piperita* L.**




**May-August : 2019**

**INDIA**

ISSN 2581-8511

9 772581 851005

Powered By

Government of Karnataka, Department of Collegiate Education

GOVERNMENT FIRST GRADE COLLEGE, TUMKUR-572102

MAGAZINE AND JOURNAL COMMITTEE

www.tumbe.org